ಕೈಲಾಸಂ

Rare b 426
ಕೈಲಾಸಂ ರವರ ಸ್ಮರಣೆ
ಲೇ: ಕೆ. ವಿ. ಅಯ್ಯರ್
ಗ್ರಂಥಾಲಯ
ಕ್ರ. ಸಂ. 111253
ಕನ್ನಡ ವಿಶ್ವವಿದ್ಯಾಲಯ, ಹಂಪಿ
Scan ಶ್ರೀಸಿದ್ಧವಿದ್ಯಾರಣ್ಯ 1952



8K0.9
IYA

ಗ್ರಂಥಾಲಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ.

ಶ್ರೀ ಕೈಲಾಸಂ ಅವರ

ಸ್ಮರಣೆ

ಕೆ. ವಿ. ಅಯ್ಯರ್

ವ್ಯಾಯಾಮಶಾಲಾ, ಬೆಂಗಳೂರು-560002

ಶ್ರೀ ಡಿ. ವಿ. ಗುಂಡಪ್ಪ

ಅವರ ಮುನ್ನುಡಿಯೊಡನೆ

AKSHARA GRANTHALAYA

ACC.NO. 111253

ರಾಜಲಕ್ಷ್ಮಿ ಪ್ರಕಾಶನ

ಬಳೇಪೇಟೆ, ಬೆಂಗಳೂರು

ಸಾಹಿತ್ಯ ಭಂಡಾರ

ಜಂಗಮ ಮೇಸ್ತ್ರಿ ಗಲ್ಲಿ, ಬಳೇಪೇಟೆ

ಬೆಂಗಳೂರು-೫೬೦೦೫೩.

ದೂರವಾಣಿ - ೭೭೭೦೮

[ಎಲ್ಲಾ ಹಕ್ಕುಗಳನ್ನೂ ಕಾದಿರಿಸಿದೆ]

ಪ್ರಥಮ ಮುದ್ರಣ: ಫೆಬ್ರುವರಿ, ೧೯೫೭
ದ್ವಿತೀಯ ಮುದ್ರಣ: ಜೂನ್, ೧೯೬೩

(R) 111253

ಅಧಿಕೃತ ಮಾರಾಟಗಾರರು:
ಗೀತಾ ಏಜನ್ಸೀಸ್
ಹೋಲ್‌ಸೇಲ್ ಪುಸ್ತಕ ವ್ಯಾಪಾರಿಗಳು
ಬಳೇಪೇಟೆ ಚೌಕ, ಬೆಂಗಳೂರು-೫೩

8K0.9
IYA S

ಬೆಲೆ ರೂ. 4-00

ಮುದ್ರಕರು:
ಎಂ. ಎಸ್. ನಾಗರಾಜ್
ಯುಗಾಂತರ ಮುದ್ರಣಾಲಯ
ಚಾಮರಾಜಪೇಟೆ, ಬೆಂಗಳೂರು-೧೮

ಸಂಘದ ಅರಿಕೆ

ಸೆಂಟ್ರಲ್ ಕಾಲೆಜಿನ ಕರ್ಣಾಟಕ ಸಂಘದ ಸ್ಥಾಪಕರೂ ಬಹುಕಾಲ ಅದರ ಪ್ರವರ್ತಕರೂ ಆದ ಪೂಜ್ಯ **ಶ್ರೀ ಎ. ಆರ್. ಕೃಷ್ಣಶಾಸ್ತ್ರೀ**, ಎಂ.ಎ., (ಈಗ ನಿವೃತ್ತ ಕನ್ನಡ ಪ್ರೊಫೆಸರ್, ಮೈಸೂರು ವಿಶ್ವವಿದ್ಯಾನಿಲಯ)ಇವರನ್ನು ಕೃತಜ್ಞತೆಯಿಂದ ಜ್ಞಾಪಿಸಿಕೊಂಡು ವಂದಿಸಿ ಈ ಅರಿಕೆಗೆ ತೊಡಗುತ್ತೇವೆ.

ಆಗಸ್ಟ ೧೯೧೮ ರಲ್ಲಿ ಸ್ಥಾಪಿತವಾದ ಸೆಂಟ್ರಲ್ ಕಾಲೆಜ್ ಕರ್ಣಾಟಕ ಸಂಘ ಅಂದಿನಿಂದ ಇದುವರೆಗೂ ಮೂವತ್ತುನಾಲ್ಕು ವರ್ಷ ಕೆಲಸ ಮಾಡಿಕೊಂಡು ಬಂದಿರುವುದಾದರೂ ಅದು ನಡಸುತ್ತಿದ್ದ ಪ್ರಕಟನ ಕಾರ್ಯ ನಿಂತು ಸುಮಾರು ಹದಿಮೂರು ವರ್ಷಗಳಾದುವು.* ಶ್ರೀ ಕೃಷ್ಣಶಾಸ್ತ್ರಿಗಳು ೧೯೩೯ರಲ್ಲಿ ಮೈಸೂರಿಗೆ ಹೋದ ಮೇಲೆ ಸಂಘ ಯಾವ ಹೊಸ ಪುಸ್ತಕವನ್ನೂ ಪ್ರಕಟಿಸಲಾಗಲಿಲ್ಲ. ಈಗ ಮತ್ತೆ ಪ್ರಕಟನಕ್ಕೆ ಕೈ ಹಾಕಿದ್ದೇವೆ, ಈ ವರ್ಷದಲ್ಲಿ ಮೂರು ಪುಸ್ತಕ ಪ್ರಕಟವಾಗುತ್ತವೆ. ಅವುಗಳಲ್ಲಿ ಇದು ಒಂದು: ಶ್ರೀ ಕೆ.ವಿ. ಅಯ್ಯರ್ ಬರೆದಿರುವ '**ಶ್ರೀ ಕೈಲಾಸಂ ಅವರ ಸ್ಮರಣೆ.**'

ಇಪ್ಪತ್ತೊಂಬತ್ತು ವರ್ಷಗಳ ಹಿಂದೆ, ಕೈಲಾಸಂ ಅವರ 'ಟೊಳ್ಳುಗಟ್ಟಿ' ಪ್ರಕಟವಾದಾಗ ಆ ಕವಿಯ, ಕಾವ್ಯಗಳ 'ಗಣಾಗುಣ'ಗಳನ್ನು ಮೊದಲು ಸವಿಮರ್ಶವಾಗಿ ಪ್ರಸ್ತಾಪಮಾಡಿದ ಸಂಘವೇ ಈಗ ಈ ಪುಸ್ತಕ ಪ್ರಕಟಿಸುವುದರಲ್ಲಿ

---

* ಅದುವರೆಗಿನ ಪ್ರಕಟನೆಗಳು ; ಡಿ. ವಿ. ಗುಂಡಪ್ಪ — ವಸಂತಕುಸುಮಾಂಜಲಿ, ನಿವೇದನ, ಉಮರನ ಒಸಗೆ ; ಬಿ. ಎಂ. ಶ್ರೀಕಂಠಯ್ಯ—ಇಂಗ್ಲಿಷ್ ಗೀತೆಗಳು, ಗದಾಯುದ್ಧ ನಾಟಕಂ, ಅಶ್ವತ್ಥಾಮನ್ ; ಶ್ರೀನಿವಾಸ—ತಾವರೆ ; ಮೈಸೂರು ಸೀತಾರಾಮಶಾಸ್ತ್ರಿ—ಪ್ರತಿಮಾನಾಟಕ ; ಎಂ. ಡಿ. ಅಳಸಿಂಗರಾಚಾರ್—ಕರ್ಣಾಟಕ ಸ್ವಪ್ನವಾಸವದತ್ತ ನಾಟಕಂ ; ಬಿ. ವೆಂಕೋಬರಾವ್—ಮೈಸೂರು ದೇಶದ ವಾಸ್ತುಶಿಲ್ಪ ; ಹಲವು ಲೇಖಕರು—ಮುದ್ದಣ ; ಸಂಸ—ವಿಗಡ ವಿಕ್ರಮರಾಯ ; ಎಂ. ಆರ್. ಶ್ರೀ—ಭಕ್ತಿಭಾಂಡಾರಿ ಬಸವೇಶ್ವರರು ; ಎ. ಆರ್. ಕೃಷ್ಣಶಾಸ್ತ್ರೀ—ಭಾಸಕವಿ ; ಎಸ್. ಜಿ. ಶಾಸ್ತ್ರಿ—ಸೊಕ್ರಟೀಸನ ಮರಣ ; ಲಕ್ಷ್ಮೀನರಸಿಂಹಶಾಸ್ತ್ರಿ—ಷೇಕ್ಸ್‌ಪಿಯರ್ ನಾಟಕ ಕಥೆಗಳು ; ಕೆ. ವಿ. ಪುಟ್ಟಪ್ಪ—ಮಲೆನಾಡಿನ ಚಿತ್ರಗಳು ; ಜಿ. ಪಿ. ರಾಜರತ್ನಂ—ಚೀನಾ ದೇಶದ ಬೌದ್ಧ ಯಾತ್ರಿಕರು ; ಎಲ್ ಗುಂಡಪ್ಪ—ಭಾಸನ ಏಕಾಂಕ ನಾಟಕಗಳು, ಪ್ರತಿಜ್ಞಾ ಯೌಗಂಧರಾಯಣ, ಚಾರುದತ್ತ ;

ಔಚಿತ್ಯವಿದೆ. ಕೈಲಾಸಂ ಅವರ ಕಾವ್ಯೋಪದೇಶ ಪದ್ಧತಿಗೆ 'ವಿದೂಷಕ **ಸಮ್ಮತಿ'** ಎಂದು ಮೆಚ್ಚಿಕೆಯ ಅಂಕಿತಕೊಟ್ಟವರು ಆ ಮೊದಲ ವಿಮರ್ಶೆ ಯನ್ನು ಆರಂಭಿಸಿದ ಈ ಕರ್ಣಾಟಕ ಸಂಘದ ಸ್ಥಾಪಕರು ಎಂಬುದನ್ನು ಕೈಲಾಸಂಪ್ರಿಯರು ಎಂದಿಗೂ ಮರೆಯುವುದಿಲ್ಲ. ಕೈಲಾಸಂ ಸಾಮರ್ಥ್ಯದ ಸತ್ಯಸ್ವರೂಪ ದರ್ಶನವಾಗಬೇಕಾದರೆ ಅಂಥ ವಿಮರ್ಶೆಗಳೂ ಇಂಥ ವ್ಯಕ್ತಿಚಿತ್ರ ಗಳೂ ಇನ್ನೂ ಹೇರಳವಾಗಿ ಬರಬೇಕು. ಈ ಕರ್ತವ್ಯದಲ್ಲಿ ತಮ್ಮ ಕಾಣಿಕೆ ಯೆಂದು ಶ್ರೀ ಅಯ್ಯರ್ ಇದನ್ನು ಬರೆದುಕೊಟ್ಟಿದ್ದಾರೆ. ಇದಕ್ಕಾಗಿ ಸಂಘ ಅವರಿಗೆ ತುಂಬ ಋಣಿಯಾಗಿದೆ.

ಕೈಲಾಸಂ ಬರೆವಣಿಗೆಯಲ್ಲಿ ಹೇಗೋ ಹಾಗೆಯೇ ಕೈಲಾಸಂಅನ್ನು ಕುರಿತ 'ಸ್ಮರಣೆ'ಯಲ್ಲಿಯೂ ತಮಿಳು, ತೆಲುಗು, ಇಂಗ್ಲಿಷುಗಳ ಪ್ರಾಚುರ್ಯವಿರುವುದ ರಿಂದ, ಆ ಭಾಷೆಗಳ ಪರಿಚಯವಿಲ್ಲದವರ ಅನುಕೂಲಕ್ಕಾಗಿ ಕೆಲವು ಟಿಪ್ಪಣಿ ಗಳನ್ನು ಒದಗಿಸಿದ್ದೇವೆ.

'ಸ್ಮರಣೆ'ಗೆ ಮುನ್ನುಡಿ ಹೇಳಿರುವ ಶ್ರೀಮಾನ್ ಡಿ. ವಿ. ಗುಂಡಪ್ಪನವರು ನಮ್ಮ ಸಂಘಕ್ಕೆ ಅಂದಿನಿಂದಲೂ ಆಪ್ತರಾಗಿರುವ ಹಿರಿಯರು. ನಮ್ಮ ಪುಸ್ತಕ ಪ್ರಕಟನೆ ಆರಂಭವಾದದ್ದು ಇವರ 'ವಸಂತಕುಸುಮಾಂಜಲಿ'ಯಿಂದ. ಇವರು, ಕೈಲಾಸಂ ಅವರಿಗೆ ಬೇಕಾಗಿದ್ದವರು, ಶ್ರೀ ಅಯ್ಯರ್ ಅವರಿಗೂ ಬೇಕಾದವರು. ಹೀಗೆ ಮೂವರಿಗೂ ಬೇಕಾದವರಿಂದ ನಮಗೊಂದು ಮುನ್ನುಡಿ ಬೇಕಾಗಿದೆ ಎಂದು ಕೇಳಿಕೊಂಡ ಒಡನೆ, ಸಂಘದ ಮೇಲೆ ಹಿಂದಿನ ವಾತ್ಸಲ್ಯ ವನ್ನೆ ಮತ್ತೆ ತೋರಿದ್ದಕ್ಕಾಗಿ ಶ್ರೀ ಡಿ.ವಿ.ಜಿ. ಅವರಿಗೆ ವಂದಿಸುತ್ತೇವೆ.

ಮುಂದೆ—ಚಿತ್ರಗಳು. ಮುಖಚಿತ್ರಕ್ಕೆ ಬಳಸಿರುವ ಫೋಟೋ ಶ್ರೀ ಅಯ್ಯರ್ ಸ್ವತಃ ತೆಗೆದದ್ದು. 'ಕೈಲಾಸಂ—ಪೋಲಿಕಿಟ್ಟಿ ಪಾತ್ರದಲ್ಲಿ' ಎಂಬುದು 'ಪೋಲಿಕಿಟ್ಟಿ'ಯ ಮೊದಲ ಮುದ್ರಣದ ಮುಖಚಿತ್ರದಿಂದ ಉದ್ಧರಿಸಿದ್ದು. 'ಕೈಲಾಸಂ--ಸುಮಾರು ೧೯೩೦ರಲ್ಲಿ' ಎಂಬುದು ಶ್ರೀ ಪಡುಕೋಣೆ ರಮಾ ನಂದರಾಯರು ಕೊಟ್ಟ ಒಂದು ಸಮೂಹಚಿತ್ರದಿಂದ ಉದ್ಧರಿಸಿದ್ದು. ಕಡೆಯ ಎರಡು ಉದ್ಧಾರಗಳನ್ನು ಅಚ್ಚುಕಟ್ಟಾಗಿ ಮಾಡಿಕೊಟ್ಟವರು ಬೆಂಗಳೂರಿನ 'Ven Dyke Studio'ವಿನ ಶ್ರೀ ಸೀತಾರಾಂ. ಈ ಉಪಕಾರಕ್ಕೆ ಇವರೆಲ್ಲ ರಿಗೂ ಸಂಘ ಋಣಿಯಾಗಿದೆ.

ಮತ್ತೆ—ಅನುಬಂಧದಲ್ಲಿ ಜೋಡಿಸಿರುವ ಮೊದಲನೆಯ ಭಾಷಣದ ಪ್ರತಿಗಾಗಿ ಶ್ರೀ ವಿ.ಟಿ. ಶ್ರೀನಿವಾಸನ್ ಮತ್ತು ಡಾಕ್ಟರ್ ಎಂ. ಶಿವರಾಂ ಅವರಿಗೂ ಎರಡನೆಯ ಭಾಷಣವನ್ನು ಮುದ್ರಿಸಲು ಅನುಮತಿ ಕೊಟ್ಟುದಕ್ಕಾಗಿ ಮದರಾಸಿನ ಎ.ಐ.ಆರ್. ನಿಲಯದವರಿಗೂ ನಾವು ಕೃತಜ್ಞರಾಗಿದ್ದೇವೆ.

ಇನ್ನು—ಈ ಕೃತಿ ಸಹೃದಯರ ಮಡಿಲಿನಲ್ಲಿರಲಿ.

ಫೆಬ್ರುವರಿ, ೧೯೫೭
ಸೆಂಟ್ರಲ್ ಕಾಲೇಜ್, ಬೆಂಗಳೂರು

ಜಿ. ಪಿ. ರಾಜರತ್ನಂ
ಕರ್ಣಾಟಕ ಸಂಘದ ಪರವಾಗಿ

ಕೆ. ವಿ. ಅಯ್ಯರ್ ಅವರ ಪುಸ್ತಕಗಳು

PERFECT PHYSIQUE

SURYA NAMASKARS

PHYSIQUE AND FIGURE

CHEMICAL CHANGES IN PHYSICAL EXERCISE

ಅಥವಾ ದೆಯ್ಯದ ಮನೆ

ರೂಪದರ್ಶಿ

ಶಾಂತಲಾ

ಸಮುದ್ಯತಾ

ಲೀನಾ (ರೂಪದರ್ಶಿಯ ಶಾಖೆ)

ಶ್ರೀ ಕೆ. ವಿ. ಅಯ್ಯರ್ ಬರೆದ 'ಕೈಲಾಸಂ ಅವರ ಸ್ಮರಣೆ'ಗೆ ಶ್ರೀ ಡಿ. ವಿ. ಜಿ. ಅವರ ಮುನ್ನುಡಿ

ಇನ್ನು ಮುಂದೆ ಕನ್ನಡ ಸಾಹಿತ್ಯದ ಚರಿತ್ರೆಯನ್ನು ಬರೆಯುವಾತನು ಮರೆಯಲಾಗದ, ಮರೆಯಬಾರದ, ಹೆಸರುಗಳಲ್ಲಿ ಕೈಲಾಸಂ ಅವರದು ಅಗ್ರ ಪಂಕ್ತಿಗೆ ಸೇರತಕ್ಕದ್ದು. ನಮ್ಮ ಸಾಹಿತ್ಯವನ್ನು ಕೃತಕತೆಯಿಂದ ಸಹಜತೆಗೆ —ಗ್ರಂಥಭಾಷೆಯನ್ನು ಅತಿ ಗ್ರಾಂಥಿಕತೆಯ ಶಿಖರದಿಂದ, ನಾಟಕವನ್ನು ಅತಿ ನಾಟಕೀಕತೆಯ ಶಿಖರದಿಂದ—ಇಳಿಸಿ ಜನಸಾಮಾನ್ಯದ ಮಟ್ಟಕ್ಕೆ ತಂದ ಕಾರಣಪುರುಷ ಕೈಲಾಸಂ.

ಅದಕ್ಕಿಂತ ಹೆಚ್ಚಾಗಿ, ನಗುವು ಮರೆತಿದ್ದ ಜನವನ್ನು ನಗಿಸಿದ ಪುಣ್ಯ— ಅಳು ಬರುವವರೆಗೂ ನಗಿನಗಿಸಿ, ಅಳು ಮರೆಯುವ ಹಾಗೂ ನಗಿನಗಿಸಿ, ನಲಿದಾಡಿದ ಪುಣ್ಯ—ಕೈಲಾಸಂ ಅವರದು. ಅಂಥವರ ಸ್ವರೂಪ ಚಿತ್ರ ಯಾರಿಗೆ ಬೇಡ ? ಬಹುಮಂದಿಗೆ ಸಂತೋಷಕೊಟ್ಟು, ಬಹು ಮಂದಿಗೆ ಪ್ರಿಯರಾದವರು, ಮಹಿಮಾವಂತರು. ಅಂಥವರ ವಿಷಯದಲ್ಲಿ ಜನಕ್ಕೆ ಕುತೂಲವಿರುವುದು ಶುಭಲಕ್ಷಣ.

ಎಲ್ಲಿ ಪ್ರೀತಿ ಹೆಚ್ಚೋ ಅಲ್ಲಿ ಯೋಗ್ಯತಾ ವಿವೇಚನೆಯ ತೀಕ್ಷ್ಣತೆ ತಗ್ಗುವುದು ಸ್ವಾಭಾವಿಕ. ಹಾಗಿದ್ದರೂ ನಮ್ಮ ಕೋಲಾರದ ಶ್ರೀಮಾನ್ ವೆಂಕಟೇಶಯ್ಯರ್ರವರು ರೇಖಿಸಿರುವ ಈ ವ್ಯಕ್ತಿ ಚಿತ್ರದಲ್ಲಿ ಆ ಎರಡು ಗುಣಗಳೂ ಒಂದರಿಂದೊಂದಕ್ಕೆ ಕುಂದಾಗದಂತೆ ಸೇರಿಕೊಂಡಿವೆ. ಸ್ವಾರಸ್ಯಕಲ್ಪನೆಗಾಗಿ ಅವರು ಸತ್ಯವನ್ನು ಮುಚ್ಚಿಟ್ಟಿಲ್ಲ; ಮೀರಿಯೂ ಇಲ್ಲ. ನಾಯಕ ಪ್ರಶಸ್ತಿಯಲ್ಲಿ ಅಲ್ಲಿದ್ದ ವಿಕಾರಗಳನ್ನು ಮರೆಮಾಚಿಲ್ಲ. ಈ ಚಿತ್ರವು ವಾಸ್ತವಿಕತೆಯಿಂದ ಮನೋಹರವಾಗಿದೆ.

ಕೈಲಾಸಂ ಅವರು ಕನ್ನಡ ಗ್ರಂಥ ರಚನೆಯಲ್ಲಿ ಮೊದಲ ಹೆಜ್ಜೆ ಇಡುವುದಕ್ಕೆ ಹಿಂದಿನಿಂದ ಅವರೊಡನೆ ಬಳಕೆಯಲ್ಲಿದ್ದ ನಾನು ಹಾಗೆಯೇ ಆ ಕಾಲದ ನಮ್ಮ ಗಣ್ಯ ಸಾಹಿತಿಗಳಲ್ಲಿ—ಎಂದರೆ ಈಗ್ಗೆ ಸುಮಾರು ೩೫ ವರ್ಷಗಳ ಹಿಂದೆ—ಕೈಲಾಸಂಗೆ ಹಿರಿಯರೂ ಸಮವಯಸ್ಕರೂ ಆಗಿದ್ದವರೊಡ

ನೆಯೂ ಬಳಕೆಯಲ್ಲಿದ್ದೆ. ಕೈಲಾಸಂ ಕೃತಿಯನ್ನು ಆಗಿನ ಆ ಮಿತ್ರರು ಹೇಗೆ ಕಂಡರೆಂಬುದನ್ನು ಕುರಿತು ನಾನು ಹೇಳಬಹುದಾಗಿರುವ ಒಂದು ಮಾತನ್ನು ಹೇಳಲು ಈ ಮುನ್ನುಡಿಯಲ್ಲಿ ಅವಕಾಶ ತೋರುತ್ತದೆ. ಬಹುಕಾಲದ ರೂಢಿಯಿಂದ ಶಿಕ್ಷಿತವಾದ ಕಣ್ಣಿಗೆ ರೂಢಿಬಿಟ್ಟ ಸಂಗತಿಯೊಂದು ಮೊದಲು ಕಾಣಬಂದಾಗ ಮನಸ್ಸಿನಲ್ಲಿ ಯಾವ ತೆರದ ಕಚಕುಳಿಯ ಅನುಭವವು ಸ್ವಾಭಾವಿಕವಾಗಿ ಆಗುವುದುಂಟೋ ಅಂಥ ವಿಚಿತ್ರ ಚೋದ್ಯದ ಅನುಭವ ಆಗ ಕೈಲಾಸಂ ಕೃತಿಯಿಂದ ಒಬ್ಬರಿಬ್ಬರಿಗೆ ಆದದ್ದುಂಟು. ಆದರೆ ಅದರ ಫಲಿತಾಂಶ ಆಗ್ರಹವಾಗಲಿಲ್ಲ, ಅಸಮ್ಮತಿಯೂ ಆಗಲಿಲ್ಲ; ಸ್ವಲ್ಪ ಶಂಕೆಯಿಂದ ಮಿಶ್ರಿತವಾದ ಸಂತೋಷವೇ ಆಗಿತ್ತು. ಈ ಮಿಶ್ರಿತ ಸಂತೋಷವಾದದ್ದೂ ಒಬ್ಬರಿಬ್ಬರಲ್ಲಿ ಮಾತ್ರವೇ. ಬಹು ಮಂದಿಯ ಮನಸ್ಸಿನಲ್ಲಿ ಆ ಹೊಸ ಕೃತಿಯಿಂದ ಆದದ್ದು ನಿಸ್ಸಂಶಯವಾದ, ಅಮಿಶ್ರಿತವಾದ, ಸಂತೋಷ. ಕನ್ನಡದ ದಾರಿ ಹೊಸದಾಗಬೇಕು; ಅದರ ಹಳೆಯ ಜಾಡು ಈ ಕಾಲದ ಪ್ರಯಾಣಕ್ಕೆ ಸಾಲದು— ಎಂಬುದನ್ನು ಆಗ್ಗೆ ಎಲ್ಲರೂ ಕಂಡುಕೊಂಡಿದ್ದವರೇ. ಹಾಗಿದ್ದ ಕಾಲದಲ್ಲಿ ಧೈರ್ಯಮಾಡಿ ಮುನ್ನುಗ್ಗಿ ಹೊರಟಾತ ಕೈಲಾಸಂ. ಆತ ಮಾಡಿದ್ದು ಮೊದಲನೆಯ ಪ್ರಯೋಗ ಪರೀಕ್ಷೆ (ಎಕ್ಸ್‌ಪೆರಿಮೆಂಟ್). ಮನುಷ್ಯ ಯತ್ನದ ಯಾವ ಕ್ಷೇತ್ರದಲ್ಲಿಯೇ ಆಗಲಿ ಒಂದಾನೊಂದು ಹೊಸ ಪ್ರಯೋಗಪರೀಕ್ಷೆ ಸಿದ್ಧಾಂತಕ್ಕೆ ಬರುವುದು ಸಂದೇಹ, ಪ್ರಶ್ನೆ, ವಿಮರ್ಶನೆಗಳಿಂದ ತಾನೆ? ಆಕ್ಷೇಪಕರೂ ಅದಕ್ಕೆ ಸಹಕಾರಿಗಳೇ ; ಏಕೆಂದರೆ ಅವರ ಉದ್ದೇಶ ಆಕ್ಷೇಪಿತರ ಉದ್ದೇಶದಿಂದ ಬೇರೆ ಯಾದದ್ದೇನೂ ಅಲ್ಲ. ಶೋಧಕನನ್ನು ಘಾತಕನೆನ್ನುವುದು ಕೃತಿಕರ್ತನಲ್ಲಾಗಲಿ ಅವನ ಸ್ನೇಹಿತರಲ್ಲಾಗಲಿ ದುರಭಿಮಾನದ ಮಾತು.

ಅಥವಾ ಕೃತಿಕರ್ತನಿಗೂ ವಿಮರ್ಶಕನಿಗೂ ಇರುವ ಅಭಿಪ್ರಾಯ ಭೇದವು ನಿಜವಾದ ರುಚಿಭೇದದಿಂದಲೇ ಉಂಟಾದದ್ದಾಗಿರಬಹುದು. ಕಲಾಪ್ರಪಂಚದಲ್ಲಿ ಸರ್ವಸಮ್ಮತವಾದ ಏಕಪ್ರಮಾಣ ಇರಲಾರದೆಂಬುದು ಪ್ರಸಿದ್ಧವಾದ ಸಂಗತಿ. ಅವನವನ ಕಣ್ಣು ಅವನವನದು. ಒಬ್ಬನಿಗೆ ಉದ್ದವೆಂದು ತೋರಿದ ಮೂಗು ಇನ್ನೊಬ್ಬನಿಗೆ ಗಿಡ್ಡೆನಿಸಬಹುದು. ಕಲಾಕೃತಿಯ ರಸಕ್ಕೆ ರುಜುವಾತಿರುವುದು ಭೋಕ್ತನ ಹೃದಯದ ಒಳಗಡೆ. ಆಯೆಡೆಗೆ ಕೈತುರುಕಿ ನಿರ್ಬಂಧದಿಂದ ರಸಾನುಭವ ಮಾಡಿಸಬಲ್ಲವರು ಯಾರು ? ಕೃತಿಕರ್ತನಿಗೂ

ಕೃತಿಭೋಕ್ತನಿಗೂ ಲೋಕಾನುಭವಗಳೂ ಅಂತರಂಗಪರಿಪಾಕಗಳೂ ಎಷ್ಟೆಷ್ಟು ಮಟ್ಟಿಗೆ ಸಮವಾಗಿರುತ್ತವೋ ಅವರ ಪರಸ್ಪರ ಸ್ನೇಹಾಕರ್ಷಣೆ ಅಷ್ಟಷ್ಟು ಮಾತ್ರದ್ದಾಗಿರುತ್ತದೆ. ಹೀಗಿರುವುದರಿಂದ ಒಂದಾನೊಂದು ಕೃತಿಯ ರಸಾಂಶ ಒಬ್ಬಾನೊಬ್ಬ ಭೋಕ್ತನಿಗೆ ನಿಜವಾಗಿಯೂ ದೊರಕದೇ ಹೋಗಿದ್ದರೆ ಅದು ಆಶ್ಚರ್ಯವೇನೂ ಅಲ್ಲ.

ಹಾಗಾದರೆ ಲೋಕವಲ್ಲಿ ಬಹುಕಾಲದಿಂದ ಬಹುಸಂಖ್ಯೆಯ ಕಲಾಕೃತಿಗಳ ವಿಷಯದಲ್ಲಿ ಬಹುಮಂದಿಯ ಆದರಣೆ ಏಕಾಭಿಪ್ರಾಯವಾಗಿ ಬಂದಿಲ್ಲವೆ? —ಎಂದು ಕೇಳಬಹುದು. ಅದು ಸುಸಂಗತವಾದ ಪ್ರಶ್ನೆ. ರಾಮಾಯಣ ಭಾರತಾದಿ ಕಾವ್ಯಗಳ ವಿಷಯದಲ್ಲಿ, ಕನಕದಾಸ ತ್ಯಾಗರಾಜರುಗಳ ಗೀತೆಗಳ ವಿಷಯದಲ್ಲಿ, ಬಾದಾಮಿ ಬೇಲೂರುಗಳ ಶಿಲ್ಪಗಳ ವಿಷಯದಲ್ಲಿ ಲೋಕದ ಗುಣಗ್ರಹಣವು ಏಕಮುಖವಾಗಿ ಬಂದಿದೆ. ಅಲ್ಲಿ ಅಭಿರುಚಿಗಳ ಐಕ್ಯ ಕಾಣಿಸುತ್ತದೆ. ಹಾಗೆ ಏಕಪಾಕದಿಂದ ಸಾವಿರಾರು ನಾಲಿಗೆಗಳಿಗೆ ರಸಾಸ್ವಾದನ ಮಾಡಿಸಿರುವುದೇ ಆ ಕೃತಿಕರ್ತರುಗಳ ಮಹಿಮೆ. ಆ ಮಹಿಮೆ,—ಹಾಗೆ ಜನಬಾಹುಳ್ಯದ ಇಷ್ಟರುಚಿಗಳ ಸರ್ವಸಮಾನಾಂಶವನ್ನು ಕಂಡುಕೊಂಡು, ಅಷ್ಟು ಮಂದಿಯ ಹೃದಯಗಳನ್ನೂ ವಶಪಡಿಸಿಕೊಳ್ಳಬಲ್ಲ ಮಹಿಮೆ,- ಯಾರಿಗುಂಟೋ ಆ ಕೃತಿಕರ್ತನು ಅಲ್ಲಿಂದ ಮುಂದಕ್ಕೆ ಸಂಪ್ರದಾಯಕರ್ತನಾಗುತ್ತಾನೆ. ಅವನಿಂದ ಶಿಕ್ಷಿತವಾದ ರುಚಿ ಅವನ ಅನಂತರ ಬಂದವರದು. ಹಾಗೆ ಜನವು ರೂಢಿಗೆ ಶರಣವಾಗುತ್ತದೆ. ಅಂಥಾ ರೂಢಿಮಾರ್ಗವನ್ನು ತೊರೆದು ನಡೆಯುವ ಕಲಾಕರ್ತನು ಜನಕ್ಕೆ ಮೊದಮೊದಲು ವಿದೇಶಿಯಾಗಿ ಕಾಣುತ್ತಾನೆ. ಹಿಂದಿನ ಕಲಾಕರ್ತನ ವಿಜಯ ಮುಂದಿನ ಕಲಾಕರ್ತನಿಗೆ ಪ್ರತಿರೋಧಿಯಾಗಿ ನಿಲ್ಲುತ್ತದೆ. ಆದರೆ ಅದು ಕಿಂಚಿತ್ಕಾಲ ಮಾತ್ರ. ಹೊಸ ಕಲಾಕರ್ತನಲ್ಲಿ ಸತ್ತ್ವಸ್ವಾರಸ್ಯವಿದ್ದರೆ ಕೆಲವು ದಿನಗಳ ತರುವಾಯ ಅವನದೂ ಇನ್ನೊಂದು ಸಂಪ್ರದಾಯವಾಗುತ್ತದೆ. ಹೀಗೆ ಕೈಲಾಸಂ ಅವರದೂ ಈಗ—೩೦ ವರ್ಷಗಳಾದ ಮೇಲೆ—ಒಂದು ಹೊಸ ರೂಢಿಯಾಗಿ ಪಳಗಿಕೊಂಡಿದೆ.

ಈ ಸಣ್ಣ ಚರ್ಚೆ ಪ್ರಾಸಂಗಿಕವಾಗಿ ಬಂದದ್ದು. ವಾಸ್ತವವಾಗಿ ಅದು ಇಲ್ಲಿ ಅಷ್ಟೇನೂ ಅವಶ್ಯವಿರಲಿಲ್ಲ; ಏಕೆಂದರೆ ಕೈಲಾಸಂ ಕೃತಿಗಳಿಗೆ ಮೆಚ್ಚಿಕೆ ಮನ್ನಣೆಗಳು ಬಂದದ್ದರಲ್ಲಿ ತಡವಾಗಲಿ, ಅರೆಮನಸ್ಸಾಗಲಿ ಇರಲಿಲ್ಲ. ನೋಡಿ

ದೊಡನೆಯೇ ಎಲ್ಲರೂ ಚಪ್ಪಾಳೆ ತಟ್ಟಿದರು. ಸಾಹಿತ್ಯ ಕಾರ್ಯವು ಕೃತಕತೆಯಿಂದ ಸಹಜತೆಯ ಕಡೆಗೆ ಮುಖ ಮಾಡಿತೆಂದು ಜನ ಕಂಡುಕೊಂಡರು. ಯಾರೋ ಅಸೂಯಾವಿಷ್ಟರು ಕೈಲಾಸಮನ್ನು ಹಳ್ಳದೊಳಕ್ಕೆ ತಳ್ಳಿ ಅದುಮಿದ್ದರೆಂದೂ, ಆತನನ್ನು ಮೇಲಕ್ಕೆತ್ತಿದವರು ತಾವೆಂದೂ ಯಾರಾದರೂ ಹೇಳಿಕೊಳ್ಳುವವರಿದ್ದರೆ ಅದಕ್ಕೆ ಕಾರಣ ಕೈಲಾಸಮಿಗಾಗಲಿ ಕೃತಿವಿಮರ್ಶಕನಿಗಾಗಲಿ ಸಂಬಂಧಪಟ್ಟ ಸಂಗತಿಯಲ್ಲ. ಕೈಲಾಸಮಿಗೆ ಎಂದೂ ಯಾರಿಂದಲೂ ಶಿಫಾರಸು ಬೇಕಾಗಿರಲಿಲ್ಲ.

ಆತನು ಹೊಗಳಿಕೆ ತೆಗಳಿಕೆಗಳಿಗೆ ಕಿವಿಗೊಡುತ್ತಿದ್ದವನೇ ಅಲ್ಲ. ಅದಕ್ಕೆ ಆತನಿಗೆ ಪುರಸೊತ್ತಿರಲಿಲ್ಲ. ಆತನ ಮನಸ್ಸಿನಲ್ಲಿ ಆತನ ಮಾತೇ—ಆತನ ಕಲ್ಪನೆ ಭಾವನೆಗಳೇ—ಯಾವಾಗಲೂ ತುಂಬಿಕೊಂಡಿರುತ್ತಿತ್ತು. ಆತನದು ಹಕ್ಕಿಯಂಥ ಜೀವ ; ಒಂದೆಡೆ ನಿಂತು ನೆಲವನ್ನು ದಿಟ್ಟಿಸಲು ಅದಕ್ಕೆ ಬಿಡುವಿಲ್ಲ. ಅದು ಹಾಡಿಕೊಳ್ಳುವುದು ತನಗಾಗಿ, ಆತ್ಮತೃಪ್ತಿಗಾಗಿ. ಲೋಕ ಕೇಳಿದರೇನು, ಬಿಟ್ಟರೇನು ? ತನ್ನೆದೆಯ ಮೇಲಣ ಹಾಡಿನ ಹೊರೆಯನ್ನು ಹೊರಕ್ಕೆರಚಿದರಾಯಿತು ಅದರ ಕೆಲಸ. ಅಥವಾ ಕೈಲಾಸಂ ಕಾಡಾನೆಯಂಥವರು. ಅತ್ತಿತ್ತ ನೋಡದೆ ತನ್ನ ಗುರಿಯಂತೆ ಮುನ್ನುಗ್ಗುವ ಮನೋಧರ್ಮ ಆತನದು.

ಆದರೆ ಕೈಲಾಸಮಿಗೆ ಸ್ನೇಹಿತರ ಆವಶ್ಯಕತೆ ಇರಲಿಲ್ಲವೆಂದು ಅಭಿಪ್ರಾಯವಲ್ಲ. ಸ್ನೇಹದ ಆವಶ್ಯಕತೆ ಆತನಿಗೆ ತುಂಬಾ ಇತ್ತು. ಆತನದು ಒಂದರ್ಥದಲ್ಲಿ ಸ್ವಸಹಾಯಶೂನ್ಯವಾದ ಚೈತನ್ಯ. ಶ್ರೀ ಅಯ್ಯರಂಥವರು ದೈವವಶಾತ್ ಒದಗಿಕೊಂಡು ಪೋಷಣೆ ಪಾಲನೆಗಳನ್ನು ನೀಡದೆ ಹೋಗಿದ್ದಿದ್ದರೆ ಅದು ಎಲ್ಲೆಲ್ಲಿ ಅಲೆದಾಡಿ, ಹೇಗೆ ಹೇಗೆ ಸವೆದು, ಅವತಾರ ಮುಗಿಸಿಕೊಳ್ಳುತ್ತಿತ್ತೋ !

ಕೈಲಾಸಂ ದುರ್ಬಲನೇನೂ ಅಲ್ಲ. ಯಾವ ಅರ್ಥದಲ್ಲಿಯೂ ಆತನು ಕನಿಕರವನ್ನು ಬೇಡತಕ್ಕವನಾಗಿರಲಿಲ್ಲ. ಆತ ಯಾವುದಕ್ಕೂ ಕೊರತೆಪಡಬೇಕಾಗಿರಲಿಲ್ಲ. ಆತ ಹೇಗೆ ಕಸರತ್ತು ಮಾಡಿದರೆಂಬುದನ್ನು ಶ್ರೀ ಅಯ್ಯರವರು ತಿಳಿಸಿದ್ದಾರೆ. ಆತನು ಸ್ವಭಾವದಲ್ಲಿ ದೀನನಲ್ಲ. ನಿರುತ್ಸಾಹಕ್ಕೆ ಆತನಲ್ಲಿ ಎಡೆಯಿರಲಿಲ್ಲ. ಒಂದು ಕಡೆ ನೆಲಸಿ ಎಲ್ಲರಂತೆ ಬಾಳಬೇಕೆಂದು ಆತನಿಗೆ

ಮನಸ್ಸು ಬಂದಿದ್ದಿದ್ದರೆ ಅದಕ್ಕೆ ಯಾವ ಕಡೆಯಿಂದಲೂ ಯಾವ ಬಗೆಯಿಂದಲೂ ಅಡ್ಡಿಬರುವುದಾಗಿರಲಿಲ್ಲ. ಆತನಿಗೆ ಆ ಮನಸ್ಸು ಏಕೋ ಬರಲಿಲ್ಲ. ಶಕ್ತನಾಗಿದ್ದರೂ ಅಶಕ್ತನಂತೆ ಆಗಿದ್ದ. ಆದದ್ದರಿಂದ ಆತನ ದೈಹಿಕ ಜೀವನಕ್ಕೆ ಅನ್ಯಸಹಾಯ ಅವಶ್ಯವಾಯಿತು.

ಗ್ರಂಥಲೇಖನವು—ಗ್ರಂಥ ರಚನೆಯಲ್ಲ, ಲೇಖನ—ದೈಹಿಕವ್ಯಾಪಾರ. ಕೈಲಾಸಮಿಗೆ ಕಲ್ಪನಾವೇಶ ಬಂದ ಘಳಿಗೆಯಲ್ಲಿ ಶ್ರೀ ಅಯ್ಯರವರೋ, ಶ್ರೀ ಬಿ. ಎಸ್. ರಾಮರಾಯರೋ, ಅಂಥ ಸ್ನೇಹಿತರು ಇನ್ನು ಯಾರೋ ಹತ್ತಿರವಿದ್ದು, ಆ ಮನೋವೇಗವನ್ನು ಪ್ರೋತ್ಸಾಹಿಸಿ, ತಾವೂ ಪಟ್ಟಾಗಿ ಕುಳಿತು ಆ ಮಾತಿನ ಹೊಳೆಯನ್ನು ಕಾಗದದಲ್ಲಿ ಹಿಡಿದಿರಿಸಿದ್ದರಿಂದಲ್ಲವೆ ಕೈಲಾಸಮಿಗೆ ಸ್ವಾರಸ್ವತ ಕೀರ್ತಿ? ಅದೆಂಥ ಹೊಳೆ! ಅದರ ವೇಗಕ್ಕೂ ರಭಸಕ್ಕೂ ಹೊಂದಿಕೊಳ್ಳಬಲ್ಲ ಲೇಖಣಿ ಯಾರಿಗುಂಟು? ಕೈಲಾಸಮಿನ ಬಾಯಿಂದ ಬಂದ ವಾಕ್ಯದ ಒಂದೆರಡು ಮಾತುಗಳನ್ನು ಬರೆದುಕೊಂಡು ಮೂರನೆಯ ಮಾತಿಗಾಗಿ 'ಅಂ' ಎಂದರೆ ಅಷ್ಟು ಸಣ್ಣ ತಡೆಯಿಂದಲೇ ಕೈಲಾಸಂ ಮೊದಲು ಹೇಳಿದ್ದ ವಾಕ್ಯ ಅರ್ಧದಲ್ಲಿಯೇ ಬದಲಾಯಿಸಿ ಇನ್ನೊಂದು ರೂಪವನ್ನು ತಾಳಿಬಿಡುತ್ತಿತ್ತು. ಅವಸರವಸರದ ಓಟ, ತಡೆಮಾಡಿದರೆ ಬದಲಾವಣೆ, ನಡುನಡುವೆ ಬೈಗಳು, ತಪ್ಪಿದರೆ ಕಾಡುಹರಟೆ,—ಇದು ಆತನ ಉಕ್ತಲೇಖನದ ಲಕ್ಷಣ. ಇವನ್ನೆಲ್ಲ ಸಹಿಸಿ, ಕೈಲಾಸಂ ಕಲ್ಪನೆಗಳನ್ನು ಅಕ್ಷರಾಕಾರಕ್ಕಿಳಿಸಿರುವ ಸ್ನೇಹಿತರು ಕನ್ನಡ ಲೋಕದ ಕೃತಜ್ಞತೆಗೆ ಪಾತ್ರರಾಗಿದ್ದಾರೆ.

ಕೈಲಾಸಂ ಕೃತಿಗಳು ಎಷ್ಟು ಕಾಲ ಬದುಕಿದ್ದಾವು? ಬಲ್ಲವರು ಬೇಕಾದವರಿಗೆ ಹೇಳಲಿ. ನನಗೆ ಆ ಚಿಂತೆಯಿಲ್ಲ. ನಾನಿರುವ ವರೆಗೆ ಅವು ಇರುತ್ತವೆ; ಏಕೆಂದರೆ ಅವು ನನಗೆ ಬೇಕಾದವು. ನನ್ನ ತರುವಾಯದವರ ಇಷ್ಟರುಚಿಗಳನ್ನು ಗೊತ್ತುಮಾಡುವ ಅಧಿಕಾರ ನನ್ನದಲ್ಲ. ಅದು ನನಗೆ ಬೇಕಾದದ್ದಲ್ಲ. ಸಮಾಜದ ಸ್ಥಿತಿ ಬದಲಾಯಿಸುತ್ತದೆ; ಅದರ ಪ್ರಶ್ನೆಗಳು ಬದಲಾಯಿಸುತ್ತವೆ. ಮನುಷ್ಯಸ್ವಭಾವ ಸಹ ಅಷ್ಟಿಷ್ಟು ಬದಲಾಯಿಸುತ್ತದೆ. ಆ ಬದಲಾವಣೆಗಳಿಗನುಗುಣವಾಗಿ ಸಾಹಿತ್ಯ ಬದಲಾಯಿಸಬೇಕಾದೀತು. ಇಂಗ್ಲಿಷಿನಲ್ಲಿ ಬರ್ನಾರ್ಡ್ ಷಾ ಕೃತಿಗಳ ವಿಷಯದಲ್ಲಿ ಈಗಾಗಲೇ ಅಭಿಪ್ರಾಯ ಒಡೆದಿದೆ. ಹೂವಿಗಿರುವ ಪ್ರಶ್ನೆ ತಾನು ಎಷ್ಟು ಹೊತ್ತು ಬದುಕಿದ್ದೇನೆಂಬುದಲ್ಲ, ಬದುಕಿರುವಷ್ಟು ಹೊತ್ತಿ

ನಲ್ಲಿ ಎಷ್ಟು ಮಂದಿಗೆ ಬೇಕಾದೇನು, ಹೇಗೆ ಹೇಗೆ ಬೇಕಾದೇನು—ಎಂಬುದು. ಬಯಸುವ ಮಂದಿ ಇರುವಾಗ ಬದುಕು. ಬಯಕೆಯಾದರೋ ಹೂವೊಂದ ರಿಂದಲೇ ಹುಟ್ಟತಕ್ಕದ್ದಲ್ಲ. ಅದರ ವಾಸನೆ ಬಣ್ಣಗಳ ಜೊತೆಗೆ ಜನದ ಸಂದರ್ಭ ಮನೋಭಾವಗಳು ಸೇರಿಕೊಳ್ಳುತ್ತವೆ. ಕೃತಿಕರ್ತನ ರಸವೂ ಭೋಕ್ತನ ರುಚಿಯೂ ಸಂಯೋಗ ಹೊಂದುವುದು ನಮ್ಮ ಗುಣಾಕಾರದಿಂದ ಪೂರ್ವ ನಿಷ್ಕರ್ಷೆಗೆ ದೊರೆಯತಕ್ಕ ಸಂಗತಿಯಲ್ಲ. ಕಲಾಕೃತಿಯ ಚಿರಜೀವಿತ್ವದ ಚರ್ಚೆ ನಿಷ್ಫಲಶ್ರಮವೆಂದು ನನ್ನ ತಿಳಿವಳಿಕೆ.

ಕೈಲಾಸಂ ಕೃತಿಗಳಲ್ಲಿ ಉಪದೇಶವೇನಾದರೂ ಉಂಟೆ? ಉಪದೇಶ ಬೇಕಾದವರು ಹುಡುಕಿ ನೋಡಿದರೆ ಅದು ಅಲ್ಲಿ ಕಾಣಬರುತ್ತದೆ. ಆದರೆ ವಿನೋ ದವೇ ಸಾಕೆಂಬುವರ ಕಣ್ಣನ್ನುಅದು ಆಯಾಸಗೊಳಿಸದಂತೆ ಅವಿತುಕೊಂಡಿರು ತ್ತದೆ. ಕೈಲಾಸಂ ಕೃತಿಗಳು ಎರಡು ಜಾತಿಯವು:—(೧) ಸಮಾಜದ ಮುಖಕ್ಕೆ ಕನ್ನಡಿ ಹಿಡಿಯುವವು; (೨) ಮನುಷ್ಯ ಮಹತ್ತ್ವವನ್ನು ಕಾಣಿಸುವವು.

(೧) ಸಮಾಜದ ಬಾವುನೋವುಗಳನ್ನು ತೋರಿಸುವ ಅಣಕಾಟದಲ್ಲಿ ಆ ವಿಕಾರಗಳನ್ನು ಅದು ಸರಿಪಡಿಸಿಕೊಳ್ಳಲೆನ್ನುವುದೇ ಒಂದು ಉಪದೇಶ. ಸರಿಪಡಿಸುವುದು ಹೇಗೆ? ಅದಕ್ಕಿರುವ ಅಡಚಣೆಗಳೆಂಥವು? ಅವುಗಳನ್ನು ಬಗೆಹರಿಸುವುದು ಹೇಗೆ?—ಇಂಥ ಪ್ರಶ್ನೆಗಳಿಗೆ ಉತ್ತರ ಕೊಡುವುದು ವಿಡಂಬನ ಕಲೆಯ ಕೆಲಸವಲ್ಲ. ಸಮಾಜ ಸಂಸ್ಕಾರ ಕಾರ್ಯದಲ್ಲಿ ವಿಡಂಬನಕಾರನು ಮಾಡಬಲ್ಲದ್ದು ಮೊದಲನೆಯ ಹಾಗ ಪಾಲನ್ನು ಮಾತ್ರ. ಉಳಿದ ಮುಪ್ಪಾಗ ಪಾಲು ಕೆಲಸವನ್ನು ಮಾಡಬೇಕಾದವರು ನೀತಿ ತತ್ತ್ವದರ್ಶಿಗಳು, ನಾನಾ ಸಮಾಜ ವಿಜ್ಞಾನಿಗಳು, ರಾಷ್ಟ್ರಕಾರ್ಯಸ್ಥರು. ಹಾಗಪಾಲಿನ ಕೆಲಸವನ್ನೇ ಒಟ್ಟಿಂದೆಣಿಸಿಕೊಳ್ಳುವವರು ಭ್ರಾಂತರು. ಸಮಾಜಜೀವನ ವಿಚಾರಗಳಲ್ಲಿ ವಿಡಂಬನಕಾರನ ಮಾತೇ ಕಡೆಯ ಮಾತೆಂದು ಭಾವಿಸುವುದು ಸರಿಯಾದ ಉಪದೇಶ ಗ್ರಹಣವಲ್ಲ. ಅಣಕಾಟವು ಯಥಾರ್ಥಸ್ಥಿತಿಯ ಕ್ವಚಿದಂಶದ ಅತಿ ರೇಕರೂಪ. ತೆಳ್ಳನೆಯ ಮನುಷ್ಯನನ್ನು ಅದು ಕಡ್ಡಿಕಡ್ಡಿಯಾಗಿ ತೋರಿಸು ತ್ತದೆ; ದಪ್ಪನಾಗಿರುವವನನ್ನು ಮೂಟೆ ಮೂಟೆ ಮಾಡಿ ತೋರಿಸುತ್ತದೆ. ಅದೊಂದು ವಿಪರೀತ ಪ್ರತಿಬಿಂಬ. ಆ ಬಿಂಬ ವಿಕೃತಿಯ ಉದ್ದೇಶ ಮಿತ ವಾದದ್ದು. ಅದು ವಿಚಾರ ಪ್ರೇರಣೆ. ಅಲ್ಲಿಂದ ಮುಂದಿನ ಕಾರ್ಯ ಅದರದಲ್ಲ.

(೨) ಮನುಷ್ಯ ಸ್ವಭಾವದಲ್ಲಿ ಮಹಾಗುಣವನ್ನರಸುವ ಪ್ರವೃತ್ತಿ ಕೈಲಾಸ ಮಿಗೆ ಸಹಜವಾಗಿತ್ತು. ಸಂಸ್ಕೃತ ಇತಿಹಾಸಗಳ ಜ್ಞಾನ ಆತನ ಮನೆಯಲ್ಲಿ ಆನುಪೂರ್ವಿಯಿಂದ ಬಂದಿತ್ತು. ಮಹಾಭಾರತ ಆತನಿಗೆ ಪರಮಪ್ರಿಯವಾದ ಗ್ರಂಥ. ಭೀಷ್ಮ, ದ್ರೋಣ, ಏಕಲವ್ಯ, ಕರ್ಣ,— ಇಂಥ ಮಹಾವೀರರ ಅಂತಸ್ಸತ್ತ್ವವನ್ನು ಕಂಡುಕೊಳ್ಳಬೇಕೆಂಬುದು ಆತನಿಗಿದ್ದ ಹಂಬಲ. ಹಾಗೆಯೇ ತಾವರೆಕೆರೆಯ ಕಥಾವಳಿಯಲ್ಲಿ ಆತನು ಸಾಮಾನ್ಯ ಬಡ ಜನವಲ್ಲಡಗಿರುವ ದೊಡ್ಡತನಗಳನ್ನೂ ಕಂಡುಕೊಂಡಿದ್ದಾರೆ. ಈ ಮಹತ್ತ್ವ ಸಂದರ್ಶನ ನಮಗೆ ಒಂದು ಮಹೋಪದೇಶವೆನ್ನಲು ಅಡ್ಡಿಯಿರದು.

ಕೈಲಾಸಂ ಕೃತಿಗಳ ಗುಣಾಗುಣ ತೋಲನಕ್ಕೆ ನಾನು ಕೈಹಚ್ಚಲಾರೆ. ಅದಕ್ಕೆ ನಾನು ಅಧಿಕಾರಿಯಲ್ಲ. ಕಾವ್ಯ ಕಲಾ ವಿಚಾರದಲ್ಲಿ ಅವರಿಗೂ ನನಗೂ ಅಷ್ಟು ಹೆಚ್ಚಿನ ಸಾಧರ್ಮ್ಯವಿರಲಿಲ್ಲ. ಮನೆತನ, ಬಾಲ್ಯಶಿಕ್ಷೆ, ವಿದ್ಯಾವ್ಯಾಸಂಗ, ಉದ್ಯೋಗ, ಸಂಪತ್ತು, ಲೋಕಾನುಭವ,— ಈ ಎಲ್ಲ ಮನಸ್ಸಂಸ್ಕಾರ ಸಂದರ್ಭಗಳ ವಿಷಯದಲ್ಲಿಯೂ ಅವರೂ ನಾನೂ ಉತ್ತರಧ್ರುವ ದಕ್ಷಿಣ ಧ್ರುವಗಳಂತೆ ಇದ್ದವರು. ಅವರ ಮನಸ್ಸು ಕಲ್ಪನಾಸಕ್ತವಾಗಿ ಆಕಾಶದಲ್ಲಿ ಹಾರಾಡುತ್ತಿದ್ದದ್ದು: ನನ್ನ ಮನಸ್ಸು ವ್ಯವಹಾರಮಗ್ನವಾಗಿ ನೆಲದ ಮೇಲೆ ತೆವಳುತ್ತಿದ್ದದ್ದು. ಅವರ ಮನಸ್ಸು ಪಾಶ್ಚಾತ್ಯ ದೇಶಗಳನ್ನು ಕಂಡು ಹೊಸ ಹೊಸದಕ್ಕೆ ಒಲಿಯುತ್ತಿದ್ದದ್ದು; ನನ್ನ ಮನಸ್ಸು ಹುಟ್ಟಿದೂರಿನಲ್ಲಿಯೇ ನಿಂತು ಹಿಂದುಹಿಂದಕ್ಕೆ ನೋಡುತ್ತಿದ್ದದ್ದು. ಅವರ ಅಂತರಂಗದ ದರ್ಶನ ನನಗೆ ಪೂರ್ಣವಾಗಿ ಲಭಿಸಿತ್ತೆಂದು ನಾನು ಹೇಗೆ ಭಾವಿಸಲಾದೀತು? ಆ ನಿಶ್ಚಯ ವಿಲ್ಲದ ಮೇಲೆ ವಿಮರ್ಶನಕಾರ್ಯಕ್ಕೆ ಹೇಗೆ ಧೈರ್ಯ ಬಂದೀತು?

ಕೈಲಾಸಮನ್ನು ನಾನು ಕಂಡಾಗಲೆಲ್ಲ ಆ ಕೂಡಲೆ ನನ್ನ ತುಟಿಯ ಮೇಲಕ್ಕೆ ಬರುತ್ತಿದ್ದದ್ದು ನಗು, ಎದೆಯೊಳಗೆ ಆಗುತ್ತಿದ್ದದ್ದು ನೋವು. ಸುಖ ಸಾಮಗ್ರಿ ಸಿದ್ಧವಾಗಿರುವಾಗ ಪರದೇಶಿಯಂತೆ ಪರದಾಡುವುದು ಆತನ ಹಣೆಯ ಬರಹವಾಯಿತಲ್ಲಾ! ಎಂಬುದು ನನ್ನ ಸಂಕಟ. ಆತನ ಬಂಧುವರ್ಗವನ್ನು ಬಲ್ಲವನು ನಾನು. ಅವರ ತಂದೆ ಶ್ರೀಮಾನ್ ಪರಮಶಿವಯ್ಯರವರ ಅಭಿ ಮಾನದ ಭಾಗ್ಯ ನನ್ನ ಪಾಲಿಗೆ ಬಂದಿತ್ತು. ಅವರು ಮೈಸೂರು ಚೀಫ್ ಕೋರ್ಟಿನ ಜಡ್ಜಿಯಾಗಿದ್ದವರು. ಅವರ ಅಣ್ಣಂದಿರು ಸದಾಶಿವಯ್ಯರವರು,

ಮದರಾಸು ಹೈಕೋರ್ಟಿನ ಜಡ್ಜಿಯಾಗಿದ್ದವರು. ವಿದ್ವತ್ಸಾತ್ತ್ವಿಕ ಶಿರೋಮಣಿಗಳು. ಪರಮಶಿವಯ್ಯರವರು ತಮ್ಮನ್ನು ಕುರಿತುಕೊಂಡು—"ಇವನು ಸದಾಶಿವಯ್ಯರ ತಮ್ಮ ಎಂದು ಹೇಳಿಸಿಕೊಳ್ಳುವುದಕ್ಕಿಂತ ದೊಡ್ಡ ಗೌರವ ನನಗೆ ಯಾವುದೂ ಇಲ್ಲ, ಇನ್ನಾವುದೂ ನನಗೆ ಬೇಕಿಲ್ಲ" ಎಂದು ಹೇಳುತ್ತಿದ್ದರು. ಆ ಮಾತಿನಿಂದ ಆ ಅಣ್ಣತಮ್ಮಂದಿರ ಯೋಗ್ಯತೆ ಎಂಥದೆಂಬುದು ತೋರುತ್ತದಲ್ಲವೆ? ಕೆಲವು ವೈಯಕ್ತಿಕ ಕಾರಣಗಳಿಂದ ನಾನು ಕೈಲಾಸಂ ಕುಟುಂಬಕ್ಕೆ ಸಮೀಪನಾಗಿದ್ದೆ. ಆದರಿಂದ ಒಂದೊಂದು ಸಾರಿ ನಮ್ಮ ಸ್ನೇಹದ ನಡುವೆ ಸಲುಗೆಯ ಆಕ್ಷೇಪಣೆಯೂ ತಲೆದೋರುತ್ತಿತ್ತು. ಆದರೆ ಕೈಲಾಸಂ ನನ್ನನ್ನು ಯಾವಾಗಲೂ ಮೃದು ವಾತ್ಸಲ್ಯದಿಂದಲೇ ಕಂಡು ನನ್ನ ಕೋಪ ಸೂಚನೆಯನ್ನು ತಮ್ಮ ಹಾಸ್ಯದ ಪ್ರತ್ಯುಕ್ತಿಯಿಂದ ಸೋಲಿಸಿಬಿಡುತ್ತಿದ್ದರು. ಒಂದಾನೊಂದು ದಿನ ನಾವಿಬ್ಬರೂ ಏಕಾಂತದಲ್ಲಿ ಮಾತನಾಡುತ್ತಿದ್ದಾಗ ಹೇಗೋ ಗೃಹಸ್ಥ ಸೌಖ್ಯವನ್ನು ಕುರಿತು ಪ್ರಸ್ತಾಪ ಬಂತು. ಅವರು—"ಹೌದಯ್ಯಾ ಹೌದು. Home, Sweet Home! Nothing like Home. —Ah. n-o-t-h-i-n-g like Home; there's NOTHING like Home" ಎಂದು ಕಹಿಕಹಿ ಅಪಹಾಸ್ಯ ಮಾಡಿದರು. ನಾನು ದುಡುಕಿ "Nothing like nonsense for you" ಎಂದುಬಿಟ್ಟೆ. ಹಾಗೆಂದು ಕೂಡಲೆ ತುಟಿ ಕಚ್ಚಿಕೊಂಡೆ. "All right, my boy. Let it be so." ಎಂದು ಹೇಳಿ ಏನೋ ಮುಖಚೇಷ್ಟೆ ಮಾಡಿ ನಗುವಿನಲ್ಲಿ ಮುಗಿಸಿದರು.

ಒಂದೇ ಲೋಹಧಾತುವು ಚಂಚಲವಾಗಿದ್ದಾಗ ಪಾದರಸ; ನಿಶ್ಚಲ ಘನವಾದಾಗ ಬೆಳ್ಳಿ; ಪೂರ್ತಿ ನಿರ್ಮಲವಾದರೆ ಚಿನ್ನ; ಆ ಚಿನ್ನ ಶಿಲೆಯೊಳಗೆ ಅವಿತು ಒಂದುಗೂಡಿದಾಗ ಪೂಜ್ಯ ಸಾಲಿಗ್ರಾಮ—ಹೀಗೆಂದು ಹಳಬರು ಹೇಳುವುದುಂಟು. ಕೈಲಾಸಮ್ ಅವರ ಅಂತರಂಗರಚನೆಯಲ್ಲಿ ಬ್ರಹ್ಮ ಅಂಥ ಘನೀಕಾರಕದ್ರವ್ಯವನ್ನು ಸೇರಿಸಿರಲಿಲ್ಲವೋ ಏನೋ! ಪಕ್ಷಿಗಳಿಗೆ ಗೂಡಿರುವ ಹಾಗೆ, ದನಕ್ಕೆ ಕರುವಿರುವ ಹಾಗೆ, ಗಾಳಿಪಟಕ್ಕೆ ದಾರಹಿಡಿದ ಕೈಯ ಹಾಗೆ, ನಮ್ಮ ಜೀವನಕ್ಕೆ ಒಂದು ಆಕರ್ಷಣಸ್ಥಾನವಿದ್ದಲ್ಲಿ ಜೀವ ಅದರಿಂದ ಒಂದು ಶಿಕ್ಷಣಕ್ಕೆ ಒಳಗಾಗುತ್ತದೆ; ಅದರಿಂದ ಜೀವಕ್ಕೆ ಗುಣ ದಾರ್ಢ್ಯವುಂಟಾಗುತ್ತದೆ. ಕೈಲಾಸಂಗೆ ಅಂಥ ಅವಲಂಬನವಿಲ್ಲದೆಹೋಯಿತೆಂದು ಹೇಳಿದರೆ ತಪ್ಪಾದೀತೆ?

ಅಥವಾ ಕೈಲಾಸಮಿನ ಪ್ರತಿಭೆ ಅರಳಿ ಕೆಲಸ ಮಾಡಲಿಕ್ಕೆ ಆತ ಬದುಕಿದಂತೆ, ನಿಯಮ ಕಟ್ಟುಗಳಿಲ್ಲದೆ, ಯಥಾತಥವಾಗಿ ಬದುಕುವುದು ಅವಶ್ಯಸಿದ್ಧತೆಯೆಂದು ನಂಬೋಣವೆ? ಈ ಜಗತ್ತಿನಲ್ಲಿ ಹಳ್ಳವಿಲ್ಲದೆ ತಿಟ್ಟಿಲ್ಲ. ನೆರಳಿಲ್ಲದೆ ಬೆಳಕಿಲ್ಲ. ನಾವು ದೊಡ್ಡ ಕಲೆಯನ್ನು ಕಾಣಬೇಕೆಂದರೆ ದೊಡ್ಡ ಸಹನೆಯನ್ನು ನೀಡುವುದಕ್ಕೂ ಸಿದ್ಧವಾಗಿರಬೇಕು. ಸಂಗೀತಯೋಗಿ——ಆಚಾರ್ಯರಿಗೆ ಹೊಟ್ಟೆಯೊಳಗೆ ಒಂದು ಬುಡ್ಡಿ, ಕಣ್ಣುಮುಂದೆ ಒಂದು ಬುಡ್ಡಿ ಸಾರಾಯಿ ಇದ್ದ ಹೊರತು ಕಂಠದಿಂದ ಸ್ವರ ಹೊರಡುತ್ತಿರಲಿಲ್ಲ. ನಾಟಕಪ್ರಭು——ರಿಗೆ ಕೈಬಳೆ ಸದ್ದು ಕೇಳಿಸಿದ ಹೊರತು ಅಭಿನಯಾವೇಶ ಬರುತ್ತಿರಲಿಲ್ಲ. ಎಷ್ಟೋ ಮಂದಿಗೆ ಬುದ್ಧಿ ಚುರುಕಾಗಬೇಕಾದರೆ ಒಂದು ಬಟ್ಟಲು ಕಾಫಿಯೋ ಒಂದು ಚಿಟಿಕೆ ನಶ್ಯವೋ ಪೂರ್ವಸಿದ್ಧತೆಯಾಗಿ ಅವಶ್ಯವೆನಿಸುತ್ತದೆ. ಒಬ್ಬೊಬ್ಬರ ಪ್ರತಿಭಾವಿಕಾಸಕ್ಕೆ ಒಂದೊಂದು ಬಗೆಯ ವಾಮಾಚಾರ ಅನಿವಾರ್ಯ. ನಿಮಗೆ ಆ ಸ್ವಾರಸ್ಯ ಬೇಕಾದರೆ ಆ ಕಲಾಕರ್ತನು ಮೊದಲು ಆ ವಿಕಟ ಸಂಸ್ಕಾರ ಮಾಡಿಕೊಂಡು ರಂಗಕ್ಕೆ ಬರಬೇಕು. ಇದು ಕಲಾಜೀವನದ ನಿಯಮವಾಗಿದ್ದರೂ ಇರಬಹುದು. ಎಲ್ಲರಂತೆಯೇ ಕೈಲಾಸಂ ಬದುಕು ನಡಸಿದ್ದಿದ್ದರೆ ಎಲ್ಲರಂತೆಯೇ ಇದ್ದು ಬಿಡುತ್ತಿದ್ದರೋ ಏನೋ! ಎಂಥ ಬಳ್ಳಿ ಬೆಳೆಯಲಿಕ್ಕೆ ಎಂಥ ಗೊಬ್ಬರ ಬೇಕೋ! ಯಾವ ಹೂವು ಅರಳುವುದಕ್ಕೆ ಯಾವ ಕಾವು ಬೇಕೋ! ಇದೂ ಒಂದು ತೆರದ ಸಮಾಧಾನ—ಸಂತೋಷವಿಲ್ಲದ ಸಮಾಧಾನ.

ಚಂದ್ರನನ್ನು ಕಂಡಾಗ ಸಂತೋಷಪಟ್ಟು ಕೃತಜ್ಞರಾಗುವುದು ಸಂಭಾವಿತ ಲಕ್ಷಣ. ಚಂದ್ರಗ್ರಹದಲ್ಲಿ ನಮಗೆ ಕಾಣುವುದು ಒಂದರ್ಧ ಮಾತ್ರ. ಆ ಭಾಗದ ಮೇಲೆ ಮಾತ್ರವೇ ಸೂರ್ಯಪ್ರಕಾಶ ಬೀಳುವುದು. ಇನ್ನೊಂದರ್ಧ ಸೂರ್ಯರಶ್ಮಿಗೆ ಸಿಕ್ಕತಕ್ಕದ್ದಲ್ಲ. ಅದರಿಂದ ನಮಗೇನು? ನಮ್ಮ ಕಣ್ಣಿಗೆ ತಂಪನ್ನು ಬೀರುವಷ್ಟರ ಬೆಳ್ದಿಂಗಳಿಗಾಗಿ ಕೈ ಮುಗಿಯಬೇಕಾದದ್ದು ನಮ್ಮ ಧರ್ಮ.

ಕೈಲಾಸಂ ಅವರ ಕಾವ್ಯ, ನಾಟಕಗಳಿಗಿಂತ ಬೆಲೆಯಲ್ಲಿ ಕಡಮೆಯಲ್ಲದ್ದು ಅವರ ವ್ಯಕ್ತಿಚೈತನ್ಯ. ನಿಂತ ಕಡೆ ಸಂತೆ ಸೇರಿಸಬಲ್ಲದ್ದು ಅದರ ಪ್ರಭಾವ. ಅವಯವ ಅವಯವದಲ್ಲೂ ಚೇಷ್ಟೆ ತುಂಬಿದ ಆಕಾರ, ಪ್ರೀತಿಕಟಾಕ್ಷದಿಂದ

ಅಗ್ನಿಜ್ವಾಲೆಯ ವರೆಗಿನ ವಿವಿಧ ಪ್ರಭೆಗಳನ್ನು ಸೂಸುವ ನೇತ್ರಾಭಿನಯ, ನಿಟ್ಟುಸಿರಿನಿಂದ ಸಿಂಹಗರ್ಜನೆಯುವರೆಗಿನ ನಾನಾ ಅಂತಸ್ತುಗಳ ಕಂಠನಾದ, ಸಿಡಿಲು ಮಿಂಚು ಕೂಡಿದ ಜಡಿಮಳೆಯಂತೆ ಎಡೆಬಿಡದೆ ಬರುವ ವಾಕ್ಪ್ರವಾಹ— ಈ ವ್ಯಕ್ತಿವೈಶಿಷ್ಟ್ಯವು ಕೈಲಾಸಂ ಅವರ ಹತ್ತಿರ ಸುಳಿದವರನ್ನು ಬಿಗಿದೆಳೆದು ಬಂದಿಯಾಗಿ ನಿಲ್ಲಿಸುತ್ತಿತ್ತು. ಲೇಖಣಿಯ ಮೊನೆಯನ್ನೂ, ಬಣ್ಣದ ಕುಂಚಿಕೆಯ ನವುರನ್ನೂ, ಛಾಯಾಗ್ರಾಹಿ ಯಂತ್ರದ ಕನ್ನಡಿಯನ್ನೂ ತಪ್ಪಿಸಿ ಕೊಂಡು ನುಸುಳಿಹೋಗುತ್ತಿದ್ದ ಆ ಚೈತನ್ಯದ ಲೀಲೆಗಳನ್ನು ಕೆ. ವಿ. ಅಯ್ಯ ರವರು ಲಘು ರೇಖೆಯಲ್ಲಾದರೂ ಚಿತ್ರಿಸಿ ಗುರುತು ಮಾಡಿಟ್ಟಿರುವುದು ನಮಗೆಲ್ಲ ಮಹೋಪಕಾರವಾಗಿದೆ.

ಕೈಲಾಸಂ ಅವರಂತೆ ಕೆ. ವಿ. ಅಯ್ಯರೂ ಕುತೂಹಲಕಾರಕ ವ್ಯಕ್ತಿ. ಗದೆಯನ್ನು ಹೇಗೆಂದರೆ ಹಾಗೆ ತಿರುಗಿಸಬಲ್ಲ ಕೈ ಲೇಖಣಿಯನ್ನೂ ಹಾಗೆ ತಿರು ಗಿಸಬಲ್ಲದ್ದೆಂಬ ಸಂಗತಿ ಮೋಹಕವಾಗಿದೆ. ಅಯ್ಯರವರ ಕಲ್ಪನ ಚಿತ್ರಣ ಸಾಮರ್ಥ್ಯಗಳು ಬೇರೆ ಗ್ರಂಥಗಳಲ್ಲಿ ಸ್ವತಂತ್ರವಾಗಿ ಗಣನೆ ಸಂಪಾದಿಸಿ ಕೊಂಡಿವೆ. ಸೊಗಸಾದ ಗರಡಿಸಾಮು, ಸೊಗಸಾದ ಭೋಜನ, ಸೊಗಸಾದ ಬರವಣಿಗೆ, ಸೊಗಸಾದ ಸ್ನೇಹ—ಭಾಗ್ಯವೆಂದರೆ ಇನ್ನೇನು? ಅದು ಅಯ್ಯ ರವರಿಗೆ ಎಂದೆಂದಿಗೂ ಯಥೇಷ್ಟವಾಗಿರಲಿ. ಅವರು ಭಾಗ್ಯವಂತರಾಗಿರುವುದು ಅವರ ಮಿತ್ರರಿಗೂ ಭಾಗ್ಯ.

ಕಾವ್ಯಗಳನ್ನು ಮಾಡಿದ್ದರ ಜೊತೆಗೆ ಮಾಡಿಸಿದ ಕೀರ್ತಿ ಕೈಲಾಸಂ ಅವರದು. ಆ ಕೀರ್ತಿಯ ಪ್ರಭಾಪುಂಜದಲ್ಲಿ ಈ ವ್ಯಕ್ತಿಚಿತ್ರ ಒಂದು ಉಜ್ಜ್ವಲ ಕಿರಣ.

ಜನವರಿ ೧೮, ೧೯೫೨ **ಡಿ. ವಿ. ಜಿ.**

ಶ್ರೀ ಕೈಲಾಸಂ ಅವರ ಸ್ಮರಣೆ

ವಿ ವ ರ

ಶ್ರೀ ಕೈಲಾಸಂ ಅವರ ಸ್ಮರಣೆ

ಶ್ರೀ ಕೈಲಾಸಂ ಕಳಿದು ಐದು ವರ್ಷಗಳಾದುವು. ಒಡನೆ ಆಡಿದವರ, ಬೆಳೆದವರ, ಓದಿದವರ, ನಾವು ನೋಡಿದವರ ಎಲ್ಲರ ನೆನಪುಗಳೂ ನಮ್ಮ ಸ್ಮೃತಿಯಲ್ಲಿ ಉಳಿಯುವುದಿಲ್ಲ. ಕೆಲವು ಮಾತ್ರ ಅಳಿಸಿಹೊಗುವುದೇ ಇಲ್ಲ. ಕೈಲಾಸಂ ನೆನಪೂ ನಮ್ಮಲ್ಲಿ ಅನೇಕರಿಗೆ ಹಾಗೆಯೇ. ಕಾರಣ: ಅವರ ಸರ್ವತೋಮುಖವಾದ ಬುದ್ಧಿಶಕ್ತಿ, ಅಸಾಧಾರಣವಾದ ವಿದ್ವತ್ತು, ಅವರ ಪ್ರತಿಭೆ, ಆ ಅತಿಶಯವಾದ ಮನೋವೇಗ, ಆ ಅಲೌಕಿಕವಾದ ನಡತೆ. ಇವೆಲ್ಲಾ ಜನ್ಮತಃ ಬಂದವೋ, ಇಲ್ಲವೆ ಕಲೆತು ಕಲಿತು ಬಂದವೋ, ಒಂದುವೇಳೆ ಎಲ್ಲವೂ ಸೇರಿಯೇ ಬಂದವೋ!

ಕನ್ನಡನಾಡಿನ ಜನ ಕೈಲಾಸಂಅನ್ನು ಮರೆಯಲು ಸಾಧ್ಯವಿಲ್ಲ. ಅವರ ಸಾಹಿತ್ಯಸೇವೆ, ಸಮಾಜಸೇವೆ ಅಮೋಘ. ಅದುವರೆಗೆ ನಮ್ಮಲ್ಲಿ ಇರದಿದ್ದ ಹೊಸ ಸಾಹಿತ್ಯದ ಪ್ರಕಾರವೊಂದನ್ನು ಸೃಷ್ಟಿಸಿದವರು ಇವರು. ನಗಿಸಿ ನಗಿಸಿ, ನಮ್ಮ ಮುಖದ ಕಪ್ಪನ್ನೇ ನಮಗೆ ಎತ್ತಿತೋರಿಸಿದ ಜಾಣರೆಂದರೆ, ಕೈಲಾಸಂ. ಇವರ ಬರೆವಣಿಗೆ ಸರ್ವಕಾಲಕ್ಕೂ ಸತ್ಯಸಾಹಿತ್ಯವಾಗಿ ಉಳಿಯುವುದು. ಕಾರಣ: ನಮ್ಮ ಸಮಾಜವೂ ನಮ್ಮ ಬದುಕೂ ರೀತಿಗೊಳ್ಳುವ ಸಂಭವ ತುಂಬ ನಿಧಾನ. ಹೋಂರೂಲು, ಬಂಡ್ವಾಳ್ವಿಲ್ಲದ ಬಡಾಯಿ, ಬಹಿಷ್ಕಾರ, ಸಾತೂ–ಪಾತೂ–ತೌರ್ಮನೆ ಇವುಗಳಲ್ಲಿ ಚಿತ್ರಿತವಾಗಿರುವ ಸಮಾಜ ಇಂದಿಗೂ ಏನಾದರೂ ಬದಲಾಗಿದೆಯೇ? ಆಗಿದ್ದರೆ, ಎಷ್ಟು? ನೋಡಿ.

ಈ ಲೇಖನದ ಉದ್ದೇಶ, ಕೈಲಾಸಂ ಸೃಜಿಸಿದ ಸಾಹಿತ್ಯ ವಿಷಯವಲ್ಲ. ಅವರನ್ನು ಚೆನ್ನಾಗಿ ಬಲ್ಲ ಹಿರಿಯ ಸಾಹಿತಿಗಳೂ ಮಿತ್ರರೂ ಅವರ ಕೃತಿಗಳ ಘನತೆಯನ್ನು ಎತ್ತಿ ತೋರಿಸಿ, ಅವುಗಳ ಜಟಿಗಳನ್ನು ಬಿಡಿಸಿ, ವಾಚಕರ ಮುಂದಿರಿಸಿದ್ದಾರೆ.

ಕೈಲಾಸಂ ಜೊತೆಯಲ್ಲಿ ಅನೇಕ ವರ್ಷ ನಾನು ಇದ್ದೆನಾದರೂ, ಬಹು ಕಾಲ ಅವರನ್ನು ಅರಿತುಕೊಳ್ಳುವ ಪ್ರಯತ್ನಕ್ಕೆ ನಾನು ಹೋಗಲಿಲ್ಲ. ಅದು ನನಗೆ ಅಸಾಧ್ಯವಾಗಿ ಕಂಡುಬಂತು. ಅವರ ಹೃದಯ ನನಗೆ 'ನ ಪಶ್ಯತಿ'

ಆಗಿಯೇ ಉಳಿಯಿತು. ಹುಟ್ಟು ಕುರುಡರು ಆನೆಯ ಒಂದೊಂದೇ ಅಂಗವನ್ನು ತಡವಿ ನೋಡಿ, ಕಾಲನ್ನು ಮುಟ್ಟಿದವನು ಅದು ಕಂಬದ ಹಾಗೆ, ಸೊಂಡಿಲನ್ನು ಸ್ಪರ್ಶಿಸಿದವನು ಅದು ಹೆಬ್ಬಾವಿನ ಹಾಗೆ, ಮೈಯನ್ನು ಸವರಿದವನು ಅದು ದೊಡ್ಡ ಗೋಡೆಯ ಹಾಗೆ, ಎಂದು ಇವೇ ಮೊದಲಾಗಿ ನಂಬಿಕೆ ಪಟ್ಟಂತೆ ನನ್ನ ಮಂದವಾದ ಬಗೆಗಣ್ಣುಗಳಿಂದ ಅವರನ್ನು ಎಷ್ಟು ಮಾತ್ರ ನೋಡಲು ಸಾಧ್ಯವಾಯಿತೋ ಅಷ್ಟನ್ನು ಮಾತ್ರ ಅದೂ ನೆನಪಿನಲ್ಲಿ ಉಳಿದಿರುವಷ್ಟನ್ನು, ಇಲ್ಲಿ ಬರೆದಿಟ್ಟಿದ್ದೇನೆ.

ಡಿಸೆಂಬರ್, ೧೯೫೧

ಮುತ್ಯಾಲಗಟ್ಟು

ಅವರನ್ನು ನಾನು ಮೊದಲು ನೋಡಿದ್ದು—ಕೋಲಾರದ ಚಿನ್ನದ ಗಣಿಗಳ ಸಮೀಪದ 'ಮುತ್ಯಾಲಗಟ್ಟು' ಎಂಬ ಗುಡ್ಡದ ಮೇಲೆ. ವಿಲಾಯಿತಿಯ ಒಂದು ವಿಶ್ವವಿದ್ಯಾಲಯದಲ್ಲಿ ಭೂಗರ್ಭಶಾಸ್ತ್ರ ವ್ಯಾಸಂಗಮಾಡಿ ಪದವೀಧರರಾಗಿ, ಈ ರಾಜ್ಯಕ್ಕೆ ಬಂದು, ಸರ್ಕಾರಿ ಹುದ್ದೆಯೊಂದನ್ನು ಹೊಂದಿದ ಕೆಲವು ದಿವಸಗಳಲ್ಲೇ ಆ ಮುತ್ಯಾಲಗಟ್ಟಿನಲ್ಲಿದ್ದ ಕರಿಯ ಸೀಸವನ್ನು (Plumbago) ಭೂಗರ್ಭದಿಂದ ಅಗೆಸಿ ಈಚೆಗೆ ತೆಗೆಯುವುದಕ್ಕೆ ಪ್ರಾರಂಭಿಸಿದ್ದರು. ಈ ವೇಳೆಗೆ ಅವರ ಕೀರ್ತಿ ಬೆಂಗಳೂರು ಮೈಸೂರುಗಳಲ್ಲಿ ಚೆನ್ನಾಗಿ ಹರಡಿತ್ತು. ಭೂಗರ್ಭಶಾಸ್ತ್ರಜ್ಞರೆಂದಲ್ಲ; ಚುರುಕು ಬುದ್ಧಿಯವರೆಂದು, ಅದ್ವಿತೀಯ ಹಾಸ್ಯಗಾರರೆಂದು, ಇಂಗ್ಲೀಷ್ ಹಾಡು ಹೇಳುವುದರಲ್ಲಿ ಇನ್ನು 'ಸಹಿ' ಎಂದು, ಫುಟ್‌ಬಾಲ್ ಹಾಕಿ ಮುಂತಾದುವನ್ನು ಭೇಷಾಗಿ ಆಡುತ್ತಾರೆಂದು,....ಇನ್ನೂ ಏನೇನೋ!

ನವರಾತ್ರಿಯ ರಜದ ದಿನಗಳಲ್ಲಿ ನಾನು ಒಂದು ಸಲ ನನ್ನ ಬಂಧುಗಳಿದ್ದ ಹಳ್ಳಿಗೆ ಹೋಗಿದ್ದೆ. ಮುತ್ಯಾಲುಗಟ್ಟಿನ ಸಮೀಪದಲ್ಲೇ ಆ ಹಳ್ಳಿ. ಹಳ್ಳಿಗೆ ಸ್ವಲ್ಪ ಹತ್ತಿರದಲ್ಲೇ ಕೋಲಾರ, ಬೌರಿಂಗಪೇಟೆ, ಬೇತಮಂಗಲಗಳಿಗೆ ಹೋಗುವ ರಾಜಮಾರ್ಗ. ಒಂದು ಸಂಜೆ ನನ್ನ ಸ್ನೇಹಿತನೂ ನಾನೂ ಆ ಮಾರ್ಗದಲ್ಲಿ ಸ್ವಲ್ಪ ದೂರ ಹೋಗಿ, ಆಮೇಲೆ ಕಾಲುದಾರಿ ಹಿಡಿದು, ಮುತ್ಯಾಲಗಟ್ಟಿನ ದಿಣ್ಣೆಯನ್ನು ಹತ್ತಿದೆವು. ಅಲ್ಲಿ ಒಂದು ಗುಂಪು ಗುಡಿಸಿಲು ಕಂಡು ಬಂತು. ಅದಕ್ಕೆ ಸೇರಿದಂತೆಯೇ ಒಂದು ಚಿಕ್ಕ ಡೇರೆ. ಕೂಲಿಯವರು ಕೆಲವರು ಹಳ್ಳವೊಂದರಲ್ಲಿ ಕರಿಯ ಸೀಸದ ಗಡ್ಡೆಗಳನ್ನು ಅಗೆದು ಎಬ್ಬಿಸುತ್ತಿದ್ದರು. ಅದನ್ನು ಕೆಲವರು ಮಕ್ಕರಿಗಳಲ್ಲಿ ಹೊತ್ತು ಮೇಲಕ್ಕೆ ತಂದು ಒಂದು ಕಡೆ ಗುಡ್ಡೆ ಹಾಕುತ್ತಿದ್ದರು. ಹೆಚ್ಚು ಜನರೇನೂ ಇರಲಿಲ್ಲ. ಹೆಚ್ಚೆಂದರೆ, ಗಂಡಾಳೂ ಹೆಣ್ಣಾಳೂ ಸೇರಿ ಮೂವತ್ತು ನಲವತ್ತು ಜನರಿರಬಹುದು. ಅವರ ಬಟ್ಟೆಬರೆ, ಕೈ, ಮೈ, ಮುಖ ಎಲ್ಲವೂ ಟಾರ್ ಬಳಿಮಕೊಂಡಂತೆ ಇತ್ತು. ಕೆಲಸ ಮಾಡುತ್ತಿದ್ದವರ ಪೈಕಿ ಒಬ್ಬಾತ: ತಲೆಗೆ ಹ್ಯಾಟ್, ಕೈಯಲ್ಲಿ ಸಿಗರೆಟ್, ಒಂದು ಖಾಕಿ ಅರ್ಧ ಷರಾಯಿ, ಖಾಕಿ ಅರ್ಧ ಬನೀನು; ಅವರ ನಡುವೆ ತಿರು

ಗಾಡುತ್ತಾ ತೆಲುಗಿನಲ್ಲಿ ಅವರೊಡನೆ ಸಂಭಾಷಿಸುತ್ತಾ ಇದ್ದ. "ಅವರೇ ಕಣೋ!" ಕೈಲಾಸಂ ಅಂದ ನನ್ನ ಸ್ನೇಹಿತ. ವ್ಯಕ್ತಿ ಕುಳ್ಳು; ಮೈಕಟ್ಟು ತೆಳುವೂ ಅಲ್ಲ, ದಪ್ಪವೂ ಅಲ್ಲ; ಮೈಬಣ್ಣ ಸ್ವಲ್ಪ ಬಿಳಿ. ಮೈ ಬಟ್ಟೆ ಕೂಲಿಯ ವರದರಷ್ಟು ರೂಪು ಕೆಟ್ಟಿರಲಿಲ್ಲ. ಹತ್ತಿರದಲ್ಲೇ ಕೆಲಸ ಮಾಡುತ್ತಿದ್ದ ಆಳಿನ ಸಂಗಡ, ತೆಲುಗಿನಲ್ಲಿ, "ಏಮಿರಾ ನೀ ಪೇರು? ಪಿಕಾಸಿ ಪಟ್ಟೇದಾನಿಕಿ ವಚ್ಚೇ ಲೇದು, ದೇನಿಕಿರಾ ವಸ್ತಿವಿ ಪನಿಕಿ?" ಎಂದು ಗದ್ದರಿಸಿ, "ಇಕ್ಕಡ ಚೂಡು, ವೆಧವಾ! ಪಿಕಾಸಿನಿ ಇಷ್ಟ್ಲ ಪಟ್ಕೊ, ಇಷ್ಟ್ಲ ಪೈಕೆತ್ತಿ ವಿಡಿ, ಸರೀಗಾ ಚೂಸಿ!" ಎಂದು ಹೇಳುತ್ತಾ ಅವನ ಕೈ ಪಿಕಾಸಿಯನ್ನು ತಾವು ತೆಗೆದುಕೊಂಡು, ಅಗೆದು ತೋರಿಸುವುದಕ್ಕೆ ಆರಂಭಿಸಿದರು. ಒಳ್ಳೇ ಅನುಭವವುಳ್ಳ ಒಡ್ಡರವನು ಅಗೆಯು ವಂತಿತ್ತು, ಕೈಲಾಸಂ ಪಿಕಾಸಿಯಿಂದ ನೆಲ ಅಗೆಯುತ್ತಿದ್ದುದು.

ನನ್ನ ಸ್ನೇಹಿತ ಹೇಳಿದ: "ಇಂಗ್ಲೆಂಡಿಂದ ಪ್ಯಾಸ್ ಮಾಡ್ಕೊಂಡ್ ಬಂದಿದ್ದಾರೋ! ಮುನ್ನೂರು ರೂಪಾಯಂತೆ ಸಂಬಳ! ನೋಡು, ಕೂಲಿ ಯೋರ ಹತ್ತಿರ ಎಷ್ಟು ಸಲಿಗೆ ಅವರಿಗೆ!"

ನನಗೆ ಆಶ್ಚರ್ಯವಾಯಿತು. "ಎಲಾ! ಇಪ್ಪತ್ತೈದು ಮೂವತ್ತು ರೂಪಾಯಿ ಸಂಬಳ ಬರುವ ಮನುಷ್ಯ, ದಿನಕ್ಕೆ ಆರಾಣೆ ಸಂಪಾದಿಸುವ ಕೂಲಿ ಯವನಮೇಲೆ ಎಷ್ಟು ದರ್ಪ ಎಷ್ಟು ಅಧಿಕಾರ ನಡಸ್ತಾನೆ! ಮುನ್ನೂರು ರೂಪಾಯಿ ಸಂಬಳಗಾರ ಅಂತೀಯಾ—ಪಿಕಾಸಿ ಹಿಡಕೊಂಡು ನೆಲ ಅಗೀ ತಾನಲ್ಲೋ, ತಾನೂ ಕೂಲಿಯೋರ ಜೊತೆ ಸೇರ್ಕೊಂಡು!" ಎಂದೆ.

"ಅಯ್ಯೋ! ನಿನಗ್ಗೊತ್ತಿಲ್ಲ, ಅವರು ಎಷ್ಟು ಸೋಷಿಯಲ್ ಎಂಬೋದು. ಆ ಕೂಲಿಯೋರ ಮಕ್ಕಳಿಗೆಲ್ಲಾ ತಿಂಡಿ ಕೊಡ್ತಾರೆ, ಕಾಸ್ಕೊಡ್ತಾರೆ. ಕೂಲಿ ಯೋರ್ನೆಲ್ಲ ಕೂಡಿಸ್ಕೊಂಡು ಹಾಡ್ ಹೇಳಿಸ್ತಾರೆ, ತಾವೂ ಹಾಡ್ತಾರೆ. ಹಾರ್ಮೋನಿಯಂ ಬಲು ಚನ್ನಾಗಿ ಬಾರಿಸ್ತಾರೊ. ಇಂಗ್ಲೀಷ್ ಹಾಡು ಹೇಳಿದ್ರೆ, ರಾತ್ರಿಹೊತ್ತು ಒಂದು ಮೈಲಿ ದೂರ ಧಾರಾಳವಾಗಿ ಕೇಳ್ಸತ್ತೆ. ನಮ್ಮ ಹಳ್ಳಿಯಿಂದಲೂ ಬಹಳ ಜನ ಇಲ್ಲಿ ಕೆಲಸ ಮಾಡ್ತಿದ್ದಾರೆ. ಎಲ್ಲರೂ ಇವರನ್ನು 'ಮಾ ಅಯ್ಯ' ಎಂತ ಕರೀತಾರೆ. 'ಮಾ ಅಯ್ಯ ಬಂಗಾರಷ್ಟ್ಲ ಮನ್ಷಿ, ಬೋ ಮಂಚಿವಾಳ್ಳು, ಪೆದ್ದ ಕುಲಮುಲೋ ಪುಟ್ಟಿನವಾಳ್ಳು, ಗರ್ವಮೇ ಲೇದು ಮಾ ಅಯ್ಯಕಿ' ಅಂತಾಕೆ. ಛಾಂಪಿಯನ್ ರೀಫ್ಸಿಂದ, ಉರಿಗಾಂನಿಂದ

ಬಹಳ ಯೂರೋಪಿಯನ್ ಫ್ರೆಂಡ್ಸ್ ಬರತಾರೆ, ಇವರಲ್ಲಿಗೆ. ಬೆಳದಿಂಗಳ ದಿನ ಬಂದರೆ, ರಾತ್ರೆಯೆಲ್ಲ ಎಲ್ಲರೂ ಸೇರಿ ನಗೋದೇನು! ಹಾಡೋದೇನು! ಏನೋಪ್ಪ, ಎಲ್ಲರೂ ಹೇಳತಾರೆ: ಅವರ ಸಂಗಡ ಸೇರಿಕೊಂಡು ಇವರೂ ಕುಡಿತಾರಂತೆ, ಬರೋ ಸಂಬಳ ಎಲ್ಲಾ ಬಾಟ್ಲಿಗೇ ಆಗಿಹೋಗಿಬಿಡುತ್ತಂತೆ. ಇನ್ನು ಸಿಗರೇಟೋ—ನಿದ್ರೆ ಮಾಡ್ತಾನೂ ಸಿಗರೆಟ್ ಸೇದತಾ ಇರತಾರಂತೆ. ಕಾಫಿ ಇದ್ರೆ ಸಾಕಂತೆ, ಊಟಾನೇ ಬೇಡವಂತೆ. ಇವರಪ್ಪ ಬೆಂಗಳೂರಲ್ಲಿ ಹೈಕೋರ್ಟು ಜಡ್ಜಿಗಳಂತೆ; ಅಲ್ಲಿಂದ ಬೇರೆ ಬರುತ್ತಂತೆ ದುಡ್ಡು, ಇಲ್ಲಿ ಖರ್ಚಿಗೆ ಸಾಲದಿದ್ರೆ. ಕೊಡೋದೂ ಹಾಗೆ ಕಣೋ! ನಮ್ಮೂರಲ್ಲಿ ಪಿಲ್ಲಾಬೋಯಿ ಇದ್ದಾನೆ ನೋಡು—ಅವರಪ್ಪ ಈಗ ಹತ್ತು ದಿನದ ಹಿಂದೆ ಸತ್ತುಹೋದ. ಪಿಲ್ಲಾಬೋಯಿ ಹತ್ತಿರ ಅವರಪ್ಪನ್ನ ಮಣ್ಣುಮಾಡೋಕೆ ಮೂರು ಕಾಸು ಕೂಡ ಇರಲಿಲ್ಲ. ಪಾಪಿ! ಸಂಪಾದಿಸಿದ್ದನ್ನೆಲ್ಲಾ ಹೆಂಡಕ್ಕೆ ಹಾಕಿಬಿಡತಾನೆ. ಆ ಹೆಂಡತಿ ತನ್ನ ಮಕ್ಕಳಿಗೋಸ್ಕರ ಊರಲ್ಲೆಲ್ಲಾ ಭಿಕ್ಷೆ ಬೇಡತಾಳೆ. ಯಾರಾದರೂ 'ಅಯ್ಯೋ ಪಾಪ' ಅಂತ ಒಂದು ಹಳೇ ಸೀರೇನೋ ಬಟ್ಟೇನೋ ಕೊಟ್ರೆ, ಅದನ್ನೂ ಕಿತ್ತುಕೊಂಡುಹೋಗಿ ಕುದಿದುಬಿಟ್ಟು ಬರತಾನೆ, ಆ ಹಾಳು ಪಿಲ್ಲಾಬೋಯಿ. ಮನೇಲಿ ಅಪ್ಪನ ಹೆಣ ಬಿದ್ದಿದ್ರೆ, ತಲೇಮೇಲೆ ಕೈಯಿಟ್ಟುಕೊಂಡು ಕೂತಿದ್ದನೇ ಹೊರತು, ಮೇಲಕ್ಕೇಳಲಿಲ್ಲ. ಅವನ ಹೆಂಡತಿ ಈ ಕೈಲಾಸಂ ಹತ್ತಿರ ಬಂದು, ಹೇಳಿಕೊಂಡು ಅತ್ತುಕೊಂಡಳಂತೆ. ಆಗ ಅವರು ಜೇಬಿನಲ್ಲಿ ಇದ್ದಿದ್ದಷ್ಟನ್ನೂ—ಸುಮಾರು ಇಪ್ಪತ್ತು ರೂಪಾಯಿ—ಅವಳ ಕೈಯಲ್ಲಿಟ್ಟು, 'ಪೋ, ಮೀ ಮಾಮಗಾರಿಕಿ ದಿನಮುಲು ಬಾಗ ಚೇಯಿ, ಪೋ. ಪಿಲ್ಲಣಿ ಚೇತಲೋ ಇಚ್ಚೇವು! ಭದ್ರಂ!' ಅಂತ ಹೇಳಿ ಕಳಿಸಿದರಂತೆ. ಅವಳು ನಮ್ಮೂರಲ್ಲಿ ಎಲ್ಲರ ಹತ್ತಿರಲೂ ಹೇಳಿಕೊಂಡು ಸಂತೋಷಪಟ್ಟಳು."

ನನ್ನ ಸ್ನೇಹಿತ ಇಷ್ಟೆಲ್ಲಾ ಹೇಳುತ್ತಿರುವಾಗಲೇ, ಕೈಲಾಸಂ ತಮ್ಮ ನಿಕ್ಕರ್ ಜೇಬಿನಲ್ಲಿದ್ದ ಒಂದು ಪೀಪಿಯನ್ನು ತೆಗೆದು ಊದಿದರು. ದೂರದಲ್ಲಿ ಕೆಲಸ ಮಾಡುತ್ತಿದ್ದವರೂ, ಹತ್ತಿರ ಕೆಲಸ ಮಾಡುತ್ತಿದ್ದವರೂ, ಸಲಿಕೆ ಗುದ್ದಲಿ ಮಕ್ಕರಿಗಳನ್ನು ಎತ್ತಿಕೊಂಡು ತಮ್ಮ ತಮ್ಮ ಗುಡಿಸಿಲುಗಳ ಕಡೆ ಹೊರಟು ಹೋದರು. ಆ ದಿನದ ಕೆಲಸ ಅಲ್ಲಿಗೆ ಮುಗಿದ ಹಾಗೆ ಕಂಡಿತು. ನಾವೂ ಅಲ್ಲೇ ಸುತ್ತಾಡಿಕೊಂಡು, ಹತ್ತಿರವೇ ಇದ್ದ ಇನ್ನೊಂದು ಗುಡ್ಡದ ಮೇಲಕ್ಕೆ ಹತ್ತಿ

ಹೋದೆವು. ಕತ್ತಲಾದಮೇಲೆ, ಚಿನ್ನದ ಗಣಿಗಳ ವಿದ್ಯುದ್ದೀಪಗಳು, ಪೃಥ್ವಿಯು ಧರಿಸಿದ ಜೀವರತ್ನಗಳ ಮಣಿಮೇಖಲೆಯಂತೆ, ಅಲ್ಲಿಂದ ಬಹು ಮನೋಹರ ವಾಗಿ ಕಂಡಿತು. ಅವುಗಳನ್ನು ಹಾಗೆ ನೋಡಿದಾಗ, ಮೇಲೊಂದು ಆಕಾಶ, ಕೆಳಗೊಂದು ಆಕಾಶ, ಇದ್ದಂತೆ ಎನಿಸಿತು. ಆ ರಮಣೀಯತೆಯನ್ನು ನೋಡುತ್ತ ಅಲ್ಲೇ ಒಂದು ಕಲ್ಲಿನ ಬಂಡೆಯ ಮೇಲೆ ಕುಳಿತೆವು.

ಸುಮಾರು ಮುಕ್ಕಾಲು ಗಂಟೆಯ ಹೊತ್ತು ಕಳೆದಿರಬಹುದು. ದೂರ ದಿಂದ ಒಂದು ಗುಂಪು ಜನ ಒಟ್ಟಾಗಿ ಹಾಡುತ್ತಿದ್ದದ್ದು ಕೇಳಿಬಂತು. ಹಾಡು ತ್ತಿದ್ದದ್ದು ಹಳ್ಳಿಯಹಾಡು, ಇಂಪಾಗಿತ್ತು. ಹಾಡಿನ ಜೊತೆಗೆ ಹಾರ್ಮೋನಿಯಂ ಧ್ವನಿ ಸೇರಿತ್ತು. ಹಾಡುತ್ತಿದ್ದವರು ಮುತ್ಯಾಲಗಟ್ಟಿನ ಕೆಲಸದವರು. ಹಾಡು ಗಳನ್ನು ಕೇಳುವ ಆನಂದದಲ್ಲಿ ಇನ್ನೊಂದು ಅರ್ಧ ಗಂಟೆ ಕಳೆಯಿತು. ಐದು ನಿಮಿಷಗಳ ಕಾಲ ನಿಶ್ಶಬ್ದ. ಅನಂತರ ಗ್ರಾಮಫೋನಿನಲ್ಲಿ ಇಂಗ್ಲಿಷ್ ಹಾಡುಗಳ ರಿಕಾರ್ಡುಗಳು ಕೇಳಿಬಂತು. ಅದರೊಂದಿಗೆ ಯಾರೋ ಧ್ವನಿ ಕೂಡಿಸಿ ಹಾಡುತ್ತಿದ್ದರು. ಇಸ್ಪೈನ್ಯೊಸೋನೋ ಲಾಬೆಲ್ಲಾ, ಲಾ ಟ್ರವಿಯಾಟ, ಆವೇ ಮಾರಿಯಾ, ಥೋರಾ, ಚೈಲ್ಡ್ ಆಫ್ ಮೈ ಡ್ರೀಂಸ್ ಮುಂತಾದ ಘನವಾದ ಇಂಗ್ಲಿಷ್ ಹಾಡುಗಳೂ ಟಿಪ್ಪೆರೇರಿ, ಬಾನಿ ಡಂಡೀ ಮುಂತಾದ ಲಘುವಾದ ಹಾಡುಗಳೂ ಕೇಳಿಸಿದುವು. ಧ್ವನಿಕೂಡಿಸಿ ಹಾಡುತ್ತಿದ್ದವರು— ಕೈಲಾಸಂ ಅಬ್ಬ! ಅವರ ಶಾರೀರಸಂಪತ್ತು! ಏನು ಶಕ್ತಿಯುತವಾದ ಧ್ವನಿ, ಅವರದು! ನಿಜವಾಗಿಯೂ, ಆ ನಸುಬೆಳದಿಂಗಳ ರಾತ್ರಿಯಲ್ಲಿ, ಆ ಧ್ವನಿ ಗುಡ್ಡದಿಂದ ಗುಡ್ಡಕ್ಕೆ ಪ್ರತಿಧ್ವನಿಕೊಟ್ಟು, ಸುತ್ತುಮುತ್ತಲಿನ ಎಲ್ಲ ಪ್ರದೇಶ ವನ್ನೂ ಆವರಿಸಿಬಿಟ್ಟಿತ್ತು.

ನಾವು ಗುಡ್ಡ ಇಳಿದು, ಕಾಲುಹಾದಿಯಿಂದ ಮನೆಯದಾರಿ ಹಿಡಿದು, ನಮ್ಮ ಹಳ್ಳಿಯ ಹತ್ತಿರ ಹತ್ತಿರ ಸೇರುವವರೆಗೂ ಕೈಲಾಸಂ ಹಾಡುತ್ತಿದ್ದುದು ಕೇಳಿಬರುತ್ತಲೇ ಇತ್ತು. ಕೈಲಾಸಂ ಹಾಡಿದ ರೀತಿ, ಈಗ ನಾವು ಇಟಾಲಿಯನ್ ರಿಕಾರ್ಡುಗಳಲ್ಲಿ ಕೇಳುವ 'ಕರೂಸೋ' ಅವರ ಹಾಡುಗಾರಿಕೆಯ ಹಾಗಿತ್ತು.

ನವರಾತ್ರಿಯ ಸಪ್ತಮಿ ದಿನ ಸಂಜೆ ಸಮೀಪಿಸುತ್ತಿದ್ದಾಗ, ನನ್ನ ಸ್ನೇಹಿ ತನೂ ನಾನೂ ಹಳ್ಳಿಯನ್ನು ಬಿಟ್ಟು, ಊರಿಗೆ ಸಮೀಪದಲ್ಲಿಯೇ ಹಾದು ಹೋಗುತ್ತಿದ್ದ ಬೇತಮಂಗಲದ ರಸ್ತೆಯಲ್ಲಿ ನಡೆಯುತ್ತಿದ್ದೆವು. ಆಗ, ನಮ್ಮ

ಹಿಂದೆ ಒಂದು ಮೋಟರ್ ಸೈಕಲ್ ವೇಗವಾಗಿ ಬರುತ್ತಿದ್ದ ಸದ್ದು ಕೇಳಿಬಂತು. ಹಿಂದಕ್ಕೆ ತಿರುಗಿ ನೋಡಿದರೆ—ಖಾಕಿ ಬಟ್ಟೆ ತೊಟ್ಟು ಸೈಕಲ್ ಮೇಲೆ ಬರುತ್ತಿದ್ದ ವ್ಯಕ್ತಿ ಕೈಲಾಸಂ ಎಂದೇ ನಿರ್ಧರವಾಯಿತು. ನಾವು ದಾರಿಬಿಟ್ಟು ಪಕ್ಕಕ್ಕೆ ಸರಿದು ನಿಂತೆವು.

ನಮ್ಮ ಹಿಂದೆ, ಊರಿನ ಕುರುಬ ಹೆಂಗುಸೊಬ್ಬಳು ಹಂದಿಯ ಹಿಂಡನ್ನೂ ಕೋಳಿಯ ಗುಂಪನ್ನೂ ಅಟ್ಟಿಕೊಂಡು ರಸ್ತೆಯನ್ನು ಹಾದು ಊರಿನ ಕಡೆಗೆ ಹೋಗುವುದರಲ್ಲಿದ್ದಳು. ಆ ವೇಳೆಗೆ ಮೋಟಾರ್‌ಸೈಕಲ್ ವೇಗದಿಂದ ಹತ್ತಿರಕ್ಕೇ ಬಂತು. ಆ ಶಬ್ದಕ್ಕೆ ಹಂದಿಗಳು ಹೆದರಿ, ಚೆಲ್ಲಾಪಿಲ್ಲಿಯಾದವು. ಸೈಕಲ್ ಹಂದಿಯೊಂದರ ಮೇಲೇ ಹಾದುಹೋಗುವುದರಲ್ಲಿತ್ತು. ಹೆಂಗುಸು ಕಿರಿಚಿಕೊಂಡಳು. ಸೈಕಲ್ಲಿಗೆ ಬ್ರೇಕ್ ಹಾಕಿ ನಿಲ್ಲಿಸಲಾಗಲಿಲ್ಲ. ಸೈಕಲ್ ಹಂದಿಯನ್ನು ಬಿಟ್ಟು ಪಕ್ಕಕ್ಕೆ ತಿರುಗಿತು. ಹಂದಿಗಳ ನೂಕುನುಗ್ಗಲಗಳ ನಡುವೆ ಪಾಡುಪಡುತ್ತಿದ್ದ ಒಂದು ಕೋಳಿಯೂ ಒಂದು ಕೋಳಿಮರಿಯೂ ವೇಗವಾಗಿ ತಿರುಗುತ್ತಿದ್ದ ಸೈಕಲ್ ಚಕ್ರದ ಅರಗಳಿಗೆ ಸಿಕ್ಕಿ ನುಚ್ಚು ನೂರಾಗಿಹೋದುವು. ಕೈಲಾಸಂ ಚಾಕಚಕ್ಯತೆಯಿಂದ ಬ್ರೇಕ್ ಹಾಕಿ, ಸೈಕಲ್ ನಿಲ್ಲಿಸಿದರು. ಸೈಕಲೆಲ್ಲಾ ಕೋಳಿಯ ಪುಕ್ಕ ರಕ್ತ ಮಾಂಸಗಳ ಮಯವಾಗಿತ್ತು. ಇಷ್ಟೆಲ್ಲಾ ಕಣ್ಣುಮುಚ್ಚಿ ತೆರೆಯುವುದರಲ್ಲಿ ಆಗಿಹೋಯಿತು.

ಹೆಂಗುಸು ರಸ್ತೆಯ ಅಂಚಿನಲ್ಲಿ ನಿಂತು ಅಳಲು ಮೊದಲುಮಾಡಿದಳು. ಅದನ್ನು ನೋಡಿ ಕೈಲಾಸಂಗೆ ಬಹಳ ಕೋಪ ಬಂತು. ತೆಲುಗಿನಲ್ಲಿ "ಕನ್ನುಲೇವಾ ನೀಕಿ? ರೋಡ್ಲೋ ಏಮಿ ವಸ್ತುಂದಿ ಅನಿ ಚೂಚೇಲೇದಾ? ನೀ ಪಂದಿನಿಂಚಿ ನಾ ಪ್ರಾಣಮೇ ಪೋತಾ ಉಂಡನೇ ಇಪ್ಪುಡು!" ಎಂದು ಗದರಿಸುತ್ತಾ, "ಪಾಡಯ್ಯಪೋಯಿನೇ ನಾ ಸೈಕಲ್ಲು!" ಎನ್ನುತ್ತಿರುವಾಗ ನಾವಿಬ್ಬರೂ ಅವರ ಹತ್ತಿರಕ್ಕೆ ಹೋದೆವು. ನೆಲದ ಮೇಲೆ ಬಿದ್ದಿದ್ದ ಚರ್ಮದ ಚೀಲವನ್ನು ತೆಗೆದು ಅವರ ಕೈಗೆ ಕೊಟ್ಟೆವು.

"Thanks, Brothers! It is a catastrophe averted . . . . but . . . .poor chickens! ಹುಂ! . . . . ಹೇಗೂ ಸಾಯೋದಕ್ಕೇ ಹುಟ್ಟಿದ್ವು! . . . ಈವತ್ತೇನು ಅಷ್ಟಮೀನೆ? ನನ್ನ ಸೈಕಲ್ಲಿಗೆ ಆಹುತಿ!" ಎಂದರು.

ನಾವು : "ಇಲ್ಲ, ಸಾರ್. ಈ ಹೊತ್ತು ಸಪ್ತಮಿ. ದುರ್ಗಾಷ್ಟಮಿ ನಾಳೆ, ಸಾರ್. ಸೈಕಲ್ಲಿಗೆ ಏನೂ ಆಗಲಿಲ್ಲವಷ್ಟೆ? ಯಾರ ಕೈಲಾದರೂ ಒರಸಿಸಿ ಕ್ಲೀನ್ ಮಾಡ್ಸೋಣ. ಹೀಗೆ ಬನ್ನಿ. ಊರ ಹತ್ತಿರಲೇ ಮೆಟ್ಟಲಬಾವಿ ಇದೆ. ಯಾರಾದರೂ ಹುಡುಗರು ಸಿಕ್ಕತಾರೆ, ಕ್ಲೀನ್ ಮಾಡೋಕೆ." ಎಂದು ಹೇಳಿದೆವು.

ಕೈಲಾಸಂ " ಹೂಂ! . . . ಹೇಗೂ advanceಆಗೇ ಆಹುತಿ. ಸ್ನಾನ ಆಮೇಲೆ. Come on . . . ಇವಳು ಯಾಕೆ ಇನ್ನಾ ಅಳತಾ ನಿಂತು ಕೊಂಡಿದ್ದಾಳೆ?" ಅಂದರು.

ಅವಳು ಅಳತಾನೆ ಅಂದಳು: " ಅಯ್ಯೋ! ನಾ ಕೋಡ್ಲು ಪೋಯ್ನೇ! ನೇನೇಮಿ ಸೇತ್ನೂ?"

ನನ್ನ ಸ್ನೇಹಿತ ಆ ಕುರುಬರವಳನ್ನು ಕುರಿತು, "ಅಯ್ಯೋ ದೆಯ್ಯಮಾ! ಕೋಡಿ ಪೋಯ್ನಂಟ, ಕೋಡಿ! ಚೂಡು-ಮೋಟಾರ್ ಸೈಕಲ್ ಅಯ್ಯುಂಡೇ ಗತಿ! ಕೊಂಚವ್ಲೋ ವಾರಿ ಪ್ರಾಣಮೇ ಪೋತಾ ಉಂಡಿನೇ! ನಿನ್ನಿ ತೀಸ್ಕೋನಿ ಪೋಯಿ ಜೈಲ್ಲೋ ಪೆಟ್ಟಾಲ!" ಎಂದು ಗದರಿಸಿದ.

ಆ ಕುರುಬರವಳು ಅಳು ಇನ್ನೂ ಹೆಚ್ಚೇ ಮಾಡಿದಳು.

ಕೈಲಾಸಂ ಅಂದರು: "ಈ ಅನಿಷ್ಟ ಜಾತೀನೇ ಹೀಗೆ .... ಎಂತನೇ ನೀ ಕೋಡಿ ? ಕೋಡಿಪಿಲ್ಲ ? ... ತಿಸ್ಕೊ ಈ ರೂಪಾಯಿ. ಮಂಚಿ ಕೋಡಿನಿ ಕೊನುಕ್ಕೊ, ಪೋ."

ರೂಪಾಯನ್ನು ನೋಡುತ್ತಲೇ ಕುರುಬರವಳ ಅಳು ಇಳಿಯಿತು. ಕೈಯೊಡ್ಡಿ ರೂಪಾಯನ್ನು ಇಸುಕೊಂಡು, "ತಂಡ್ರೀ, ಕೊನಕ್ಕೊಂಟಾನು"ಎಂದು ಹೇಳಿ, ಅಲ್ಲಿಯೇ ಮೇಯುತ್ತಿದ್ದ ಹಂದಿಗಳನ್ನೂ ಮಿಕ್ಕ ಕೋಳಿಗಳನ್ನೂ ಅಟ್ಟಿ ಕೊಂಡು ಹಳ್ಳಿಯ ಕಡೆ ನಡೆದಳು.

ಸೈಕಲನ್ನು ನೂಕಿಕೊಂಡು ಕೈಲಾಸಂ, ಅವರೊಡನೆ ನನ್ನ ಸ್ನೇಹಿತ, ಜೊತೆಗೆ ನಾನು; ಹಳ್ಳಿಯ ಮುಂದಿನ ಕಲ್ಲು ಕಟ್ಟಲು ಬಾವಿಯ ಬಳಿಗೆ ಹೋಗಿ, ಊರಿನ ಇಬ್ಬರು ಹುಡುಗರನ್ನು ಕರೆದು, ಸೈಕಲನ್ನು ತೊಳೆಯಿಸಿ ಒರಸಿಸುವ ವೇಳೆಗೆ ಕತ್ತಲಾಯಿತು. ಕೆಲಾಸಂ ಮೋಟಾರುಸೈಕಲನ್ನು start ಮಾಡಿದರು. Light ಹತ್ತಿಕೊಳ್ಳಲಿಲ್ಲ; bulb fuseಆಗಿತ್ತು.

ಈ ಎಲ್ಲ ಅವಸ್ಥೆಯನ್ನು ನೋಡಿ, "ಮನೆಗೆ ಬನ್ನಿ ಸರ್. ಕಾಫಿ ತೊಕೊಂಡು ಹೋಗೋವ್ರಂತೆ." ಎಂದು ಕರೆದೆವು.

"Yes, it is an idea. ನಡೀರಿ. ಆದರೆ....ಬೆಲ್ಲದ ಕಾಫಿ ಬೇಡಪ್ಪ."

"ಇಲ್ಲ, ಸಾರ್. ಭೇಷಾದ್ದು ಮಾಡ್ಸೋಣ." ಎಂದ ನನ್ನ ಸ್ನೇಹಿತ.

ಮನೆಗೆ ಸೇರಿ, first class coffeeಗೆ order ಮಾಡಿ, ಮನೇ ಮುಂದಿನ ಜಗಲಿ ಹತ್ತಿರ ಸೈಕಲ್ನ ಸ್ಟ್ಯಾಂಡ್ ಹಾಕಿ ನಿಲ್ಲಿಸಿ, ಜಗಲೀಮೇಲೆ ಜಂಖಾನೆ, ಬಿಡಿಸಿ ಹಾಕಿ, ಒರಗೋದಕ್ಕೆ ಮೂರುನಾಲ್ಕು ದಿಂಬು ತರಿಸಿ, ದೊಡ್ಡ ಲ್ಯಾಂಟ್ರನ್ ಒಂದು ಹಚ್ಚಿ, coffee ಆಗೋವರೆಗೂ ಹರಟೆಗಾರಂಭಿಸಿದೆವು. ನವರಾತ್ರಿಯ ಹಬ್ಬದ ದಿನಗಳಾದ್ದರಿಂದ ಊರಿನ ಕೆಲವು ಹುಡುಗರೂ ವಯಸ್ಕರೂ—ಕೃಷ್ಣ, ಗೋಪಿ, ಗೊಲ್ಲ, ಸತ್ಯಭಾಮೆ ಮೊದಲಾದ ವೇಷಗಳನ್ನು ಹಾಕಿಕೊಂಡು ಬಂದು, ವಿನೋದವಾಗಿ ನಮ್ಮ ಮುಂದೆ ಹಾಡಿ ಕುಣಿದು ಹೋದರು. ಅವರ ಕೈಯಲ್ಲಿ ನಾಲ್ಕಾರು ಆಣೆಗಳನ್ನು ಇಟ್ಟೆವು. ಈ ವಿನೋದ ನಡೆಯುತ್ತಿದ್ದಾಗಲೇ ಒಳಗೆ ಕಾಫಿ ತಯಾರಿಕೆ ಆಯಿತು. ಮನೆಯೊಳಕ್ಕೆ ಹೋಗಿ, ಬಿಸಿಬಿಸಿ ಕಾಫಿ ಚಕ್ಕುಲಿ ಮುಗಿಸಿ, ಪುನಃ ಜಗುಲಿಯ ಮೇಲೆ ಬಂದು ಕುಳಿತೆವು. ನೃತ್ಯ ವಿನೋದಗಳು ಮುಗಿದಿದ್ದುವು. ಅಷ್ಟರಲ್ಲಿ, ನನ್ನ ಸ್ನೇಹಿತ, ಹಳ್ಳಿಯ ಭಜನೆಯ ಮನೆಯಿಂದ ಹಾರ್ಮೋನಿಯಮ್ಮನ್ನು ತರಿಸಿದ. ಭಜನೆಯ ರಾಮುಪ್ಪನೇ ಅದನ್ನು ಹೊತ್ತುತಂದಿದ್ದ. ಅವನಿಗೂ ಒಂದಿಷ್ಟು ಕಾಫಿ ಚಕ್ಕುಲಿ ತರಿಸಿಕೊಟ್ಟು, ಹಾಡುವುದಕ್ಕೆ ಪುಸಲಾಯಿಸಿದೆವು.

ರಾಮುಪ್ಪನಿಗೆ ಒಳ್ಳೇ ಶಾರೀರವಿತ್ತು. ತ್ಯಾಗರಾಜ ಕೃತಿ, ದಾಸರಪದಗಳನ್ನು ಚೆನ್ನಾಗಿ ಹಾಡುತ್ತಿದ್ದ. ಸ್ವಲ್ಪ ತೋರಿಕೆ ಮನುಷ್ಯನೂ ಹೌದು. 'ರಾಮುಪ್ಪ, ಏನಾದರೂ ಹಾಡು' ಎಂದು ಕೇಳಿದ್ದೇ ತಡ, ಗಂಟಲನ್ನು ಸರಿಪಡಿಸಿಕೊಂಡು ಹಾಡುವುದಕ್ಕೆ ಮೊದಲುಮಾಡಿಯೇಬಿಟ್ಟ.

ಹಾಡುವ ಮೊದಲು ಕೈಲಾಸಂಅನ್ನು ನೋಡಿದ: "ಅಯ್ಯಾ ಅವರು ಬಹಳ ಚನ್ನಾಗಿ ಹಾಡುತ್ತಾರೆ. ನಾನು ಎಷ್ಟೋ ದಿನ ಮುತ್ಯಾಲಗಟ್ಟು ದಾರೀಲಿ ನಡೆದು ಬರುವಾಗ ಕೇಳಿದ್ದೇನೆ. ಆದರೆ, ಕರ್ಣಾಟಕ ಹಾಡುಗಾರಿಕೆ ಬಹಳ ಕಷ್ಟವಿದೆ. ಇಂಗ್ಲೀಷ್ ಹಾಡುಗಳಿಗೆ ತಾಳದ ಬಿಗಿಕಟ್ಟಿಲ್ಲ, ಸ್ವರದ ನೆರವು ಬೇಕಾಗಿಲ್ಲ. ಅಲ್ಲವೇ ಸ್ವಾಮಿ?" ಎಂದು ಕೈಲಾಸಮನ್ನು ಸಂಭೋದಿಸಿದ.

ಕೈಲಾಸಂಗೆ ಸ್ವಲ್ಪ ಸಿಟ್ಟು ಬಂದ ಹಾಗೆ ಕಂಡಿತು. ಹಾರ್ಮೋನಿಯಮ್ಮನ್ನು ರಾಮಪ್ಪನ ಕೈಯಿಂದ ಎಳೆದುಕೊಂಡು, 'ವಿಡುಮುಶಾಯವೇ' 'ಚಕ್ಕನಿ ರಾಜ' ಎಂಬ ಎರಡು ತ್ಯಾಗರಾಜ ಕೀರ್ತನೆಗಳನ್ನು ಸವಿಸ್ತಾರವಾಗಿ ಸ್ವರ ನೆರವಿ, ಹಾಡಿ ತೋರಿಸಿಯೇಬಿಟ್ಟರು. ರಾಮಪ್ಪನಿಗೋ ಉಸಿರು ಅಡಗಿ ಹೋಯಿತು. ಅವನು ಅದುವರೆಗೂ ಕೈಲಾಸಂಗೆ ಕರ್ಣಾಟಕ ಹಾಡುಗಾರಿಕೆಯು ಪರಿಚಯವಿಲ್ಲವೆಂದೇ ತಿಳಿದಿದ್ದ. ಇದಾದ ಮೇಲೆ ಕೈಲಾಸಂ 'Moon, Moon, Silvery Moon, Don't go home so soon' ಎಂಬ ಇಂಗ್ಲಿಷ್ ಹಾಡನ್ನು ಖೇಚರಧ್ವನಿಯಲ್ಲಿ ಹಾಡಿದರು. ರಾಮಪ್ಪನ ಬಾಯಿ ಈಗ ಕಟ್ಟಿಯೇ ಹೋಯಿತು. "ಅಬ್ಬ! ಹೀಗೆ ಹಾಡಬೇಕಾದರೆ, ನಮ್ಮ ಎದೆಯೇ ಒಡೆದು ಹೋದೀತು!" ಎಂದ. ಹೀಗೆ, ರಾಮಪ್ಪ ತನ್ನ ಹಾಡುಗಾರಿಕೆಯನ್ನು ಕೈಲಾಸಂ ಮುಂದೆ ಬಿಚ್ಚಬೇಕೆಂದಿದ್ದವನು, ಉಚ್ಚರಿಸದೆಯೇ ಸುಮ್ಮನಾದನು.

ಇಷ್ಟೆಲ್ಲಾ ನಡೆಯುವ ಹೊತ್ತಿಗೆ ರಾತ್ರೆ ಎಂಟುಗಂಟೆಯಾಗಿಹೋಗಿತ್ತು. ನನ್ನ ಸ್ನೇಹಿತನ ತಮ್ಮ—ಊರ ಮುಂದೆ ಹೋಗಿದ್ದವನು—ಅಷ್ಟುಹೊತ್ತಿಗೆ ಓಡಿಬಂದು, ಕೈಲಾಸಂಅನ್ನು ಕುರಿತು... "ನೋಡಿ ಸರ್, ಆ ಕಳ್ಳಮುಂ-ನೀವು ಕೊಟ್ಟ ರೂಪಾಯಿಗೆ ಕೋಳೀನೂ ತರಲಿಲ್ಲ, ಕೋಳಿ ಮರೀನೂ ತರಲಿಲ್ಲ. ರೋಡಿನಲ್ಲಿ ಬಿದ್ದಿದ್ದ ಅರ್ಧಸತ್ತ ಕೋಳೀನ ಬಟ್ಟೇಲಿ ಗಂಟು ಕಟ್ಟಿಕೊಂಡು ಮನೇಲಿಟ್ಟು, ಹೆಂಡದಂಗಡಿಗೆ ಹೋಗಿ ಚೆನ್ನಾಗಿ ಹೆಂಡ ಕುಡಿದುಬಿಟ್ಟು, ಸಾಲದ್ದಕ್ಕೆ ಕೈಯಲ್ಲೂ ಒಂದು ಸೀಸಾಯಿ ತುಂಬ ತುಂಬಿಸ್ಕೊಂಡು ಬಂದಿದ್ದಾಳೆ. ಕೇಳಿದ್ರೆ, 'ನೀಕೇಮಿ? ನಾ ಕೋಡಿ ದುಡ್ಡು ನೇನೇಮೂನ ಸೇಸ್ಕೊಂಟಾನು ಲೇ!' ಅಂತಾಳೆ ಅಂದ.

ಕೈಲಾಸಂಗೆ ಸಿಟ್ಟು ಬರಲಿಲ್ಲ. 'I think she is perfectly right' ಅಂದುಬಿಟ್ಟು, ಹಾರ್ಮೋನಿಯಂ ತೆಗೆದುಕೊಂಡು ಹಾಡಿದರು:

ಆಕಲಮ್ಮ ಲಚ್ಚಿಮಿ, ಪೊಗಾಕುಲಮ್ಮ ಲಚ್ಚಿಮಿ |
ಆಕಲಮ್ಮಿನ ರೂಕಲಂತ ಏಮಿ ಚೇಸ್ತಿವೆ ಲಚ್ಚಿಮಿ |
ಭಾಗ್ಯಲಚ್ಚಿಮಿ—ಪ್ರಾಣಲಚ್ಚಿಮಿ ||ಪ||
ಕೋಡಿ ತೆಸ್ತಾನಂಟಿವೆ—ಕೋಡಿ ಪಿಲ್ಲ ತೆಸ್ತಾನಂಟಿವೆ |
ಕೋಡಿಕಿಚ್ಚಿನ ಒಕ್ಕ ರೂಪಾಯಿ ಕಲ್ಲು ತಾಗಿ ವಸ್ತಿವೆ || ಅ.ಪ ||

ಮಿದ್ದಪೈನ ಲಚ್ಚಿಮಿ, ಎದುರು ಮಿದ್ದಪೈನ ಲಚ್ಚಿಮಿ
ಮಿದ್ದಪೈನ ಲಚ್ಚಿಮುಂಟಿ ಎಟ್ಲವಚ್ಚನು ನಿದ್ದರಾ? ||೧||

ಆ ಹಾಡು ಆ ಹೊತ್ತಿಗೆ ಆ ಕುರುಬರವಳು ಮಾಡಿದ ಕೆಲಸಕ್ಕೆ ಸರಿಯಾಗಿ ಹೊಂದಿಕೊಂಡಿತ್ತು. ಆದಕ್ಕೆ ಸ್ವಲ್ಪ Romanceಊ ಹೊಂದಿಕೊಂಡಿತ್ತು.

ಇಷ್ಟೆಲ್ಲಾ ಆದ ಮೇಲೆ "ಇಲ್ಲೇ ಊಟಮಾಡಿ, ಸಾರ್." ಎಂದು ಕೈಲಾಸಂಅನ್ನು ಕೇಳಿದೆವು.

"ಅಯ್ಯಯ್ಯೋ! ಇಲ್ಲಪ್ಪಾ. ಕಾಫೀ ಚಕ್ಕುಲಿ ಇನ್ನೂ ಕೂತೇ ಇದೆ ಒಳಗೆ. ಸೈಕಲ್ ಇಲ್ಲೇ ಬಿಟ್‌ಹೋಗ್ತೇನೆ. Light ಇಲ್ಲ. Petrol ಯಾರೂ ಕದಿಯೋಲ್ಲ ತಾನೆ?" ಎಂದರು.

"Petrol ಯಾರಿಗೆ ಬೇಕ್ ಸಾರ್, ಇಲ್ಲಿ, ಈ ಹಳ್ಳೀಲಿ?" ಎಂದ ನನ್ನ ಸ್ನೇಹಿತ.

"ಹಾಗಾದ್ರೆ, ರೋಡ್ಗೆ ನನ್ನ ತಲಪಿಸಿಬಿಡರಪ್ಪಾ. ಈ ಅಷ್ಟಾವಕ್ರದ ದಾರಿ ನನಗೆ ಗೊತ್ತಾಗೋದೇ ಇಲ್ಲ." ಅಂದರು, ಕೈಲಾಸಂ.

"ಸರ್, Push-bike ಇದೆ. ನಾಳೆ ನೀವು ಈ ಸೈಕಲ್ಗೆ ಬರೋವಾಗ ತಂದ್ಬಿಟ್ರೆ ಸಾಕು."ಎಂದ, ನನ್ನ ಸ್ನೇಹಿತ.

"Oh! Gloriows. A million thanks. Thank you for the wonderful hospitality—Poor chickens!" ಎಂದರು ಕೈಲಾಸಂ.

ಕೈಲಾಸಂಗೆ ಬೈಸಿಕಲ್ ತರಿಸಿಕೊಟ್ಟು, ಅವರನ್ನು ರೋಡಿಗೂ ತಲುಪಿಸಿ ವಾಪಸ್ ಬರುತ್ತ, ನಾನು ನನ್ನ ಸ್ನೇಹಿತನ್ನ ಕುರಿತು "ಲೋ! ಕೈಲಾಸಂ 'Poor chickens' ಅಂದದ್ದು ನಮ್ಮನ್ನೊ? ಅಥವಾ, ಪಿಚ್ಕೆ ಪಿಚ್ಕೆ ಆದ್ವಲ್ಲಾ ಆ ಕೋಳಿಗಳ್ನೋ?" ಎಂದು ಕೇಳಿದೆ.

ವ್ಯಾಯಾಮಶಾಲಾ

ಎಷ್ಟೋ ವರ್ಷಗಳು ಕಳೆದುಹೋದುವು. ಪುನಃ ಕೈಲಾಸಂ ಅವರನ್ನು ನಾನು ಕಂಡದ್ದು—ಬೆಂಗಳೂರಿನ ಟಿಪ್ಪೂಸುಲ್ತಾನ್ ಅರಮನೆಯ ದಕ್ಷಿಣದ ಕೋಣೆಯೊಂದರಲ್ಲಿ, 'ಸ್ಕೌಟ್ ಹೆಡ್ ಕ್ವಾರ್ಟರ್ಸ್' ಆಶ್ರಯದಲ್ಲಿ ನಾನು ವ್ಯಾಯಾಮಶಾಲೆಯನ್ನು ನಡಸುತ್ತಿದ್ದಾಗ. ಅಷ್ಟು ಹೊತ್ತಿಗೆ ಕೈಲಾಸಂ ತಮ್ಮ ಸರ್ಕಾರಿ ಉದ್ಯೋಗಕ್ಕೆ ರಾಜೀನಾಮೆ ಕೊಟ್ಟಿದ್ದರು. ಬೆಂಗಳೂರು 'ಅಮೆಚೂರ್ ಡ್ರಾಮಾಟಿಕ್ ಟ್ರೂಪ್' ನಾಟಕಗಳಲ್ಲಿ ಪಾತ್ರವಹಿಸುತ್ತಿದ್ದರು. ಆಗ, ಆ ಕಂಪನಿಯ 'ಭದ್ರಾಚಲ ರಾಮದಾಸ್' ನಾಟಕ ಬಹು ಜನಕ್ಕೆ ಮೆಚ್ಚಿಕೆಯಾಗಿತ್ತು. ರಾಮದಾಸನ ಪಾತ್ರವನ್ನು ಬಳ್ಳಾರಿ ರಾಘವಾಚಾರ್ಯರು ಬಲು ಉತ್ತಮವಾಗಿ ನಟಿಸುತ್ತಿದ್ದರು. ಅದರಲ್ಲಿ ಕೈಲಾಸಂ ಸಣ್ಣ ಪುಟ್ಟ ಹಾಸ್ಯದ ಪಾತ್ರಗಳನ್ನು ವಹಿಸುತ್ತಿದ್ದರು. ನಾನೂ ಒಂದೆರಡಾವರ್ತಿ ಈ ರಾಮದಾಸ್ ನಾಟಕವನ್ನು ನೋಡಲು ಹೋಗಿದ್ದೆ.

ಒಂದು ಸಲ, ಇದೇ 'ರಾಮದಾಸ್' ನಾಟಕದಲ್ಲಿ, ಶ್ರೀ ರಾಮನವಮಿ ಉತ್ಸವಕ್ಕೋಸ್ಕರ ಭದ್ರಾಚಲಕ್ಕೆ ಹೋಗುತ್ತಿದ್ದ ಭಜನೆ ಕೋಲಾಟವವರ ಗುಂಪಿನಲ್ಲಿ ಕೈಲಾಸಂ ಒಂದು ಹೆಣ್ಣುವೇಷವನ್ನು ಧರಿಸಿ ಕುಣಿಯುತ್ತ ಬಂದರು. ಆಗ ಅವರು ಹಾಡಿದ ಹಾಡು ಇನ್ನೂ ಜ್ಞಾಪಕ ಇದೆ:

ನಾ ಸಾಮೀ ನಾಪೈ ನೀಕು ದಯಲೇದಾ ?
ನಾ ಸಾಮೀ ನಾಪೈ ನೀಕು ದಯಲೇದೂ ‖ ಪ ‖
ಭದ್ರಾಚಲಂ ಊರಲೋನ ಸೊಮ್ಮುಲುನ್ನಾವಿ |
ಮಂಚಿ ಕಮ್ಮುಲುನ್ನಾವಿ |
ಆ ಕಮ್ಮುಲು ತೆಚ್ಚಿ ನಾ ಚೇತಿಕಿಚ್ಚಿ |
ನೀವು ಜೈಲುಕು ಪೋರಾದಾ ‖
ನಾ ಸಾಮೀ ನಾ ಪೈ ನೀಕು ದಯಲೇದೇ
ನಾ ಸಾಮೀ ನಾ ಪೈ ನೀಕು ದಯಲೇದೂ ‖೧‖

ಆಗ ಅದು ನಾನು ವ್ಯಾಯಾಮಶಾಲೆಯನ್ನು ಪ್ರಾರಂಭಿಸಿದ್ದ ದಿನಗಳು. ಸುಮಾರು ಹತ್ತು ಹದಿನೈದು ಜನ ಮಾತ್ರವೇ ಇದ್ದದ್ದು. ಸಂಜೆ ಐದೂವರೆ ಗಂಟೆಗೆ ನಾವೆಲ್ಲರೂ ಸೇರಿ, ಟಿಪ್ಪೂಸುಲ್ತಾನ್ ಅರಮನೆಯ ಒಂದು ಚಿಕ್ಕ ಕೋಣೆಯಲ್ಲಿ ವ್ಯಾಯಾಮ ಮಾಡುತ್ತಿದ್ದೆವು.

ಒಂದು ಸಂಜೆ ಕೈಲಾಸಂ ಕಿಟಕಿಯ ಹೊರಗೆ ನಿಂತು, ನಾವು ಮಾಡುತ್ತಿದ್ದ ವ್ಯಾಯಾಮವನ್ನು ಬಹಳ ಹೊತ್ತಿನವರೆಗೂ ನೋಡುತ್ತಿದ್ದರು. ಆಗ ನನ್ನ ಕಿವಿಯಲ್ಲಿ ಯಾರೋ 'ಕೈಲಾಸಂ ಕಿಟಕಿ ಹೊರಗೆ ನಿಂತಿದ್ದಾರೆ' ಎಂದರು. ನಾನು ಆ ಕಡೆ ನೋಡಿ, ಅವರನ್ನು ಕುರಿತು 'ಒಳಕ್ಕೆ ಬರಬಹುದಲ್ಲಾ. ಬನ್ನಿ ಕೂತುಕೊಳ್ಳಿ.' ಎಂದೆ. ಬಾಗಿಲ ಬಳಿ ಅವರನ್ನು ಎದುರುಗೊಂಡು ಒಳಗೆ ಕರೆತಂದು ಪೀಠವನ್ನು ಕೊಟ್ಟು ಉಪಚರಿಸಿದೆ. ಕೋಣೆಯೊಳಕ್ಕೆ ಬರುವುದಕ್ಕೆ ಮುಂಚೆ ಅವರ ಕೈಯಲ್ಲಿ ಒಂದು ಸಿಗರೇಟ್ ಇತ್ತು. ಅದನ್ನು ಹೊರಗಡೆಯೇ ಬಿಸುಟು, ಒಳಗೆ ಬಂದು ಕುಳಿತರು. 'Please do not get disturbed. Do get on.' ಎಂದರು. ನಾವು ಮುಂದುವರಿಸಿ ಮುಗಿಸುವವರೆಗೂ, ಎಂದರೆ ಸುಮಾರು ಅರ್ಧ ಗಂಟೆಯ ಕಾಲ, ನಾವು ಮಾಡುತ್ತಿದ್ದ ವ್ಯಾಯಾಮ ಬಗೆಗಳನ್ನು ನೋಡುತ್ತ ಕುಳಿತರು.

ನಾವು ಮುಗಿಸಿದ ಮೇಲೆ ಕೈಲಾಸಂ "I suppose I may smoke NOW. No objections?" ಎನ್ನುತ್ತ, ಸಿಗರೇಟನ್ನು ಹಚ್ಚಿಯೇಬಿಟ್ಟರು.

ನಾನು: "ಪರವಾ ಇಲ್ಲ, ಸಾರ್, ಎಕ್ಸರ್‌ಸೈಸ್ ಎಲ್ಲಾ ಮುಗೀತು. ನಾನು ನಿಮಗೆ ಪರಿಚಯವಿಲ್ಲದಿರಬಹುದು. ನೀವು ಮಾತ್ರ ಎಲ್ಲರಿಗೂ ಪರಿಚಯವೇ. ನಿಮಗೆ ಜ್ಞಾಪಕ ಇದೆಯೆ, ನೀವು ಮುತ್ಯಾಲಗಟ್ಟೆನಲ್ಲಿ ಕೆಲಸ ಮಾಡುತ್ತಿದ್ದ ದಿನಗಳು? ದುರ್ಧಾಗ್ಯವಿಗೆ ಒಂದು ದಿನ ಮುಂಚೆ ನಮ್ಮ ಹಳ್ಳಿಯ ಮುಂದಿನ ರಸ್ತೇಲಿ ನೀವು ಮೋಟರ್‌ಸೈಕಲ್ ಮೇಲೆ ಹೋಗ್ತಿದ್ದಾಗ–ಸಂಜೆಹೊತ್ತು–ನಿಮ್ಮ ಸೈಕಲ್ ಚಕ್ರಕ್ಕೆ ಕೋಳಿ, ಕೋಳಿಪಿಳ್ಳೆ, ಸಿಕ್ಕಿ 'ಫನಾ' ಆದದ್ದು? ಅದಕ್ಕೋಸ್ಕರ ನೀವು ಆ ಕುರುಬರವಳಿಗೆ ಒಂದು ರೂಪಾಯಿ ಕೊಟ್ಟದ್ದು? ಅವಳು ಅಷ್ಟಕ್ಕೂ ಹೆಂಡ ಕುಡಿದುಬಿಟ್ಟದ್ದು? ನಿಮಗೆ ಜ್ಞಾಪಕ ಇದೆಯೆ, ಸಾರ್?

ಕೈಲಾಸಂ: "ಚೆನ್ನಾಯ್ತು, ಮಗು. ನಿಮ್ಮ ಮನೇಲಿ ಚಕ್ಕುಲಿ ತಿಂದದ್ದು, ಕಾಫಿ ಕುಡಿದದ್ದು, ಹಳ್ಳಿಯವರು ವೇಷ ಹಾಕಿಕೊಂಡು ಕುಣಿದದ್ದು,

ಇದು ನಿನಗೆ ಜ್ಞಾಪಕವಿದೆಯೆ? ಬಲ್ಬು fuse out ಆಗಿ, ಮೋಟರ್ ಸೈಕಲ್‌ನ ನಿಮ್ಮ ಮನೇಲೇ ಬಿಟ್ಬಿಟ್ಟು, ನಿಮ್ಮ push-bickeನಲ್ಲಿ ಹೋದದ್ದು, ಜ್ಞಾಪಕ ವಿದೆಯೆ **ನಿನಗೆ?"** ಎಂದರು.

ನಾನು ಬಾಯಿ ಮುಚ್ಚಲೇಬೇಕಾಯಿತು. ಕೈಲಾಸಂ ಅವರ ಜ್ಞಾಪಕ ಶಕ್ತಿ ಅದ್ಭುತವಾದದ್ದು. ನಮಗೇನೋ ಆ ಸಂಜೆ ಕೈಲಾಸಂ ಅವರನ್ನು ನೋಡಿ ಮಾತಾಡಿದ್ದು ಪ್ರಥಮ ಪರಿಚಯವಾದ್ದರಿಂದ, ಅದು ನೆನಪಿನಲ್ಲೇ ಉಳಿದಿತ್ತು. ಅವರಿಗೆ ಇಂಥ ಸಂದರ್ಭಗಳು ಎಷ್ಟೋ; ಆದರೂ, ಚಕ್ಕುಲಿ ತಿಂದದ್ದು, ಕಾಫಿ ಕುಡಿದದ್ದು, ಇಂಥ ಸೂಕ್ಷ್ಮಾಂಶಗಳೂ ಜ್ಞಾಪಕ ಇದ್ದದ್ದು ಹೆಚ್ಚು!

ಕೈಲಾಸಂ ಮಾತಿಗೆ ಮೊದಲಿಟ್ಟರು: "ನೀವು ಈಗ ಮಾಡತಾ ಇದ್ದದ್ದು Sandow System ಅಲ್ವೇ?"

ನಾನು: "ಹೌದು, ಸರ್. ಒಂದೊಂದು ದಿನ ಒಂದೊಂದು ಮಾಡತೇವೆ. ನಾಳೆ Maxalding"

ಕೈಲಾಸಂ: "Oh! that German Strong Man. His name is Maxick. ಆ Britisher Saldoನೂ ಇವನೂ ಸೇರಿಕೊಂಡು 'Maxalding' ಅಂತ ಮಾಡಿದ್ದಾರೆ. ಲಂಡನ್ನಿನಲ್ಲಿ Thomas Inch ಒಬ್ಬ, Edward Aston ಒಬ್ಬ, Armyಲಿ ಆ Parallel-barristಉ Staff-Sergeant Moss ಒಬ್ಬ, ಇವರೆಲ್ಲಾ ಘಟಾನುಘಟಿಗಳು ಆದ್ರೂ Sandow ಇದ್ದಾನಲ್ಲ—ಅವನು unique! I know him well, ಒಂದು ಸಲ ಅವನಲ್ಲಿ Personal Consultationಗೂ ಹೋಗಿದ್ದೆ. ಅವನಿಗೆ ಇಂಗ್ಲಿಷ್ ಚೆನ್ನಾಗಿ ಬರದು. Continent ಜನಗಳು ಮಾತಾಡೋ ಹಾಗೆ ಮಾತಾ ಡೋನು. ನನ್ನ ನೋಡಿ, 'ಕಮ್ ಇನ್. ವಾತ್ ಈಸ್ ಯುವರ್ ನೇಮ್?' ಅಂದ. ನಾನು 'Kailasam' ಅಂದೆ. ಆವನು 'ಮಿಸ್ತರ್ ಸ್ಕೈಲಾಸಂ, ವಾತ್ ಈಸ್ ಯೂರ್ರ್ರ್ ತ್ರಬಲ್?' ಅಂದ. ಅದಕ್ಕೆ ನಾನು 'Nothing . . . Nonthing in fact. I want to learn a few exercises . . . specially, I would like to strengthen my legs.' ಎಂದೆ. 'ಲೆತ್ ಮಿ ಸೀ. ಓಪನ್ ಔತ್.' ಅಂದ, ನನ್ನ ಮೈಯನ್ನೆಲ್ಲ ನೋಡಿದ. 'ಊಂ! ಕ್ವಯ್ತ್ ಗುದ್, ಕ್ವಯ್ತ್ ಗುದ್! ಔ ದು ಯು ಮೆನೇಜ್ ಇತ್?'

ಅಂದ. 'By playing Hockey, Foot-Ball', ಅಂತ ಹೇಳತಾ, ನನ್ನ Bicepsಅನ್ನ ಕುಣಿಸಿದೆ. 'ವಾತ್ ! ಮಸ್ಲ್ ಕಂತ್ರೋಲ್ ! ಔ ದಿದ್ ಯು ಗೆತಿತ್ ?' ಎಂದ. 'By seeing YOU do it' ಅಂದೆ. 'ವೆಲ್ ! ದತ್ ಇಸ್ ನಾತ್ ದಿ ವೇ. ಇಯರ್ ! ಸೀ !' ಅಂತ ಹೇಳತಾ, ಷರಟನ್ನ ಮೇಲಕ್ಕೆಳೆದು, ತನ್ನ ರೆಟ್ಟೇನ ಬಿಗಿಹಿಡಿದು, ಹೀಗೆ bicepsಅನ್ನ tense ಮಾಡಿ 'ಫೀಲ್ ಇತ್ !' ಅಂದ. Believe me, boys: there was nothing more beautiful, nothing more handsome, nothing more awe-inspiring than that biceps. It was like as if carved out of ivory, like a billiard ball . . . Certainly much bigger . . . almost seventeen inches or more . . . and then, what superb development! Flawless development! Then, ಆ Bicepsಅನ್ನ danceಮಾಡಿಸ್ದ, ನೋಡು ! Wonderfull . . . Amazing! ಕಾಳಿದಾಸ ದುಷ್ಯಂತನ್ನ ವರ್ಣಿಸ್ತಾನಲ್ಲಾ, 'ನಗರ ಪರಿಘ ಪ್ರಾಂಶುಬಾಹುಃ' ಅಂತ—Poor kalidasa, he ought to have seen Sandow's arm ! . . .

ಹುಡುಗರು: "ಹೇಳಿ, ಸಾರ್ ! ನಿಲ್ಲಿಸಿಬಿಟ್ರಿಲ್ಲಾ !"

ಕೈಲಾಸಂ: "ತಾಳು, ಮಗು. ನನ್ನ ಸಿಗರೆಟ್ ಎಲ್ಲಿ? ಇರೋದೇ ಅದೊಂದು; ಅಯ್ಯೋ, ಆರೇಹೋಯ್ತೇ !"

ಶನಿವಾರದ ಮಾರುತಿಪೂಜೆಗೆ ಊದಿನಕಡ್ಡಿ ಕರ್ಪೂರ ಹಚ್ಚೋದಕ್ಕೆ ತಂದಿದ್ದ ಬೆಂಕಿಪೆಟ್ಟಿಗೆಯನ್ನು ಕೈಲಾಸಂ ಕೈಗೆ ಒಪ್ಪಿಸಿದೆವು.

"This cigarette can't last me more than two minutes." ಅಂದರು, ಕೈಲಾಸಂ.

ನಾನು ಒಬ್ಬ ಶಿಷ್ಯನಿಗೆ "ಸೈಕಲ್ ಹಾಕಿಕೊಂಡ್ಹೋಗಿ, ಸರ್ ಅಂತ ಒಂದು ಪ್ಯಾಕ್ ತಗೊಂಬಾ." ಅಂತ ಕಳಿಸಿದೆ.

ಕೈಲಾಸಂ: "Make it two, my good boy. ನಾಳೆ ಸಾಯಂಕಾಲದ ವರೆಗೂ ತಳ್ಳಬಹುದು. Two packs 'Scissors!' 'Gold Flake' ಓ ಅಥ್ವಾ ಇನ್ನು ಯಾವುದಾದರೂ ತಂದ್ಬಿಟ್ಟೀಯೆ! Bad for my throat!"

ನಾನು : " ಇಲ್ಲ, ಸಾರ್. ಸಿಸರ್ಸ್ನೇ ತರಿಸ್ಕೊಡ್ತೇನೆ."

ಕೈಲಾಸಂ : " Thank you. Prize coupon ಬೇಡ. ಅದು ಅಂಗಡಿಯೋನ್ಗೇ ಕೊಟ್ಟುಬಿಟ್ರೆ, ಎರಡರಿಂದ ಆರುಕಾಸು ಉಳಿಯುತ್ತೆ. ಒಂದು Match-boxಉ . . . ತಿಳೀತೇ ? "

ಶಿಷ್ಯ : " Yes sir But, ನಾನು ಬರೋವರೆಗೂ . . . "

ಕೈಲಾಸಂ: "ಬಾಯಿಗೆ brake ಹಾಕ್ಕೊಂಡಿರ್ತೇನೆ. ಬೇಗ್ ಬಂದ್ಬಿಡು."

ಶಿಷ್ಯ ತರಾತುರಿ ಓಡಿಹೋದ. ಕೇಳಬೇಕೆ ? ಕೈಲಾಸಂ ನಮ್ಮನ್ನೆಲ್ಲಾ ಸೂಜಿಗಲ್ಲು ಕಬ್ಬಿಣವನ್ನ ಆಕರ್ಷಿಸುವ ಹಾಗೆ ಆಕರ್ಷಿಸಿಬಿಟ್ಟಿದ್ದರು. We were all under a big hypnotic spell ! Exercise ಆದ ಕೂಡಲೆ ಮನೆಗೆ ಓಡಿಹೋಗುತ್ತಿದ್ದವರೂ ಕೂಡ ಆ ಹೊತ್ತು ರೂಂ ಬಿಟ್ಟು ಕದಲಲಿಲ್ಲ.

ಕೈಲಾಸಂ, ಆರಿಹೋಗಿದ್ದ ಸಿಗರೇಟನ್ನು ಮತ್ತೆ ಹಚ್ಚಿ, ಎರಡು ಮೂರು ಸಾರಿ, ಹೊಗೆ ಎಳೆದು ಬಿಟ್ಟು, " What do you think was the nationality of Sandow ? " ಎಂದು ಕೇಳಿದರು.

ನಾನು 'ಇಂಗ್ಲಿಷ್' ಅಂದೆ. ಇನ್ನೊಬ್ಬ 'ಅಮೆರಿಕನ್' ಅಂದ. ಮತ್ತೊಬ್ಬ 'ಸ್ವಿಸ್ ಇರಬೇಕು' ಅಂದ. ಬೇರೊಬ್ಬ 'ಫ್ರೆಂಚ್ ಇರಬಹುದು' ಅಂದ.

" Go on, go on. Exhaust every Country " ಅಂದರು, ಕೈಲಾಸಂ.

ನಾವೆಲ್ಲ ನಾಚಿಕೆಯಿಂದ ಸುಮ್ಮನಾದೆವು.

ಕೈಲಾಸಂ ಹೇಳಿದರು : " ಜರ್ಮನ್, ಹುಟ್ಟಿದ್ದು ಕೋನಿಗ್ಸ್‌ಬರ್ಗ್. No high education. Conscriptionಗೆ ಹೆದರ್ಕೊಂಡು, ಆಸ್ಟ್ರಿಯಾಕ್ಕೆ ಓಡಿಹೋಗಿ, Attilla ಅನ್ನೋ strong-man ಹತ್ತಿರ ಕೆಲಸಕ್ ಸೇರ್ಕೊಂಡ ಅಲ್ಲಿ ಎಲ್ಲಾ ಚೆನ್ನಾಗಿ training ತಕೊಂಡು, Attillaಗೂ ಚಕ್ಕರ್ ಕೊಟ್ಟು ಹೋದ. ಅಟ್ಟೆಲ್ಲಾ ಇಟ್ಟ 'Sandow' ಎಂಬ ಹೆಸರಿನ ಮೇಲೆ ಇಟಲೀಗೆ ಹೋಗಿ, ರೋಂನಲ್ಲಿ famousಆದ. ಆಮೇಲೆ ಇಂಗ್ಲೆಂಡಿಗೆ ಬಂದು settle ಆದ. Strengthನಲ್ಲಿ ಇವನ್ನ surpass ಮಾಡಿದೋರು ಇಂಗ್ಲೆಂಡಿನಲ್ಲೇ ಎಷ್ಟೋ ಜನ ಇದ್ದಾರೆ. Iuch, Bankier ಇವರೆಲ್ಲಾ Sandowಗಿಂತ strengthನಲ್ಲಿ superiorಆಗಿದ್ರೂನೂವೇ Sandow's physique ಘೂ

ಅವನ showmanshipಊ ಇವರಲ್ಲಿ ಯಾರಿಗೂ ಇರಲಿಲ್ಲ. Alhambra ದಲ್ಲಿ ಅವನ show ನೋಡಿದ್ದೇನೆ. ಒಂದೊಂದು Nationalityಗೆ ಒಬ್ಬೊಬ್ಬ strong manನ presentಮಾಡಿ, ಕೊನೆಗೆ flood-lightನಲ್ಲಿ pose ಮಾಡ್ತಿದ್ದ—Sandow. Every pose, a perfect marble statue! ಕೊನೆಗೆ—Muscle Control to music'! Wonderful! Wonderful performance!"

ಕೈಲಾಸಂ ಇದೆಲ್ಲಾ ಹೇಳುತ್ತಿದ್ದಾಗ, ನಮಗೊಬ್ಬಬ್ಬರಿಗೂ ಮೈಮೇಲೆ ಪ್ರಜ್ಞೆಯೇ ಇರಲಿಲ್ಲ. ರಾತ್ರಿಯೆಲ್ಲ ಹೇಳುತ್ತಿದ್ದರೂ, ಕೇಳುವುದಕ್ಕೆ ನಾವು ಸಿದ್ಧ. ಅಷ್ಟರಲ್ಲಿ ಸಿಗರೆಟ್ ತರುವುದಕ್ಕೆ ಹೋಗಿದ್ದ ಶಿಷ್ಯ ಏದುತಾ ಏದುತಾ ಬಂದು, ಕೈಲಾಸಂ ಮುಂದೆ ಎರಡು ಪ್ಯಾಕೆಟ್ಟನ್ನೂ ಬೆಂಕಿಪೆಟ್ಟಿಗೆಯನ್ನೂ ಇಟ್ಟು, ಆಯಾಸದಿಂದುಂಟಾದ ಉಬ್ಬಸದಿಂದ ಮಾತನಾಡುವುದಕ್ಕೆ ಕೂಡ ಆಗದೆ, "ಏನ್, ಸರ್! ನಾ ಬರೊವರೆಗೂ ಏನೂ ಹೇಳೋದಿಲ್ಲ ಅಂದೋರು . . ." ಅಂತ ಪೇಚಾಡಿದ.

ಕೈಲಾಸಂ: "Certainly not, dear boy. Interesting topic ಎಲ್ಲಾ ನಿನಗಾಗಿಯೇ ಇಟ್ಟಿದ್ದೇನೆ. ಇದೇನು, ಓಡಿಹೋಗಿ ತಂದ್ಯಾ, ಇಷ್ಟು ಬೇಗ?"

ಶಿಷ್ಯ: "ಸೈಕಲ್ ಮೇಲೆ ಹೋಗಿದ್ದೆ, ಸಾರ್. ಮಾರ್ಕೆಟ್ ಹತ್ತಿರ raceಮಾಡಿಕೊಂಡು ಬರುವಾಗ, up, ಸಾರ್ . . . . speedನಲ್ಲಿ ಬಂದೆ."

ಕೈಲಾಸಂ: "Good boy. ಬಾ, ಕೂತ್ಕೊ. ಲ್ರೋ, ಜಾಗಬಿಡ್ರೋ! . . . ಆಯ್ತೇ! . . . ಈ Sandow ಇದ್ನಲ್ಲಾ . . . Eugene Sandow, every sunday, ಹೆಂಡತೀನ ಕರ್ಕೊಂಡು—the most beautiful woman in London, ಮಗು—theatreಗೆ ಬರತಾ ಇದ್ದ. ಅವನಿಗೋಸ್ಕರ ಒಂದು Box reserve ಆಗಿರ್ತಿತ್ತು. Dude ಅವನು . . . fine ಆಗಿ black ನಲ್ಲೇ dressಮಾಡ್ಕೊಂಡು ಬರ್ತಿದ್ದ. ಬಂದು, ಅವನ ಹೆಂಡತಿ ಒಂದು ಗ್ಲಾಸ್ wineಉ, ಅವನೂ ಒಂದು ಗ್ಲಾಸ್ wineಉ . . .ನಾನೆಷ್ಟೋ ಸರ್ತಿ ನೋಡಿದ್ದೇನೆ. Black suitನಲ್ಲಿ ಅವನ್ನ ಯಾರೂ 'Sandow' ಅಂತ ಹೇಳೋಕೇ ಆಗ್ತಿರಲಿಲ್ಲ. ಅಷ್ಟು great physique ಆ black suitನಲ್ಲಿ

ಏನೂ ಕಾಣಿಸ್ತಾನೇ ಇರಲಿಲ್ಲ. Black makes a man look very compact, although he may be broad. Greyನಲ್ಲಿ, ತೆಳ್ಳಗಿದ್ದರೂ ಮನುಷ್ಯ ದಪ್ಪಗೆ ಕಾಣುತಾನೆ. Sandow . . . I have seen many times . . . smoking a cigar . . . very moderate smoker . . . ನನ್ನ ಹಾಗಲ್ಲ. ಅವನಿಗೆ ಗಂಡುಮಕ್ಕಳಿಲ್ಲ, ಎರಡು ಹೆಣ್ಣುಮಕ್ಕಳು. One young girl—very good-looking . . . like her mother ; ಅವರ ಜೊತೇಲಿ theatreಗೆ ಬಂದದ್ದು ನೋಡಿದ್ದೇನೆ . . . Sandow, ಅವನ ಜೊತೇಲಿ ಒಬ್ಬ Indian wrestlerನೂ ಇಟ್ಟುಕೊಂಡಿದ್ದ. Body ಸುಮಾರಾಗಿತ್ತು... the usual Indian wrestler type... Smooth with not much muscular separation. Showsನಲ್ಲಿ, 'This is India!' ಅಂತ presentಮಾಡ್ತಿದ್ದ. Wrestling ಬರದು, Sandowಗೆ. Clever scoundrel, challengesನ ಹೇಗೋ avoid ಮಾಡಿಬಿಡ್ತಿದ್ದ. ಹೆಚ್ಚೇನು, ಅವನ physiqueಏ ಅವನ assetಉ. Feats, though combined with strength, were very cleverly and very well presented . . ."

ನಾನು: "ಸರ್! ಗಾಮಾನೂ ಇತರ Indian wrestlersಊ ಹೋಗಿದ್ರಲ್ಲಾ ಲಂಡನ್ನಿಗೆ, ಆಗ Sandowನ challenge ಮಾಡಲಿಲ್ವೇ ಗಾಮಾ?"

ಕೈಲಾಸಂ: "Clever fellow ! ಆಗ Americaಗೆ trip ಹೊರಟುಬಿಟ್ಟ. Zbysco, Hackenschmidt, John Lemm, Dr. Rollo, Gotch ಇಂಥ ಘಟಾನುಘಟಿಗಳೆಲ್ಲ ಇದ್ರು. ಆದ್ರೂ ಒಬ್ರೂ ಗಾಮಾನ challengeನ accept ಮಾಡಿಕೊಳ್ಳಿಲ್ಲ. ಆಗ county championship matches ಆಗ್ತಿತ್ತು. London ಇನ Alhambraದಲ್ಲಿ. ಎಲ್ಲಾ European wrestlersಊ ಬಂದಿದ್ರು ನೋಡೋಕೆ. ಗಾಮನಿಗೆ ಕೋಪ ಬಂದು, ಒಂದು ದಿನ, ಕಾಚಾ ಬಿಗಿದು stage ಮೇಲೆ ದುಮುಕಿ ಬಿಟ್ಟು, ಉರ್ದೂನಲ್ಲಿ 'ಕುಸ್ತಿ ಮಾಡೋಕೆ ತಾಕತ್ ಇರೋರು ಎಲ್ಲಾರೂ ಬನ್ನಿ! ಒಬ್ಬ್ರಾದ್ಮೇಲೊಬ್ರು ಬಿಡ್ವಿಲ್ದೆ ಬನ್ನಿ! ನಿಮ್ಮೆಲ್ಲಾರ್‍ನೂ ನೆಲಕ್ಕೆ ಕುಕ್ಕೋವರ್‍ಗೂ ಈ ಕಟ್ಟಿದ ಕಾಚಾನ ಬಿಚ್ಚೋದಿಲ್ಲ! ಉಸ್ಸಪ್ಪಾಂತ ಕೂತ್ಕೊಳ್ಳೋದಿಲ್ಲ!' ಅಂತ ಸಿಂಹಗರ್ಜನೆ ಮಾಡಿ, ಸವಾಲ್

ಹಾಕ್ದ. ಅದನ್ನ ಇಂಗ್ಲಿಷಿನಲ್ಲಿ ಯಾರೋ ಸರಿಯಾಗಿ ತರ್ಜುಮೆಮಾಡಿ ಹೇಳಿದ್ರು. ತಲೆ ತಗ್ಗಿಸೊ ಹಾಗಾಯ್ತು, ಆ ಕೆಂಪು ಮೂತಿಗಳಿಗೆಲ್ಲ. ಆಮೇಲೆ ಯಾರೋ ಬಂದು, ಏನೋ ಸಮಾಧಾನ ಹೇಳಿ, ಕೂರಿಸಿದರು, ಗಾಮನ್ನ. ಈ ಸಂಗತಿ ನಡೆದ ಮೇಲೆ, Health and Strength ಪತ್ರಿಕೆಯ Editorಉ ಎರಡು partyನೂ ಕರೆಸಿ ಮಾತಾಡಿ, matches arrange ಮಾಡಿಸ್ದ, wrestling matchesನ, Alhambraದಲ್ಲಿ. First day matchಉ-- John Lemm *vs.* ಅಹಮದ್ ಬಕ್ಷ್. John Lemm, ಅವನು Swiss mountaineer. ಅದೇನು thighs! ಒಳ್ಳೇ stocky build! Short, and very powerful

"ಅಹಮದ್ ಬಕ್ಷ್, ಕಾಚಾ ಬಿಗಿದು, ತೊಡೆ ತಟ್ಟಿ, ಭುಜ ತಟ್ಟಿ, matಗೆ ಇಳಿದ. ಅಲ್ಲಿ, ಇಲ್ಲಿಲ್ಲಾ ಇದ್ದ ಹಾಗೆ ಮಟ್ಟಿ ಇಲ್ಲ; wrestling ಎಲ್ಲಾ mat ಮೇಲೇ. Indian wrestlersಗೆಲ್ಲಾ ಬಹಳ handicap ಅದು. ಎರಡೇ ಎರಡು ನಿಮಿಷ ಬಕ್ಷ್ ಆ Lemmನ ಬಾಚಿ, ಕುರೀನ ಹೊತ್ಕೊಳ್ಳೋ ಹಾಗೆ ಭುಜದ ಮೇಲೆ ಹಾಕ್ಕೊಂಡು, ಗಿರಗಿರನೆ ನಾಲ್ಕು ಸುತ್ತು ಸುತ್ತಿ, ನೆಲಕ್ಕೆ ಕುಕ್ಕಿದ ನೋಡು--ಆ mat ಮೇಲೆ! ಅದರೊಳಗೆ ಇದ್ದ ಧೂಳೆಲ್ಲ ಮೇಲಕ್ಕೆದ್ದು, ಆ flood-lightsನಲ್ಲಿ ಈ wrestlersಉ ಏನಾದ್ರೂಂತ ನೋಡೋಕ್ಕೂಡ ಆಗದೆ ಹೋಯ್ತು! ಅಹಮದ್ ಬಕ್ಷ್ Lemmನ ಹೊಟ್ಟೆ ಮೇಲೆ ಕೂತ್ಕೊಂಡು, ಲೆಮ್ನ ಎರಡು ಭುಜಾನೂ ನೆಲಕ್ಕೆ ಅದುಮಿಹಿಡಿದಿದ್ದ. Refereeಹೋಗಿ, ಅಹಮದ್‌ಬಕ್ಷನ್ನ 'ನೀನು ಗೆದ್ದೆ. ಏಳು' ಅಂದ್ರೆ...ಬಕ್ಷ್ 'ಔರ್ ದುಸ್ರೇಕು ಬುಲಾವ್ !'-(ಅಂದ್ರೆ, 'ಇನ್ಯಾರಿದ್ದಾನೋ ಎರಡನೇವ್ನು,) ಅವನ್ನೂ ಕರಿ. ಈಗ್ಲೇ ಅವನ್ನೂ ಕುಕ್ಕಿಬಿಡ್ತೇನೆ' ಅಂದ. Referee ಮೆಲ್ಲಗೆ ಸಮಾಧಾನಮಾಡಿ, ಈಚೆಗೆ ಕರಕೊಂಡು ಬಂದು, ಅವನ ಕೈಯನ್ನು ಮೇಲಕ್ಕೆತ್ತಿ ಹಿಡಿದು, 'Mr. Bux-the winner!' ಅಂತ ಅಂದನೋ ಇಲ್ಲವೋ—ತಕ್ಕೊ! ಅಲ್ಲಿದ್ದ Indian students ಎಲ್ರೂ 'ಹುರ್ರೇ'ಂತ ಕಿರಿಚಿಬಿಟ್ರು. Auditorium ಮುಂಭ್ಗಡೇನೇ ಕೂತಿದ್ದ Frank Gotch, ಎದ್ದು ಧುಮುಕಿದ platform ಮೇಲೆ. ಅವನ ಪಕ್ದಲ್ಲೇ ಕೂತಿದ್ರು: Dr. Rollo, Hackenschmidt, and that man-mountain

goliath Zbysco ಅವರ ಜನ ಎಲ್ಲರೂ ಹೋಗಿ Gotchನ ಎಳದ್ರೂ ಅವನು ಹಿಂದಕ್ ಬರ್ಲಿಲ್ಲ; platformಗೆ ಹಾರಿದ್ದೆ, Ahmad Buxನ ಎದುರಿಗೆ ತನ್ನ ಕೈಮುಷ್ಟಿ ಹಿಡ್ದು, 'ಹಿಸಿಕಿಬಿಡ್ತೇನೆ ನಿನ್ನ' ಅಂದ. Ahmad Bux ಹಾಗೇ ಅವನ ಕೈ ಹಿಡ್ದು ಎಳೆಯೋದಕ್ ಹೋದ. Referee ನಡುವೆ ಬಂದು Gotchನ ಒಂದು ಪಕ್ಕಕ್ಕೆ ಕರೆದ. Audienceಓ 'Let them fight! Let them fight!' ಅಂತ ಕಿರಿಚ್ತಿದ್ರು.

"Lemm ಇನ್ನೂ ಹಾಗೇ ಬಿದ್ದಿದ್ದ mat ಮೇಲೆ. First aidನೋರು ಬಂದು, stretcher ಮೇಲೆ ಹೊತ್ಕೊಂಡ್ಹೋದ್ರು ಅವನ್ನ. Concussion of the brain ಆಗಿತ್ತು Lemmಗೆ. Bux ಕುಕ್ಕೋವಾಗ ಚೆನ್ನಾಗಿ ತಲೇನೇ ಕುಕ್ಬಿಟ್ಟಿದ್ದಾಂತ ಕಾಣುತ್ತೆ. Lemmಗೆ ಆದ ಗತಿ ನೋಡಿ Health and Strength Editorಗೂ ಮನಸ್ಗೆ ಸ್ವಲ್ಪ ಹುಳಿಹುಳಿ ಆಯ್ತು. ಅಲ್ದೆ, Gotch ದೊಡ್ಡ wrestlerಊಂತ ಈ Editorಗೆ ಭರವಸೇನೂ ಇತ್ತು. ಆಗ ಒಂದು ಕಳ್ಳಾಟ ತೆಗೆದುಬಿಟ್ಟ, ಎಡಿಟರು: 'Gentlemen, Frank Gotch deposits £ 100 to say that he will vanquish Mr. Bux. It is but fair that Mr. Bux also deposits a like amount' ಅಂದ. ಪಾಪ! ಆ tourists ಕೈಲಿ ಎಲ್ಲಿಂದ ಬರಬೇಕು, spotನಲ್ಲಿ ಅಷ್ಟು ಹಣ? ಅವರ managerಉ ನಾಳೆ ಕೊಡ್ತೇನೇಂತ, ಬರ್ಕೊಡ್ತೇನೆ ಅಂದ. Gotchಊ ಅವನ ಬೆನ್ತಟ್ಟಿದೋರೂ ಅದಕ್ಕೆ ಒಪ್ಪಿದ್ರೆ!...ಇಲ್ಲ. Auditoriumನಲ್ಲಿ ಗಲಭೆಯೋ ಗಲಭೆ. 'It is unfair! It is non-sense!' ಅಂತ Indian studentsಊ, Indian merchantsಊ Indian officersಊ. ಇಂಗ್ಲಿಷ್ ಹುಡುಗ್ರು 'Come out, Bux Come out, Bux! Show your meettle now!' ಅಂತ ಕೂಗಿದ್ರು.

"ನಾವೆಲ್ಲ ಕೂತಿದ್ವಿ—five and six classನಲ್ಲಿ. ನಮ್ಮ ಎದುರಿಗೆ, ಪಕ್ಕದಲ್ಲಿ ಒಟ್ಟು ಸುಮಾರು ನಲವತ್ ಜನದ ಮೇಲೆ ಇದ್ರು—Indiansಉ. ನನಗೊಂದು ಯೋಚನೆ ಹೊಳೀತು ಆಗ: 'Can I not raise £ 100 on the spot?' ಅಂತ. ಆಗ ನನ್ನ ಹತ್ರ ಇದ್ದದ್ದೆಲ್ಲಾ ಒಂದೇ crownಉ. ಅದನ್ನೇ ನನ್ನ hatನಲ್ಲಿ ಹಾಕ್ಕೊಂಡೆ. ನನ್ನ seatನಲ್ಲಿ ಎದ್ದು ನಿಂತ್ಕೊಂಡು,

'Hello everybody!' ಅಂತ ಘಟ್ಟಿಯಾಗಿ ಕಿರಿಲಿದೆ, hall ಎತ್ಕೊಂಡ್ ಹೋಗೋ ಹಾಗೆ. ಎಲ್ರೂ ನನ್ಕಡೆ ನೋಡಿದ್ರು. ನಾನು ಕೈಯೆತ್ತಿ 'My Indian Brothers! I am coming to you all, with this open hat to meet this wager!' ಅಂದೆ. 'Hurray!' ಅಂದ್ರು ಎಲ್ಲಾರೂ. ಸರಿ, ಟೋಪಿ ತಕ್ಕೊಂಡು ಒಬ್ಬೊಬ್ಬರ ಹತ್ರಲೂ ಹೋದೆ. ಕೆಲವರು return bus or train fare ಮಾತ್ರ ಇಟ್ಕೊಂಡು, purse ಎಲ್ಲಾ empty ಮಾಡಿಬಿಟ್ರು, ನನ್ನ hatನೊಳಕ್ಕೆ. ಒಬ್ಬ ಮುದುಕ ಇಂಗ್ಲಿಷಿನೋನು ನನ್ನ ಕರೆದು, 'Come here, son. Don't take this as an insult!' ಅಂತ ಹೇಳಿ, one pound currencyನ ನನ್ನ hatನಲ್ಲಿ ಹಾಕಿ, 'It is unfair of Gotch and his party. Good luck to Bux!' ಅಂದ. ನಾನು 'Thanks' ಅಂತ bowಮಾಡಿ ಮುಂದ್ಹೋದೆ. Hatನಲ್ಲಿ ಒಟ್ಟು ಎಲ್ಲಾ £ 100 ಇರಬಹುದೂಂತ ಎಣಿಸ್ಕೊಂಡು, front line dress circlesನಲ್ಲಿ ಒಬ್ಬಿಬ್ರು parsee merchantsಓ touristsಓ ಕೂತಿದ್ರು, ಅವರ್ಹತ್ರನೂ ಹೋದೆ. ಅಲ್ಲಿ Sir Dorabji Tata Junior ಕೂತಿದ್ದ. 'How much has all that come to?' ಅಂತ ಕೇಳ್ದ. ಅಲ್ಲೇ seat ಮೇಲೆ hat ಇಟ್ಟು ಎಣಿಸ್ದೆ. Less £ 9-6-0 ಇತ್ತು. ಅವರಿಗೆ ಹೇಳ್ದೆ. ತಕ್ಷಣ purseಇಂದ ಒಂದು tenner ತೆಗೆದುಕೊಟ್ಟು, 'Let us see the match!' ಅಂದ. Great fellow! Great fellow!

"ಹಣಾನ Indian wrestlers' managerಗೆ ಒಪ್ಸಿ, ಗಾಮನ್ಗೆ shake-hand ಕೊಟ್ಟುಬಂದು, ಕುಕ್ಕರ್ಸಿದ್ದೆ ನನ್ನ seatನಲ್ಲಿ. Announce ಮಾಡಿದ್ರು ಅಲ್ಲೇನೆ. Frank Gotch ಬಂದು ನಿಂತ. ಏನ್ heightಉ! ಏನ್ buildಊ! Bux Gotch ಮುಂದೆ ಕುಳ್ಳಗ್ಕಾಣ್ತಾ ಇದ್ದ. Gotchಉ matಗೆ ಇಳಿದು, ಕೆಲವು Jujutsu falls, neck balance in wrestler's bridge ಎಲ್ಲಾನೂ ಮಾಡಿ, brace-up ಮಾಡ್ಕೊಂಡ ಮೈಯನ್ನ. Bux ಒಂದು over-coat ಹಾಕ್ಕೊಂಡು ನಿಂತೇ ಇದ್ದ.

"ಕುಸ್ತಿ catch-as-catch-can typeಉ. ಷುರುಆಯ್ತು. ನಾಲ್ಕೈದು ನಿಮ್ಷ ಒಬ್ಬರ ಕೈಗೊಬ್ಬರು ಸಿಗಲೇ ಇಲ್ಲ. ಒಂದ್ಸಲ Gotch ಸಿಕ್ದ, Bux

ಕ್ಕೆಗೆ ; ತಕ್ಷಣ slip ಆಗ್ಬೋದ. ಆಗ referee ಏನೋ ಹೇಳ್ದ Buxಗೆ. Mat ಬಿಟ್ಟು ಹೊರಕ್ಕೆ ಬಂದ್‌ಬಿಟ್ಟಿದ್ದಾಂತ ಕಾಣುತ್ತೆ, ಓಡಾಡೋವಾಗ. Bux referee ಕಡೆ ತಿರುಗಿ ನೋಡ್ದ. ಅದೇ ಸಮಯಕ್ಕೆ ಕಾದಿದ್ದಾಗೆ Gotch ಬಂದು ಹಿಡಿಕೊಂಬಿಟ್ಟ, Buxನ, around the waist. Next second, Gotch ಏನ್ಮಾಡಿದನೋ ಏನೋ! Bux ಬಿದ್ದ—mat ಮೇಲೆ, ಮುಖ ಅಡಿಯಾಗಿ! ಈ position ಸಿಕ್ತೋ ಇಲ್ವೋ, ಹಾಕ್ದ Gotchಉ ತನ್ನ famous toe-holdನ, Bux ಮೇಲೆ. ಆ toe-holdಉ Gotchದು patentಉ ; very dangerous and extremely painful. Bux simply writhed in pain under that hold. ಆ toe-hold lock ಇದೆಯಲ್ಲಾ ಅದು opponentಗೆ even the smallest movementನೂ allow ಮಾಡೋದಿಲ್ಲ. ಒರಟಾಟಮಾಡಿದ್ರೆ, ಮುರಿದುಹೋಯ್ತೂಂತಾನೇ toe. Buxಗೆ ಈ holdಗೆ counter ಗೊತ್ತಿಲ್ಲಾಂತ ಕಾಣುತ್ತೆ. Buxನ suffering ನೋಡಿದ್ರೆ, succumb ಆಗ್ಬೋಗ್ತಾನೆ ಅನ್ನಿಸ್ತು ನಮ್ಗೆಲ್ಲ. ನಾವೇನೇನೋ encourage ಮಾಡಿದ್ವಿ, Buxಗೆ. ಆದರೆ ಆ devil, Gotch, ತನ್ನೆಲ್ಲಾ strength ಹಾಕಿ ಮುರೀತಿದ್ದ toeನ, Bux bodyನ ಚೆನ್ನಾಗಿ lock ಮಾಡ್ಬಿಟ್ಟ. ಆಗ ಗಾಮನಿಗೆ ಎಷ್ಟು ಸಿಟ್ಟುಬಂತೋ ಏನೋ, ಅವರ ಭಾಷೇಲಿ ಅದೇನೋ ಅಂದ. ಅದು ಕೇಳಿ, Buxಗೆ ನಾಚಿಕೆಯಾಯ್ತು; ಅದೆಷ್ಟು ಶಕ್ತಿ ಬಂತೋ, ಕಾಣೆ. ಏನ್ಮಾಡಿದ! ಮಡಿಸಿದ್ದ ಇನ್ನೊಂದು ಮೊಣಕಾಲನ್ನ ಹೇಗೋ ಸಡಿಲಪಡಿಸ್ಕೊಂಡು, strength ಎಲ್ಲಾ concentrate ಮಾಡಿ, Gotch chinಗೆ ಒಂದು ಒದೆ ಕೊಟ್ಟ ನೋಡು—even a wild ass could not have kicked any worse! ಅದೇ ಕೊನೆ toe-hold Gotch ಹಾಕಿದ್ದು! ಅದಕ್ಕೆ ಸರಿಯಾದ counter ಈ kickಉ. ಆಮೇಲೆ ಆ toe-holdನ ಬಿಟ್ಬೇಬಿಟ್ಟ Gotch. Chinಗೆ ಏಟುಬಿದ್ದ ರಭಸದಲ್ಲಿ, ಜೋರ್ನಲ್ಲಿ, ಬಿಟ್ಹೋಯ್ತು lockಉ. Boxingನಲ್ಲಿ Chinಗೆ vigorous hook ಬಿದ್ರೆ ಏನಾಗುತ್ತೋ, ಅದೇ ಆಯ್ತು Gotchಗೆ. Dizzy ಆಗಿ, ಎದ್ದುನಿಂತ್ಕೊಳ್ಳೋಕ್ ಹೋದರೆ ತಲೆತಿರುಗಿ ಬೀಳೋಹಾಗಾಯ್ತು, ಅವನಿಗೆ. ನಾವೆಲ್ಲಾ ಒಂದೇ ಕಿರ್ಲು ಕಿರ್ಲಿದೆವು. Bux ಎದ್ದ, ನೋಡು, ಭೂಪತಿ! ಅದೇನು ಕೋಪ

ಬಂದಿತ್ತೋ, ಕಾಲನ್ನ ಕುಂಟ್ರಾನೇ ಹಿಡ್ದ, ನೋಡು! ಒಳ್ಳೇ ವೋಪಿನಲ್ಲಿ ಸಿಕ್ಕ್ಬೋಯ್ತು, Gotchನ ಕುತ್ಗೆ, Buxನ ಕಂಕಳ್ಗೆ. 'Allah!' ಅಂತ ಒಂದು ಕಿರ್ಲು ಕೂಗ್ಬಾಕಿ, Gotchನ ಕುತ್ಗೇನ ಕಂಕಳಲ್ಲಿ ಇರುಕಿಕೊಂಡು, ಒಂದು ಕಿವಿಚ್ಬಾ ಕಿವಿಚ್ದಾ ನೋಡು! Gotchಗೆ ಉಸಿರು ಕಟ್ಕೊಂಡು ಕಣ್ಣು ಗುಡ್ಡೆ ಎರಡೂ ಈಚೆಗೆ ಹೊರಟ್ಕೊಂಡ್ವು. ಕೋಳಿ ಕುತ್ಗೇನ ಕಿವಿಚಿದ್ಹಾಗೆ ಕಿವಿಚಿಬಿಟ್ಟು, ಕಂಕುಳಲ್ಲಿ ಹಾಕಿಕೊಂಡು, ಸುತ್ತು ಸುತ್ತುತ, ಎರಡ್ಮೂರು ಸಲ ತಿರುಗ್ಸಿ, ಬಿಸಾಕಿಬಿಟ್ಟ ನೆಲಕ್ಕೆ! ಹಾಗೇ ಬಿದ್ದಿದ್ದ Gotch, ಸತ್ಬೋದ ಕೋಳಿ ಹಾಗೆ. ಗಾಮು "ಶಹಬಾಸ್ ಬೇಟಾ!" ಅಂದ್ಬಿಟ್ಟ Buxನ. ನನ್ಸಂತೋ ಷಾಂತೂ ಹೇಳತೀರ್ದು . . . ಎರಡು ದಿವಸ ಆದ ಮೇಲೆ ಆಯ್ತು matchಉ, ಗಾಮುನಿಗೂ Zbyscoಗೂ, ಅದೇ Alhambraದಲ್ಲೇ . . . ಅಯ್ಯೋ! ಟೈಂ ಎಷ್ಟೋ? 8-30! ದೇವ್ರೇಗತಿ! ಬೇಗ್ಬೋದ್ರೇನೆ ಊಟ ನನಗೆ!" ಅಂದ್ರು ಕೈಲಾಸಂ.

ಕೈಲಾಸಂ ಇದೆಲ್ಲಾ ಹೇಳುತ್ತಿರುವಾಗ ನಮ್ಮಲ್ಲಿ ಒಬ್ಬರಿಗಾದರೂ ಮನೆಯ ಯೋಚನೆಯಾಗಲಿ ಊಟದ ಯೋಚನೆಯಾಗಲಿ ಬಂದಿರಲೇ ಇಲ್ಲ. ಹೇಗೆ ತಾನೆ ಬಂದೀತು, ಇಂಥ interesting subject ಇರುವಾಗ?

ನಮ್ಮಲ್ಲಿ ಒಬ್ಬಿಬ್ಬರು ಕೇಳಿಕೊಂಡೆವು: "ಹೇಳಿ, ಸಾರ್. ಹೇಳಿ, ಅದನ್ನೂವೆ!" ಅಂತ.

ಕೈಲಾಸಂ "ದೇವ್ರೇ ಗತಿ. Let us have it some other day." ಅಂತ ಎದ್ದೇಬಿಟ್ಟರು.

ಬಾಗಿಲು ದಾಟುತ್ತಾ ನನ್ನ ಹತ್ತಿರ ಹೇಳಿದರು: "ನೀನು notice ಮಾಡ್ಬೇಕು, Exercises ಮಾಡ್ಸೋವಾಗ, ಈ ಹುಡುಗ್ರು ಮುಖಗಳ್ನ; ಎಷ್ಟೊಂದು ವಕ್ರಮಾಡ್ಕೋತಾರೆ ಅಂತ! ಎಷ್ಟು strain ಮಾಡ್ತಾರೆ! ಮೈ ಯೇನೋ ಮಾರುತಿ ಹಾಗೆ ಆಗಬೇಕು, ನಿಜ; ಮೂತೀನೂ ಹಾಗೇ ಆಗ ಬೇಕೆ? ಮುಖಾನ ಏನೂ strain ಮಾಡ್ದೇನೆ ಮೈಯ musclesಅನ್ನ abuselesನ ಮಾತ್ರtrain ಮಾಡೋಕೆ ಕಲ್ತ್ಕೋಬೇಕು ಈ ಹುಡುಗ್ರು.

ಕೈಲಾಸಂ ಹೀಗೆ ಹೇಳುತಾ ಇನ್ನೊಂದು ಸಿಗರೆಟ್ ಹಚ್ಚಿ ಮುಂದೆ ನಡೆದರು. ನಾನೂ ಇನ್ನು ಕೆಲವರೂ ಅವರ ಜೊತೆಯಲ್ಲೇ ನಡೆದೆವು.

ನಮ್ಮಲ್ಲಿ ಕೆಲವರು ಕೇಳಿಕೊಂಡರು: "ಸಾರ್, ಹೇಳ್ಬಿಡಿ ಸಾರ್, ಗಾಮು-Zbysco match ಏನಾಯ್ತು ಅಂಬೋದನ್ನ. At least, results ಆದ್ರೂ ಹೇಳ್ಬಿಡಿ; Details ಬೇಕಾದ್ರೆ, ಇನ್ನೊಂದ್ ದಿವ್ಸ ಹೇಳೋವ್ರಂತೆ!"

ಕೈಲಾಸಂ: "Zbysco, ಕುಸ್ತಿ ಷುರುಆದ ಹತ್ತು ನಿಮಿಷಕ್ಕೆಲ್ಲಾ ನೆಲ ಕಚ್ಚಿದ. ಗಾಮು, ಆವತ್ತೆಲ್ಲಾ ಪ್ರಯತ್ನಪಟ್ಟ, ಆ man mountainನ ಹೊರಳಿಸೋಕೆ. ಊಹುಂ, ಸಾಧ್ಯವಾಗಲಿಲ್ಲ. ಮಾರನೆ ದಿನಾನೂ ನಡೀತು, ಆ matchoo. Zbysco ಗಾಮುನಿಗೆ ಬೆನ್ನ ಮೇಲೆ ಸವಾರಿಕೊಟ್ಟ, ಅರ್ಧ ಗಂಟೆ ಹೊತ್ತು ಅವತ್ತೂ ಪ್ರಯತ್ನಪಟ್ಟ, ಗಾಮು. ಕದಲಿಸೆದಲಿಸೋಕ್ಕಾಗ್ಲಿಲ್ಲ ಆ man-mountainನ. 'ಸಮ' ಅಂತ ಹೇಳ್ಬಿಟ್ಟ, referee. 'ಮೇಲಕ್ಕೆದ್ರೆ, ಏನ್ ಮಾಡಿಬಿಡ್ತಾನೋ ಗಾಮು' ಅಂತಾ, ಗಾಮು stageಇಂದ ಇಳಿದು ಹೋಗೋವರ್ಗೂ ನೆಲಬಿಟ್ಟು ಏಳಲೇ ಇಲ್ಲ, Zbysco. 'Shame! Shame!' ಅಂತ ನಾವೆಲ್ಲ ಕೂಗಿದ್ವಿ. Ahmad Buxಉ toe injureಆಗಿ, ten days hospitalನಲ್ಲಿ ಇದ್ದ. ಆಮೇಲೆ ಆ Indian wrestlers ಎಲ್ಲಾ 'try your toe-hold on me, Gotch! Try it on me!' ಅಂತ ಲೇವ್ಡಿ ಮಾಡಿದ್ರು. That was his end!"

ಹೀಗೇ ಮಾತಾಡುತ್ತ ಆಡುತ್ತ ಮಿಂಟೋ ಕಣ್ಣಾಸ್ಪತ್ರೆಯ ಹತ್ತಿರ ಬಂದೆವು. ಅದರ ಎದುರಿಗೇ ಕೈಲಾಸಂ ಇದ್ದ ಮನೆ: White House. ಆಗ ಅದರ ಹತ್ತಿರದಲ್ಲಿಯೇ ನನ್ನ ಮನೆಯೂ ಇತ್ತು. ಬಸವನಗುಡಿ ಕಡೆ ಹುಡುಗರೂ, ಚಾಮರಾಜಪೇಟೆ ಶಂಕರಪುರಗಳ ಹುಡುಗರೂ ಅವರವರ ಮನೆ ಕಡೆಗೆ ಹೊರಟುಹೋದರು.

ನಾನು ಕೈಲಾಸಂ ಅವರ ಮನೆಯ gate ವರೆಗೂ ಹೋಗಿ, "ನಮಸ್ಕಾರ ಸರ್. What an inspiring talk! Thanks. ಪುರಸತ್ತು ಆದಾಗ ಬನ್ನಿ." ಎಂದೆ.

ಕೈಲಾಸಂ: "ಸ್ವಲ್ಪಿರು, ಮಗು. See me finish this cigarette, What is your name ?"

ನಾನು : " K. V. Iyer. Short for Kolar Venkatesh Iyer."

ಕೈಲಾಸಂ: "ಹೋ! ದೇವರಾಯಸಮುದ್ರ! ಅಷ್ಟಗ್ರಾಮದೋರೋ! I see! ಅದೇ, ಮುತ್ಯಾಲಗಟ್ಟು ಇದೆಲ್ಲಾ ಪರಿಚಯ ನಿನಗೆ! ಸರಿ, ಸರಿ!" ಎಂದು ಸೇದುತ್ತಿದ್ದ ಸಿಗರೇಟನ್ನು ಮರೆಮಾಡಿಕೊಂಡು, "ನನ್ನ ಜನಕ. . . ಅಮ್ಲ ಜನಕ! ಸುಲಭವಾಗಿ ರೇಗುವವರು you know. . perhaps you don't know . . . ಒಂದೊಂದ್ಸರ್ತಿ ಮಹಡೀಮೇಲಿನ ಕಿಟಿಕೀಲಿ ನಿಂತ್ಕೊಂಡು ನೋಡ್ತಿರ್ತಾರೆ. ಅವರೆದುರ್ಗೆ ನಾನು smol ಏಊ ಮಾಡೋದಿಲ್ಲ." ಅಂದರು.

ನಾನು: "ನಿಮ್ಮ fatherನ ನೋಡಿದ್ದೇನೆ ಸಾರ್, ಎಷ್ಟೋ ಸಾರಿ. Always dresses in white. ತಲೆಗೆ ಒಂದು white cap. Rain ಆಗ್ಲಿ shine ಆಗ್ಲಿ, ಒಂದು umbrellaನ ಹೆಗಲ್ಗೇರಿಸ್ಕೊಂಡು, ಬೆಳಗ್ಗೆ ಸಂಜೆ ಇದೇದಾರೀಲಿ regular walks ತಗೋತಾರೆ. ನೋಡಿದೇನೆ. ಯಾರೋ ಹೇಳಿದ್ರು—ಇವರೇ ಕೈಲಾಸಂ fatherಊ ಅಂತ."

ಕೈಲಾಸಂ: "Just that! Why don't they say: 'This is Justice, Paramasiva Iyer and Kailasam is his son?' ಈ ಕಾಲ್ವೇ ಹೀಗೆ: ಮಗನಿಂದ ಅಪ್ಪನ ಹೆಸರು ಮುಂದಕ್ ಬರಬೇಕು! ಎಲ್ಲಾದ್ರೂ ಒಂದೊಂದ್ ಸಲ ಕೆಳಕ್ಕಿಳಿದು ಬರ್ತಾರೆ: but usually he does not come down at all except for his walks. ಆದ್ರೂ, ಒಂದೊಂದ್ವೇಳೆ, ಅಕಸ್ಮಾತ್ತಾಗಿ ಬಂದ್ಬಿಡ್ತಾರೆ. . . . Light ಇಲ್ಲ, ಮಹಡೀಲಿ. He Must have gone to bed. Stroke of 8-30, he goes to bed, and wakes

up at five in the morning. Very very methodical. I am just the opposite of it. Temperamentally too, different."

ನನಗೆ ಏನು ಹೇಳುವುದಕ್ಕೂ ತೋಚಲಿಲ್ಲ. ಆ ಮನೆಯ ಗೇಟಿನ ಎರಡು ಕಡೆಯಲ್ಲೂ ಒಂದು ಅಪೂರ್ವವಾದ ಹೂವಿನ ಗಿಡ ದೊಡ್ಡದಾಗಿ ಬೆಳೆದಿತ್ತು. ಹೂವು ಸಂಪಗೆಯಂತೆ ಉದ್ದವಾಗಿ ಬೆಳ್ಳಗೆ ಇತ್ತು. ಒಳ್ಳೇ ಪರಿಮಳ. ದೊಡ್ಡ ದೊಡ್ಡ ಎಲೆಗಳು. ಅದನ್ನು ನೋಡುತ್ತ ನಿಂತೆ.

ಕೈಲಾಸಂ ಅದನ್ನು ಕಂಡು, ಕೈಗೆ ಎಟಕುತ್ತಿದ್ದ ಒಂದು ಹೂವನ್ನು ಕಿತ್ತು ನನ್ನ ಕೈಗೆ ಕೊಟ್ಟು, "Smell it. Wonderful, isn't it! Makes a lily look silly! ಅಲ್ವೆ? ಕರ್ಣಿಕಾರ, ಮಗು, ಇದರ ಹೆಸ್ರು. . . . ಅಗೋ, ಆ ಗೇಟಿನ ಪಕ್ಕದಲ್ಲಿ, ಅದೇನು ಗಿಡ, ಗೊತ್ತೆ?" ಎಂದರು.

ನಾನು: "ಗೊತ್ತು, ಸರ್. ಕಂಚುವಾಳ ಅಂತಾರೆ ಅದನ್ನ. Heart-shaped leaves."

ಕೈಲಾಸಂ: "Yes, double heartಉ. ಅದರ ಹೆಸರು—ಕೋವಿದಾರ. ಶ್ರೀರಾಮನ ಧ್ವಜದ ಮೇಲೆ ಆ ಹೂವಿನ ಅಂಕಿತ ಇತ್ತು . . . . Come in Venkatesh. ಏನೂ ಅವಸರವಿಲ್ಲಾ ತಾನೆ?"

ನಾನು: "ಏನೂ ಅಂಥ ಅವಸರವೇನೂ ಇಲ್ಲ. ಎಲ್ಲಿಗೂ ಹೋಗ್ಬೇಕಾದ್ದಿಲ್ಲ. ಅದೋ, ಅಲ್ಲಿ ಆ next turnನಲ್ಲಿ right sideಗೆ third house, ನನ್ನ ಮನೆ. ಮನೆಗೆ ಹೋಗಿ, ಊಟಮಾಡಿ, ಮಲಗೋದೆ."

ಕೈಲಾಸಂ "Come on, then" ಎನ್ನುತ್ತಾ, gate ತೆರೆದು, ನನ್ನನ್ನು ಒಳಕ್ಕೆ ನಡೆಯಿಸಿ, ಗೇಟ್ ಮುಚ್ಚಿ, ಮುಂದೆ ಮನೆಯೊಳಕ್ಕೆ ನಡೆದರು. ಮಂಕುಬೂದಿ ಚೆಲ್ಲಿಸಿಕೊಂಡವನಂತೆ ನಾನು ಹಿಂದೆ ನಡೆದೆ.

ಕೈಲಾಸಂ ಒಳಗೆ ಒಂದು ಅಪೂರ್ವವಾದ ಹೂವನ್ನು ಗಿಡದ ಬುಡದಿಂದ ಕಿತ್ತು, ನನ್ನ ಕೈಲಿಟ್ಟು "Smell that" ಅಂದರು. ನಾನು ಮೂಸಿ ನೋಡಿದೆ. ಬಹಳ ಪರಿಮಳಯುಕ್ತವಾಗಿತ್ತು ಹೂವು. ಒಳಗಡೆ ಕೆಂಪು ಬಣ್ಣ, ಅಗಲವಾದ ಒಂದು ಪರಾಗಕುಂಚ, ಮೇಲೆ ಬಗ್ಗಿ ಹೂವಿನ ನಡುವಿನ ಕಸುರನ್ನು ಮುಚ್ಚಿತ್ತು. ಕೈಲಾಸಂ ಹೇಳಿದರು: "ಇದನ್ನ ನಾಗಲಿಂಗ ಅಂತ ಕರೀತಾರೆ ಇಲ್ಲಿ. ಇದೇ ಹಾವಿನ ಹೆಡೆ, ಒಳಗಡೆ ಇದೆಯಲ್ಲ ಕುಸುರಿ, ಅದು

ಲಿಂಗ, ಹೂವು ಗಿಡದ ಮೇಲುಗಡೆ ಬಿಡೋದಿಲ್ಲ, ಕೆಳಗಡೇನೆ ಬಿಡುತ್ತೆ. ಆಯ್ತೆ! ಈ ಕಡೆ ಬಾ, ಮೆಲ್ಲಗೆ, noiselessly. ಇದು ನೋಡು, ಈ ದೊಡ್ ಗಿಡ, ಇನ್ನು 10 or 15 daysನಲ್ಲಿ ತುಂಬ ಹೂ ಬಿಡುತ್ತೆ. ದುಂಬಿಗಳ ಹಿಂಡು ಹಿಂಡೇ ಈ ಗಿಡದಲ್ಲಿರುತ್ತೆ."

ನಾನು: "ಏನ್ಸಾರ್, ಈ ಗಿಡ . . . ?"

ಕೈಲಾಸಂ: "ರುದ್ರಾಕ್ಷಿ, Venkatesh. Himalayasನಿಂದ ತರಿಸಿದ್ರು fatherಉ."

ನಾನು: "How wonderful! ಹಾಗಾದ್ರೆ, ರುದ್ರಾಕ್ಷಿ ಬಿಡುತ್ತೇ ಸಾರ್, ಇದರಲ್ಲಿ?"

ಕೈಲಾಸಂ: "Plenty, plenty. ಆದ್ರೆ, ಯಾರು ಹಣ್ಣು ಬಿಡಿಸಿ ಬೀಜ ತೊಳದು ತೂತುಮಾಡ್ತಾ ಕೂತ್ಕೊಳ್ತಾರೆ? Look here: ನನ್ನ ಕುತ್ಗೇಲಿ ರೋದು . . . (ಚಿನ್ನದ ಕಟ್ಟಿನಿಂದ ಬಿಗಿದಿದ್ದ ದಪ್ಪ ರುದ್ರಾಕ್ಷಿಯೊಂದು ಆಗ ಅವರ ಕುತ್ತಿಗೆಯಲ್ಲಿತ್ತು.) . . . . this is a ಷಣ್ಮುಖಿ. There is ಏಕ ಮುಖಿ, ದ್ವಿಮುಖಿ, ತ್ರಿಮುಖಿ, ಚತುರ್ಮುಖಿ, ಪಂಚಮುಖಿ, and ಷಣ್ಮುಖಿ . . . . upto ದ್ವಾದಶಮುಖಿ. Usually it is all ಪಂಚಮುಖೀs. ಷಣ್ಮುಖಿ is rare. What I have here is ಷಣ್ಮುಖಿ, Lord ಸುಬ್ರಹ್ಮಣ್ಯ. ರುದ್ರಾಕ್ಷಿ ಇದೆಯಲ್ಲಾ—ಇದು Radio-active, ಮಗು. These trees grow up to a tremendous height in the Himalayas terrain. Lightning never strikes this tree. ಇದರ ಪಕ್ಕದಲ್ಲಿರೋ short treeಗೆ ಹೊಡೆದಿರುತ್ತೆ, but ಈ treeನ ಮುಟ್ಟೋದಿಲ್ಲ. ಸರಿಯಾಗಿ form ಆಗಿರೋ ಏಕಮುಖಿ ರುದ್ರಾಕ್ಷೀನ two silver coinsನ ನಡುವೆ balance ಮಾಡಿ ಹಿಡಿದ್ರೆ, it revolves rapidly, round and round; And it must also be Bacteriastatಓ Bacteriafugeಓ ಏನೋ ಇರ್ಬೇಕು. ಕಾಲರಾ, ಸನ್ನಿಪಾತ ಇವುಗಳಲ್ಲಿ, ವೈದ್ಯರು ಶುಭ್ರ ವಾಗಿರೋ ರುದ್ರಾಕ್ಷೀನ, ಅದಕ್ಕೇಂತಲೇ ಇಟ್ಟಿರೋ ರುದ್ರಾಕ್ಷೀನ, ನೀರಿನಲ್ಲಿ ಹಾಕಿ ಕುದಿಸಿ, ಆ ನೀರನ್ನ ಕುಡಿಯೋಕೆ ಕೊಡತಾರೆ ರೋಗಿಗೆ, ಬಹಳ ಛಾಯಾರಿಕೆ ಅಂಥಾಗ . . . . ಆಯ್ತೆ, ಇದ್ನೋಡು ಈ ಗಿಡ: ಈ ಹಣ್ಣು

. . . (ಒಂದು ನೆಲ್ಲಿಕಾಯಷ್ಟು ದಪ್ಪ, ಮೇಲೆ ಒರಟಾದ ಮೊನೆಮುರಿದ ಮುಳ್ಳುಗಳಂತಿದ್ದ ಸಿಪ್ಪೆಯನ್ನು ಬಿಡಿಸಿ, ತಾಟಿನುಂಗು ಇದ್ದ ಹಾಗೆಯೇ ಇದ್ದ ಒಳಗಿನ ತಿರುಳುಹಣ್ಣನ್ನು ನನ್ನ ಕೈಗೆ ಕೊಟ್ಟು,) ತಿಂದು ನೋಡು, how very sweet it is! (Lichi) ಒಳಗಡೆ ದಪ್ಪ ಬೀಜ ಇರುತ್ತೆ. ಅದನ್ನ compoundನಿಂದ ಹೊರಗೆ ಉಗಿದುಬಿಡು. ಇಲ್ಲೆಲ್ಲಾದ್ರೂ ಹಾಕೀಯೆ! ನಮ್ಮಪ್ಪನ ಕಣ್ಣಿಗೆ ಏನಾದ್ರೂ ಬಿತ್ತೋ ಆ ಬೀಜ. . . 'ಯಾರು ಹಣ್ಣು ಕಿತ್ತು ತಿಂದಿದ್ದಾರೆ?' ಅಂತ ದೊಡ್ಡ ಪಂಚಾಯ್ತಿ ಮಾಡಿಬಿಡ್ತಾರೆ. He knows the exact number of fruits and buds in this tree, and how many Nagalinga flowers have bloomed this afternoon. In short, he is very particular about all the plants, trees, flowers and fruits in his garden."

ಕೈಲಾಸಂ ಇದನ್ನೆಲ್ಲಾ ಹೇಳುತ ಇರೊವಾಗ, "ಸಂದರ್ಭ ಹೀಗಿರುವಾಗ, ರಾತ್ರಿ ಇಷ್ಟು ಹೊತ್ನಲ್ಲಿ ನಾವು ಯಾಕೆ ಕಳ್ಳರ ಹಾಗೆ ಇವರ ತೋಟದಲ್ಲಿ ಅಲೆದಾಡಬೇಕು? ಕೈಲಾಸಂ ಈ ಹಣ್ಣುಗಳನ್ನ, ಈ ಹೂವುಗಳನ್ನ ಯಾಕೆ ಕಿತ್ತು ನನ್ನ ಕೈಲಿಡಬೇಕು?" ಎನ್ನಿಸಿತು ನನಗೆ.

"Mr. Kailasam, ನಾನಿನ್ನು ಮನೆಗೆ ಹೋಗ್ತೇನೆ." ಎಂದೆ.

"Come on, dear boy! ಮನೇಗ್ ಹೋಗಿ ಏನ್‌ಮಾಡ್ತಿ? ಊಟ ಮಾಡಿ, ನಿದ್ದೆ ಮಾಡ್ತೀಯ ತಾನೆ! Eat with me, Give me company." ಅಂದರು.

"ಆಗೋದಿಲ್ಲ" ಎನ್ನಲಾಗಲಿಲ್ಲ ನನಗೆ. ಮನೆಯೊಳಕ್ಕೆ ಹೋದೆವು. ಕೈಲಾಸಂ ನನ್ನ 'walk softly' ಅಂದ್ರು. ನನಗೆ ಅದು ಹೊಸಸ್ಥಳ. ಮೆಟ್ಲು ಎಲ್ಲಿದೆ? ಬಾಗಿಲು ಎಲ್ಲಿದೆ? ಎಲ್ಲಿಗೆ ಯಾವುದು ದಾರಿ? ಇದು ಒಂದೂ ತಿಳಿಯದೆ ಇದ್ದ ಅವರ ಮನೆಯಲ್ಲಿ ನಾನು ಬಹು ನಿಧಾನವಾಗಿ, ಕಾಲಿಗೆ ಮೆಟ್ಟಿಕೊಂಡಿದ್ದ ಕೆರವನ್ನ ಹೊರಗಡೆಯೇ ಬಿಟ್ಟು, ಬರಿಗಾಲಿನಲ್ಲಿ ಉಂಗುಟಗಳನ್ನು ಮಾತ್ರ ಊರಿಕೊಂಡು ನಡೆಯುತ್ತಿದ್ದರೂ ಮೇಲಿಂದ ಮೇಲೆ 'Softly' ಎಂದು ಹೇಳುತ್ತಿದ್ದುದು ನನಗೆ ಬಹಳ ಆಶ್ಚರ್ಯವಾಗಿ ಕಂಡಿತು. ಹೊರಗೆ ಬಚ್ಚಲಿನ ಬಳಿ ಕಾಲು ತೊಳೆದುಕೊಂಡೆವು. ನಾನು 'ನೀರು ಚೆಲ್ಲಿದರೆ ಏನು

ಶಬ್ದವಾಗುತ್ತೊ! ಬಾಯಿ ಮುಕ್ಕುಳಿಸಿದರೆ ಎಷ್ಟು ಶಬ್ದವಾಗುತ್ತೊ!' ಎಂದು ಬಹು ಭಯದಿಂದ ಕೈಕಾಲು ತೊಳೆದುಕೊಂಡು, ಕೈಲಾಸಂ ಜೊತೆಯಲ್ಲಿಯೇ ಅಡಿಗೆಯ ಮನೆಗೆ ಸೇರಿದಂತಿದ್ದ ಊಟದ ಮನೆಯೊಳಕ್ಕೆ ಹೋದೆ.

ಸುಮಾರು ಹತ್ತು ಹದಿನೈದು ಜನ ಕುಳಿತು ಊಟಮಾಡುವಷ್ಟು ವಿಶಾಲ ವಾಗಿತ್ತು, ಆ ಊಟದ ಮನೆ. ಒಂದು ಕಡೆ ಪೂರ್ವಾಭಿಮುಖವಾಗಿ ಗೋಡೆಯ ಮೇಲೆಯೇ ಬರೆಸಿದ್ದ ಒಂದು ಮಹಾಲಕ್ಷ್ಮಿಯ ತೈಲಚಿತ್ರ, ಹೆಚ್ಚುಕಡಮೆ ಮನುಷ್ಯಾಕಾರದಷ್ಟು. ದಳದಳ ಬಿಡಿಸಿದ ತಾವರೆಹೂ, ಅದರಲ್ಲಿ ಪದ್ಮಾಸನಸ್ಥೆ ಯಾಗಿ ಲಕ್ಷ್ಮಿ ಕುಳಿತಿದ್ದಾಳೆ. ಚತುರ್ಭುಜ: ಹಿಂದಿನ ಎರಡು ಕೈಗಳಲ್ಲೂ ಸುಖ ಆರೋಗ್ಯ ಅಂಕಿತಗಳಾದ ತಾವರೆಮೊಗ್ಗುಗಳು; ಮುಂದಿನ ಎಡಗೈಯಲ್ಲಿ ಭಾಗ್ಯಾಂಕಿತವಾದ ಸುವರ್ಣಕಲಶ, ಬಲಗೈ ವರಪ್ರದಾನದ ಅಭಯಹಸ್ತ.

ಕೈಲಾಸಂ ಹೇಳಿದರು: "ನೋಡು, ವೆಂಕಟೇಶ್! ಲಕ್ಷ್ಮಿಯಂತೆ! ಬಲಗೈ ನೋಡು, ಧನರೇಖೇನೆ absentoo!"

ನಾನು: "ಬರೆದವನಿಗೆ ಅದು ಗೊತ್ತಿತ್ತೋ ಇಲ್ವೋ? ಧನರೇಖೆ ಎಂದರೆ line of fortuneಎ? ಆದ್ರೆ, ಹೆಂಗಸರಿಗೆ ಸಾಮುದ್ರಿಕ ನೋಡೋದು ಎಡಗೈಲಲ್ವೇ, ಸಾರ್?"

ಕೈಲಾಸಂ: "Is it? ಅದೇನೋ ನನಗ್ಗೊತ್ತಿಲ್ಲ. ಯೇಕೆ? ಮುಸುರೆ ತಿಕ್ಕೀತಿಕ್ಕೀ artificial lines ಎಷ್ಟೋ formಆಗಿರುತ್ತೆ ..ಅದರಲ್ಲಿ true ಯಾವುದು? false ಯಾವುದು? ಅಂತ ತಿಳಿಯೋದಿಲ್ಲಾಂತ ತಾನೆ?"

ಇಷ್ಟು ಹೇಳಿ, ಕೈಲಾಸಂ ತಮ್ಮ ನಾಲಿಗೆಯಿಂದ ದೊಡ್ಡದಾಗಿ 'ಕ್ಲಿಕ್' ಶಬ್ದ ಮಾಡಿದರು. ಅಡಿಗೆಮನೆಯೊಳಗಿಂದ "ವಂದೇಂ" ಎಂದು ಗಂಡಸಿನ ಧ್ವನಿಯೊಂದು ಬಿರುಸಾಗಿ ಕೇಳಿಬಂತು. ಒಂದು ನಿಮಿಷದಲ್ಲಿ ಯುವಕನೊಬ್ಬ ಅಡಿಗೆಮನೆಯಿಂದ ಬಂದ. ಇಪ್ಪತ್ತು ವಯಸ್ಸಿಗೆ ಮೇಲಿರಬಹುದು, ಸುಮಾರು ಐದುವರೆ ಅಡಿ ಎತ್ತರ, ನನ್ನ ಹಾಗೇ ಕಪ್ಪುಬಣ್ಣ, ಸ್ವಲ್ಪ ಉಬ್ಬುಹಲ್ಲು, ತಲೆ ಯಲ್ಲಿ ಕ್ರಾಪು, ದಟ್ಟಿ ಸುತ್ತಿದ್ದ-ಪಂಚೆ, ಅರ್ಧ ತೋಳಿನ ಬನೀನು, ಉದ್ದನೆಯ ಕೈಕಾಲು, ಗಾತ್ರ ಕೊಂಚ ತೆಳುವೆಂದೇ ಹೇಳಬಹುದು. ಕೈಯಲ್ಲಿ ಒಂದು **Ovaltine** ಡಬ್ಬ.

ಕೈಲಾಸಂ, ನಮಗೆ ಪರಸ್ಪರ ಪರಿಚಯಮಾಡಿಸಿಕೊಡುತ್ತ, "This is Krishna! This is Venkatesh!" ಅಂದರು. ನಾನು ಆತನನ್ನು ನೋಡಿ "ನಮಸ್ಕಾರಂ" ಅಂದೆ. ಆತ "ನಮಸ್ಕಾರಂ! ನಮಸ್ಕಾರಂ!" ಎಂದು ಎರಡಾವರ್ತಿ ಉಚ್ಚರಿಸಿದ. "ತೆರಿಯುಮೋ! K. V. Iyer. Famous physical culturist. ರೆಂಡು ವಿಶಿ ಅವಾ showವೂಂ ಪಾರ್ತಿರ್ಕೆಂ" ಅಂದ, ಬಹು ಗಟ್ಟಿ ಧ್ವನಿಯಲ್ಲಿ.

ಕೈಲಾಸಂ: "ಕೃಷ್ಣಾ! ಮೆದುವ್ವಾ ಪೇಶಡಾ. ಅಪ್ಪಾ, ಇದೆನ್ನ ಶಂಡೇನ್ನಿ ಕೇಳಿ ಎರಂಗಿ ವರಪೋರಾರ್ರಾ!"

ಕೃಷ್ಣ: (ಧ್ವನಿಯನ್ನು ತಗ್ಗಿಸದೆ?) "ಅಪ್ಪಾಕ್ ಎಂಗೆ ಕೇಳ್ಕುಂ? ಕಿಟ್ಟೆ ಇರಂದೆ ಕತ್ತಿನಾಲೇ ಕೇಳ್ವರಿದಿಲ್ಲೆ!"

ಕೈಲಾಸಂ: (ತಮ್ಮ ತಂದೆಯ ಕಿವಿ ಬಹು ಸೂಕ್ಷ್ಮ ಎಂದು ನನ್ನ ಹತ್ತಿರ ಹೇಳಿದ್ದನ್ನ ಸಮರ್ಥಿಸುವುದಕ್ಕೋ ಏನೋ!)"ಅಪ್ಪಡಿ ಅಲ್ಲೇ, ಕೃಷ್ಣಾ! ಅಪ್ಪಾ ante-room ಇಲ್ಲೆಯಾ, ಅದು bath-roomಕ್ಕು connected ಆಯಿ, ಅಂದ್ ರೂಮ್ಲೆ even a small noise gets multiplied like an amplifier! ಅದಕ್ಕು ದಾನ್, ನಿದಾನಮಾ ಪೇಶಡಾ. ಎಂಗೆ, ರೆಂಡ್ ಎಲೆ ಪೋಡು. ಐಯರುಂ ಇಂಗೆಯೇ ಶಾಪಡ್ರಾರ್ರಾ!"

ಕೃಷ್ಣ: (ನನ್ನನ್ನು ಕುರಿತು,) "ಹರಿಃ, ಒಕ್ಕಾಂದ್ಗುಂಗೋ...."

ಆಗ ನನಗೆ ತಿಳಿಯಿತು, ಕೈಲಾಸಂ ತಂದೆಗೆ ಕಿವಿ ಮಂದವೆಂದು. ಆದ್ರೆ ಕೈಲಾಸಂ "ಮೆಲ್ಲಗೆ ಬಾ, ಸದ್ದು ಮಾಡದೆ ಬಾ" ಎಂದು ಏಕೆ ಹಾಗೆ ಹೇಳಿದರು ಎಂಬುದು ನನಗೆ ಈವತ್ತಿನವರೆಗೂ ಅರ್ಥವಾಗಿಲ್ಲ. ಹೋಗಲಿ.

ಅಡಿಗೆ ಚೆನ್ನಾಗಿತ್ತು. ನನಗೂ ಹಸಿವೂ ಆಗಿತ್ತು. ಪಲ್ಯ ಬಡಿಸಿ, ಚಟ್ಣೆ ಬಡಿಸಿ, ಅನ್ನ ಬಡಿಸಿ ಆಯಿತು. ತುಪ್ಪ ಬಂತು. ತುಪ್ಪ, ಹಾಲು, ಬೆಣ್ಣೆ ಎಂದರೆ ನನಗೆ ತ್ಯಾಜ್ಯವಸ್ತುಗಳು. They are only for rich ಎಂದು ಅವುಗಳ ಮೇಲೆ ಒಂದು prejudice ನನಗೆ.

"ತುಪ್ಪಬೇಡ" ಎಂದೆ, ನಾನು.

"ಯಾಕೆ? ಗಬ್ಬು ತುಪ್ಪಾಂತಲೇ? ಮನೇಲೇ ಬೆಣ್ಣೆ ತರಿಸಿ ಕಾಸಿದ್ದು, ಮಗು. ಹಾಕಿಸ್ಕೊ!" ಅಂದರು, ಕೈಲಾಸಂ.

"ಎಂಥಾದಾದ್ರೂ ಬೇಡ, ಸಾರ್. ಸಾರಿನ ರುಚೀನೇ ಮುರಿದುಬಿಡುತ್ತೆ, ತುಪ್ಪ!" ಎಂದೆ, ನಾನು.

ಕೈಲಾಸಂ ಬಲಗೈ ಶಾರೆ ತುಂಬ ತುಪ್ಪ ಹಾಕಿಸಿಕೊಂಡು, ಸಾರು ಅನ್ನ ದಲ್ಲಿ ಕಲಸಿದರು. ಒಂದು ತುತ್ತು ತಿಂದರೋ ಇಲ್ಲವೊ, ಮೊದಲುಮಾಡಿದರು ಮಾತನಾಡುವುದಕ್ಕೆ.

"ಏ ಕೃಷ್ಣಾ! ಇವರ್ institute ನೀ ಪಾರ್ತ್ತಿಕ್ಕ್ಯಾ, ಟಿಪ್ಪೂಸುಲ್ತಾನ್ palaceಲೆ?"

ಕೃಷ್ಣ: "ಓ, ಪಾರ್ತಿರ್ಕೆಂ. ಇರಂಗೋ. ಇವ Siki, Kannan ಎಲ್ಲಾರ್‍ಯೂಂ ಒರ್ challenge . . . weight-lifting, boxing, running, swimming, ಎಲ್ಲಾತ್ಲೇಯುೂಂ. . .Cycle race ಕೂಡಾ. . . ವರಟ್ಟೊಂ, ಕೆಂಪಾಂಬುಧಿ three rounds. . .guts ಇರಂದಾ!"

ಕೈಲಾಸಂ: "ಡೇ, ಕೃಷ್ಣಾ! ಎನ್ bed ಕಿಟ್ಟೇ ವೆಚ್ಚಿರಂದೇನೇ—Shaw's play. . ಎಂಗೆಡಾ ಅಂದ್ ಬುಕ್ಕ್? missing?"

ಕೃಷ್ಣ: "ಅದ್, ಎನ್ ಕಿಟ್ಟೆ ಇರಕ್ಕಿರದು. Man and Super-man ಪಡಿಚ್ಚಿಕೊಂಡಿರ್‍ಕ್ಕೇಂ!"

ನನಗೆ ಆಶ್ಚರ್ಯವಾಯಿತು. ಎಲಾ! ಈ ಕೃಷ್ಣ, ಇವರ ಮನೆಯ ಅಡಿಗೆಯವ, athleticsನಲ್ಲಿ sportsನಲ್ಲಿ challenge ಮಾಡ್ತಾನೆ! Bernard Shaw's 'Man and Supper-man' ಓದುತಾನೆ! ಇದೇನಾಶ್ಚರ್ಯ! ಎನ್ನಿಸಿತು.

ಕೈಲಾಸಂ, ನನ್ನ ಕುರಿತು "ಮಗು, Lady Windermere's fan ಓದಿದ್ದೀಯಾ?" ಎಂದು ಕೇಳಿದರು.

"ಇಲ್ಲ, ಸಾರ್. ಓದಿಯೂ ಇಲ್ಲ, ಕೇಳಿಯೂ ಇಲ್ಲ."

"Oh! Goodness! ನೀನು ಏನೂ ಓದೋದೇ ಇಲ್ವೇ?"

"ಎಲ್ಲಿ ಸರ್? ನನಗೆ ಪುರುಸೊತ್ತೇ ಆಗೋದಿಲ್ಲ. ಏನಾದರೂ ಓದಿದರೆ, Physical Culture books ಓದ್ತೇನೆ."

ಆಗ ಕೈಲಾಸಂ ಹೇಳಿದರು:

"Venkatesh, listen to me. ಹಾಳಾಗ್ಹೋಯ್ತು. Promise yourself never to go to sleep without reading at least

for a couple of hours any good literature . . . Ibsen, Tolstoy, Shaw, Shakespeare, Shelley, Byron, Keats, Wilde . . . any good literature ಏನು ಮಗು, ಏನೂ ಓದ್ಹೋದಿಲ್ವೆ ನೀನು? ಬರೀ exercise ಮಾಡಿ muscles ಬೆಳಸ್ತಿದೀಯಾ? Brainಉ ಬೆಳೀಲಿ, ಮಗೂ. ಬರೀ ಎಮಕೆ ಗಾಂಧೀನೂ ಬೇಡ, ಪೈಲ್ವಾನ್ ಪಿಳ್ಳಪ್ಪಾನೂ ಬೇಡ, ಸಾವ್‌ಕಾರ್ ಬುಳ್ಳಪ್ಪಾನೂ ಬೇಡ. You have a fore-head like Hall-Caine's. ಓದು, ಮಗು. Else, you will be sorry for it when you get old. Life becomes miserable and unbearable. Physical culturists ಅಂದ್ರೆ—ಮೊದ್ಲೇ ಎಲ್ಲಾರೂ 'all brawn and no brains' ಅಂತಿದಾರೆ . . . ಅದನ್ನ ನಿನ್ನಂಥವ್ರು disprove ಮಾಡಬೇಕು. Brawn and brain can go together ಅಂಬೋದನ್ನ prove ಮಾಡಿ ತೋರಿಸ್ಬೇಕು ಪ್ರಪಂಚಕ್ಕೆ."

ಕೈಲಾಸಂ ಈ ಮಾತು ಹೇಳುತ್ತಿರುವಾಗ ನನಗೆ ಬಹು ನಾಚಿಕೆಯಾಯಿತು. ಬಾಯಲ್ಲಿದ್ದ ಅನ್ನ ಗಂಟಲೊಳಕ್ಕೆ ಇಳಿಯದೆಹೋಯಿತು. "ಕೈಲಾಸಂ ಅಂಥ ಮಹಾನುಭಾವರ ಪರಿಚಯ ಆದದ್ದು ಒಂದು ಮಹಾ ಪುಣ್ಯ. ಇವರು ಹೇಳಿದಂತೆ ನಾನು ಬುದ್ಧಿಯನ್ನು ಬೆಳೆಸಬೇಕು" ಎಂದು ಆಗಲೇ ಸಂಕಲ್ಪ ಮಾಡಿಬಿಟ್ಟೆ. 'ಈ ಸಂಕಲ್ಪದಿಂದ ವಿಮುಖನಾದರೆ, ಈ ಅನ್ನದ ಆಣೆ!' ಎಂದು ಮನಸ್ಸಿನಲ್ಲಿಯೇ ಎಂದುಕೊಂಡೆ. ಕೃಷ್ಣ ನನ್ನು ನೋಡಿ ನನಗೆ ನಾಚಿಕೆಯಾಯಿತು. "Man and Superman ಓದಿ ಅರ್ಥಮಾಡಿಕೊಳ್ಳುವ ಯೋಗ್ಯತೆ ಇರುವ ಇವನು ಇವರ ಮನೆಯಲ್ಲಿ ಅಡುಗೆಯ ಕೆಲಸಕ್ಕೆ ಏಕೆ ಬಂದ?" ಎಂದು ಆಶ್ಚರ್ಯವಾಯಿತು. "ಇವನಿಗಿಂತ ಕೀಳಾದೆನೇ ನಾನು!" ಎಂದು ನಾಚಿಕೆಯಾಯಿತು. ಹಸಿವಿದ್ದರೂ ಅನ್ನ ಹೊಟ್ಟೆಗೆ ಹೋಗದೆ ಹೋಯಿತು.

ಹೀಗೆ ನಾನು ಮನಸ್ಸಿನಲ್ಲಿ ಕೊರಗುತ್ತಿದ್ದುದು ಕೈಲಾಸಂ ಅವರಿಗೆ ಹೇಗೆ ಗೊತ್ತಾಯಿತೋ ಏನೋ, ಅವರು ಹೇಳಿದರು: "Year before last, this Krishna could not read a Newspaper. Pick up ಮಾಡಿಕೊಂಡ್ಬಿಟ್ಟ. Now he can read and appreciate good things."

ನಾನು: "ಏನ್ ಸಾರ್, ನೀವ್ ಹೇಳೋದು! few yearsನಲ್ಲಿ ಹ್ಯಾಗ್ಸಾರ್ ಇಷ್ಟು pick-up ಮಾಡಿಕೊಳ್ಳೋಕಾಗುತ್ತೆ? Entrance Examination standard ಬರೋಕೆ ಹತ್ತುಹದಿನಾಲ್ಕು ವರ್ಷ ಬೇಕಲ್ವೆ ಸಾರ್, Primary standardನಿಂದ?"

ಕೈಲಾಸಂ: "ಹುಂ. ಅಲ್ಲಿ brainsನ broil ಮಾಡಿಸ್ತಾರಲ್ಲಾ. . . ಅದಕ್ಕೆ ಬೇಕು. But, when one is serious has, application and concentration, ಬಹು ಬೇಗ ಕಲೀಬಹುದು. Moreover, ಮರೀ ಬೇಡ, this is a person already twenty-two. Observation powerಉ, understanding capacity ಇದೆ. ಅಲ್ದೆ, ಇವನಿಗೆ newspapersಉ magazinesಉ ಓದೋದಕ್ಕೆ ಸ್ವಲ್ಪ ಸ್ವಲ್ಪ ಬರ್ತಿತ್ತು. ನಾನು ಕೆಲವು bookಉಗಳ್ನ ಓದಿ ತೋರಿಸಿದ್ಮೇಲೆ, ಅವನಿಗೇ ಚಪಲ ಹತ್ತಿಬಿಡ್ತು, ತಾನೇ ಓದ್ಕೊಂಡು ಅರ್ಥ ಮಾಡ್ಕೋಬೇಕೂಂತ."

ಕೃಷ್ಣ ಬಂದು, ಅನ್ನ ಬಡಿಸಿ, ಹೋದ. ಕೈಲಾಸಂ ಅಷ್ಟೆಲ್ಲಾ ಅನ್ನ ಸಾರಿನಲ್ಲಿ ಕಲಸಿದರೂ, ಶಾರೆ ತುಪ್ಪ ಹಾಕಿಸಿಕೊಂಡರೂ, ಮೂರು ತುತ್ತು ಮಾತ್ರ ತಿಂದು, ಮಿಕ್ಕದ್ದೆಲ್ಲವನ್ನೂ ಎಲೆಯ ಒಂದು ಪಕ್ಕಕ್ಕೆ ತಳ್ಳಿಬಿಟ್ಟು, ಮತ್ತೆ ಅನ್ನ ಹಾಕಿಸಿಕೊಂಡರು. ನನ್ನ ಎಲೆಯಲ್ಲಿ ಮೊದಲು ಬಡಿಸಿದ ಅನ್ನ ಹಾಗೆಯೇ ಉಳಿದಿತ್ತು. ತುತ್ತು ಕೂಡ ಎತ್ತಿರಲಿಲ್ಲ. ಹೊಟ್ಟೆಯೇನೋ ಹಸಿದಿದ್ದರೂ, ಮನಸ್ಸು ಮಾತ್ರ ಬೇರೆ ಯೋಚನೆಯಲ್ಲಿತ್ತು...ನಾಚಿಕೆಯಲ್ಲಿತ್ತು.

ಭಗವಾನ್ ಶ್ರೀ ರಾಮಕೃಷ್ಣರು ಸ್ವಾಮಿ ವಿವೇಕಾನಂದರಿಗೆ ಹೇಳಿದ ಒಂದು ಮಾತು ಜ್ಞಾಪಕಕ್ಕೆ ಬಂತು: 'ಶಿಷ್ಯನು ಗುರುವನ್ನು ಹುಡುಕಿಕೊಂಡು ಹೋಗಬೇಕಾಗಿಯೇ ಇಲ್ಲ. ಶಿಷ್ಯನು ಉಪದೇಶವನ್ನು ಗ್ರಹಿಸಿ ಅನುಷ್ಠಾನಕ್ಕೆ ತರಲು ಯೋಗ್ಯನಾಗಿರುವನೆಂದು ಕಂಡ ಹೊತ್ತಿನಲ್ಲಿ ಗುರು ಅವನಿಗೆ ತಾನಾಗಿಯೇ ಬಂದು ಕಾಣಿಸಿಕೊಳ್ಳುತ್ತಾನೆ." ಎಂದು. ಆಗ, ಹೀಗೆ ಅಹಂ ಮುರಿಯುವಂತೆ ನನಗೆ ಮಹಾ ಉಪದೇಶವನ್ನು ಕೊಟ್ಟ ಕೈಲಾಸಂ ಅವರಿಗೆ, ಮನಸಾ 'ಶ್ರೀ ಗುರುಭ್ಯೋ ನಮಃ' ಎಂದು ನಮಿಸಿ, ನಾಲ್ಕು ತುತ್ತು ತಿಂದೆ.

ಕೈಲಾಸಂ ಉಪ್ಪಿನಕಾಯೊಡನೆ ಮಜ್ಜಿಗೆ ಅನ್ನ ಮೂರು ತುತ್ತು ತಿಂದು, ಅದನ್ನೂ ಬದಿಗೆ ತಳ್ಳಿದರು.

ಕೈಲಾಸಂ ಊಟ ಮಾಡುವುದೇ ಹಾಗೆ. ಅವರು ಊಟ ಮಾಡುವುದನ್ನು ಅನೇಕ ಸಲ ನೋಡಿದ್ದೇನೆ. ತಿನ್ನುವುದು ಒಂದು ಪಾಲಾದರೆ, ಚೆಲ್ಲುವುದು ನಾಲ್ಕು ಪಾಲು. ಊಟದಲ್ಲಿ ಯಾವ ಬಗೆಯ ನಾಜೋಕೂ ನಯವೂ ಕಾಣಬರುತ್ತಿರಲಿಲ್ಲ. ಎಲೆಯಲ್ಲೆಲ್ಲ ಕಲಸಿದ ಅನ್ನ, ಸಾರು, ಹುಳಿ, ಚಟ್ನಿ, ಪಲ್ಯ, ಕಲಬೆರಕೆ. ಎಂಜಲೆತ್ತಿ ಶುದ್ಧಿ ಮಾಡುವವರಿಗೆ ತುಂಬ ಕಷ್ಟ.

ಊಟ ಮುಗಿಸಿಕೊಂಡು ಕೈಲಾಸಂ ತಮ್ಮ ಕೊಠಡಿಗೆ ಹೋದರು. "This is my chambers, as well as bed-room. Come on, dear boy. See me smoke a cigarette before you go" ಎಂದು ನನ್ನನ್ನು ತಮ್ಮ ಕೊಠಡಿಯೊಳಕ್ಕೂ ಕರೆದುಕೊಂಡು ಹೋದರು.

ಆ ಕೋಣೆ ಅದೇಕೆ ಅಷ್ಟು ಗಲೀಜಾಗಿತ್ತೋ, ದೇವರೇ ಬಲ್ಲ. ಇದ್ದ ಕಿಟಕಿಯನ್ನು ಭದ್ರವಾಗಿ ಮುಚ್ಚಿದ್ದರು. ಅದರ ಮೇಲೆ ಇದ್ದ ventilatorಗೆ ಕೂಡ ರಟ್ಟನ್ನು ಮುಚ್ಚಿ, ಹೊರಗಿನ ಗಾಳಿ ಬೆಳಕುಗಳನ್ನು ಆದಷ್ಟು ದೂರ ಮಾಡಿದ್ದರು. ನೆಲದಮೇಲೆ ಒಂದು ಹರಕುಚಾಪೆ. ಒಂದೆರಡು ಕಡೆ ಸಿಗರೇಟಿನ ಬೆಂಕಿ ಹಿಡಿದು ಸುಟ್ಟು ಕರಿಯಾಗಿ ತೂತುಬಿದ್ದಿತ್ತು. ಅದರ ಮೇಲೆ ಒಂದು ಹಳೆಯ ಮೆತ್ತೆ, ತೆಳ್ಳಗಿನದು. ತಲೆದಿಂಬು ತಲೆಯ ಜಿಡ್ಡುಕೊಳೆಯಿಂದ ಮಯಣ ಕಟ್ಟಿಹೋಗಿ, pucca water-proof ಆಗಿಬಿಟ್ಟಿತ್ತು. ಕೈಯಿಂದ ಮುಟ್ಟಲು ಕೂಡ ಅಸಹ್ಯವಾಗುವಂತಿತ್ತು. ಒಂದು ಮೂಲೆಯಲ್ಲಿ ಕಸಪೊರಕೆ, ಒಂದು ಜೊತೆ ಬೂಟ್ಸು, ಒಂದೇ ಒಂದು ಕೆರ. ಇನ್ನೊಂದು ಕೆರ ಗೋಡೆಯೊಳಗಿನ ಇಲಿಯ ಬಿಲದ ದ್ವಾರವನ್ನು ಹೊಕ್ಕು, ಆ ದ್ವಾರವನ್ನು ಚೆನ್ನಾಗಿ ಬಂಧಿಸಿತ್ತು.

ಕೈಲಾಸಂ ಎಂದರು: "ಎಲ್ಲಿಂದಾಲೋ ಇಲಿ ಒಂದು ದಾರಿ ಮಾಡಿಕೊಂಡುಬಿಟ್ಟಿದೆ ಇಲ್ಲಿಗೆ. ಈ ಹಾಸಿಗೇನ ತುಂಡು ತುಂಡು ಮಾಡಿ, ಹತ್ತೀನೆಲ್ಲ ಈಚೆಗೆ ಎಳೆದುಹಾಕಿರುತ್ತೆ. ಬಹುಶಃ ಇದರ ಬಳಗಡೇ ಇರೋ ಹತ್ತೀ ಬೀಜಕ್ಕೇಂತ ಕಾಣುತ್ತೆ. Now that I have rammed it there for the last two days, my clothes are safe. ಟ್ರ್ಯೈಟ್ ಇಟ್ರೂ ಕೂಡ ಬೀಳೋಲ್ಲ ಆ rascal ratಊ!"

ಕೋಣೆಯ ಇನ್ನೊಂದು ಮೂಲೆಯಲ್ಲಿ ಒಂದು hockey stick, ಒಂದು ದಪ್ಪ ವುಲ್ಲನ್ overcoatಉ. ಕೋಣೆಯಲ್ಲಿ ಎಲ್ಲಿ ನೋಡಿದರೂ, ಕುಡಿದು ಬಿಸಾಡಿದ್ದ ಸಿಗರೆಟ್ ತುಣುಕುಗಳು, ಬೂದಿ. ಆ ಕೋಣೆಯಲ್ಲಿ ಕಸ ಗುಡಿಸಿಯೇ ತಿಂಗಳುಗಟ್ಟಲೆ ಆಗಿರಬಹುದು ಎನ್ನುವಂತಿತ್ತು. ಕೋಣೆಯ ಹವೆಯೇ ಒಂದು ಬಗೆಯ ವೆಗಟುವಾಸನೆ. ಎರಡು ಮೂರು ಬೆಂಕಿ ಕಡ್ಡಿಪೆಟ್ಟಿಗೆಗಳು. ಅಲ್ಲಲ್ಲಿ ಉರಿದುಬಿದ್ದಿದ್ದ ದೀಪದ ಕಡ್ಡಿಗಳು, ಒಂದು ಲೋಟ, ಅದರ ತಳದಲ್ಲಿ ಒಂದಿಷ್ಟು ಯಾವುದೋ ಜನ್ಮದ ಕಾಫಿ, ಅದರಲ್ಲಿ ತೇಲುತ್ತ ಬಿದ್ದಿದ್ದ ಒಂದು ಸಿಗರೆಟ್ ತುಂಡು. ಹಾಸಿಗೆಯಲ್ಲಿ ಒಂದುಹಳೇ blanket, ತಲೆದಿಂಬಿಗಿಂತಲೂ ಕೊಳೆಯಾದ ಒಂದು sheet. ಒಂದು ಕಡೆಯ ಮೂಲೆಯಲ್ಲಿ ಒಂದು ಬೆಳ್ಳಿಯ ಕಟ್ಟುಹಾಕಿದ್ದ ಕರೀಮರದ walking-stick, ಒಂದು ಕಡೆ ಒಂದು ರಾಶಿ ಪುಸ್ತಕ, ಅಸ್ತವ್ಯಸ್ತವಾಗಿ. ಹಾಸಿಗೆಯ ಮೇಲೆ Sexton Blake Seriesನ ಒಂದು ಬುಕ್ಕು. ಪಕ್ಕದಲ್ಲೆ ಒಂದು briar pipeಉ. ಇಷ್ಟೆಲ್ಲ ಇತ್ತು.

ಕೈಲಾಸಂ, ಮೂಲೆಯಲ್ಲಿದ್ದ ಒಂದು sitting stool ಅನ್ನು ಎತ್ತಿ, "Sit on this, if you cannot squat down conveniently" ಅಂತಂದರು. ನಾನು "ಪರವಾ ಇಲ್ಲ, ಸರ್. Stool ಏನೂ ಬೇಡ. ನೆಲದ ಮೇಲೆ ಕೂತ್ಕೋತೇನೆ" ಎಂದು ಹೇಳಿ ಇದ್ದುದದರಲ್ಲಿ ಚೊಕ್ಕಟವಾದ ಸ್ಥಳ ನೋಡಿ ಕುಳಿತುಕೊಂಡೆ. ಕೈಲಾಸಂ ಹಾಸಿಗೆಯ ಮೇಲೆ ಕುಳಿತುಕೊಂಡು, ಅಲ್ಲಿ ಹಿಂದೆ ಸೇದಿ ಬಿಸಾಡಿದ್ದ ಒಂದು ತುಂಡು ಸಿಗರೇಟನ್ನು ಕೈಗೆ ತೆಗೆದುಕೊಂಡು, "What a criminal waste!" ಎಂದು ಹೇಳುತ್ತಾ, ತುಟಿಗಳ ನಡುವೆ ಸಿಕ್ಕಿಸಿಕೊಂಡು—

"Curse me! ಎಲ್ಲಿಟ್ಬಿಟ್ಟೆ Venkatesh, ನೀ ತರಿಸ್ಕೊಟ್ಟ packets and matchesಊ? Gymnasiumನಲ್ಲೇ ಬಿಟ್ಬಿಟ್ಯೊ? ಅಂ?" ಎಂದರು.

ನಾನು "ಇಲ್ಲಾ, ಸರ್. ಊಟ ಮಾಡೋವಾಗ ಪಕ್ಕದಲ್ಲೇ ಇಟ್ಕೊಂಡ್ರಿ. ಅಲ್ಲೇ ಇರ್ಬೇಕು. ತಂದುಕೊಡ್ಲೆ, ಸಾರ್?" ಎಂದೆ.

ನನಗೆ ಆಶ್ಚರ್ಯವಾಯಿತು: "ಎಲಾ! ಸೇದಿ ಬಿಸಾಡಿದ ಒಂದು ಸಿಗರೆಟ್ ತುಂಡನ್ನು ಕಂಡು, ಇವರು 'what a criminal waste!' ಅಂದ್ರಲ್ಲಾ!

ಅಷ್ಟೊಂದು ಅನ್ನ, ಒಂದು ಶಾರೆ ತುಪ್ಪ, ಆ ಪಲ್ಯ, ಅಷ್ಟೊಂದು ಮೊಸರು, ಅದು criminal waste ಆಗ್ಲಿಲ್ವಲ್ಲಾ ಇವರಿಗೆ?" ಎನ್ನಿಸಿತು.

ಅಷ್ಟರಲ್ಲಿ, ಕೃಷ್ಣ ಬಾಗಿಲು ತೆರೆದುಕೊಂಡು ಒಳಕ್ಕೆ ಬಂದು, ಸಿಗರೆಟ್ ಪ್ಯಾಕುಗಳನ್ನೂ ಕಡ್ಡಿಪೆಟ್ಟಿಗೆಯನ್ನೂ ಕೈಲಾಸಂಗೆ ಒಪ್ಪಿಸಿ, ನನ್ನನ್ನು ನೋಡಿ, "ಹರೀ, ಇರುಂಗೋ. ಇನ್ನೊರು ten days, weight-liftingಲೆ ಎಲ್ಲಾರ್ಯೊಂ challenge! ಇಪ್ಪೋ ವಾರುಂಗೋ . . . ಕೆಂಪಾಂಬುಧಿ . . . ರೆಡಿ! Jappy Wolfeಓಡೆ channel swimmingಕೂ challenge! Carpentier, Siki, Boxingಊಂ ready. ಮಹಾನ್ನೆ ಕೇಳುಂಗೊ . . . Ahmad Bux ಅಡಿಚ್ಚ ಅಡಿ Lemmಕೂಂ Gotchಕೂ . . . Indians ಅನ್ನಾ ಎನ್ನಾನ್ನಿ ನೆನಚಿಕಿಂಡಿರ್ಕಾಂಗೊ! ಅಂದ್ ಅಶಡ್ ಪಶಂಗೋ! ವರಟ್ಟೊಂ hockeyಲೇ, poloಲೇ, ಒಣ್ಣೋಣ್ಣೇಯೂಂ." ಅಂದ.

ಕೃಷ್ಣ ಹಾಗೆ ಮಾತನಾಡುವುದು ಅವನ ಸ್ವಭಾವವೇ ಇರಬಹುದು, ಎನ್ನಿಸಿತು. An over-enthusiastic fellow, but generous and open-hearted. ರಾಷ್ಟ್ರದ Open sports and athletic eventsನಲ್ಲಿ ಪ್ರತಿಯೊಂದರಲ್ಲೂ ಭಾಗವಹಿಸಿ, 'also ran' ಎನ್ನಿಸಿಕೊಳ್ಳುತ್ತಿದ್ದ. ಮನೆಯ ಯಜಮಾನರಿಗೆ, ಮಾನ್ಯ ಶ್ರೀ ತ್ಯಾಗರಾಜ ಪರಮಶಿವಯ್ಯರ್ ಅವರಿಗೆ ಕೃಷ್ಣ ಮನೆಯಲ್ಲೇ ಹುಟ್ಟಿ ಬೆಳೆದ ಮಗನ ಹಾಗೆ. ಕೃಷ್ಣ ಪಾಲ್ಘಾಟು ದೇಶದ ಬ್ರಾಹ್ಮಣ. ಪೂರ್ಣ ಹೆಸರು—ಕೃಷ್ಣಯ್ಯರ್. ಯಜಮಾನರನ್ನು 'ಅಪ್ಪಾ' ಎಂದೇ ಸಂಬೋಧಿಸುತ್ತಿದ್ದ. ಯಜಮಾನರ ಸಕಲ ಉಪಚಾರ ಪೋಷಣೆಗಳೂ ಕೃಷ್ಣನಿಗೇ ಸೇರಿದ್ದು. ಯಜಮಾನರ ಸೇವೆಯನ್ನು, ಅವರ ಅಂತ್ಯಕಾಲದ ವರೆಗೂ ಹೃತ್ಪೂರ್ವಕವಾಗಿ, ಯಾವ ಲೋಪದೋಷಗಳೂ ಬಾರದಂತೆ ನಿರ್ವಹಿಸಿದವನು—ಕೃಷ್ಣ. ಕಡೆಗೆ, ಯಜಮಾನರ ಮೃತದೇಹಕ್ಕೆ ಅಗ್ನಿ ಸಂಸ್ಕಾರವನ್ನು ನಡಸಿದವನೂ ಅವನೇ. ಕೈಲಾಸಂ ಸಾಕ್ಷಿಮಾತ್ರಕ್ಕೆ ಅದನ್ನು ಮುಟ್ಟಿ, "ಕೃಷ್ಣ! YOU have a right to do it." ಎಂದುಬಿಟ್ಟರು. ಲೋಕದ ಸಮಸ್ತವಾದ ಸುಖದುಃಖಗಳಿಂದ ನಿರ್ಲಿಪ್ತರಂತಿದ್ದ ಕೈಲಾಸಂ ತಮ್ಮ ತಂದೆಯ ಭೌತಶರೀರವನ್ನು ತೊರೆದ ದಿನ ಚಿಂತಾವ್ಯಾಕುಲರಾಗಿದ್ದಂತೆ ಕಂಡು ಬಂದರು. ಆತ್ಮ ಆತ್ಮಗಳ ಋಣಾನುಬಂಧಗಳವು. ಲೌಕಿಕವಾಗಿ ಎಷ್ಟೇ

ಅಂತರಗಳಿದ್ದರೂ ಆತ್ಮಾನುಬಂಧವು ಎಂದಾದರೂ ಕಿಂಚಿತ್ತಾದರೂ ಬಾಧಿಸದೆ ಬಿಡದು.

ಕೃಷ್ಣ, ಯಜಮಾನರನ್ನು ಅಷ್ಟು ಶ್ರದ್ಧಾಭಕ್ತಿವಿಶ್ವಾಸಗಳಿಂದ ನೋಡಿಕೊಳ್ಳುತ್ತಿದ್ದನಾದ ಕಾರಣ, ಕೈಲಾಸಂರವರಿಗೂ ಕೃಷ್ಣನ ಮೇಲೆ ಬಹು ವಿಶ್ವಾಸವಿತ್ತು. ಕೃಷ್ಣನಿಗಾದರೂ ತನ್ನ ಹಿರಿಯ ಯಜಮಾನರ ಮೇಲೆ ಎಷ್ಟು ವಿಶ್ವಾಸವಿತ್ತೋ ಅದಕ್ಕಿಂತ ಹೆಚ್ಚು ವಿಶ್ವಾಸ ಕೈಲಾಸಂ ಅವರ ಮೇಲೆ ಇತ್ತು. ಕೃಷ್ಣ ಇತರರ ಹತ್ತಿರ ಮಾತನಾಡುವಾಗ ಕೈಲಾಸಂರವರನ್ನು ಹೆಸರು ಹಿಡಿದು ಹೇಳುತ್ತಿರಲಿಲ್ಲ. ಯಾವಾಗಲೂ 'ಮಹಾನ್' ಎಂದೇ ಕರೆಯುತ್ತಿದ್ದ. ಕೈಲಾಸಂ ಹೇಳಿದರು—(ಮಹಾನ್ ಶೊನ್ನಾರ್) ಕೈಲಾಸಂ ಇದಾರೆಯೆ?—(ಮಹಾನ್ ಇರಕ್ಕಾರಾ?) ಕೈಲಾಸಂ ಹೊರಗೆ ಹೋಗಿದ್ದಾರೆ—(ಮಹಾನ್ ವೆಳಿಯೆ ಪೋಯಿರಕ್ಕಾರ್) ಇತ್ಯಾದಿ. ಈ ಕೃಷ್ಣನ ದೃಷ್ಟಿಯಲ್ಲಿ ತನ್ನ ಮಹಾನ್ ಭಾಸ, ಭವಭೂತಿ, ಕಾಳಿದಾಸ, ಇವರಿಗೆ ಏನೂ ಕಡಿಮೆಯಿಲ್ಲ ; Shelley, Keats ಇವರು ತನ್ನ ಮಹಾನ್ ಮುಂದೆ silly ; Galsworthy, Shaw ಪರವಾ ಇಲ್ಲ ; ಹೀಗೆಂದು ನಮ್ಮೆಲ್ಲರ ಹತ್ತಿರವೂ ಪ್ರಶಂಸೆಮಾಡಿ ಕೊಂಡಾಡುತ್ತಿದ್ದ.

ನಾನು ಆ ರಾತ್ರೆ ಮನೆಗೆ ಬರಬೇಕಾದರೆ ಹತ್ತು ಗಂಟೆ ಆಗಿಹೋಗಿತ್ತು. ಮನೆಯವರೆಲ್ಲರೂ ಊಟಮಾಡಿ ಮಲಗಿದ್ದರು. ನಾನು ನನ್ನ ಕೋಣೆಗೆ ಹೋಗಿ ಮಲಗಿಕೊಂಡೆ. ಒಡನೆಯೇ ಜ್ಞಾಪಕ ಬಂತು, ದಿನವೂ ಒಂದೆರಡು ಗಂಟೆಯಕಾಲ ಓದಿಯೇ ಮಲಗಬೇಕೆಂದು. ಒಳ್ಳೆಯದೊಂದು ಪುಸ್ತಕವನ್ನು ತೆಗೆದುಕೊಂಡು, ದೀಪವನ್ನು ದೊಡ್ಡದು ಮಾಡಿ, ಸುಮಾರು ಹನ್ನೆರಡು ಗಂಟೆಯವರೆಗೂ ಓದಿ, ಮನಸ್ಸು ಸಮಾಧಾನವಾದ ಮೇಲೆ ದೀಪವನ್ನಾರಿಸಿ, ಹೊದಿಕೆಯನ್ನು ಮೇಲೆಳೆದುಕೊಂಡು ನಿದ್ರೆಮಾಡಲು ಪ್ರಯತ್ನಪಟ್ಟೆ.

ನಿದ್ರೆಯೇ ಬರಲಿಲ್ಲ. ತಲೆಯ ತುಂಬ ಯೋಚನೆಗಳು. ಎಲ್ಲವೂ ಸಂಜೆ ನಡೆದ ಮಾತುಕತೆಗಳೇ: Sandow's physique, ಅವನ showmanship, Ahmad Bux and Frank Gotch ಅವರ wrestling matchಉ, ಗಾಮ Buxನ್ನ 'ಶಹಬಾಸ್ ಬೇಟಾ!' ಅಂದದ್ದು . . . . ಕೈಲಾಸಂ

ವ್ಶೈಯೇನೊ ಮಾರುತಿ ವ್ಶೈ ಹಾಗಾಗ್ಬೇಕು, ಆದ್ರೆ ಮೂತೀನೂ ಹಾಗೇ ಆಗ್ಬೇಕೇ' ಅಂದದ್ದು, ... ಅವರು ತೋರಿಸಿದ ಕರ್ಣಿಕಾರ, ಕೋವಿದಾರ flowers, . . . ನನ್ನ ಜನಕ ಅವ್ರ ಜನಕ ಅಂದದ್ದು . . . ಕೃಷ್ಣ (ಅಡಿಗೆಭಟ್ಟ) Man and Superman ಓದೋದು. . . ಕೈಲಾಸಂ ನನಗೆ 'ನೀನು ದಿನಾ ಏನಾದರೂ ಓದಿಯೇ ಓದಬೇಕು. ಬರೀ biceps ಬೆಳಸಿ, ಜನ ನಿನ್ನ "ಏಟ್ಟೈಶ್ಯದೆ ವೆಂಕಟೇಶ್" ಅಂತ ಕರೀಬಾರದು. 'ಏನ್ ಕಲೀಬೇಕಾದ್ರೂ earnestness, application and concentration ಇದ್ರೆ ಸುಲಭವಾಗುತ್ತೆ' ಅಂದದ್ದು . . ಈ ಎಲ್ಲಾ ಮಾತುಕತೆ ಸಂದರ್ಭ ಸನ್ನಿವೇಶಗಳೂ ನನ್ನ ತಲೆಯಲ್ಲಿ ಶೂಲಗಳಂತೆ ಚುಚ್ಚುವುದಕ್ಕೆ ಮೊದಲು ಮಾಡಿದ್ದವು. ಆ ರಾತ್ರೆಯೆಲ್ಲಾ ಒಂದೇ ಘಳಿಗೆ ಕಣ್ಣುರೆಪ್ಪೆ ಮುಚ್ಚುವುದಕ್ಕೆ ಸಾಧ್ಯವಾಗದೇ ಹೋಯಿತು. 'ಧಿಕ್ ಪಶುಬಲಂ' ಎಂದು ಅಂದೇ ನನಗೆ ನಿರ್ಧರವಾಗಿಹೋಯಿತು. 'ಯಮಕೆ ಗಾಂಧೀನೂ ಬೇಡ, ಪೈಲ್ವಾನ್ ಪಿಳ್ಳಪ್ಪನೂ ಬೇಡ, ಸಾವಕಾರ್ ಬುಳ್ಳಪ್ಪನೂ ಬೇಡ' ಎಂದು ಕೈಲಾಸಂ ಹೇಳಿದ ಮಾತು ನನಗೆ ಎದೆಯಲ್ಲಿ ನಟ್ಟುಹೋಯಿತು.

ಅಂದಿನಿಂದಲೇ ನನ್ನ ನಿಜವಾದ ವಿದ್ಯಾರ್ಜನೆ ಆರಂಭವಾಯಿತು, ಪುಸ್ತಕಗಳಿಗೂ ನನಗೂ ಸ್ನೇಹ ಏರ್ಪಟ್ಟಿತು. ಹೀಗೆ ಒಂದು ನೂತನ ನಿರಂತರಾನಂದ ಸಾಮ್ರಾಜ್ಯಕ್ಕೆ ಕೈಲಾಸಂ ನನ್ನನ್ನು ಒಯ್ದು ಮುಟ್ಟಿಸಿದರು. ಅಂದಿನಿಂದ ನನ್ನ ಬದುಕೇ ಬದಲಾಯಿಸಿತು.

ಶ್ರೀ ಗುರುಭ್ಯೋನಮಃ

ಈ ರೀತಿ ಪರಿಚಯ ಆದ ಮೇಲೆ, ಕೈಲಾಸಂ ಹೆಚ್ಚು ಕಡಮೆ ಪ್ರತಿ ದಿನವೂ ಸಂಜೆಯ ಹೊತ್ತಿಗೆ ನಮ್ಮ ವ್ಯಾಯಾಮ ಶಾಲೆಗೆ ಬರುತ್ತಿದ್ದರು. ಅವರು ಬಂದರೆಂದರೆ ನಮ್ಮ ಹುಡುಗರಿಗೆ ಒಳ್ಳೆಯ ಔತಣ. ಮೂರು ನಾಲ್ಕು ದಿನ ಕುಳಿತು ನೋಡಿ, ಕೈಲಾಸಂ, ಐದನೆಯ ದಿನ ತಾವೂ ನಮ್ಮೊಡನೆ ವ್ಯಾಯಾಮ ಮಾಡುವುದಕ್ಕೆ ತೊಡಗಿದರು. ವ್ಯಾಯಾಮಶಾಲೆಯ ಪದ್ಧತಿಯ ಪ್ರಕಾರ ಕೈಲಾಸಂ ಅವರ ಮೈತೂಕ, ಎತ್ತರ, ಮೈಕಟ್ಟು, ಅಂಗಾಂಗಗಳ ಅಳತೆ ಎಲ್ಲವೂ ಗುರುತು ಮಾಡಿಕೊಂಡದ್ದಾಯಿತು.

ಕೈಲಾಸಂ ವ್ಯಾಯಾಮಕ್ಕೆ ಮೊದಲು ಮಾಡಿದ ಹಿಂದಿನ ದಿನ ನಮ್ಮ ವ್ಯಾಯಾಮಶಾಲೆಯ ಒಬ್ಬ ತಲೆಹರಟೆ ಹುಡುಗ, ಮಾತನಾಡುತಾ ಆಡುತಾ, "ಸಾರ್, ಎರಡು ತಿಂಗಳಿಂದ ಇಲ್ಲಿ exercise ಮಾಡ್ತಾ ಇದೇನೆ; ಎರಡು ಇಂಚು ಹೆಚ್ಚಾಗಿಲ್ಲ ಎದೆ. ಬೇಡ, at least ಒಂದು ಇಂಚಾದ್ರೂ improve ಆಗಬೇಡ್ವೇ ಕತ್ತೂ bicepsಊ? It is a sheer waste of time!" ಅಂದ.

"ಕೆಲವು constitutions quickಆಗಿ pickup ಆಗುತ್ವೆ, ಕೆಲವು slow ಆಗಿ ಆಗುತ್ವೆ. Reasons may be plenty ಆದ್ದರಿಂದ, physical cultureನೇ ದೂಷಿಸೋದೇ? ನಿನ್ನ ಜೊತೇಲೇ ಸೇರಿದ ಇನ್ನೂ ಆರೇಳು ಜನ ಇದ್ದಾರಲ್ಲ, ಅವರ progress ಚೆನ್ನಾಗಿದೆಯಲ್ಲ!" ಎಂದೆ, ನಾನು.

ಕೈಲಾಸಂ ಆ ಹುಡುಗನನ್ನು ಸಂಬೋಧಿಸಿ ಹೇಳಿದರು: "Diet, good diet, ಮಗೂ, necessary factor; and besides, the way you do the exercises is altogether wrong. And I know definitely well that you do not concentrate enough. There lies the mistake. I shall prove it to you."

ಪ್ರಶ್ನೆ ಕೇಳಿದ ಹುಡುಗ ಸುಮ್ಮನಾದ. ಕೈಲಾಸಂ ನಮ್ಮೊಟ್ಟಿಗೆ ಸಾಧನೆಗೆ ಮೊದಲುಮಾಡಿದರು. ಆ ಸಂಜೆ ಸುಮಾರು ಒಂದು ಗಂಟೆಯ ಕಾಲ ವ್ಯಾಯಾಮ ನಡೆಯಿತು. ನಡುನಡುವೆ, ಪ್ರತಿ ವ್ಯಾಯಾಮದ ವಿಧಾನ

ವನ್ನೂ ಅವರು ನನ್ನೊಡನೆ ಚರ್ಚಿಸಿ, ಚೆನ್ನಾಗಿ ತಿಳಿದುಕೊಂಡ ಮೇಲೆ ಅಭ್ಯಾಸಕ್ಕೆ ಮೊದಲುಮಾಡುತ್ತಿದ್ದರು. ಕೈಲಾಸಂ ಅಷ್ಟು ಶ್ರದ್ಧೆಯಿಂದ practice ಮಾಡುವುದನ್ನು ನೋಡಿ, ಇತರ ಹುಡುಗರೂ ಎಂದಿಗಿಂತ ಹೆಚ್ಚು ಶ್ರದ್ಧೆಯಿಂದ ಮಾಡತೊಡಗಿದರು.

ಆಗ ಬೇಸುಗೆ ದಿನಗಳಾದ್ದರಿಂದ ಮೈ ಎಲ್ಲರಿಗೂ ಹೆಚ್ಚಾಗಿ ಬೆವರುತಿತ್ತು. ವ್ಯಾಯಾಮ ಮುಗಿದನಂತರ ಟಿಪ್ಪೂಸುಲ್ತಾನ್ ಅರಮನೆಯ ಮುಂದೆಯೇ ಇದ್ದ ದೊಡ್ಡ ಅತ್ತಿಯ ಮರದ ಕೆಳಗಡೆ ಎಲ್ಲರೂ ಕುಳಿತು ವಿಶ್ರಮಿಸಿಕೊಳ್ಳು ತ್ತಿದ್ದೆವು. ಎಲ್ಲರಿಗೂ ಬಾಯಾರಿಕೆ ಬಹಳವಾಗಿತ್ತು. ಹತ್ತಿರದಲ್ಲೇ ಯಾರೋ ಹೆಂಗಸು ಕಡಲೇಕಾಯಿ, ಸೀಬೇಕಾಯಿ, ಸೌತೇಕಾಯಿ ಮಾರುತ್ತಿದ್ದಳು. ಶಿಷ್ಯನೊಬ್ಬ ಹೋಗಿ ಎಳತಾದ ನಾಲ್ಕು ಸೌತೇಕಾಯಿ ಕೊಂಡು ತಂದ. ಅದನ್ನು ಎಲ್ಲರೂ ಮುರಿದು ಹಂಚಿಕೊಂಡು ತಿನ್ನಲು ತೊಡಗಿದೆವು.

ನಮ್ಮ ಪೈಕಿ ಮಾತಿನವ ಎಂದರೆ, ಲಿಂಗಣ್ಣ. ಅವನು ಕೈಲಾಸಂ ಅವರನ್ನು ಕೇಳಿದ: "ಸಾರ್, ಇವತ್ತೇನು ನೀವು ಸಿಗರೆಟ್ ಸೇದಲೇ ಇಲ್ಲ?"

ಕೈಲಾಸಂ: "ಅಯ್ಯೋ! ಜ್ಞಾಪಿಸಿಬಿಟ್ಯಾ! ಸಾಧನೆಗೂ ಸಿಗರೆಟ್ಗೂ ಬಹು ದೂರಾ, ಮಗು... ಬಹುದೂರ. ನೀ ಹೇಳಿದ್ಯಲ್ಲಾ ಅಂತ ಒಂದು ಹಚ್ತೇನೆ" ಎಂದು ಹೇಳಿ ಒಂದು ಹಚ್ಚಿಯೇಬಿಟ್ಟರು.

ಈ ಲಿಂಗಣ್ಣನ ವಯಸ್ಸು ಸುಮಾರು ಹತ್ತೊಂಬತ್ತು, ಇಪ್ಪತ್ತು. ಸ್ಕೂಲಿನಲ್ಲಿ ಹೆಚ್ಚು ಓದಿದವನಲ್ಲ. ಆದರೂ ಮಾತುಕತೆ ಚೆನ್ನಾಗಿ ಬಲ್ಲ. ವಂಶದ ಕಸುಬು—ವ್ಯಾಪಾರ. ವ್ಯಾಯಾಮದಲ್ಲಿ ಆಸಕ್ತಿ ಹೆಚ್ಚು. ಮೂರು ನಾಲ್ಕು ತಿಂಗಳಿಂದಲೂ ವ್ಯಾಯಾಮ ಶಾಲೆಗೆ ಬರುತ್ತಿದ್ದ. ಎಲ್ಲರಿಗಿಂತ ಚೆನ್ನಾಗಿಯೇ ವ್ಯಾಯಾಮ ಮಾಡುತ್ತಿದ್ದ. ಮೈಕಟ್ಟು ಬಹಳ ತೆಳ್ಳಗೆ, ಎತ್ತರ ಹೆಚ್ಚು. ಮಾಂಸಖಂಡ ಚೆನ್ನಾಗಿ ಬೆಳೆಯಬೇಕೆಂದು ಹಾಲು, ಬೆಣ್ಣೆ, ತುಪ್ಪ, ಬಾದಾಮಿ, ಕೋಳಿಮೊಟ್ಟೆ, ಉದ್ದಿನವಡೆ, ಹಣ್ಣು, ಟೊಮಾಟೊ ಇವುಗಳನ್ನು ಹೆಚ್ಚಾಗಿ ತಿನ್ನುತ್ತಿದ್ದರೂ ಅವನ ಮೈಯಳತೆ ಮಾತ್ರ ಕಾಲು ಅಂಗುಲವೂ ಹೆಚ್ಚಾಗಲಿಲ್ಲ. ಇತರ ಹುಡುಗರು ಬೇಕೆಂದೇ 'ಲಿಂಗಣ್ಣ, ನಿನಗೆ diet ಸಾಲದೊ!' ಎಂದು ಹಾಸ್ಯ ಮಾಡುತ್ತಿದ್ದರು. ಮೊದಲು ಮೊದಲು 'ಇರ

ಬಹುದೇನೊ!' ಎಂದು ಲಿಂಗಣ್ಣ ನಂಬಿದನಾದರೂ, ಕೊನೆಕೊನೆಗೆ 'ಇವರು ನನ್ನನ್ನ ಹಾಸ್ಯ ಮಾಡುತ್ತಿದ್ದಾರೆ' ಎಂಬುದು ಅವನಿಗೆ ತಿಳಿದುಹೋಯಿತು. ಲಿಂಗಣ್ಣನಲ್ಲಿ ಒಂದು ದೊಡ್ಡ ಗುಣ: ತನ್ನನ್ನು ಹಾಸ್ಯಮಾಡುತ್ತಿದ್ದಾರೆಂದು ಅವನು ಸಿಟ್ಟಾಗುತ್ತಿರಲಿಲ್ಲ, ಜೊತೆಗೆ ತಾನೂ ಸೇರಿ ನಕ್ಕು ಸಂತೋಷಪಡುತ್ತಿದ್ದ. ಇಂತಹ ಮನೋವೃತ್ತಿ ಪ್ರಶಂಸನೀಯವಾದದ್ದು.

ಕೈಲಾಸಂ ಸಿಗರೆಟ್ ಸೇದುತ್ತಾ "ಲಿಂಗಣ್ಣ, ನೀ ಸಿಗರೆಟ್ ಸೇದೊಲ್ವೇ? ಸಿಗರೆಟ್ಟೊ? ಬೀಡೀನೊ? ನಿಮ್ಮ ಜನಾ ಎಲ್ಲಾ ಹೆಚ್ಚು ಸೇದೋದು, ಬೀಡೀನೇ ಅಲ್ವೇ?" ಎಂದು ಕೇಳಿದರು.

ಲಿಂಗಣ್ಣ: "ಎಲ್ಲಾ ಬಿಟ್ಬಟ್ಟೆ, ಸರ್, ಇಲ್ಲಿಗೆ ಬಂದ್ಮೇಲೆ. ನೀವೇ ಹೇಳಿದ್ರಿ ಈಗ—ಸಾಧನೇಗೂ ಸಿಗರೆಟ್ಗೂ ದೂರಾಂತಂತ!"

ಕೈಲಾಸಂ: "ಹೌದ್ಮಗೂ, ಬಹಳ moderate ಆಗಿದ್ರೆ ಪರವಾಗಿಲ್ಲ. Nicotine ಇದೆ ನೋಡು, bad for the heart, bad for the lungs, bad for the liver. Wretched thingಉ, ಮಗು. ಕೂತ್ಕೊ, ಮಗು, ನಿಂತೇಇದ್ದೀಯಲ್ಲ. . . ನೋಡು, Londonನಲ್ಲಿ ಒಂದು theatreನಲ್ಲಿ ನೋಡ್ದೆ : ಒಬ್ಬ Comedian, five feet height, but thin-built, ರೆಟ್ಟೆರೆಟ್ಟೆ ದಪ್ಪ ಮೀಸೆಗಳು ಬಿಟ್ಕೊಂಡು, light-woodನಲ್ಲಿ ಮಾಡಿದ bar-bells, dumb-bells, ಎಲ್ಲಾ ತಂದ್ಬಿಟ್ಟು stageಗೆ, five hundred pounds single-hand lift, juggling with hundred pounds Kettle-bells, ಹೀಗೆ incredible feats ಮಾಡಿ ನಗಿಸ್ತಿದ್ದ. ಜೊತೆಗೆ ಒಬ್ಬ real strong manಉ. ಆದರೆ, ಪಾಪ, ಅವನು try ಮಾಡೋವಾಗ, ಹೇಗೋ ಏನೋ! genuine solid weights ಸಿಕ್ಕಿಬಿಡೋದು ಅವನ ಕೈಗೆ . . . ಮುಕ್ಕಿದರೂ ಏನೂ ಆಗ್ತಾ ಇರಲಿಲ್ಲ . . . ಈ thin fellow, comic songs ಚೆನ್ನಾಗಿ ಹಾಡ್ತಾ ಇದ್ದ." ಎಂದು ಕೈಲಾಸಂ ನಮ್ಮನ್ನೆಲ್ಲಾ ಕುರಿತು ಮಾತು ಮುಂದುವರಿಸಿದರು: "Next Gymnasium Day Celebrationsಗೆ ಒಂದು 'Show' ಇಟ್ಕೊಂಡ್ಬಿಟ್ಟು . . . ಲಿಂಗಣ್ಣ, You have a great future, my boy ! you can make yourself an asset! ಕೇಳ್ತಿದೀಯಾ?"

ನಾವೆಲ್ಲರೂ: "ಕೇಳ್ತಿದೀವಿ, ಸಾರ್. ಒಂದು suitable play ಬರ್ಕೊಡಿ, ಸಾರ್, ನಾವು stage ಮಾಡೋಕೆ, ಲಾಯಕ್ಕಾದದ್ದು . . ."

ಕೈಲಾಸಂ: "That is exactly this! ಕೇಳ್ತಿದೀರಿ ತಾನೆ?"

ನಾವೆಲ್ಲರೂ: "ಹೂಂ, ಸಾರ್, ಹೇಳಿ, ಹೇಳಿ."

ಕೈಲಾಸಂ ಹೇಳಿದ್ರು:

"First Scene: ಇದೇ ಟಿಪ್ಪೂಸುಲ್ತಾನ್ ಅರಮನೇಲಿ ಒಂದು ಗರಡಿ ಮನೆ . . . ಎಲ್ಲಾರೂ ಕುಸ್ತಿ, ಬೈಠಕ್, ಸಾಮು, ಮಾಡುತಾ ಇರ್ತಾರೆ. All Indian type, only Indian apparatus, appliances . . . . ಸ್ವಲ್ಪ ಹೊತ್ತಾದ ಮೇಲೆ, ಎಲ್ಲರೂ ದಣುವಾರಿಸ್ತಾ ಕೂತ್ಕೊಂಡಮೇಲೆ, ಷುರು ಮಾಡ್ತಾನೆ ಲಿಂಗಣ್ಣ. ಕೆಂಪದೊಂದು ಕಾಚಾ ಬಿಕ್ಕೊಂಡು, ಮೈಗೆಲ್ಲಾ ಮಟ್ಟಿ ಲಪ್ಪಾಯಿಸ್ಕೊಂಡು, ಕುತ್ತಿಗೇಗೆ ಕೆರದಷ್ಟಗಲ ಚಿನ್ನದ ತಾಬೀಜು ಕಟ್ಕೊಂಡು; ಎರಡು ಕಡ್ಡಿರೆಟ್ಟೆಗಳಿಗೂ ಎರಡು ಚಿನ್ನದ ತಾಯಿತ. ತೊಡೆ ತಟ್ಟಿ, ರೆಟ್ಟೆ ತಟ್ಟಿ, ಷುರು ಮಾಡತಾನೆ ಹಾಡೋಕೆ:

ಲಿಂಗಣ್ಣ—ಷಹರ್‌ಗಂಜಾಂಪೇಟೆ ಒಳ್ಗೆ ಹೊಂಟರೂ ವಸ್ತಾದರೂ:
Chorus— ಷಹರ್‌ಗಂಜಾಂ – ಷಹರ್‌ಗಂಜಾಂ – ಷಹರ್‌ಗಂಜಾಂ –
ಷಹರ್‌ಗಂಜಾಂಪೇಟೆ ಒಳ್ಗೆ ಹೊಂಟರೂ ವಸ್ತಾದರೂ
ಲಿಂಗಣ್ಣ—ಗಳ್ಡಿ ಒಳ್ಗೊಂದು ಗೋರಿಮಾಡಿ ಕುಂತರು ಆಯ್‌ಗಾರರೂ
Chorus—ಗಳ್ಡಿ ಒಳ್ಗೊಂದು ಗೋರಿಮಾಡಿ ಕುಂತರು ಆಯ್‌ಗಾರರೂ
ಲಿಂಗಣ್ಣ—ಆಚೆ ಗಳ್ಡಿ ಹುಡುಗರೆಲ್ಲ ಈಚೆ ಗಳ್ಡಿಗೆ ಬಂದರೂ
Chorus—ಆಚೆ ಗಳ್ಡಿ ಹುಡುಗರೆಲ್ಲ ಈಚೆ ಗಳ್ಡಿಗೆ ಬಂದರೂ
ಲಿಂಗಣ್ಣ—ಅದ್ರಾಚೆ ಗಳ್ಡಿ ಹುಡುಗರು ನಮ್ಮನ್ನೋಡಿಯೆ ಸುಸ್ತಾದರು
Chorus—ಅದ್ರಾಚೆ ಗಳ್ಡಿ ಹುಡುಗರು ನಮ್ಮನ್ನೋಡಿಯೆ ಸುಸ್ತಾದರು
ಲಿಂಗಣ್ಣ—ಷಹರ್‌ಗಂಜಾಂಪೇಟೆ ಒಳ್ಗೆ ಹೊಂಟರೂ ವಸ್ತಾದರೂ
Chorus—ಷಹರ್‌ಗಂಜಾಂ ಷಹರ್‌ಗಂಜಾಂ ಷಹರ್‌ಗಂಜಾಂ
ಷಹರ್‌ಗಂಜಾಂಪೇಟೆ ಒಳ್ಗೆ ಹೊಂಟರೂ ವಸ್ತಾದರೂ
ಲಿಂಗಣ್ಣ—ಗಳ್ಡಿ ಒಳ್ಗೊಂದು ಗೋರಿಮಾಡಿ ಕುಂತರೂ ಆಯ್‌ಗಾರರೂ
Chorus—ಗಳ್ಡಿ ಒಳ್ಗೊಂದ್ ಗೋರಿಮಾಡಿ ಕುಂತರೂ ಆಯ್‌ಗಾರರೂ

ಲಿಂಗಣ್ಣ—ಸುತ್ತುಕೋಟೆ ನಡುವೆ ಬಾಗಿಲ್ ಹವಳ ಮುತ್ತು ಚಿನ್ನದಾ
Chorus—ಸುತ್ತುಕೋಟೆ ನಡುವೆ ಬಾಗಿಲ್ ಹವಳ ಮುತ್ತು ಚಿನ್ನದಾ
ಲಿಂಗಣ್ಣ—ಅದರ ನಡುವೆ ಕುಂತೌನೆ ಟೀಪೂಸುಲ್ತಾನ್ ಬಾದುರಾ
Chorus—ಅದರ ನಡುವೆ ಕುಂತೌನೆ ಟೀಪೂಸುಲ್ತಾನ್ ಬಾದುರಾ

"Nextಉ: Street sceneಉ. ಬರ್ತಾನೆ ಲಿಂಗಣ್ಣ: ಪಂಜಾಬೀ ದಟ್ಟಿ ಸುತ್ಕೊಂಡು, Glasgow mull ಉದ್ದನೇ ಬನೀನು ಹಾಕ್ಕೊಂಡು, ಪಂಜಾಬೀ ಪೈಲ್ವಾನ್ ರಂಗಿನ ಪೇಟಾ ಚುಂಗು ಬಿಟ್ಕೊಂಡು, ಕುತ್ಗೆ ತಾಬೀಜನ್ನ ಎದೆ ಮೇಲೆಳ್ಕೊಂಡು. ಜೊತೆಗೊಬ್ಬ ಛೋಟಾ ಪೈಲ್ವಾನ್, ತಲೆ ಕೆದಕ್ಕೊಂಡಿ ರ್‍ತಾನೆ. ಲಿಂಗಣ್ಣ, ಪಾಪ, asthmatic, ಕೆಮ್ತಾ ಕೆಮ್ತಾ ಬರ್‍ತಾನೆ. Asthma ಎಳೀತಾ ಇದೆ. ಜೇಬಿನಿಂದ ಒಂದು ಕಟ್ಟು ಬೀಡಿ ತೆಗೆದು, ಅದರಲ್ಲಿ ಒಂದನ್ನ ತುಟಿ ನಡುವೆ ಸಿಕ್ಕಿಸಿಕೊಂಡು, ಚೆಂಕೀಪೆಟ್ಗೇನ ಛೋಟಾ ಪೈಲ್ವಾನ್ ಹತ್ತಿರ ಕೊಟ್ಟು, 'ಕಡ್ಡಿ ಗೀರಿಕ್ಕೋ, ಕಳ್ಳೀಮರಿ. ಎಷ್ಟೊಹೊತ್ತು? ಗಲ್ಲೀಗಲ್ಲೀನೆ ಎಳಕೊಂಡ್ ಬಂದ್ಬಿಟ್ಟು ನಿನ್ ಬುಳ್ಡೆ ಎಗರಿಸಿಬುಟ್ಟೇನ್! ಜಲ್ದಿ ಗೀರಿಕ್ಕೋ ಕಡ್ಡೀನ!' ಅಂತಾನೆ. ಛೋಟಾ ಪೈಲ್ವಾನ್ ಒಂದು ಕಡ್ಡಿ ಹತ್ತಿಸಿ, ಲಿಂಗಣ್ಣನ ಬೀಡಿಗೆ ಇಡುತಾನೆ. ಲಿಂಗಣ್ಣ ದೊಡ್ಡದೊಂದು 'ದಂ' ಎಳೆದು ಕೆಮ್ಮನ್ನು ತಡೀಲಾರದೆ, ಏಕಾರವಾಗಿ ಕೆಮ್ಮಿ, 'ಆಳು! ದಂ ಬತ್ತೈತಲ್ಲೋ!' ಅಂತ ಮತ್ತೆ ಬಲವಾಗಿ ಕೆಮ್ಮಿ, ... 'ಇದೇನು ಬೀಡಿನೋ, ಹಾಳು engine ಮಾರ್ಕಿಂದು! ನಡಿಯೋ, ಮಿಠಾಯಿ ಮಾಂಧಾತನಂಗ್ಡೀಗೆ. ಇವತ್ತು ಒಳ್ಳೇ ರಬ್ಡಿ ಮಾಡಿದ್ದೇನೆ ಅಂತ ಏಳೌನೆ. ತಾಜಾ ಪೂರಿ ರಬ್ಡಿ, ದೂದ್‌ಪೇಡಾ, ಒಂದೊಂದ್ರೂಪಾಯ್ದು ಒಡದ್ಬುಡಾದು. ಲೋ! ಆರೋಯ್ತಲ್ಲೋ ಬೀಡಿ! ಈ ಆಳ್ engine mark ಬೀಡಿ ಇನ್‌ಮ್ಯಾಕ್ತರ್ಬೇಡ' ಅಂತ ಬೀಡಿ ಹಚ್ಚಿ ಸ್ಕೊಂಡು ಪೌಲಾ ಹೆಜ್ಜೆ ಹಾಕ್ತಾ, ಛೋಟಾನ ಸಂಗಡ ನಿಷ್ಕ್ರಮಿಸುವನು."

ಕೈಲಾಸಂ ಇಷ್ಟೆಲ್ಲಾ ಹೇಳುತ್ತಿರುವಾಗ ಮಳೆ ಹನಿಯುವುದಕ್ಕೆ ಮೊದ ಲಾಯಿತು. ನಾನು ಆಕಾಶ ನೋಡಿ, "ಸಾರ್, ಜೋರಾಗಿ ಬರೋಹಾಗೆ ಕಾಣುತ್ತೆ. ಬೇಗ್ಬೇಗ ಮನೇ ಸೇರ್ಕೊಳ್ಳೋದು ವಾಸಿ." ಅಂದೆ. ಸಭೆ ಮುಂದಕ್ ತಳ್ಳಿದ್ವಿ.

ಕೈಲಾಸಮ್ಮೊ ನಾನೂ ಅವಸರವಸರವಾಗಿ ನಡೆದೆವು. ಕಣ್ಣಾಸ್ಪತ್ರೆ ಹತ್ತಿರ ಬರುವುದರೊಳಗೆ ಮಳೆ ಬಹು ಬಿರುಸಾಗಿ ಬಂತು. ಇಬ್ಬರೂ ಓಡಿ, White House ಸೇರಿ, ಹಿಂಭಾಗದಲ್ಲಿ ಇದ್ದ ಕೈಲಾಸಂರ ಕೋಣೆಗೇ ಹೋದೆವು.

"ಕೂತ್ಕೊ, ವೆಂಕಟೇಶ್. ಬಂದ್ಬಿಟ್ಟೆ, ಒಂದು cold plunge ತಕ್ಕೊಂಡು." ಅಂದ್ರು.

"ಏನ್ಸಾರ್, ಈ ಚಳೀಲಿ ಮಳೇಲಿ cold bathಏ ನಿಮಗೆ?" ಎಂದೆ.

"A cold bath is both a maker and breaker of the human body. If wisely used, it is a maker. ಬಂದ್ಬಿಟ್ಟೆ . . ."

ಹತ್ತೇ ನಿಮಿಷದಲ್ಲಿ ಸ್ನಾನ ಮಾಡಿ, ಬೇರೆ ಬನಿಯನ್ ಹಾಕಿಕೊಂಡು ಬಂದರು, ಕೈಲಾಸಂ. ಹಿಂದೆಯೆ, ಕೃಷ್ಣ, ಎರಡು ದೊಡ್ಡ ಲೋಟಗಳಲ್ಲಿ Ovaltine ತಂದಿಟ್ಟ. "ಹರಿಃ, training ಎಡ್ತ್ಕಂಡಿರಕ್ಕ್ರಾಂ. Ready for challenge, ಎಲ್ಲಾತ್ಲೇಯೂಂ!" ಅಂದ.

ಕೈಲಾಸಂ: "Take it, Venkatesh, before it gets cold. I think you eat very much less or eat very poor quality for the amount of exercise you take."

ನಾನು: "Precisely, Sir. First reason: Cannot afford it. Secondly: ತಿನ್ನೋದಕ್ಕೆ ಇರೋರು ಮಾತ್ರ physical training ತೆಕೋಬಹುದು, ಇತರರಿಗಾಗ್ದು ಅಂದ ಹಾಗಾಗುತ್ತೆ. ಅಕ್ಕಿ, ರಾಗಿ, ಬೇಳೆ, ಕಾಯಿಪಲ್ಯ, ಮಜ್ಜಿಗೆ ಇದೆಲ್ಲಾ ತೆಗೋತೇನೆ, ಸಾರ್. ಹಾಲು, ಬೆಣ್ಣೆ, ತುಪ್ಪ ಇವುಗಳನ್ನ ಮುಟ್ಟೋದಿಲ್ಲ, ಸಾಧ್ಯವಾದರೆ ಇನ್ನೊ ಒಂದು ಹತ್ತು ಹದಿನೈದು ವರ್ಷ. I know I am doing a wrong thing, perhaps, setting up a bad example; but, ಈ meagre foodನಲ್ಲೇ ಒಂದು good physiqueನೂ achieve ಮಾಡಿದ್ರೆ ಅದು laudable ಅಲ್ವೇ, ಸಾರ್!"

ಕೈಲಾಸಂ: "Dangerous, ಮಗು. Malnutritionಉ!" Natural inborn vitality ಇಲ್ದಿದ್ದೋರ್ಗೆ, hopelessಉ!"

ಕೈಲಾಸಂ ಬಲವಂತ ಮಾಡಿ ನನಗೆ ಆ ovaltine ಕುಡಿಸಿ, ತಾವೂ ಕುಡಿದರು. ಹಾಕಿದ್ದು ಒಳ್ಳೇ ಗಟ್ಟಿಹಾಲು, ಸಕ್ಕರೆ ಮಾತ್ರ ಸ್ವಲ್ಪ ಹೆಚ್ಚು.

ಆಮೇಲೆ ಯಾವುದೋ ಮಾತಿನ ಸಂದರ್ಭದಲ್ಲಿ "ಕೈಲಾಸಂ, ಈ pigeon chest ಅಂತಾರಲ್ಲ, ಅದೇನು? ನಿಮಗೆ ಗೊತ್ತೆ?" ಎಂದು ಕೇಳಿದೆ.

ಕೈಲಾಸಂ ಹೇಳಿದರು: "ಅದು chestಉ, it is almost a triangle with the sternum as apex; ಎರಡುsideನಲ್ಲೂ rib-boxಉ depress ಮಾಡಿದ್ಹಾಗಿರುತ್ತೆ."

ಕೈಲಾಸಂ ಅದನ್ನ ಹೇಳಿ ವಿವರಿಸುತ್ತಿರುವಾಗ ನನ್ನ ಮನಸ್ಸು ಏನೇನೋ ಯೋಚನೆಮಾಡುತ್ತಿತ್ತು. 'ಅರ್ಥವಾಯಿತೇ?' ಎಂದು ಕೈಲಾಸಂ ಕೇಳಿದರು. 'ಆಯ್ತು ಸಾರ್' ಅಂದೆ.

ನಾನು ಈ ಪ್ರಶ್ನೆ ಕೇಳುವುದಕ್ಕೆ ಒಂದು ಕಾರಣವಿತ್ತು. ಒಂದೆರಡು ತಿಂಗಳ ಹಿಂದೆ ತಂಜಾವೂರಿನವರೊಬ್ಬರು ಟಿಪ್ಪೂಸುಲ್ತಾನ್ ಅರಮನೆಯನ್ನು ನೋಡುತ್ತಿರುವಾಗ ನಮ್ಮ ವ್ಯಾಯಾಮಶಾಲೆಯೊಳಕ್ಕೂ ಬಂದು, ನನ್ನೊಡನೆ ಒಂದೆರಡು ಮಾತಾಡಿ ಹೋಗಿದ್ದರು. ಅನಂತರ ಒಂದೆರಡು ತಿಂಗಳಾದ ಮೇಲೆ ಅವರು ನನಗೊಂದು ಕಾಗದ ಬರೆದಿದ್ದರು. ಅದರ ಒಕ್ಕಣೆ ಹೀಗಿತ್ತು: "ನಿಮಗೆ ನನ್ನ ನೆನಪು ಇರಬಹುದು. ಈಗ ಎರಡು ತಿಂಗಳ ಹಿಂದೆ ನಿಮ್ಮ ವ್ಯಾಯಾಮಶಾಲೆಯಲ್ಲಿ ನಿಮ್ಮನ್ನು ಕಂಡಿದ್ದೆ. ಹುಡುಗರಿಗೆ ವ್ಯಾಯಾಮ ಮಾಡಿಸುತ್ತಿದ್ದಿರಿ. ನೀವು ಕಲಿಸುತ್ತಿದ್ದ ರೀತಿಯನ್ನು ನೋಡಿ ಸಂತೋಷಪಟ್ಟೆ. ನನಗೊಬ್ಬ ಹನ್ನೊಂದು ವರ್ಷದ ಮಗನಿದ್ದಾನೆ. ಅವನಿಗೆ pigeon chest ಅಂತ ಡಾಕ್ಟರುಗಳು ಹೇಳುತ್ತಾರೆ. ಒಳ್ಳೆಯ ಆಹಾರ, Cod Liver Oil ಇವೆಲ್ಲಾ ಕೊಡುತ್ತಿದ್ದೇನೆ. Breathing exercises ಮಾಡಿದರೆ, ಒಳ್ಳೆಯ ದಾಗುತ್ತದೆಂದು ಡಾಕ್ಟರು ಅಭಿಪ್ರಾಯಪಡುತ್ತಾರೆ. ನಿಮಗೆ ಆ breathing exercises ತಿಳಿದಿರಬೇಕು. ದಯವಿಟ್ಟು ಅದನ್ನು ತಿಳಿಸುತ್ತೀರಾ?" ಎಂದು. ನನಗೆ ಆಗ anatomy and physiology ಅಣುಮಾತ್ರ ತಿಳಿದಿರದಿದ್ದರೂ ಎಲ್ಲ ಬಲ್ಲೆನೆಂಬ ಅಹಂ ಪೂರ್ತಿಯಾಗಿತ್ತು. ನಾನು ಅವರಿಗೆ ಬರೆದೆ: "ಅಯ್ಯಾ ಅದು pigeon chest ಅಲ್ಲ. How can it house pigeons? It must be pidgeon chest, an unnatural formation." ಅಂತ.

ಅದನ್ನ ನೋಡಿ ಆತನಿಗೆ ಎಷ್ಟು ಸಿಟ್ಟು ಬಂತೋ; ಆತ ಜವಾಬು ಬರೆದರು: "I thought you were a well-read person. Yes, his chest cannot house pigeons; but your head can, because it is hollow inside." ಅಂತ. ಈ ಕಾಗದ ಓದುವಾಗ ನನಗೆ ಬಂದ ಕೋಪಕ್ಕೆ ಮಿತಿ ಮೇರೆ ಒಂದೂ ಇರಲಿಲ್ಲ. ಆಮೇಲೆ, dictionaryಲಿ ನೋಡಿ, pigeon chest 'ಸರಿ' ಅಂತ ತಿಳಿದುಬಂದ ಮೇಲೆ, ನನ್ನ ಸಿಟ್ಟು ಎಷ್ಟಿತ್ತೋ ಅದಕ್ಕೆ ಲಕ್ಷಪಾಲು ಅವಮಾನವಾಯಿತು. ಕೆಂಪಗೆ ಕಾಯಿಸಿದ ಅಗಲವಾದ ಕಬ್ಬಿಣದ ಪಟ್ಟಿಯಿಂದ ನನ್ನ ಮುಖದ ಮೇಲೆಲ್ಲ ಬರೆ ಎಳೆದ ಹಾಗಾಯಿತು. ಆ ದಿನ ಆದ ಅವಮಾನವನ್ನು ಇವತ್ತಿಗೂ ನಾನು ಮರೆಯುವುದು ಆಗಿಲ್ಲ.

ಆದರೆ, ಆದರಿಂದ ನಾನೊಂದು ದೊಡ್ಡ ಪಾಠವನ್ನೇ ಕಲಿತೆ. ನನ್ನ ಉದ್ಯೋಗಕ್ಕೆ—ವ್ಯಾಯಾಮ ಮಾಡುವುದು, ವ್ಯಾಯಾಮ ಮಾಡಿಸುವುದು, ಅದಕ್ಕೆ—ಎಷ್ಟು ವಿಷಯ ಸಂಗ್ರಹ ಮಾಡಬೇಕೋ ಅಷ್ಟು ಮಾಡಿಯೇ ತೀರ ಬೇಕೆಂದು ನಿಶ್ಚಯಿಸಿದೆ. ಮುನ್ನೂರು ರೂಪಾಯಿ ಸಾಲಮಾಡಿ, ಆರೋಗ್ಯ ಶಾಸ್ತ್ರ, ಶರೀರಶಾಸ್ತ್ರ, ಮಾನವನಿಗೆ ಉಂಟಾಗುವ ರೋಗರುಜಿನಗಳು, ಅವು ಗಳ ಚಿಕಿತ್ಸಾವಿಧಾನಗಳು, ಬೇರೆ ಬೇರೆ ವ್ಯಾಯಾಮ ಪದ್ಧತಿಗಳು ಇವುಗಳಿಗೆ ಸಂಬಂಧಿಸಿದ ಪುಸ್ತಕಗಳನ್ನು ತರಿಸಿದೆ. ವಿದ್ಯಾರ್ಥಿಗಳು ಪರೀಕ್ಷೆಗೆ ಪಠ್ಯ ಪುಸ್ತಕಗಳನ್ನು ಓದುವ ಹಾಗೆ ಓದಲು ತೊಡಗಿದೆ. ರಾತ್ರಿ ಹೆಚ್ಚು ಊಟ ಮಾಡಿದರೆ, ಎಲ್ಲಿ ಬೇಗ ನಿದ್ದೆ ಬಂದುಬಿಡುತ್ತದೆಯೋ ಎಂಬ ಭಯದಿಂದ ಅರ್ಧ ಹೊಟ್ಟೆ ಕಾಲುಹೊಟ್ಟೆ ತಿಂದು, ರಾತ್ರಿ ಹನ್ನೆರಡರ ವರೆಗೂ ಓದುವುದು ಬರೆಯುವುದು; ಹೀಗೆ ಕಷ್ಟಪಟ್ಟು ಕಲಿತೆ. ಇನ್ನೂ ಕಲಿಯುತ್ತಿದ್ದೇನೆ, ಕಲಿಯುತ್ತಲೇ ಇರುತ್ತೇನೆ.

ಕೈಲಾಸಂ ಇನ್ನೂ ಮಾತನಾಡುತ್ತಲೇ ಇದ್ದರು. ನಡುವೆ ನಾನು "ಸರ್, cold water is both a maker and a breaker of the human body ಅಂದ್ರಿಲ್ಲಾ—ಅದು ಹೇಗೆ?" ಎಂದು ಕೇಳಿದೆ.

ಅದಕ್ಕೆ ಕೈಲಾಸಂ: "ವೆಂಕಟೇಶ್, ನೀನು ನಿನ್ನ subjectನಲ್ಲೇ well up ಇಲ್ದಿದ್ರೆ . . . ಹೇಗೆ? What are you going to teach these young men, if you are going to take up this physica l

culture as a career? For God's sake, study well, unless you are satisfied to be a drill teacher. ಈ cold water ಇದೆಯಲ್ಲಾ—ಇದರ effect on the Nervous system and the Vascular system, that is: heart and circulation, ಅದರ ಮೇಲೆ ಬಹಳ ಇದೆ. First, you must understand the heart, its anatomy and its physiology. ಎಲ್ಲಿ? Let me see explain to me what a heart is."

ನಾನು ನನಗೆ ಆಗ ತಿಳಿದಿದ್ದಷ್ಟನ್ನು ಹೇಳಿದೆ.

ಅದಕ್ಕೆ ಕೈಲಾಸಂ: "If this is your knowledge of the heart, I am really sorry for you, dear Venkatesh. It is better you stick on to your ದೋಸೆ ಅಂಗಡಿ. If you do not know which side of the heart the bicuspid valve is, and which side of the heart the tricuspid is, and which side carries venous blood, God help you and your Institution that is going to be. Now, listen to me." ಎನ್ನುತ್ತಾ ಕೃಷ್ಣನನ್ನು ಕರೆದು, ಅಡಿಗೆ ಮನೆಯಿಂದ ಒಂದು ಇದ್ದಿಲು ಚೂರು ತರಿಸಿ, ನೆಲದ ಮೇಲೆ ಹೃದಯದ ಚಿತ್ರ ಬರೆದು, ಅದರ ಒಳಅಂಗಾಂಗಗಳನ್ನು ಕ್ರಮವಾಗಿ ವಿವರಿಸಿ, ರಕ್ತನಾಳಗಳನ್ನು ಬರೆದು, ಅವುಗಳ ಹೆಸರನ್ನೂ ವಿಶದಪಡಿಸಿ, ಮಲಿನರಕ್ತವು ಶ್ವಾಸಕೋಶಗಳಲ್ಲಿ ಹೇಗೆ ಶುದ್ಧಿಯಾಗಿ ಪುನಃ ಪರಿಚಲನೆಯನ್ನು ಮುಗಿಸಿಕೊಂಡು ಬರುತ್ತದೆ ಎಂಬುದನ್ನು ನನ್ನ ಮಂಕುಬುದ್ಧಿಗೂ ಅರ್ಥವಾಗುವಂತೆ ಮಾತ್ರವಲ್ಲದೆ ತಲೆಯಲ್ಲಿ ಬೇರೂರಿ ನಿಲ್ಲುವಂತೆಯೂ ವಿವರಿಸಿದರು.

ಅಷ್ಟು ಚೆನ್ನಾಗಿ ಬೋಧಿಸುವವರನ್ನು ನಾನು ಅದುವರೆಗೂ ಕಂಡಿದ್ದಿಲ್ಲ. ಅವರ ಸಾಮ್ಯಸಾಮತಿಗಳು ಸಂಗತಿಗಳನ್ನು ಅಚ್ಚಳಿಯದಂತೆ ಮನಸ್ಸಿನಲ್ಲಿ ಸ್ಥಾಪಿಸುವಂಥವು. ಉದಾಹರಣೆಗೆ, ಹೃದಯದ valves ಎಂಬ ದ್ವಾರಕವಾಟಗಳನ್ನು ವಿವರಿಸುವಾಗ "ವೆಂಕಟೇಶ್, You can never forget the names and the positions of the valves in the heart if you remember that 'The bishop is not in the right always.' That means the bicuspid valve is not on the right

side. So it must be on the left. And hence the other one, namely the tricuspid, is on the right side of the heart."

ಕೈಲಾಸಂ ಇದನ್ನು ಹೇಳುತ್ತಿದ್ದಾಗ ನನಗೆನ್ನಿಸಿತು : "ಚೆನ್ನಾಗಿ ತಿಳಿದು ಕೊಂಡಿರುವವರು ಅದನ್ನುಎಲ್ಲರಿಗೂ ಸುಲಭವಾಗಿ ಮನಮುಟ್ಟುವ ರೀತಿಯಲ್ಲಿ ಹೇಳಬಲ್ಲರು, ಹೇಳಿಕೊಡಬಲ್ಲರು. ಪಾಠ ಹೇಳಿಕೊಡುವುದಕ್ಕೂ ಒಂದು ಜಾಣ ತನ ಬೇಕು. ಇಲ್ಲದಿದ್ದರೆ 'ವಿದ್ಯಾರ್ಥಿಗೆ ಬರುವುದಿಲ್ಲ. ಗುರುವಿಗೆ ಮರೆಯುವುದಿಲ್ಲ, ಎಂದ ಹಾಗೆ ಆಗುತ್ತದೆ. ವಿದ್ಯೆಯನ್ನು ಹೇಳಿಕೊಡುವ ಗುರು ಪ್ರವೀಣನೂ ಜಾಣನೂ ದಯಾಳುವೂ ಭೇದಭಾವರಹಿತನೂ ಆಗಿರಬೇಕು. ಇಂಥವರು ಹೇಳಿಕೊಡುವುದಾದರೆ ವಿದ್ಯಾರ್ಥಿಗೆ ಆಸಕ್ತಿ ಹೆಚ್ಚುವುದು, ಇನ್ನೂ ತಿಳಿದು ಕೊಳ್ಳಬೇಕೆಂಬ ಆಸೆಯುಂಟಾಗುವುದು. ಹಾಗಲ್ಲದೆ, S.S.L.C. failಆದ ವನ್ನು ತಂದು teacherಮಾಡಿ, Primary Class ಮಕ್ಕಳನ್ನ ಅವನ ಕೈಗೆ ಒಪ್ಪಿಸಿದರೆ, 'ಗೋವಿಂದಾ—ಗೋಗೋವಿಂದಾ !' ತಾನೆ !

ಇಷ್ಟೆಲ್ಲಾ ಆದ ಮೇಲೆ, ಕೈಲಾಸಂ ನನ್ನ ಮನಸ್ಸಿನ ಮೇಲೆ ಆದ ಪರಿ ಣಾಮವನ್ನು ಕಾಣದೆ ಹೋಗಲಿಲ್ಲ. "Oh! Dash it, Venkatesh ! You will learn and learn well. I am confident of it now." ಎಂದರು.

ಆ ಮಾತು ನನಗೆ ಆಶೀರ್ವಾದವಾಗಿ ಪರಿಣಮಿಸಿತು. ಕಲಿಯಬೇಕೆಂಬ ಹುಚ್ಚು ಹೆಚ್ಚಾಯಿತು, ಬಲವಾಯಿತು. ತಂಜಾವೂರಿನ ಮಹಾನುಭಾವರು ಹಾಕಿದ ಬರೆ ಎಂದೆಂದಿಗೂ ಮಾಯದ ನೋವಾಯಿತು. ಇವೆರಡೂ ನನ್ನ ಒಳ್ಳೆಯದಕ್ಕೇ ಕಾರಣಗಳಾದವು. ಇದರಿಂದಾಗಿ, ನನ್ನ ಈಗಿನ ಉದ್ಯೋ ಗಕ್ಕೆ ಸಂಬಂಧಪಟ್ಟ ಹಲವಾರು ಪುಸ್ತಕಗಳನ್ನು ಓದಿ ನಾಲ್ಕು ಅಕ್ಷರ ಕಲಿತೆ.

ಇನ್ನೂ ಒಂದು ವಿಷಯದಲ್ಲಿ ಕೈಲಾಸಂ ನನಗೆ ಗುರುಗಳಾದರು. ಕೈಲಾಸಂ ಅವರ ಸ್ನೇಹಿತರೊಬ್ಬರು ಆಗ ತುಮಕೂರು ಹೈಸ್ಕೂಲಿನಲ್ಲಿ ಉಪಾ ಧ್ಯಾಯರಾಗಿದ್ದರು. ಅವರಿಗೆ ಚಲನಚಿತ್ರದಲ್ಲಿ ಅಭಿನಯಿಸಬೇಕೆಂದು ಆಸೆ. ಆದರಿಂದ, ಆಗ ಶ್ರೀ ಭವನಾನಿಯವರು ಬೆಂಗಳೂರಿನಲ್ಲಿ ತಯಾರಿಸುತ್ತಿದ್ದ ವಸಂತಸೇನಾ ಚಿತ್ರದಲ್ಲಿ ಪಾತ್ರವಹಿಸುತ್ತಿದ್ದ ಕೈಲಾಸಂ ಅವರೊಂದಿಗೆ ತಾವೂ

ಸೇರಬಹುದೆಂದು ಬಂದಿದ್ದರು. ಆಗ ನನಗೆ ಸ್ವಲ್ಪ photography ಬರುತ್ತಿತ್ತು. 'ಈ ಸ್ನೇಹಿತರದು ಒಂದು photo ತೆಗೆದುಕೊಡು. ಭವನಾನಿಯವರಿಗೆ ತೋರಿಸ ಬೇಕು' ಅಂದರು, ಕೈಲಾಸಂ. ನಾನು ತೆಗೆದ photo ಅಕಸ್ಮಾತ್ತಾಗಿ ಚೆನ್ನಾ ಗಿಯೇ ಬಂತು. ಅದನ್ನು ಅವರ ಕೈಲಿಡುತ್ತ ಹೆಮ್ಮೆಯಿಂದ "ಹೇಗಿದೆ, ಸರ್, workಉ? No professional could have taken a better picture!" ಎಂದೆ. "ಹೂಂ, ಚೆನ್ನಾಗಿದೆ." ಅಂದರು, ಕೈಲಾಸಂ, ಆಗ.

ಆದರೆ, ಆ ಸ್ನೇಹಿತರು ಹೊರಟುಹೋದ ಮೇಲೆ, ನನ್ನ ಮುಖದ ನೀರಿಳಿಸಿಬಿಟ್ಟರು. "Venkatesh, you better learn some good manners and behaviour. ಮನುಷ್ಯನಿಗೆ ಆತ್ಮಪ್ರಶಂಸೆ ಖಂಡಿತ ಕೂಡದು. ಚೆನ್ನಾಗಿ ಓದಿದ ಮನುಷ್ಯ, ತಿಳಿದುಕೊಂಡಿರೋ ಮನುಷ್ಯ, ಯಾವನೂ ಆತ್ಮ ಪ್ರಶಂಸೆ ಮಾಡಿಕೊಳ್ಳುವುದಿಲ್ಲ; ಮಾಡಿಕೋಬಾರದು. ನಿನಗಿಂತಲೂ ಚೆನ್ನಾಗಿ ಯಾರೂ photo ತೆಗೀಲಾರರೂಂತ ಹೊಗಳಿಕೊಂಡೆ ಯಲ್ಲಾ—ನಿನಗಿಂತ ನಾನು ಚೆನ್ನಾಗಿ ತೆಗೆಯಬಲ್ಲೆ. ನಮ್ಮಿಬ್ಬರಿಗಿಂತ ಚೆನ್ನಾಗಿ ತೆಗೆಯಬಲ್ಲವರು ಸಾವಿರಾರು ಜನ ಇದ್ದಾರೆ. ಹೀಗೆ ತನ್ನನ್ನು ತಾನೇ ಹೊಗಳಿಕೋಬಾರದು. ಈ 'ನಾನು' ಅನ್ನೋದು ನಿನ್ನ ನಾಲಿಗೇಲಿ ಎಂದೆಂದೂ ಬಾರದೇನೇ ಇದ್ದರೆ, ಒಳ್ಳೇದು."

ಈ ಬುದ್ಧಿವಾದವನ್ನು ನಾನು ಎಂದಿಗೂ ಮರೆಯಲಾರೆ. ಎಲ್ಲ ಅಭ್ಯಾಸ ಗಳಿಗಿಂತ, ಈ 'ನಾನು' ಎನ್ನುವ ಅಭ್ಯಾಸವನ್ನು ಬಿಡುವುದು ಬಹು ಕಷ್ಟ. ನಾಲಗೆಯನ್ನು ಎಷ್ಟೆಷ್ಟು ಬಿಗಿಹಿಡಿದರೂ, 'ಹೀನಸುಳಿ' ಇದ್ದಹಾಗೆ; ಈ ಕುಸಂಸ್ಕಾರದ 'ನಾನು' ಅದು ಹೇಗೋ ಮಾತನಾಡುವಾಗಲೆಲ್ಲ ನೂಕಿಕೊಂಡು ಮುಂದೆಯೇ ಬಂದುಬಿಡುತ್ತದೆ. ಇದನ್ನು ನಿಗ್ರಹಿಸುವುದು ಇನ್ನೂ ನನಗೆ ಆಗಿಲ್ಲ. ಅವರ ಉಪದೇಶದ ಮಾರ್ಗ ನನಗೆ ಅನುಕರಣೀಯ ಎಂದು ಕಂಡಿತೇ ವಿನಾ, ಅದರ ಕಾರ್ಯಾನುಸರಣೆ ಆಚರಣೆ ನನಗೆ ಇನ್ನೂ . . . ಇನ್ನೂ ಬಂದಿಲ್ಲ. ಈ 'ನಾನು' ಎನ್ನುವ ಪಿಶಾಚಿಯನ್ನು ಜಯಿಸಿಬಿಟ್ಟರೆ, ನನ್ನ ಜೀವನ್ಮುಕ್ತಿಯ ಪ್ರಥಮ ಸೋಪಾನದಲ್ಲಿ ಕಾಲಿಟ್ಟ ಹಾಗೆ.

ಇದೇ ಭಾವವನ್ನೇ "ನಾಹಂ ಕರ್ತಾ, ನಾಹಂ ಕಾರಯಿತಾ" ಎಂದು ನಾನು ಮೊದಲನೆಯ ಸಲ ಮೌಂಜೀಬಂಧನದ ಸಂದರ್ಭದಲ್ಲೂ, ಆ ಬಳಿಕ

ಪ್ರತಿ ಉಪಾಕರ್ಮದ ದಿನವೂ ಉಚ್ಚರಿಸುತ್ತಿದ್ದೇನೆ. ಅನುಷ್ಠಾನಕ್ಕೆ ತರಲು ಯತ್ನಿಸುತ್ತಿದ್ದೇನೆ. ಉತ್ಥಾನವೆಂದಿಗೋ ? ದೇಹಕ್ಕೆ ಚರ್ಮ ಅಂಟಿಕೊಂಡಿರುವಂತೆ ಆತ್ಮಕ್ಕೆ ಈ 'ನಾನು' ವಾಸನೆ ಅಂಟಿಕೊಂಡೇ ಇರುವ ಹಾಗೆ ಕಾಣುತ್ತದೆ.

ಕೈಲಾಸಂ ಹೆಚ್ಚು ಕಡಮೆ ಒಂದೆರಡು ತಿಂಗಳು ದಿನವೂ ತಪ್ಪದೆ ವ್ಯಾಯಾಮಶಾಲೆಗೆ ಬರುತ್ತಿದ್ದರು, ನಮ್ಮೊಡನೆ ವ್ಯಾಯಾಮ ಮಾಡುತ್ತಿದ್ದರು. ಹೊತ್ತಿಗೆ ಸರಿಯಾಗಿ ಒಳ್ಳೆಯ ಊಟ, ತಣ್ಣೀರು ಸ್ನಾನ, ಒವಲ್‌ಟೈನ್ ಪಾನ, ತೃಪ್ತಿಕರವಾದ ನಿದ್ರೆ— ಇವುಗಳ ಅನುಕೂಲದಲ್ಲಿ ಅವರು ಹಿಂದೆಂದೂ ಇಲ್ಲದಿದ್ದಷ್ಟು ದೇಹಶಕ್ತಿ, ಮಾಂಸಖಂಡಗಳ ಬೆಳವಣಿಗೆ, ಆರೋಗ್ಯಗಳನ್ನು ಬೆಳಸಿಕೊಂಡರು. ಮೊದಲುಮಾಡಿದ ಹದಿನೈದು ದಿನಗಳಲ್ಲೆ ಅವರ ಎದೆಯಳತೆ ಎರಡು ಅಂಗುಲ ಬೆಳೆಯಿತು, ಕುತ್ತಿಗೆಯ ಸುತ್ತಳತೆ ಒಂದೂವರೆ ಅಂಗುಲ ಹೆಚ್ಚಿತು, ತೊಡೆ ರೆಟ್ಟೆ ಇವೂ ಒಂದೂವರೆ ಒಂದೂವರೆ ಅಂಗುಲ ಹೆಚ್ಚಿದುವು. ಇಷ್ಟು ಶೀಘ್ರವಾದ ವೃದ್ಧಿಗೆ ಮುಖ್ಯ ಕಾರಣವೇನೆಂದರೆ, ಕೈಲಾಸಂ ಹೇಳಿದರು " Con - cen - tra - tion ಉ ಮಗು, CONCENTRATION !"

ಈ Concentration ಎಂಬ ಪರವಸ್ತುವನ್ನು ಕೈಲಾಸಂ ತಮ್ಮ ಅತ್ಯಮೋಘವಾದ ' PURPOSE' ನಾಟಕದಲ್ಲಿ ಚೆನ್ನಾಗಿ ಪ್ರಸ್ತಾಪಿಸಿ ರೂಪಿಸಿದ್ದಾರೆ. ಅಲ್ಲಿ ದ್ರೋಣಾಚಾರ್ಯರು ತಮ್ಮ ಶಿಷ್ಯನಾದ ಅರ್ಜುನನಿಗೆ ಬಿಲ್ವಿದ್ಯೆಯನ್ನು ಕಲಿಸುವಾಗ ಇದರ ಸೂಕ್ಷ್ಮವನ್ನು ಉಪದೇಶಿಸುತ್ತಾರೆ. ಕೈಲಾಸಂಗೆ ಈ ಚಿತ್ತೈಕಾಗ್ರತೆ ಚೆನ್ನಾಗಿತ್ತು. ಇದಕ್ಕೆ ಆತ್ಮಬಲ, ಸಂಯಮ ಅವಶ್ಯಕ. ಯಮನಿಯಮಗಳೇ ಇದಕ್ಕೆ ಮೊದಲ ಮೆಟ್ಟಲು. ಕೈಲಾಸಂ, ವ್ಯಾಯಾಮದಿಂದ ಸಜ್ಜುಗೊಂಡ ಈ ಮೈಯಿರುವಾಗಲೇ; ತಮ್ಮ 'ಪೋಲಿ ಕಿಟ್ಟಿ' ಎಂಬ ಪುಸ್ತಕಕ್ಕೆ ಮುಖಚಿತ್ರವಾದ—'(ಬೈಸೆಪ್ಸನ್ನು ಬಿಗಿಸುತ್ತ,) ಮೈನೋಡಿ ಮಾತಾಡೋ ಮುಗ್ಗೆ'—ಎಂಬುದಕ್ಕೆ Photo ತೆಗೆಸಿದ್ದು.

ಕೈಲಾಸಮಿನ ಸಹವಾಸದಲ್ಲಿ ನನಗೆ ಅನುಕೂಲವಾದ ಅಂಶಗಳನ್ನು ಮಾತ್ರ ನಾನು ಹೆಚ್ಚಾಗಿ ಗ್ರಹಿಸುತ್ತ, ಆದಷ್ಟು ಅಭ್ಯಾಸ ಮಾಡುತ್ತಿದ್ದೆನಾದರೂ, ಸಹವಾಸದೋಷದಿಂದ ನಿದ್ದೆ ಕೆಡುವುದು ಮಾತ್ರ ಬಂದೇಬಿಟ್ಟಿತು.

 111253

ಕೈಲಾಸಮಿನ ಸಹವಾಸದಲ್ಲಿ ನಿದ್ರೆಗೆ ಅವಕಾಶವೇ ಇಲ್ಲ. ಭಗವದ್ಗೀತೆಯಲ್ಲಿ ಹೇಳಿಲ್ಲವೇ: 'ಪ್ರಪಂಚವೆಲ್ಲವೂ ನಿದ್ರೆಯಲ್ಲಿದ್ದಾಗ ಸಂಯಮಿಯು ಎಚ್ಚರವಾಗಿರುತ್ತಾನೆ, ಪ್ರಪಂಚವು ಎದ್ದಿರುವಾಗ ಅವನು ನಿದ್ರಿಸುತ್ತಾನೆ.'—ಅದರಂತೆಯೇ ಕೈಲಾಸಂ ಸೂರ್ಯೋದಯವನ್ನು ಕಂಡೊಡನೆಯೇ ಮಲಗಿ ನಿದ್ರಿಸುತ್ತಿದ್ದರು ; ಎಚ್ಚರವಾಗುತ್ತಿದ್ದುದು ಪ್ರಾತಃಕಾಲ ೧೦-೧೧ ಗಂಟೆಗೆ. ಪುನಃ ಮಧ್ಯಾಹ್ನ ಊಟವಾದ ಕೂಡಲೇ ನಿದ್ದೆ ; ಟೀ ಕುಡಿಯುವ ಹೊತ್ತಿಗೆ ಎಚ್ಚರ, ಮತ್ತೆ ಮಲಗುವುದು ಸೂರ್ಯಾಸ್ತಮಾನದವರೆಗೆ. ಇದು ನನಗೆ ಸಾಧ್ಯವಾಗುತ್ತಿರಲಿಲ್ಲ. ನಾನು ಬೆಳಗ್ಗಿನಿಂದ ಸಂಜೆಯವರೆಗೂ ದುಡಿಯುತ್ತಿದ್ದೆ. ಸಂಜೆ ವ್ಯಾಯಾಮ ಮಾಡುತ್ತಿದ್ದೆ. ಆದರಿಂದ ರಾತ್ರಿ ಬೇಗನೆ ನಿದ್ರೆ ಬರುತ್ತಿತ್ತು. ಆದರೆ ಕೈಲಾಸಂ ನನಗೆ ನಿದ್ದೆಗೇ ಅವಕಾಶ ಕೊಡುತ್ತಿರಲಿಲ್ಲ. "Venkatesh, don't waste this beautiful night. Come out" ಎಂದು ಹೇಳಿ, ಮನೆಯಲ್ಲಿ ಮಲಗಿದ್ದ ನನ್ನನ್ನು ಎಬ್ಬಿಸಿ, ತಮ್ಮ ಜೊತೆಯಲ್ಲಿ ಕರೆದುಕೊಂಡು ಹೋಗುತ್ತಿದ್ದರು. ಪುನಃ ನಾನು ಮನೆಗೆ ಬಂದು ಮಲಗುತ್ತಿದ್ದುದು, ಬೆಳಗಿನ ಜಾವ ಮೂರು ಗಂಟೆಗೋ ನಾಲ್ಕು ಗಂಟೆಗೋ, ಅಥವಾ ಸೂರ್ಯೋದಯವಾದ ಮೇಲೆಯೇನೋ ! ಹೀಗೆ ದಿನಕ್ಕೆ ಎರಡು ಮೂರು ಗಂಟೆಗಳ ಕಾಲ ಮಾತ್ರವೇ ನಿದ್ದೆ ಮಾಡುತ್ತ, ನಾಲ್ಕು ವರ್ಷ ಕೈಲಾಸಂ ಸಂಗಡ ಇದ್ದು ಅನುಭವಿಸಿ ಚೆನ್ನಾಗಿ ಅಭ್ಯಾಸ ಮಾಡಿಕೊಂಡೆ. ಮಾರ್ಗಶಿರ ಪುಷ್ಯ ಮಾಸಗಳಲ್ಲಿ ಕೂಡ, ಬೆಂಗಳೂರಿನ ಬೆಳಗಿನ ಜಾವದ ಛಳಿಯಲ್ಲಿ, ಮೈಮೇಲೆ ಒಂದೇ ಒಂದು ತೆಳುವಾದ ಹತ್ತಿಯ ಬನೀನು ಹಾಕಿಕೊಂಡು, ಕೈಲಾಸಂ ಸಂಗಡ South Parade, Cubbon Park, ಧರ್ಮಾಂಬುಧಿ tank bund ಮುಂತಾದ ಕಡೆ ತಿರುಗಾಡಿದ್ದೇನೆ.

ಒಂದು ದಿನ . . . ನನಗೆ ಚೆನ್ನಾಗಿ ನೆನಪಿದೆ . . . ಡಿಸೆಂಬರ್ ತಿಂಗಳು, Cantonment B. R. V. ಯಲ್ಲಿ ಯಾವುದೋ ಇಂಗ್ಲಿಷ್ ಕಂಪೆನಿಯ ನಾಟಕ. ಕೈಲಾಸಂ ಮತ್ತು ನಾನು ಹೋಗಿದ್ದೆವು. ನಾಟಕ ಚೆನ್ನಾಗಿತ್ತು. ಛಳಿ ವಿಪರೀತವಾಗಿತ್ತು. Interval ನಲ್ಲಿ ಕೈಲಾಸಂ Bar ಗೆ ಹೋಗಿ, ಅಗ್ನಿದ್ರಾವಕ ತುಂಬಿಸಿಕೆ... lemonade ಕುಡಿದೆ. ನಾಟಕ ಮು... ಿ ಬರುವಾಗ

AKSHARA GRANTHALAYA
ACC.NO. 111253

ಆ ಛಳಿ ತಡೆಯಲಾಗಲಿಲ್ಲ. ನನಗೆ ಬಾಯಿ ಅದುರು ಹಿಡಿದು, ಒಳಗಡೆ ಹಲ್ಲು ಒಂದಕ್ಕೊಂದು ತಾಗಿ ಶಬ್ದವಾಗುತ್ತಿತ್ತು. ಕೈಲಾಸಂ ಹೊಟ್ಟೆಯಲ್ಲಿ ಅಗ್ನಿ ತುಂಬಿಕೊಂಡಿದ್ದರು, ಮೈಮೇಲೆ woolen suit ಧರಿಸಿದ್ದರು.

London stage ಇನ Shakespearean actorsನ ಒಬ್ಬೊಬ್ಬರ ವಿಷಯವನ್ನೂ ಕೈಲಾಸಂ ಹೇಳುತ್ತಾ ಬಂದರು. Sir Henry Irving, Sir Beerbohm Tree, Madam Sarah Bernhardt ಮುಂತಾದವರ ಪ್ರಶಂಸೆಯೆಲ್ಲಾ ಪೂರೈಸಿತು. Museum ಹತ್ತಿರ – ಹತ್ತಿರ ಬರುವಾಗ, "ವೆಂಕಟೇಶ್, now I will entertain you with my Karna" ಎಂದು ಷುರುಮಾಡಿದರು. ನನಗೋ, ಛಳಿ ಮೈಯನ್ನು ಹೊಕ್ಕು ಕರುಳುಗಳನ್ನು ನಡುಗಿಸುತ್ತಿತ್ತು. "ನಡೀತಾ ಇರೋಣ, ಸರ್." ಎಂದೆ. "No, you silly boy, now I have a greate idea. This Karna is going to be a big Drama by Kailasam." ಎನ್ನುತ್ತ, ನನ್ನನ್ನು ಆ ರೋಡಿನ ಕೊನೆಯಲ್ಲಿ ನಿಲ್ಲಿಸಿಕೊಂಡು, ಅವರಿಗೆ ಆಗ ತಾನೆ ಹೊಳೆದಿದ್ದ ಕರ್ಣನ ಕಥೆಯನ್ನು, ಕೈಲಾಸಂ ಮಾತ್ರವೆ ಹೇಳಬಲ್ಲ ರೀತಿಯಲ್ಲಿ, ಅಮೋಘವಾಗಿ, ಅದ್ಭುತವಾಗಿ ಹೇಳಿದರು. ಕೇಳುತ್ತಾ ಕೇಳುತ್ತಾ ನನಗೆ ಮೈಮೇಲಿನ ಸ್ಮರಣೆಯೇ ತಪ್ಪಿತು. ನಾನೂ ಕುರುಕ್ಷೇತ್ರದಲ್ಲಿ ದೂರಸಾಕ್ಷಿಯಾಗಿ ನಿಂತು, ಕರ್ಣ ಕುಂತಿ ಇವರ ಸಂವಾದವನ್ನು ಕಿವಿಯಾರೆ ಕೇಳುತ್ತಿರುವೆನೆಂದೇ ಎನ್ನಿಸಿತು. ನಿಂತಿದ್ದ ಸ್ಥಳ, ಹೊರಗಿನ ಛಳಿ, ಒಂದೂ ಲಕ್ಷ್ಯಕ್ಕೆ ಬರಲೇ ಇಲ್ಲ.

—ಬೆಳಗಿನ ಜಾವ ಎರಡು ಗಂಟೆಯ ಸಮಯ. ನಾಳೆ ಸೂರ್ಯೋದಯವಾಗುತ್ತಲೇ ಕರ್ಣನು ಕೌರವರ ಸರ್ವಸೇನಾಧಿಪತ್ಯವನ್ನು ವಹಿಸಿಕೊಂಡು ಯುದ್ಧಕ್ಕೆ ತೊಡಗಬೇಕಾಗಿದೆ. ಭೀಷ್ಮರ ಶರತಲ್ಪವಾಗಿದೆ, ದ್ರೋಣರ ವಧೆಯಾಗಿದೆ. ಅತಿರಥ ಮಹಾರಥರನೇಕರು ಮಡಿದುಹೋಗಿದ್ದಾರೆ. ಅದೇ ತಾನೇ, ದುರ್ಯೋಧನನು ಶೋಕಾಗ್ನಿಯಿಂದ ಬೆಂದು, ಕರ್ಣನ ಬಳಿಗೆ ಬಂದು, "ನೀನು ಸೈನ್ಯಗಳನ್ನು ನಡಸಿ ಪಾಂಡವರನ್ನು ಹತಮಾಡಿದಲ್ಲದೆ, ನನ್ನ ಮನಸ್ಸಿಗೆ ನೆಮ್ಮದಿಯಿಲ್ಲ, ನಿನ್ನಂತಹ ಅಪ್ರತಿಮ ವೀರನೊಬ್ಬನೇ ನನಗೆ ಈಗ ಸಹಾಯ ಮಾಡಬಲ್ಲವನು. ಕರ್ಣ, ನಿನಗೆ ಅಂಗರಾಜ್ಯಾಭಿಷೇಕವನ್ನು ಅಂದು ನಾನು ಮಾಡಿದೆ. ಈಗ ನೀನು ನನಗೆ ಈ ಮಕುಟಶ್ರೀಯನ್ನು

ಜಯಿಸಿಕೊಡು." ಎಂದು ಅಂಗಲಾಚಿ ಬೇಡುತ್ತಿದ್ದಾನೆ. ಕರ್ಣನು, ಸರ್ವ ಪ್ರಯತ್ನ ಮಾಡಿ ನಿನಗೆ ಸಂತೋಷವನ್ನುಂಟುಮಾಡುತ್ತೇನೆಂದು ಮಾತು ಕೊಟ್ಟಿದ್ದಾನೆ. ನಾಳಿನ ಯುದ್ಧಕ್ಕೆ ಕರ್ಣನ ಸಾರಥಿಯಾಗಿರುವೆನೆಂದು ಒಪ್ಪಿದ ಶಲ್ಯ ಶಸ್ತ್ರಾಸ್ತ್ರಗಳ ತೀಕ್ಷ್ಣತೆಯನ್ನು ಪರೀಕ್ಷಿಸುತ್ತಿದ್ದಾನೆ. ಕರ್ಣನು ದೀಪದ ಬೆಳಕಿನಲ್ಲಿ, ನಾಳೆಯ ರಣಕ್ಷೇತ್ರದ ಶತ್ರು ಸೇನಾ ಶಿಬಿರ, ವ್ಯೂಹಗಳ ನಕಾಶೆಗಳನ್ನು ಅವಲೋಕಿಸುತ್ತ, ತನ್ನ ಸೈನ್ಯಗಳ ವ್ಯೂಹರಚನೆ, ರಕ್ಷಣೆ, ಇವುಗಳನ್ನು ಚೆನ್ನಾಗಿ ಯೋಚನೆ ಮಾಡುತ್ತಿದ್ದಾನೆ. ಸಾಕುತಾಯಿ ಯಾದ ರಾಧೆ ಬಂದು ನೋಡಿ, "ಸ್ವಲ್ಪ ಹೊತ್ತಾದರೂ ಮಲಗು, ಮಗು" ಎಂದು ಮಮತೆಯಿಂದ ಹೇಳಿ, ಕರ್ಣನಿಗೆ ಕುಡಿಯಲು ಒಂದು ಪಾತ್ರೆಯಲ್ಲಿ ಹಾಲಿಟ್ಟು ಹೋಗಿದ್ದಾಳೆ . . . ಆ ಕಡೆ, ಕೃಷ್ಣನ ಕೌಟಿಲ್ಯದಿಂದ ಪಾಂಡವರ ಮಾತೆಯಾದ ಕುಂತಿ, ಭೀಕರವಾದ ಆ ರಾತ್ರಿಯಲ್ಲಿ, ಕುರುಕ್ಷೇತ್ರದ ಆ ರಣ ರಂಗದಲ್ಲಿ, ಮುಸುಕು ಹಾಕಿಕೊಂಡು, ಒಬ್ಬಳೇ ಧೈರ್ಯದಿಂದ, ದೈನ್ಯದಿಂದ, ಸತ್ತುಬಿದ್ದಿದ್ದ ಹೆಣಗಳ ರುಂಡಮುಂಡಗಳನ್ನು ತುಳಿದರೂ ಅವುಗಳ ಅಸಹ್ಯತೆ ಯನ್ನು ಸಹಿಸಿಕೊಂಡು, ಹೆಣಗಳನ್ನು ಕಿತ್ತು ತಿನ್ನುತ್ತಿರುವ ನಾಯಿ ನರಿ ತೋಳ ಮುಂತಾದುವುಗಳಿಗೆ ಹೆದರದೆ ನಡೆದು ಬರುತ್ತಿದ್ದಾಳೆ . . . ಆಕೆ ಹಾಗೆ ಬರುತ್ತಿರುವುದು ಭೀಷ್ಮನ ದಿವ್ಯಜ್ಞಾನಕ್ಕೆ ಆಗಲೆ ಗೋಚರವಾಗಿದೆ. ಶರತಲ್ಪ ದಲ್ಲಿ ಮಲಗಿ ಉತ್ತರಾಯಣವನ್ನೇ ನಿರೀಕ್ಷಿಸುತ್ತಿರುವ ಆ ಮಹಾತ್ಮನು "ಕೃಷ್ಣಾ, ಇದರಲ್ಲಿ ನಿನ್ನ ಸಂಕಲ್ಪವೇನೋ ಇದೆ. ಕಾಲರೂಪನಾದ ನಿನಗೆ ನನ್ನ ನಮಸ್ಕಾರಗಳು!" ಎನ್ನುತ್ತಿದ್ದಾನೆ . . . ಶಲ್ಯ ಹೋಗುತ್ತಿರುವ ಕುಂತಿಯನ್ನು ತಡೆದು "ಯಾರು ನೀನು ? ಇಷ್ಟು ಅವೇಳೆಯಲ್ಲಿ ಇಲ್ಲಿ ? ಯಾರು ಬೇಕು ನಿನಗೆ?" ಎಂದು ಗರ್ಜಿಸಿದ್ದಾನೆ. ಕುಂತಿ ತನ್ನ ಮುಖದ ಮುಸುಕನ್ನು ತೆಗೆದಿ ದ್ದಾಳೆ. ಆಕೆಗೆ ನಮಸ್ಕರಿಸಿ, ಕರ್ಣನಿರುವಲ್ಲಿಗೆ ದಾರಿ ತೋರುತ್ತಾನೆ ಶಲ್ಯ. ಅಲ್ಲಿ ಕರ್ಣನ ಶಂಕೆ, ಅವನ ಕೋಪ, ತಾಪ, ಅವನ ಮೂದಲೆಯ ಮಾತುಗಳು, ಕುಂತಿಯ ಕಣ್ಣೀರು, ಅವಳ ಅನ್ಯಾಯ ಯಾಚನೆ; ಮಾತು ಬಹು ದೂರ ಬೆಳೆಯಿತು. ನಾಳಿನ ಯುದ್ಧದಲ್ಲಿ 'ತಾನು ಸಾಯುವುದೇ ಲೇಸು' ಎಂಬ ಕರ್ಣನ ನಿರ್ಧಾರ; ಕಡೆಗೆ, ತನ್ನ ಸಾಕುತಾಯಿ ಇರಿಸಿಹೋಗಿದ್ದ ಹಾಲನ್ನು ತೆಗೆದು ಕೊಂಡು, ತನ್ನ ಹೆತ್ತತಾಯಿಯ ಕೈಯಮೇಲೆ ಧಾರೆಯೆರೆದು, ಕುಂತಿ

ಕೇಳಿದ್ದನ್ನು ಧಾರೆ ಎರೆದು ಕೊಡುತ್ತಾನೆ . . . ಆಕೆಯನ್ನು ಕಳುಹಿಸಿದ ಮೇಲೆ, 'ದುರ್ಯೋಧನನಿಗೆ ತಾನು ದ್ರೋಹಮಾಡಿಬಿಟ್ಟೆನೆಂದು ತಿಳಿದು' "ಸುಯೋಧನ, ಪರಮ ಮಿತ್ರ, ಹೆಂಗುಸೊಬ್ಬಳ ಚಾಪಲ್ಯಕ್ಕಾಗಿ ನಾನು ನಿನ್ನ ತಲೆಯನ್ನು ಬಲಿಕೊಟ್ಟೆ! ಅಯ್ಯೋ! ನಾನೇ ನಿನ್ನನ್ನು ಕೊಂದೆ! ನಾನೇ ಕೊಂದೆ!" ಎಂದು ಬಹುವಾಗಿ ಪ್ರಲಾಪಿಸುತ್ತಾನೆ . . .

ಕೈಲಾಸಂ ಈ ವಿವರಣೆಗಳನ್ನೆಲ್ಲ ಅವರದೇ ಆದ ರೀತಿಯಲ್ಲಿ, ಅವರದೇ ಆದ ಮಾತಿನ ಆಡಂಬರದಲ್ಲಿ ಹೇಳುವಾಗ ನನಗೆ ಮೈಯ ಮೇಲೆ ಸ್ಮರಣೆಯೇ ತಪ್ಪಿ ಹೋಯಿತು; ಶೈತ್ಯದಿಂದ ಗಡ್ಡೆಕಟ್ಟುವ ಹಾಗಾಗಿದ್ದ ನನ್ನ ಮೈಯ ರಕ್ತ ಆಗ ಕುದಿಯಲಾರಂಭಿಸಿತು. ಆ ಘಳಿಗೆಯಲ್ಲಿಯೂ ನಾನು ಬೆವತು ಹೋದೆ.

ಮನೆಗೆ ಬಂದು ಮಲಗಿದೆ; ನಿದ್ರೆ ಬರಲಿಲ್ಲ. ಅನೇಕ ದಿನ ಕಳೆದು ಹೋದರೂ, ಆ ದಿನ ಕೈಲಾಸಂ ವರ್ಣಿಸಿ ವಿವರಿಸಿದ ಆ ಕರುಣೆಯ ಕಥೆಯನ್ನು ಎಂದೆಂದಿಗೂ ಮರೆಯದಂತಾಯ್ತು.

"ಕಂಬ್ಳೀವ್ರುಳ!"

ಕೈಲಾಸಂ ದೊಡ್ಡ ದೊಡ್ಡ ನಾಟಕ ನೋಡಿದವರು. ಭಾಸ, ಕಾಳಿದಾಸ, ಭವಭೂತಿ ಮುಂತಾದ ಕವಿವರರ ನಾಟಕಗಳನ್ನು ತಾವೇ ಓದಿ ಆನಂದ ಪಟ್ಟವರು. ಅನೇಕ ನಾಟಕಗಳನ್ನು ತಾವೇ ಬರೆದುದಲ್ಲದೆ ಅವುಗಳಲ್ಲಿ ತಾವೂ ನಟಿಸಿದವರು. ಆಗಿನ ಪ್ರಪಂಚದ ಉತ್ತಮೋತ್ತಮ ನಟ ನಟಿಯರನ್ನು ಅವರು ನೋಡಿದವರು; ಅವರೊಡನೆ ಇದ್ದು, ನಡೆದು, ನುಡಿದು ಕಲಿತವರು. 'ಇಂತಹವರ ಸಂಗವು ನನ್ನ ಸುಕೃತವಲ್ಲದೆ ಇನ್ನೇನು!' ಎಂದು ಭಾವಿಸಿದೆ.

ಕೈಲಾಸಂಗೆ ಹಳ್ಳಿಯವರ ಹಾಡು, ಕುಣಿತ, ನಾಟಕ ಎಂದರೂ ಇಂತೆಯೇ ಅಭಿಮಾನ. ಒಂದು ದಿನ ತುಳಸೀ ತೋಟದ ನಾಟಕಮಂದಿರದಲ್ಲಿ ಯಾವುದೋ ತುಮಕೂರು ಕಂಪೆನಿಯವರ 'ರಾಮಾಂಜನೇಯ ಯುದ್ಧ'ವೆಂಬ ನಾಟಕವಿತ್ತು. Railway Stationನ ಆಗಿನ Spencer's ಇಂದ ಬರುವ ದಾರಿಯಲ್ಲಿ ಮೆಟ್ಟಲು ಇಳಿದು, ತುಳಸೀ ತೋಟದ ಮುಂದೆ ಬಂದಾಗ ಅಲ್ಲಿ ನಾಟಕ ನಡೆಯುತ್ತಿತ್ತು. ಮತ್ತೆ ಕೆರೆಯ ಕಟ್ಟೆಯ ಮೇಲೆ ಕುಳಿತು, ಸ್ವಲ್ಪ ಕಾಲ ಅದು ಇದು ಮಾತಾಡಿ, ನಾಟಕ ಮಂದಿರದ ಬಳಿ ಮತ್ತೆ ಬಂದಾಗ ರಾತ್ರಿ ಹನ್ನೊಂದು ಗಂಟೆಯಾಗಿಹೋಗಿತ್ತು.

"ನಾಟಕ ನೋಡೋಣವೆ ?" ಅಂದರು, ಕೈಲಾಸಂ.

"ಯಾವುದೋ ಹಳ್ಳಿ ಕಂಪೆನಿ ಇರಬೇಕು, ಸರ್. ಜನಗಳೂ ಹೆಚ್ಚು ಬಂದಿಲ್ಲ. ನಾಟ್ಕ ಷುರು ಆಗಿ ಎಷ್ಟೋ ಹೊತ್ತಾಗಿದೆ. ನೆಟ್ಟಗೆ ಮನೆಗೇ ಹೋಗೋಣ" ಎಂದೆ.

"ಇರು ವೆಂಕಟೇಶ್. Cant' we still enjoy it ? ಚೆನ್ನಾಗಿ ಹಾಡೋರೂ ಇರಬಹುದು. ವರದಾಚಾರಿ ಕಂಪೆನಿ ಮಟ್ಟುಗಳಿಗಿಂತ ಈ ಚಿಕ್ಕ ಕಂಪೆನಿ ಹಾಡುಗಳು ಎಷ್ಟೋ ಚೆನ್ನಾಗಿರುತ್ವೆ. ಇದು ಕೇಳು, ಎಷ್ಟು ಚೆನ್ನಾಗಿದೆ ಈ ಮಟ್ಟು!" ಎಂದು ಹಾಡುವುದಕ್ಕೆ ಷುರು ಮಾಡಿದರು: "ಎಳೆಯ ತಾವರೆಯಂತೆ ಪೊಳೆವ ನಿನ್ನಾಸ್ಯದ ಚೆಲುವಿಗೆ ಮರುಳಾದೆ . . . ! ನೋಡು: ಆ simple composition, how very lovely and, that lilt !" ಎಂದರು.

“ಚೆನ್ನಾಗಿದೆ, ಸರ್. ಈಗೇನು, ಹೋಗಿ ನೋಡಬೇಕೂಂತಿದ್ರೆ ನೋಡಿಯೇಬಿಡೋಣ.” ಎಂದು ಹೇಳುತ್ತ, ಕೈಲಾಸಂ ಅವರ ಜೊತೆಯಲ್ಲಿ ticket officeಗೆ ಬಂದೆ. ಜೇಬಿನಿಂದ purse ತೆಗೆದು, “ಸರ್, ನನ್ನ ಹತ್ತಿರ ಇರೋದು three rupees and five annas. One-eight classಗೆ ಮಾತ್ರ ಟಿಕೆಟ್ ತೆಗೋಬಹುದು.”

ಕೈಲಾಸಂ “Here, give me eight annas” ಎಂದು ನನ್ನ ಕೈಯಿಂದ ಎಂಟಾಣೆ ಇಸುಕೊಂಡು, “ಎರಡು ಟಿಕೆಟ್ ಕೊಡಿ, ಸಾರ್.” ಎಂದು ಕಿಟಕಿಯಲ್ಲಿ ಎಂಟಾಣೆ ಕೊಟ್ಟು, ನಾಲ್ಕು ನಾಲ್ಕಾಣೆಯ ಎರಡು ಟಿಕೆಟ್ ತೆಗೆದುಕೊಂಡರು.

ನಾನು: “ಏನ್ ಸಾರ್! ಅಲ್ಲಿ ಹ್ಯಾಗೆ ಕೂತ್ಕೊಳ್ಳೋದು? ಈಚಲು ಚಾಪೆ ಕೂಡ ಹಾಸಿರೋಲ್ಲ. ಬರೀ ಮಣ್ಣಿನ ನೆಲ. ಸಾರಿಸಿದ್ದು ಕೂಡ ಅಲ್ಲ. ಅಲ್ಲೇ ಎಲೆ ಅಡಿಕೆ ಹಾಕ್ಕೊಂಡು ಉಗಿದಿರ್ತಾರೆ. ಸಾಲದ್ದಕ್ಕೆ ಎಂಜಲು ಬೀಡಿಗಳು. ಏನೇನೋ ಅಸಹ್ಯ. ಹ್ಯಾಗೆ, ಸಾರ್?”

ಕೈಲಾಸಂ: “ನಾಟ್ಕ ಚೆನ್ನಾಗಿದ್ರೆ, ನಾಳೆ ನಾಲ್ಕು ರೂಪಾಯಿ ಕ್ಲಾಸ್ಗೇ ಹೋಗೋಣ. Notice ಮಾಡೋಕೆ ನಾಲ್ಕಾಣೆ classಏ best ಮಗು. Come on, dear boy, ನಿನ್ನ ಪಂಚೆ ಕೊಳೆ ಆಗದ ಹಾಗೆ ನನ್ನ over-coat ಹಾಸ್ತೇನೆ. We will certainly enjoy the play.”

ಒಳಗೆ ಹೋಗಿ ಕೂತೆವು. ನಾನು ಅದುವರೆಗೆ ನಾಲ್ಕಾಣೆ ಕ್ಲಾಸಿನಲ್ಲಿ ಕುಳಿತು ನಾಟಕ ನೋಡಿದವನೇ ಅಲ್ಲ. ಜನ ಅಷ್ಟೇನೂ ಹೆಚ್ಚಾಗಿರಲಿಲ್ಲ. ಆ ನಾಲ್ಕಾಣೆ ಕ್ಲಾಸಂತೂ ಯಥಾ—ನಾನು ಹೇಳಿದ ಹಾಗೇ ಇತ್ತು. ಕುಳಿತು ಕೊಳ್ಳಬೇಕೆಂದಿದ್ದ ಸ್ಥಳದ ಕಶ್ಮಲವನ್ನು ಕೈವಸ್ತ್ರದಿಂದ ಸ್ವಲ್ಪ ಗುಡಿಸಿ ದಂತೆ ಮಾಡಿದೆ. “ಲ್ರೀ! ಯಾರ್ರೀ ನೀವು? ಧೂಳ್ಯಾಕ್ರಿ ಎಬ್ಬಿಸ್ತೀರಿ?” ಎಂದು ಯಾರೋ ಅಂದರು. ಅಷ್ಟರಲ್ಲಿ ನನ್ನ ಪಕ್ಕದಲ್ಲಿ ಕೂತವರೊಬ್ಬರು, ಎಲೆ ಅಡಿಕೆ ಹೊಗೆಸೊಪ್ಪು ಅಗಿಯುತ್ತಿದ್ದವರು, ಹಿಂದಕ್ಕೆ ತಿರುಗಿ, ಖಾಲಿ ಜಾಗ ಇದ್ದ ಕಡೆ ಎಂಜಲನ್ನು ಪಿಚಕಾರಿಯಿಂದ ಹೊಡೆದ ಹಾಗೆ ದೂರಕ್ಕೆ ತುಪ್ಪಿ, “ಧೂಳ್ಯಾಕ್ರಿ ಎಬ್ಬಿಸ್ತೀರಿ? ಆ ವಸ್ತ್ರಾನ ಹಾಸ್ಕೊಂಡು ಹಂಗೇ

ಕುಂತ್ಕೊಂಬುಡಿ" ಅಂದರು. ಕೈಲಾಸಂ, ನನ್ನ ಎಡಭಾಗದಲ್ಲಿ, ಕುತ್ತಿಗೆಯಲ್ಲಿದ್ದ ಚಾಕ್‌ಲೆಟ್ ಬಣ್ಣದ muffler ಅನ್ನು ತಮ್ಮ ತಲೆಗೆ ಸುತ್ತಿ, ಕಂಬಳಿಯ ಹಾಗಿದ್ದ over-coat ಅನ್ನ ಕೆಳಕ್ಕೆ ಹಾಸಿಕೊಂಡು, ಒಂದು ಬೀಡಾ ಅಗಿಯುತ್ತ, ನಡುವೆ ಸಿಗರೇಟ್ ಹಚ್ಚಿ ಸೇದುತ್ತ, ಇವರೂ ಥೇಟ್ ನಾಲ್ಕಾಣೆ ಪ್ರಭುಗಳಂತೆಯೇ ಕುಳಿತರು.

ಹಿಂದೆ London ಪಟ್ಟಣದಲ್ಲಿ 'ಆಟಿಸ್ ಸ್ಕಿನ್ನರ್' ಎಂಬ ಮಹಾ ನಟ, KISMET ಎಂಬ ನಾಟಕವನ್ನು ಆಡುತ್ತಿದ್ದಾಗ, ಕೈಲಾಸಂ ಆತ Kismet ಎಂಬ ಉರ್ದು ಪದವನ್ನು ಸರಿಯಾಗಿ ಉಚ್ಚರಿಸದಿದ್ದುದನ್ನು ಗಮನಿಸಿ, ಆ ಪದವನ್ನು ಹೀಗೇ ಉಚ್ಚರಿಸಬೇಕು ಎಂದು ಆತನಿಗೆ ಒಂದು ಪತ್ರ ಬರೆದ ರಂತೆ. ಆಗ ಆತ ಇವರನ್ನು ತನ್ನ ಹೋಟಲಿಗೆ ಬರಮಾಡಿಕೊಂಡು, ಇವರೊಡನೆ ಮಾತುಕತೆಯಾಡಿ, ಅದೇ ನಾಟಕದಲ್ಲಿ ತಾನು ಬಳಸುತ್ತಿದ್ದ ಇನ್ನೂ ಅನೇಕ ಪದಗಳ ಸರಿಯಾದ ಉಚ್ಚಾರವನ್ನು ಕೇಳಿ ತಿಳಿದುಕೊಂಡು, ಕೈಲಾಸಂಗೆ ಔತಣವಿಟ್ಟು, ಮಾರನೆಯ ದಿನ ಅದೇ ನಾಟಕಕ್ಕೆ ಒಂದು Complimentary pass ಕೊಟ್ಟು, Next to King's Boxನಲ್ಲಿ ಕರೆದು ಕೂಡಿಸಿ ಉಪಚರಿಸಿದ್ದನಂತೆ!

ಅದೇ ಕೈಲಾಸಂ ಈಗ ಥೇಟ್ ನಾಲ್ಕಾಣೆ ಪ್ರಭುವಿನಂತೆ—ಉಡುಪಿನಲ್ಲೂ ಮಾತಿನಲ್ಲೂ ಯಥಾವತ್ತಾಗಿ—ಹಳ್ಳಿಯ ನಾಟಕವನ್ನು ಅವಲೋಕಿಸುತ್ತಾ, ಧೂಳಿನಲ್ಲೂ ಕೊಳೆಯಲ್ಲೂ ಕುಳಿತಿದ್ದಾರೆ. ಇನ್ನು ನನಗೇತರ ಮನಃಕ್ಲೇಶ? ಇಲ್ಲದ ಸ್ಥಾನ ಮಾನ ಗೌರವಗಳನ್ನು ಭ್ರಮಿಸಿಕೊಳ್ಳುವುದೂ ಸರಿಯಲ್ಲ— ಎಂದುಕೊಂಡು, 'democracy ಎಂದು ದೊಡ್ಡದಾಗಿ ಮಾತನಾಡುವುದಕ್ಕಿಂತ ಅದರಲ್ಲಿದ್ದು ನಡೆದು ಬಾಳುವುದೇ ದೊಡ್ಡತನ' ಎಂದು ನನ್ನ ಗರ್ವಕ್ಕೆ ನಾನೇ ನಾಚಿಕೆಪಟ್ಟುಕೊಂಡು, ನಾಟಕ ನೋಡುತ್ತಾ ಕುಳಿತೆ.

ಆ ತುಳಸಿತೋಟದ ನಾಟಕಮಂದಿರವಂತೂ (ಯಾವ ಯುಗದ್ದೊ!) ಮಾನವನ ಮೂಲಪುರುಷರು ತಮ್ಮ ಆದಿಯ ಆವಾಸವಾದ ಗುಹೆಗಹ್ವರಾದಿ ಗಳನ್ನು ಬಿಟ್ಟು ಆಗತಾನೇ ಬೊಂಬು, ಬಿದಿರು, ಹುಲ್ಲು, ಸೋಗೆ ಮುಂತಾದು ವನ್ನು ಬಳಸಿಕೊಂಡು ಮನೆ ಕಲ್ಪಿಸಿಕೊಂಡ ಕಾಲದಲ್ಲಿ ಕಟ್ಟಿದ್ದಿರಬೇಕು. ಅಥವಾ, ಅದಕ್ಕಿಂತ ಸ್ವಲ್ಪ ಅನಂತರ, ಎಂದರೆ ಮಣ್ಣುಗೋಡೆ, ಕಲ್ಲುಕೂಚ

ಬಿದಿರು ಸೂರು, ನಾಡುಹೆಂಚು ಇವುಗಳ ಪ್ರಾಬಲ್ಯದ ಕಾಲದಲ್ಲಿ ಕಟ್ಟಿದ್ದಿರಬೇಕು. ಆ ಕಟ್ಟಡದ ಸೂರಿನಿಂದ, ಕೆಳಗೆ ಕುಳಿತಿದ್ದ ಪ್ರೇಕ್ಷಕರ ಮೈಯ ಮೇಲೂ ತಲೆಯ ಮೇಲೂ ಕಂಬಳಿಹುಳುಗಳು ತಪತಪನೆ ಉದುರುತ್ತಿದ್ದುವು. ಎಲ್ಲರೂ ತಲೆ ಮೈ ಕೈ ಕೆರೆದುಕೊಳ್ಳುತ್ತಿದ್ದವರೇ. ಆಗ September ತಿಂಗಳು.

ಕೈಲಾಸಂ ಕುಳಿತಿದ್ದ ಕಡೆಯಿಂದ ರಂಗಸ್ಥಳ ಸರಿಯಾಗಿ ಕಾಣಬರುತ್ತಿರಲಿಲ್ಲ. ಅವರಿಗೂ ರಂಗಸ್ಥಳಕ್ಕೂ ನಡುವೆ, ಮರೆಯಾಗಿ, ಯಾವನೋ ಪ್ರೇಕ್ಷಕ ಒಂದು ಕರಿಯ ಕಂಬಳಿಯನ್ನು ಹೊದೆದುಕೊಂಡು, ನಿಂತೇ ನಾಟಕವನ್ನು ನೋಡುತ್ತಿದ್ದ. ಇತರರು "ಅಯ್ಯಾ, ಕುಂತುಕೊಳ್ಳಯ್ಯಾ, ನಿನ್ನ ಹಾಗೆ ನಾವೂ ದುಡ್ಡು ಕೊಟ್ಟು ಬಂದವರಲ್ವಾ? ನಾವೂ ನೋಡಬೇಡವೆ? ನಿಂತುಕೊಂಡು ನೋಡಬೇಕಾದರೆ, ಹಿಂದಿನ ಗೋಡೆಗೆ ಹೋಗಿ ಒರಗಿ ನಿಂತುಕೊ. ಕೂತುಕೊಳ್ಳಯ್ಯಾ." ಎಂದು ಎಷ್ಟೋ ವಿನಯವಾಗಿ ಕೇಳಿಕೊಂಡರು. ಅವರ ಮಾತುಗಳನ್ನು ಆತ ಲಕ್ಷಿಸಲೇ ಇಲ್ಲ. ಆಮೇಲೆ ಒತ್ತಾಯ ಮಾಡಿದರು, ಕೋಪಿಸಿಕೊಂಡರು; ಯಾವುದಕ್ಕೂ ಅವನು ಕಿವಿ ಕೊಡಲಿಲ್ಲ. "ಈ ಕಡೆ ಬನ್ನಿ, ಸಾರ್. ಇಲ್ಲಿ ಚೆನ್ನಾಗಿ ಕಾಣುತ್ತೆ." ಅಂತ ನಾನು ಕೈಲಾಸಂಅನ್ನ ಕರೆದೆ. ಕೈಲಾಸಂ "ಆ ಆ ಕಂಬಳಿ ಹೊದೆದ ಮನುಷ್ಯ, ಇಷ್ಟು ಜನ ಕೇಳುತ್ತಿದ್ದರೂ ಕೂತುಕೊಳ್ಳಲೇ ಇಲ್ಲವಲ್ಲ! ಇವನ್ನ ಏನಾದರೂ ಮಾಡಿ ಕೂಡಿಸಲೇಬೇಕು." ಅಂತ ಬಹಳ ಹೊತ್ತಿನಿಂದಲೂ ಹೊಂಚು ಹಾಕುತ್ತಿದ್ದರೆಂದು ಕಾಣುತ್ತದೆ. ತಮ್ಮ ಧ್ವನಿಯನ್ನು ಗೊಗ್ಗರ ಮಾಡಿಕೊಂಡು, 'ಗೂಂಡರ ಗೂಂಡ' ಕೂಗಿದ ಹಾಗೆ "ಕೂತ್ಕೊಳ್ಳೋ ಲೇ ಕಂಬ್ಳೀವುಳ!" ಎಂದು ಒಂದು ಸಾರಿ ಕಿರಲಿದರು. ಬೇರೆ ಯಾರ, ಯಾವ, ಒಳ್ಳೆಯ ಮಾತಿಗೂ ಕಿವಿಗೊಡದೆ ನಿಂತಿದ್ದವನು ಈ ಮಾತು ಕಿವಿಗೆ ಬಿತ್ತೋ ಇಲ್ಲವೋ, ತಪಕ್ಕನೆ ಕುಸಿದು ಕುಳಿತುಬಿಟ್ಟ! ಆಗ ಅಲ್ಲಿ ಯಾರೋ ಪಕ್ಕದಲ್ಲಿ ಕುಳಿತಿದ್ದವರು "ಅಂಗೇಳ್ಬೇಕು ಇವರಿಗೆ. ಒಳ್ಳೇ ಮಾತಿನಾಗ್ ಯೋಳಿದ್ರೆ ತಿಳ್ಯಾಕೇ ಇಲ್ಲ. ಚಂಬಾರ್ಕ ದೇವ್ರ್ಕ ಚಪ್ಪಲ್ಕ ಪೂಜಾ!" ಅಂದರು. ಕಂಬಳಿ ಹೊದ್ದಿದ್ದವನಿಗೆ 'ಏಕ್‌ದಂ' ಸಿಟ್ಟುಬಂತು. "ಯಾವ್ ನನ್ ಮಗನೋ ನನ್ನ ಚಂಬಾರ ಅಂದದ್ದೂ?" ಅಂತ ಹೇಳಿದವನ ಮೇಲೆ ಧಾವಿಸಿದ,

ಗಲಭೆಗೆ ಷುರು ಆಯಿತು. ರಂಗಸ್ಥಳದ ಮೇಲೆ ಯುದ್ಧಕ್ಕೆ ತಯಾರಾಗಿದ್ದ ಶ್ರೀ ರಾಮಾಂಜನೇಯರು ಕೂಡ ನಮ್ಮ ನಾಲ್ಕಾಣೆ ಕ್ಲಾಸಿನಲ್ಲಿ ಆಗುತ್ತಿದ್ದ ಯುದ್ಧದ ಕಡೆಯೇ ನೋಡತೊಡಗಿದರು. ಪೋಲೀಸಿನವನೊಬ್ಬ ಕೈಯಲ್ಲಿ ಬೆತ್ತಹಿಡಿದು ಬಂದು, “ಕೂತುಕೊಳ್ಳಿ! ಕೂತುಕೊಳ್ಳಿ!” ಎಂದು ಗದ್ದರಿಸಿದ. ಜನ ಲೆಕ್ಕಿಸಲಿಲ್ಲ. ಕೈಲಾಸಂ, ಈ ಗಲಾಟೆಯ ನಡುವೆ, ಒಂದು ಸಿಗರೆಟ್ ಹಚ್ಚಿ, smoke rings ಬಿಡುತ್ತ ಆನಂದವಾಗಿ ಕುಳಿತಿದ್ದರು. ನನಗೋ, “ಯಾಕಪ್ಪಾ ಬಂದ್ವಿ ಈ ಹಾಳು ನಾಟ್ಕಕ್ಕೆ? ಬಯಾಸ್ಕೋಪಿಗಾದರೂ ಹೋಗಬಹುದಾಗಿತ್ತಲ್ಲ!” ಎನಿಸಿತು. ಗಲಭೆ ಹೆಚ್ಚಿತು; ಡ್ಯೂಟಿ ಮೇಲಿದ್ದು ನಾಟಕ ನೋಡುತ್ತಿದ್ದ ಪೋಲೀಸ್ ಇನ್ಸ್‌ಪೆಕ್ಟರೂ ಇನ್ನೊಬ್ಬ ಕಾನ್ಸ್‌ಟೇಬಲೂ ನಾಲ್ಕಾಣೆ ಕ್ಲಾಸಿಗೆ ನುಗ್ಗಿಬಂದು, ಕೈಬೆತ್ತದಿಂದ ಪಟಪಟನೆ ಹತ್ತಾರು ಜನರ ತಲೆಯ ಮೇಲೆ ಮೈಮೇಲೆ ಬಿಗಿದರು. ಸದ್ಯಃ, ನಮ್ಮ ಹತ್ತಿರದವರೆಗೂ ಏಟು ಏಕೆ ಬರಲಿಲ್ವೊ ಕಾಣೆ. ಸ್ವಲ್ಪ ಹೊತ್ತಿನಲ್ಲೇ ಗಲಭೆ ಅಡಗಿತು.

ನಾನು ಕೈಲಾಸಂಅನ್ನು ಕೇಳಿಕೊಂಡೆ: “ಸಾರ್, ಇನ್ನು ಮನೆಗೆ ಹೋಗೋಣ ಅಂತ. ಅವರೆಂದರು: “ತಾಳು, ಮಗು. ಆ ರಾಮನ ಪಾರ್ಟು ಮಾಡಿದಾನಲ್ಲ, ಆ ‘ಕಾಲಾ ಬಿಲ್ಲಿ’, ಅವನು ಚೆನ್ನಾಗಿ ಹಾಡ್ತಾನಂತೆ. ಕೇಳ್ಬಿಟ್ಟು ಹೋಗೋಣ.” ನನಗೊ, ನಾಟಕವೂ, ಸನ್ನಿವೇಶವೂ, ಕುಳಿತುಕೊಂಡಿದ್ದ ಸ್ಥಳವೂ, ಒಂದಕ್ಕಿಂತ ಒಂದು ಸರ್ವಾಸಹ್ಯವಾಗಿತ್ತು. ಕೈಲಾಸಂ ಮಾತ್ರ ಆನಂದವಾಗಿ ಕುಳಿತಿದ್ದರು. ಮೇಲಿನಿಂದ ಉದುರುತ್ತಿದ್ದ ಕಂಬಳಿ ಹುಳುಗಳ ಬಾಧೆಯನ್ನು ನೋಡುತ್ತಿರುವುದು ನನಗೆ ಸಾಧ್ಯವಾಗಲಿಲ್ಲ. ಅಷ್ಟರಲ್ಲಿ ನನ್ನ ತಲೆಯ ಮೇಲೊಂದು ದೊಡ್ಡ ಹುಳು ಬಿತ್ತು. ನಾನು ಅದನ್ನು ತತ್‌ಕ್ಷಣ ಕೈಯಿಂದ ಕೊಡವಿದೆ. ಆ ರಭಸಕ್ಕೆ, ಆ ಹುಳ ಇನ್ನೊಬ್ಬರ ಕುತ್ತಿಗೆಯ ಮೇಲೆ ಹೋಗಿ ಬಿತ್ತು. ಆತ, ಅದು ಏನೆಂದುಕೊಂಡನೋ! ಆ ಹುಳುವನ್ನು ತನ್ನ ಅಂಗೈಯಿಂದ ಕುತ್ತಿಗೆಯ ಮೇಲೆ ಚೆನ್ನಾಗಿ ತಿಕ್ಕಿಕೊಂಡುಬಿಟ್ಟ. ಹುಳು ಚಟ್ನೆ ಆಗಿಹೋಯಿತು. ಆದರೆ, ಒಂದೆರಡು ನಿಮಿಷಗಳೊಳಗಾಗಿ ಅವನ ಕುತ್ತಿಗೆಯಲ್ಲಿ ಷುರುವಾಯಿತು ಉರಿ. ಕೆರೆದಷ್ಟೂ ಹೆಚ್ಚಾಯಿತು, ಉರಿ. ಪಕ್ಕದಲ್ಲಿದ್ದ ಒಬ್ಬಾತ “ಲ್ರೀ! ಕಂಬ್ಳೀವುಳಾನ ಕುತ್ಗೇಗ್ಯಾಕ್ರೀ ಅಂಗ್ ತಿಕ್ಕೊಂಡ್ರೀ? ಅದಕ್ಕೇ ಅಷ್ಟು ಉರಿ!

ತಾಳ್ರಿ, ಕಂಬ್ಳೀಯಿಂದ ಚೆನ್ನಾಗಿ ಉಜ್ಜಿಬಿಟ್ರಿ, ಹೋಗುತ್ತೆ." ಎಂದು ಆ ಕಂಬಳಿ ಹೊದೆದಿದ್ದವನ ಕಂಬಳಿಯ ಕೊನೆಯಿಂದ ಇವನ ಕುತ್ತಿಗೆಯನ್ನು ಚೆನ್ನಾಗಿ ರಕ್ತ ಬರುವವರೆಗೂ ಉಜ್ಜಿ ಬಿಟ್ಟ. ಆದರಿಂದ, ಉಜ್ಜಿಸಿಕೊಂಡವನಿಗೆ ಉರಿ ಸಾವಿರ ಪಾಲು ಅಧಿಕವಾಯಿತು. ಕಂಬಳಿ ಹೊದೆದಿದ್ದ ಆ ಮನುಷ್ಯ "ಯಾಕ್ರಿ! ಬಿಟ್ಟ ಸಿಕ್ಹೋಯ್ತೋ ನನ್ ಕಂಬ್ಳಿ ?" ಎಂದು ಜಗಳಕ್ಕೆ ಬಂದ. ಉಜ್ಜಿಸಿಕೊಂಡವನು ಉರಿಯನ್ನು ತಡೆಯಲಾರದೆ, ಲಬೊ! . . . ಲಬೋಂತ!! ಬಾಯ್ ಬಾಯ್ ಬಡ್ಕೊಂಡು, ತಕಪಕ ಕುಣಿದಾಡಿ ಬಿಟ್ಟ. ಸಬ್ ಇನ್ಸ್‌ಸ್ಪೆಕ್ಟರೂ ಕಾನ್ಸ್‌ಟೇಬಲುಗಳೂ "ಏನೋ ಅನಾಹುತ ನಡೆದ್ಹೋಯ್ತು!" ಅಂತ ಬೆತ್ತ ಹಿಡಿದುಕೊಂಡು ಬಂದು ನಾಲ್ಕು ನಾಲ್ಕು ಬಿಗಿದರು. ಜನರ ಸದ್ದೂ ಅಡಗಿತು. ಕಂಬಳಿ ಉಜ್ಜಿಸಿಕೊಂಡವನು ಇನ್ನೂ ಅರಚುತಾನೇ ಇದ್ದ. ಸಬ್ ಇನ್ಸ್‌ಸ್ಪೆಕರ್ ಅವನನ್ನು ಮೆಲ್ಲಗೆ ಹೊರಗೆ ಕರೆದುಕೊಂಡು ಹೊರಟು ಹೋದ. ಗಲಭೆ ಕಡಿಮೆಯಾಯಿತು.

ಅದುವರೆಗೂ ಈ ನಾಲ್ಕಾಣೆ ಕ್ಲಾಸಿನಲ್ಲಿ ಆದ ನೈಜ ನಾಟಕದಿಂದ ಅಲ್ಲಿ ರಂಗಸ್ಥಳದ ಮೇಲೆ ನಿಂತಿದ್ದ ಶ್ರೀ ರಾಮಾಂಜನೇಯರ ವಾಗ್ಯುದ್ಧ ಮತ್ತೆ ಮೊದಲಾಯಿತು. ಯಾರೋ ಒಬ್ಬ ನಾಲ್ಕಾಣೆಯ ಪ್ರಭು ಗಟ್ಟಿಯಾಗಿ 'ಖಾಮೊಷ್!' ಎಂದು ಕೂಗಿದ. ಎಲ್ಲರೂ ತೆಪ್ಪಗಾದರು. ರಾಮಾಂಜನೇಯ ಯುದ್ಧ ಮುಂದುವರೆಯಿತು.

ಸುಗ್ರೀವ ವಿಭೀಷಣಾದಿಗಳು ನಡುವೆ ಬಂದು ಸಮಾಧಾನ ಮಾಡಿದರು. ಮೇಲಿನಿಂದ ಅಶರೀರವಾಣಿಯಾಯಿತು. ಆಂಜನೇಯನು ಶಾಂತನಾಗಿ, ಶ್ರೀ ರಾಮನನ್ನು ತನ್ನ ಸ್ವಾಮಿಯೆಂದರಿತು, ಬಹು ದುಃಖದಿಂದ ಶರಣು ಹೋದನು. ಅಂತರಿಕ್ಷದಿಂದ ಪುಷ್ಪವೃಷ್ಟಿಯಾಯಿತು. ಸೀತಾ ಮಾತೆಯು ಗಗನದ ಕಡೆಗೆ ನೋಡಿ, "ಆರ್ಯಪುತ್ರ, ದೇವತೆಗಳು ಮಹಾ ಸಂತೋಷದಿಂದ ಪುಷ್ಪವೃಷ್ಟಿಯನ್ನು ಕರೆಯುತ್ತಿರುವರು." ಎಂದಳು.

ಅದನ್ನು ಕೇಳಿದ ನಾಲ್ಕಾಣೆ ಪ್ರಭುವೊಬ್ಬನಿಗೆ ಬಹಳ ಕೋಪ ಬಂದು "ಪುಸ್ಪ ಅಂತೆ ಪುಸ್ಪ, ಮೇಲಿಂದ ಬೀಳ್ತಿರೋದು! ಕಂಬ್ಳಿವುಳ್ಗಳು ಕಾಣ್ರಿ! ಎಂದು ಘಟ್ಟಿಯಾಗಿ ಅರಚಿದ. ಅಷ್ಟು ಬಿಗುಮಾನದಿಂದ ನಡೆದು ಬಂದಿದ್ದ ನಾಟಕದ ವೈಖರಿಯೆಲ್ಲ ಆ ಒಂದೇ ಮಾತಿನಲ್ಲಿ ಹಾರಿಹೋಯಿತು. ಚಪ್ಪರ

ದಲ್ಲಿದ್ದ ಜನರು ಮಾತ್ರವೇಕೆ, ಶ್ರೀ ಸೀತಾ ರಾಮ ಲಕ್ಷ್ಮಣ ಆಂಜನೇಯ ವಿಭೀಷಣ ಸುಗ್ರೀವಾದಿಗಳು ಕೂಡ 'ಹೋ' ಎಂದು ನಗತೊಡಗಿದರು! ಮಂಗಳ ಕೂಡ ಹಾಡದೆ ಪರದೆ ಬಿಟ್ಟುಬಿಟ್ಟರು. ಅಂತೂ ಆ ನಾಟಕವೇನೋ ನಮಗೆಲ್ಲಾ ಹೊಟ್ಟೆ ಹಿಡಿಸದಷ್ಟು ನಗುವುಂಟುಮಾಡಿತು.

ಮನೆಗೆ ಹೋಗುತ್ತ, ದಾರೀಲೂ ಅದೇ ಹುಚ್ಚು ಹುಚ್ಚು ನಗು: "ಪುಸ್ಪ ಅಂತೆ ಪುಸ್ಪ, ಮೇಲಿಂದ ಬೀಳ್ತಿರೋದು! ಕಂಬ್ಳೀವುಳ್ಗಳು ಕಾಣ್ರೀ!" ಆ ಮಾತನ್ನು ನೆನಸಿಕೊಂಡಷ್ಟೂ ನಗುವೇ.

ಕೈಲಾಸಂ ಹೇಳಿದರು: "ನೋಡಿದ್ಯಾ, ವೆಂಕಟೇಶ್, would you have enjoyed this much in the one-eight class? ನಾ ಲ್ಕ್ಯಾಣೆ ಕ್ಲಾಸು ನವರಸಿಕರು ಕೂಡೋ ಸ್ಥಳ. ಅವರು ಆಡೋ ಮಾತು, ಅವರು ನೋಡೋ ದೃಷ್ಟಿ, ಅವರು ಪಡೋ ಅಭಿಪ್ರಾಯ ಇವುಗಳಿಗೆ ಅವಕಾಶ ಕೊಟ್ರೇನೇ ನಾಟಕ ಬದಕೋದು, ನಾಲ್ಕು ಕಾಸೂ ಸಿಕ್ಕೋದು . . . ನೀನು ಅಮೆಚೂರ್ ಕಂಪೆನಿ ನಾಟಕ, 'ತಪ್ಪೆವರಿದಿ' ನೋಡಿದ್ದೀಯ? ರಾಘವಾಚಾರ್ act ಮಾಡಿದ್ದು?"

ನಾನು: "ಇಲ್ಲ, ಸರ್. 'ರಾಮದಾಸ್' ನೋಡಿದ್ದೇನೆ. ನಿಮ್ಮ 'ನಾ ಸಾಮಿ ನಾ ಪೈ ನೀಕು ದಯಲೇದೇ?' ಕೇಳಿದ್ದೇನೆ."

ಕೈಲಾಸಂ: "ಓ, ಅದೇ! ಆ ಮೇಲೆ ಅದನ್ನ change ಮಾಡ್ಬಿಟ್ಟೆ. ನೀನು ನೋಡ್ಲಿಲ್ಲಾಂತ ಕಾಣುತ್ತೆ. ಅದು 'ಡ್ರಾಂದಾಸ್' ಆಗ್ಹೋಯ್ತು, ಮಗು. ಭಜನೆ ಕೇಳಿಲ್ವೇ ನೀನು:

ಕಡುಪುನೊಪ್ಪಿಕಿ ಕಾಲು ದರ್ರಾಂ,
ಮುಕ್ಕುನೊಪ್ಪಿಕಿ ಮುಕ್ಕಾಲು ದರ್ರಾಂ;
ಒಳ್ಳುನೊಪ್ಪಿಕಿ ಒಕ್ಕ ದರ್ರಾಂ, ತಾಗೇವಾಳ್ಳಿಕಿ ಮಂಚಿದಿ ರ್ರಾಂ;
ರಾಮರಾಮ ಜಯ ರಾಜಾರಾಂ . . .

ಅದಲ್ಲ. ವೆಂಕಟೇಶ್, ನಾನು ಹೇಳ್ತಾ ಇದ್ದದ್ದು. 'ತಪ್ಪೆವರಿದಿ?' ನಾಟಕ. ನೋಡು, ಪಾಪ, ರಾಘವಾಚಾರ್ ಚೆನ್ನಾಗೇ ಮಾಡಿದ್ರು, ಆ ದಿವಸದ ನಾಟಕ. ಆದರೆ, ಚಿಲ್ರೆಪಾರ್ಟುಗಳು ತುಂಬ ಅಧ್ವಾನ್ನ ಮಾಡಿಬಿಟ್ರು. Linesಏ

ಒಬ್ರಿಗೂ ಸರಿಯಾಗಿ ಬರ್ತಿರ್ಲಿಲ್ಲಾ. ನಾಟಕ ಕಳೆಕಟ್ಲಿಲ್ಲ, ಕೆಟ್ಹೋಯ್ತು. ಕೊನೇಲಿ soliloquy ಒಂದು ಬರುತ್ತೆ, ರಾಘವಾಚಾರ್ರ್ರದು. ಎಲ್ಲಾ ಹೇಳಿ, ಕೊನೆಗೆ ಅವರು 'ಅಯ್ಯೋ ! . . . ತಪ್ಪೆವರಿದಿ ? ತಪ್ಪೆವರಿದೀ ?!' ಅಂದ್ರು. ನಾಲ್ಕಾಣೆ ಪ್ರಭುಗಳು ಸುಮ್ಮನಿರಬೇಕೋ ಬೇಡ್ವೋ, ಆ tragedyನ ನೋಡಿ, ಫಟ್ಯಾಗಿ, 'ಮಾದಿರಾ, ರಾಘವಾ! ತಪ್ಪು ಮಾದಿರಾ, ಡಬ್ಬು ಇಚ್ಚಿನ ವಾಳ್ಳೆದಿರಾ!' ಅಂತ ಕೂಗೇಬಿಟ್ರು! ಹಾಳಾಗ್ಹೋಯ್ತು ನಾಟಕ! ಅದೇ ಕೊನೇನೂ ಆಗ್ಹೋಯ್ತು ಆ ನಾಟಕಕ್ಕೆ."

ಮನೆ ಸೇರಿ ಮಲಗಿಕೊಂಡ ಮೇಲೂ ಆ ದಿನದ ನಾಟಕದ ನೆನಪೇ ! ಆ ದಿನದ ಹುಚ್ಚುನಗುವೇ ನಗು ! ಕೈಲಾಸಂ ಹೇಳಿದ್ದು ನಿಜ: ನಾಲ್ಕಾಣೆ ಕ್ಲಾಸಿನವರು ನಿಜವಾಗಿಯೂ ರಸಿಕರು. ರೂಪಾಯಿರೂಪಾಯಿ ತೆತ್ತು, ಮುಂದ್ಗಡೆ ಸೋಫಾದಲ್ಲಿ ಕುಳಿತು, ಬಿಂಕದಿಂದ ತಮ್ಮ ಅಂತಸ್ತಿನ ಬಿಗುಮಾನ ದಿಂದ, ಧರಿಸಿದ ಜರೀರುಮಾಲಿನ ಗೌರವಕ್ಕಾದರೂ ಬಿಮ್ಮನೆ ಕುಳಿತು ನಾಟಕ ನೋಡಿ ಹೋಗುವವರಿಗಿಂತ ಇವರು ಎಷ್ಟೋ ವಾಸಿ. ಚೆನ್ನಾಗಿದ್ದರೆ, ಚೆನ್ನಾ ಗಿಯೇ ಪ್ರೋತ್ಸಾಹಿಸುತ್ತಾರೆ; ಇಲ್ಲದೆ ಹೋದರೆ, ತಲೆಯೆತ್ತದ ಹಾಗೆ ಮುಖಕ್ಕೆ . . . ಳಿ ಹೋಗ್ತಾರೆ.

ಕೈಲಾಸಂ ನಾಟಕ

ಕೆಲವು ತಿಂಗಳು ಕಳೆದುವು. ಕೈಲಾಸಂ ಆಗಾಗ್ಗೆ School Day ಗಳಲ್ಲಿ, Annual Celebrationsನಲ್ಲಿ, rec tations ಕೊಡುತ್ತಾ ಇದ್ದರು, ಏಕಪಾತ್ರಾಭಿನಯ ಮಾಡುತ್ತಿದ್ದರು. ಸ್ನೇಹಿತರು ಅವರನ್ನ ರಾತ್ರಿಯೂ ಹಗಲೂ ಮುತ್ತಿರುತ್ತಿದ್ದರು. ಟೊಳ್ಳುಗಟ್ಟಿಗಳೂ ಪಾತು, ಸಾತು ತೌರ್ಮನೆ ಗಳೂ, ಪೋಲಿಕಿಟ್ಟಿಗಳೂ ಒಂದರ ಹಿಂದೆ ಒಂದು ಸೃಷ್ಟಿಯಾದುವು. ಇವು ಗಳಲ್ಲಿ ಪಾತ್ರ ವಹಿಸಲು ಅನೇಕರು ನಾನು ತಾನೆಂದು ಬಂದರು. ಸಾರ್ವಜನಿಕ ರಂಗ ವೇದಿಕೆಗಳಲ್ಲಿ ಕೈಲಾಸಂ ನಾಟಕಗಳು ನಡೆದುವು.

ನಾಟಕವೆಂದರೆ ಸಂಗೀತವಿದ್ದೇ ಇರಬೇಕು, ರಂಗುರಂಗಿನ ಪರದೆ ಇರ ಬೇಕು, ಮಖಮಲ್ ಮೇಲೆ ಜರತಾರಿ ಕೆಲಸಮಾಡಿದ ಪೋಷಾಕಿರಬೇಕು, cut-scenes, transfer scenes ಇರಬೇಕು, ಪಠಾಸ್ ಸದ್ದಿರಬೇಕು, ಮತಾಪಿನ ರಂಗು ಬೆಳಗಿರಬೇಕು, ಹಾರ್ಮೋನಿಯಂ ತಬಲಾ ಇದ್ದೇ ತೀರ ಬೇಕು ; ಹಾಗಿತ್ತು ಆಗಿನ ಕಾಲ. ಆಗಿನ ಕಾಲದ ಶ್ರೀ ಚಾಮರಾಜೇಂದ್ರ ಕರ್ಣಾಟಕ ನಾಟಕಸಭಾ, ಆಮೇಲೆ ಶ್ರೀ ಚಾಮುಂಡೇಶ್ವರಿ ನಾಟಕಸಭಾ, ವರದಾಚಾರ್ಯರ ರತ್ನಾವಳಿ ಕಂಪೆನಿ, ಶಿರಹಟ್ಟಿ ವಾಮನರಾವ್ ಮಾಸ್ತರ್ ಕಂಪೆನಿ, ಗುಬ್ಬಿಯವರ ಕಂಪೆನಿ, ಇವುಗಳಲ್ಲೆಲ್ಲಾ ಈ ಬಣ್ಣ ಪರದೆ ಬೆಳಕು ಪೋಷಾಕು ನೋಡಿನೋಡಿ ರುಚಿಕಂಡ ಜನರಿಗೆ,—'ಪುರುಕುಲದ ಅರಸರಿಂದ ಧರ್ಮಾಧಿಕಾರದಲ್ಲಿ ನಿಯುಕ್ತನಾದ ನಾನು ಆಶ್ರಮವಾಸಿಗಳ ನಿರ್ವಿಘ್ನ ಕ್ರಿಯೆಯನ್ನು ನೋಡಲೋಸುಗ ಈ ಧರ್ಮಾರಣ್ಯಕ್ಕೆ ಬಂದೆನು' ಎಂಬ ಈ ದುಷ್ಯಂತನ ಕುಲೌನ್ನತ್ಯದ ರಾಜಭಾಷೆಯನ್ನು ಕೇಳಿಕೇಳಿ ಸಂತೃಪ್ತಿಪಡೆದ ಕಿವಿ ಗಳಿಗೆ,—ಕೈಲಾಸಂ ಅವರ ನಾಟಕದ 'ಲೋ ಮಗು, ಕೂಸು ಅಳ್ತಿದೆ. ಸ್ವಲ್ಪ ಜೋಲಿ ಆಡಿಸಬಾರ್ದ್ಯಾಕೋ ?' ಅನ್ನುವ ಮನೆತಾಯಿಯ ಮಾತೂ, ... ದುಷ್ಯಂತ ವತ್ಸರಾಜ ಮುಂತಾದವರಿಗೆ ಬದಲಾಗಿ ಬಂದರಾಮಣ್ಣ ಅಹೋಬ್ಳ ಇತ್ಯಾದಿಗಳೂ, ... ಶಕುಂತಳೆ, ರತ್ನಾವಳಿ, ವಸಂತಸೇನೆಯವರಿಗೆ ಬದಲು ಬಂದ ಸಾತೂ ಪಾತೂ ನಾಗತ್ತೆಗಳೂ,...ಅಂತೂ ಒಟ್ಟಿನಲ್ಲಿ ಸಾಧಾರಣ ಜನದ

ಒಪ್ಪಿಗೆಗೆ ಕಷ್ಟವಾಯಿತು. ಆದ್ದರಿಂದ ಕೈಲಾಸಂ ನಾಟಕಗಳ ಪ್ರೇಕ್ಷಕರೆಂದರೆ —ತಾಯಿತಂದೆಯ ಕೈಕಾಯುವ ವಿದ್ಯಾರ್ಥಿಗಳು, ಬರುವ ವರಮಾನ ಎಲ್ಲೆಲ್ಲಿಗೂ ಸಾಲದ ಉಪಾಧ್ಯಾಯರುಗಳು, ಹಾಸಿಗೆ ಅಳತೆಯನ್ನು ಮೀರಿ ಕಾಲು ಚಾಚುವ ಉದ್ಯೋಗಸ್ಥರು, ಕಾಸೂ ಕಲೆಯೂ ಒಟ್ಟಿಗೆ ಇರುವುದಿಲ್ಲವೆಂಬುದನ್ನು ಸಾರ್ಥಕಪಡಿಸುವ ಕಲೋಪಾಸಕರು-ಇವರು ಕೈಲಾಸಂ ನಾಟಕಗಳನ್ನು ನೋಡಿ ನೋಡಿ ಸಂತೋಷಪಟ್ಟರು. ಸಾಹುಕಾರ್ ರುದ್ರಪ್ಪನವರುಗಳೂ ಯಜಮಾನ್ ಬುಳ್ಳಣ್ಣನವರುಗಳೂ ಕೃಷ್ಣಯ್ಯಶ್ರೇಷ್ಠಿ ಪ್ರಭೃತಿಗಳು ಕೈಲಾಸಂ ನಾಟಕಗಳಿಗೆ ಬರುತ್ತಿರಲಿಲ್ಲವೆಂದೇ ಹೇಳಬೇಕು. ನಾಟಕವಾಡಿದ ಸಂತೋಷವೊಂದು ವಿನಾ, ಇದರಿಂದ ಕೈಲಾಸಂ ಅವರ ಜೇಬು ತುಂಬಲಿಲ್ಲ.

ಕೃಷ್ಣನೊಬ್ಬಮಾತ್ರ, ತಾನುಟ್ಟಿದ ಪಂಚೆಯನ್ನೂ ತೊಟ್ಟಿದ್ದ ಷರಟನ್ನೂ ಅಡುವಿಟ್ಟಾದರೂ ಕೈಲಾಸಂ ನಾಟಕಗಳನ್ನು ಆಡಿಸಿಯೇ ಆಡಿಸಿದ. ಅವನ ಆನಂದ ಹೇಳತೀರದು. ಕೈಲಾಸಂಗೆ ಮನೆಯೆಂದರೆ ಕೃಷ್ಣನೊಬ್ಬನೇ. ಅವರಿಗೆ ತಂದೆ, ತಾಯಿ, ಅಣ್ಣ, ತಮ್ಮ, ಸ್ನೇಹಿತ, ಸರ್ವವೂ ಕೃಷ್ಣನೇ. ಕೃಷ್ಣನಿಗೆ ಕೈಲಾಸಂ ಚಿರಋಣಿ.

ಕೈಲಾಸಂ ಉತ್ತಮವಾದ ಸಾಮಾಜಿಕ ನಾಟಕಗಳನ್ನು ಬರೆದು, ಅದಕಲ್ಲಿ ತಾವೇ ನಿಂತು ಅಭಿನಯಿಸಿದರಾದರೂ, ಅವರು ಉತ್ತಮನಟರೆಂದು ನನಗೆ ಒಪ್ಪಿಗೆಯಾಗಲಿಲ್ಲ, ಅವರ ನಾಟಕಗಳನ್ನು ಪ್ರೇಕ್ಷಕವೃಂದದ ನಡುವೆ ಕುಳಿತು ನೋಡಿದ್ದೇನೆ, ರಂಗಸ್ಥಳದಲ್ಲಿ ಕೈಲಾಸಂ ಜೊತೆಯಲ್ಲಿಯೇ ಇದ್ದು ನೋಡಿದ್ದೇನೆ. ಅವರು ಮಾತನಾಡುವುದೂ, ಓಡಿಯಾಡುವುದೂ, ಅತಿ ವೇಗವೆಂದು ನನಗನಿಸುತ್ತಿತ್ತು. ಚಹಳ nervous ಆಗುವರು, ಸಣ್ಣಪುಟ್ಟದಕ್ಕೆಲ್ಲ ಸಿಡಿಗುಟ್ಟುವರು. ಇದರಿಂದ ಜೊತೆಯಲ್ಲಿದ್ದ ನಟರಮೇಲೆ ಕೆಟ್ಟ ಪರಿಣಾಮವಾಗುತ್ತಿತ್ತು. ಅಲ್ಲದೆ, ಜೊತೆಯ ನಟರೂ ಸಾಕಷ್ಟು ಅಭ್ಯಾಸವಿಲ್ಲದೆ ರಂಗಸ್ಥಳಕ್ಕೆ ಬರುತ್ತಿದ್ದರು; ಕೈಲಾಸಂ ತಾವು ತಮ್ಮ ಪಾತ್ರವನ್ನಭಿನಯಿಸುವುದರ ಜೊತೆಗೆ, ಇತರ ನಟರು ಮರೆತುಹೋದ ಮಾತುಗಳನ್ನು ತಾವೇ prompt ಮಾಡುತ್ತಿದ್ದುದನ್ನು ಪ್ರೇಕ್ಷಕರೆಲ್ಲಾ ಚೆನ್ನಾಗಿ ಕೇಳಬಹುದಾಗಿತ್ತು, ನೋಡಬಹುದಾಗಿತ್ತು.

Amateur ನಾಟಕಗಳಲ್ಲೆಲ್ಲಾ ಹೀಗೆಯೇ. ಎಲ್ಲರೂ ಸರ್ವಜ್ಞರೇ, ಎಲ್ಲರೂ ಆಶುಕವಿಗಳೇ. ನಟರಿಗೆ ಸಂಬಳ ಕೊಟ್ಟು ನಾಟಕವಾಡಿಸುವ

ಕಂಪೆನಿಗಳಲ್ಲಿ ಈ ಅನ್ಯಾಯವಿಲ್ಲ. ಕೈಲಾಸಂ ತಮ್ಮ ನಾಟಕಗಳನ್ನು ತಾವೇ ಆಡಿಸುತ್ತಿದ್ದಾಗಲೂ ಅನೇಕ ನ್ಯೂನತೆಗಳು ಗೋಚರವಾಗುತ್ತಿದ್ದವು. ಉದಾಹರಣೆಗೆ, ಅಂಥದು ಒಂದು ದೊಡ್ಡದೆಂದರೆ: ರಂಗಸ್ಥಳದ ಸಜ್ಜಿಕೆ. Lawyer's chambers ಅಂತಂದ್ರೆ, ಕಡೆಯ ಪಕ್ಷ ಎರಡು law ಪುಸ್ತಕಗಳಾದರೂ ಬೇಡವೇ? ಇಂಗ್ಲೆಂಡ್ ಮುಂತಾದ ದೇಶಗಳಲ್ಲಿ ನೂರಾರು ಸಾಮಾಜಿಕ ನಾಟಕಗಳನ್ನು ನೋಡಿ, ಅನುಭವ ಹೊಂದಿ, ಅದೇ ರೀತಿಯ ನಾಟಕಗಳನ್ನು ನಮ್ಮ ದೇಶದ ರಂಗಭೂಮಿಯ ಮೇಲೆ ತಂದ ಕೈಲಾಸಂ ಅವರಿಗೆ ಈ ಒಂದು ನ್ಯೂನತೆಯನ್ನು ಕ್ರಮಪಡಿಸುವುದಕ್ಕಾಗದೆ ಹೋಯಿತು. ಇದಕ್ಕೆ ಕಾರಣ: ನಮ್ಮವರ ಬಡತನ ಮಾತ್ರವಲ್ಲ, ನಮ್ಮವರು ಅದರ ಕಡೆಗೆ ಸಾಕಷ್ಟು ಲಕ್ಷ್ಯ ಕೊಡದಿರುವುದು. ಆ ದೇಶಗಳಲ್ಲಿ ಇಂಥ ಒಂದು ನಾಟಕವಾಗಬೇಕಾದರೆ, ರಂಗ ಏರ್ಪಾಡಿಗೆ, ಮಾರ್ಪಾಡಿಗೆ, ಲಕ್ಷಾಂತರ ದ್ರವ್ಯ ವೆಚ್ಚವಾಗುತ್ತದೆ. ಉತ್ತಮರಾದ ನಟನಟಿಯರು ತಮ್ಮ ಪಾತ್ರಗಳನ್ನು ತಿಳಿದು, ಕಲಿತು, ರಂಗಸ್ಥಳಕ್ಕೆ ಬರುತ್ತಾರೆ. ಬರುವುದಕ್ಕೆ ಮುಂಚೆ, ನಾಲ್ಕಾರು ತಿಂಗಳು ಒಟ್ಟಿಗೆ ಸೇರಿ, ಹಗಲೂ ರಾತ್ರೆ ಅಭ್ಯಾಸಮಾಡಿ, ಮಾಡೀ ನಾಟಕವನ್ನು ಸರ್ವಾಂಗ ಪರಿಪೂರ್ಣವನ್ನಾಗಿ ಮಾಡಿಕೊಳ್ಳುತ್ತಾರೆ. ಆದರೆ ನಾವೋ ?

ನಮ್ಮಲ್ಲಿನ ರೀತಿಯೇ ಬೇರೆ. ಈ ದಿನ ಪಾತ್ರಗಳನ್ನು ಹಂಚಿಕೊಳ್ಳುತ್ತೇವೆ. ಒಂದು ಸಲವೊ ಎರಡು ಸಲವೊ rehearsals ಮಾಡುತ್ತೇವೆ. ಅದಕ್ಕೂ ಕೆಲವರು, ಮುಖ್ಯ ಪಾತ್ರವನ್ನು ಅಭಿನಯಿಸುವವರು ಬಂದರೆ ಬಂದರು, ಇಲ್ಲದಿದ್ದರೆ ಇಲ್ಲ. ಏಕೆಂದರೆ, 'ನಾವು ರಂಗಸ್ಥಳದ ಮೇಲೆ ಭರ್ಜರಿಯಾಗಿ ಅಭಿನಯಿಸಬಲ್ಲೆವು' ಎಂಬ ಪೊಳ್ಳು ಜಂಬ ಅವರಿಗೆ ಇರುತ್ತದೆ. ನಾಲ್ಕನೆಯ ದಿನ ಸಾಯಂಕಾಲವೇ ನಾಟಕ. ಅಂದಿನ ಸ್ತ್ರೀಪಾತ್ರ ಅದುವರೆಗೆ ಎಂದೂ ಸೀರೆ ಉಟ್ಟಿಲ್ಲ; ಅಂದೇ ಉಡುವುದು. ತಲೆಗೆ ಹೊಂದದ ಟೋಫನ್, ಮುಖಕ್ಕೆ ಯಾವ ರೀತಿಯ make-up ಎಂದೂ ಗೊತ್ತಿಲ್ಲ. ಅಷ್ಟೇ ಅನನುಭವದ ಇತರ ಅಧ್ವಾನ್ನ ಪಾತ್ರಗಳು. ಡಾಕ್ಟರಿನ personalityಯೇ ಇಲ್ಲದ ಡಾಕ್ಟರು, club-roomಇನ ಲಕ್ಷಣವಿಲ್ಲದ club-room, ಇತ್ಯಾದಿ. ಇವುಗಳಿಂದ ನೋಡಿದವರಿಗೆ ಹೇಗೆ ತಾನೆ ತೃಪ್ತಿ ಬಂದೀತು? ಇಂಥ ಸ್ಥಿತಿಗಳಿಂದ ರುದ್ರ ನಾಟಕವೂ ಬೀಭತ್ಸವಾದೀತು, ಉದ್ದೇಶ ನಾಶವಾದೀತು. ಕೈಲಾಸಂ

ಇದ್ದಾಗಲೇ ಹೀಗೆ ಇತ್ತು, ಈಗಲೂ ಹಾಗೇ ಇವೆ. ಇದಕ್ಕೆ ಕಾರಣ: ಈ ನಾಟಕಗಳನ್ನು ಆಡುವವರು ಬಹುವಾಗಿ, ವಿದ್ಯಾರ್ಥಿಗಳು. ಅಚ್ಚುಕಟ್ಟಾದ ರಂಗಸ್ಥಳ, ಸ್ಥಾನ, ಸಂದರ್ಭ ಸನ್ನಿವೇಶಗಳಿಗೆ ಅಗತ್ಯವಾದ ಸಲಕರಣೆಗಳು, ಪಾತ್ರಕ್ಕೆ ಒಪ್ಪತಕ್ಕ ವೇಷಭೂಷಣ, ಅದನ್ನು ಧರಿಸಿ 'ಇದು ಸಹಜ' ಎಂಬಂತೆ ನುಡಿಯುವ ನಡೆಯುವ ಚತುರತೆ, ಅದಕ್ಕೆ ತಕ್ಕ ಅನುಭವ—ಇಲ್ಲದಿದ್ದರೆ, ಹೇಗೆ? ನಾಟಕದಲ್ಲಿ, ಒಂದು ಸಾಮಾನ್ಯಪಾತ್ರದ ಅಭಿನಯ ಕೆಟ್ಟರೂ, ಮಿಕ್ಕವರು ಏನೇ ಮಾಡಲಿ, ಎಷ್ಟೇ ಚೆನ್ನಾಗಿ ತಮ್ಮ ಪಾತ್ರ ಅಭಿನಯಿಸಲಿ, ಆ ಎಲ್ಲ ಚಿತ್ರವನ್ನೂ ಒಂದು ಸಣ್ಣ ಮಸಿಯ ಕಲೆ ಕೆಡಿಸಿಬಿಡುತ್ತದೆ.

ಅನೇಕ ವೇಳೆ ಈ ವಿಷಯವನ್ನು ನಾನು ಕೈಲಾಸಂ ಸಂಗಡ ಚರ್ಚಿಸಿದ್ದೇನೆ. ನನ್ನ ಅಭಿಪ್ರಾಯಗಳನ್ನು ಅವರು ಸರ್ವಥಾ ಒಪ್ಪಿದರೂ, "ಬರುತ್ತಾ ಬರುತ್ತಾ ಸರಿಹೋಗುತ್ತೆ, ಹೋಗುತ್ತೆ." ಎನ್ನುತ್ತಿದ್ದರು. ಅದೇ, ಇಂಗ್ಲಿಷ್ ಬೋರ್ಡಿಂಗ್ ಶಾಲೆಗಳಲ್ಲಿ, ಅಲ್ಲಿನ ವಿದ್ಯಾರ್ಥಿಗಳು ಸಣ್ಣಪುಟ್ಟ ನಾಟಕ ಆಡುವುದು ನೋಡಿದ್ದೇನೆ; ಎಷ್ಟು ಚೆನ್ನಾಗಿ, ಅಚ್ಚುಕಟ್ಟಾಗಿ, ಅಭ್ಯಾಸಮಾಡಿ ಆಡುತ್ತಾರೆ! ನಮಗೂ ಅವರಿಗೂ ಒಂದೇ ವ್ಯತ್ಯಾಸ. ಅವರು ಯಾವುದು ಹಿಡಿದರೂ, ಶಿಸ್ತಿನಿಂದ ಮಾಡುತ್ತಾರೆ. ನಮ್ಮಲ್ಲಿ ಅದು ಸದ್ಯಕ್ಕೆ ಇಲ್ಲ. ಅದು ಯಾವಾಗ ಬರುತ್ತೋ! ಅಥವಾ ಇಲ್ಲವೇ ಇಲ್ವೋ?

ಕೈಲಾಸಂ ನಾಟಕಗಳು ಪ್ರಧಾನವಾಗಿ ಹಾಸ್ಯರಸದವು ಆದರೂ, ಅಲ್ಲಿ ಕಣ್ಣಿಗೆ ಎದ್ದು ಕಾಣದ, ಒಡೆದು ತೋರದ ಒಳ ದುಃಖ ತುಂಬಿರುತ್ತದೆ. ಸಮಾಜದ ಕುಂದುಕೊರತೆಗಳಿಗೆ ಸಿಕ್ಕಿ ನೊಂದು ಪರಿತಪಿಸುವ ಜೀವಿಗಳ ನೋವಿನ ಕೂಗು ಮಾತಿನ ಮರೆಯಲ್ಲಡಗಿರುತ್ತದೆ. "ಮನೆಗೆ ಬಂದ ಮುತ್ತೈದೆಗೆ ಕುಂಕ್ಮ ಹಚ್ಚೋ ಯೋಗ್ಯತೇನೂ ನನಗಿಲ್ಲ" ಎಂದೆನ್ನುವ ಸುಬ್ಬಮ್ಮನ ಮಾತು ಕೇಳಿ ನಗುತ್ತೇವೆ, ಆಕೆ ಪಡುವ ಸಂಕಟ ನಮಗೆ ಬಹುಶಃ ಗೋಚರವಾಗುವುದಿಲ್ಲ. ಇಂಥ ನೂರಾರು ಸನ್ನಿವೇಶಗಳನ್ನು ಕೈಲಾಸಂ ನಾಟಕಗಳಲ್ಲಿ ನೋಡಬಹುದು.

"The barque of humour often veers
From shoals of smiles to seas of tears"

ಎಂದು ಅವರೇ ಹೇಳಿದ್ದಾರೆ. ಅವರ ನಾಟಕಗಳು ಯಾವ ಉದ್ದೇಶದಿಂದ ಬರೆಯಲ್ಪಟ್ಟುವೋ, ಆ ಉದ್ದೇಶಗಳನ್ನು ನಾವು ಸಾಧಿಸಿದರೆ, ಸಮಾಜದಿಂದ

ಆ ಲೋಪದೋಷಗಳನ್ನು ನಾವು ತೊಡೆದುಹಾಕಿದರೆ, ಆಗ, ಕೈಲಾಸಂಅವರಿಗೆ ನಾವು ಸಲ್ಲಿಸಬೇಕಾದ ಸೇವೆಯನ್ನು ಸಲ್ಲಿಸಿದ ಹಾಗಾಗುತ್ತದೆ. ಕೈಲಾಸಂ ಅವರ ನಾಟಕಗಳನ್ನು ನೋಡಿದವರೂ ಓದಿದವರೂ "ಇವರು ಕನ್ನಡ ಜನರ ನಡೆ, ನುಡಿ, ಆಚಾರ, ವ್ಯವಹಾರಗಳನ್ನೆಷ್ಟು ಕೂಲಂಕಷವಾಗಿ ಅರಿತುಕೊಂಡಿದ್ದಾರೆ!" ಎಂದು ಆಶ್ಚರ್ಯಪಡದೆ ಇರಲಾರರು. ವಿಲಾಯತಿಗೆ ಹೋಗುವುದಕ್ಕೆ ಮುಂಚೆಯೇ ಈ ಜನರೊಡನೆ ಬಳಕೆಯಿಂದ ಓಡಿಯಾಡಿ, ಇವರ ಬದುಕನ್ನು ಚೆನ್ನಾಗಿ ಅರಿತಿದ್ದರು ಎಂಬುದರಲ್ಲಿ ಸಂದೇಹವೇ ಇಲ್ಲ. ಬಾಲ್ಯದಲ್ಲಿ ತಮ್ಮ ತಂದೆ ಉದ್ಯೋಗದಲ್ಲಿದ್ದ ಊರುಗಳ ಕರ್ಣಾಟಕರ ಮನೆಗಳಲ್ಲಿ ಕಣ್ಣು ಕಿವಿ ತೆರೆದುಕೊಂಡು ಓಡಿಯಾಡಿ ಅನುಭವಪಡೆದದ್ದರ ಫಲವೇ ಈ ನಾಟಕಗಳು.

ಲಂಡನ್ನಿನ ನಾಟಕಶಾಲೆಗಳಲ್ಲಿ ಸಾಮಾಜಿಕ ನಾಟಕಗಳನ್ನು ನೋಡಿ ನೋಡಿ, ಈ ತೆರನಾದ ಕುಂದುಕೊರತೆಗಳು ಎಲ್ಲ ಸಮಾಜಗಳಿಗೂ ಸಹಜವಾದುವು ಎಂದು ಅರಿತು, ಅವುಗಳನ್ನು ನಮ್ಮ ಸಮಾಜಕ್ಕೆ ಹೊಂದಿಸಿಕೊಂಡು, ನಾಟಕ ಬರೆದವರು ಕೈಲಾಸಂ. ಆ ಸಂದರ್ಭ ಸನ್ನಿವೇಶಗಳನ್ನು ಇಲ್ಲಿನ ನಡೆವಳಿ ನುಡಿವಳಿಗಳಿಗೆ ಅಳವಡಿಸಿಕೊಳ್ಳುವ ಜಾಣ್ಮೆ ಕೈಲಾಸಂಅವರಲ್ಲಿ ಅದ್ಭುತವಾಗಿತ್ತು. ಉದಾಹರಣೆಗೆ: ಇವರ ಮೊದಲನೆಯ ನಾಟಕವಾದ 'ಟೊಳ್ಳುಗಟ್ಟಿ', ಒಂದು ಇಂಗ್ಲಿಷ್ ಸಾಮಾಜಿಕ ನಾಟಕದ ಅವಲಂಬನದಿಂದ ಅವತರಿಸಿದ್ದು. ಇದೇ "His relations" ಎಂಬ ಹೆಸರಿನಿಂದ silent film ಆಗಿ ಬಂದಿತ್ತು. ಅದು ಏನೇ ಇದ್ದರೂ, 'ಟೊಳ್ಳುಗಟ್ಟಿ' ಮಾತ್ರ ನಮ್ಮಲ್ಲೇ ಹುಟ್ಟಿದ ಹಾಗೆಯೇ ಇದೆಯೇ ಹೊರತು, ಬೇರೊಂದು ದೇಶದಿಂದ ತಂದುಕೊಂಡದ್ದು ಎಂದರೆ ನಂಬುವಂತೆಯೇ ಇಲ್ಲ. ಇದರಂತೆಯೇ 'ಅನುಕೂಲ ಕ್ಕೊಬ್ಬಣ್ಣ,' 'ಸತ್ತವನ ಸಂತಾಪ', 'ಹುತ್ತದಲ್ಲಿ ಹುತ್ತ,' ಮುಂತಾದ ಹಾಸ್ಯರಸಪ್ರಧಾನ ನಾಟಕಗಳು ಲಂಡನ್ stageನಿಂದ ಕೈಲಾಸಂ ಬೆಂಗಳೂರಿಗೆ ತಂದದ್ದೇ. ಆದರೂ ಅವುಗಳಲ್ಲಿ ಯಾವೊಂದು ಅಸ್ವಾಭಾವಿಕವಾದ ಅನ್ಯದೇಶೀಯವಾದ ಅಪರಿಚಿತವಾದ ಪಾತ್ರವಾಗಲಿ ನಡೆನುಡಿಗಳಾಗಲಿ ಸನ್ನಿವೇಶಗಳಾಗಲಿ ಕಾಣಬರುವುದಿಲ್ಲ. ಹೀಗೆ, ವಿದೇಶದ ರೂಪಕಗಳನ್ನೂ ನಮ್ಮದನ್ನಾಗಿಸಿ ತರುವ ಕಲ್ಪನಾಸಾಮರ್ಥ್ಯ ಕೈಲಾಸಂ ಅವರಿಗಿತ್ತು.

ಕೈಲಾಸಂ, ನಾಟಕಗಳಲ್ಲಿ ಮಾತ್ರವೇ ಅಲ್ಲದೆ, filmಗಳಲ್ಲೂ ಸ್ವಲ್ಪ ಓಡಿಯಾಡಿದರು. ಆದರೆ, ಇವರು ರಂಗಸ್ಥಳದಲ್ಲಿ ನಟಿಸದಿದ್ದರೆ ಚೆನ್ನಾಗಿರುತ್ತಿತ್ತು, ಚಲಚ್ಚಿತ್ರಗಳಲ್ಲೂ ಪಾತ್ರವಹಿಸದಿದ್ದರೆ ಚೆನ್ನಾಗಿರುತ್ತಿತ್ತು, ಎಂದು ನನಗೆ ಎನ್ನಿಸುತ್ತದೆ. ಇವರು ಮೊತ್ತಮೊದಲು ಪಾತ್ರವಹಿಸಿದ ಚಿತ್ರದ ಹೆಸರು—'ಧರ್ಮಪತ್ನಿ.' ಮದರಾಸಿನ ಒಂದು ಕಂಪೆನಿಯವರು ತಯಾರಿಸಿದ ಫಿಲ್ಮ್ ಅದು. ಆಗ ಇನ್ನೂ 'ಟಾಕಿ' ಬಂದಿರಲಿಲ್ಲ. ಕೈಲಾಸಂ ಭಾಷೆಯಲ್ಲಿ ಹೇಳುವುದಾದರೆ, ಆಗ ಅದು ಇನ್ನೂ 'ಮೂಕಿ.' ಈ 'ಧರ್ಮಪತ್ನಿ' ಚಿತ್ರದಲ್ಲಿ ಕೈಲಾಸಂ villain ಪಾತ್ರ ವಹಿಸಿ, ನಟಿಸಿದರು. ನಡುವೆ ಇವರಿಗೂ ಆ ಕಂಪೆನಿಯವರಿಗೂ ಏನೋ ಮನಸ್ತಾಪ ಉಂಟಾಗಿ, ಕೈಲಾಸಂ ತಮ್ಮ ಪಾತ್ರವನ್ನು ಪೂರ್ತಿಗೊಳಿಸದೆ ನಡುವೆ ಬಿಟ್ಟು ಬಂದರು. ತಪ್ಪು ಕೈಲಾಸಂ ಅವರದೇ ಆಗಿತ್ತು. ಕಂಪೆನಿಯವರು ಕೈಲಾಸಂ ಪಾತ್ರವನ್ನು ಅಷ್ಟಕ್ಕೇ ನಿಲ್ಲಿಸಿಕೊಂಡು, ಉಳಿದ ತಯಾರಿಕೆಗಳನ್ನು ಪೂರ್ತಿಮಾಡಿ, ಆ ಚಿತ್ರವನ್ನು ಪ್ರದರ್ಶನ ಮಾಡಿಯೇ ಮಾಡಿದರು. ಬೆಂಗಳೂರಿನಲ್ಲಿ ಆ ಚಿತ್ರವನ್ನು ನೋಡಿದೆ. ಕೈಲಾಸಂ ಪಾತ್ರ ಎಲ್ಲಿಗೆ ಮುಗಿಯಿತೋ ಅಲ್ಲಿಗೆ ಒಂದು Title ಹಾಕಿದ್ದರು: 'Thus Vanished the Villain'

ಕೈಲಾಸಂ ನಟಿಸಿದ ಇನ್ನೊಂದು ಚಲಚ್ಚಿತ್ರ, ಅದೂ 'ಮೂಕಿ'ಯೇ: ಶ್ರೀ ಭವನಾನಿಯವರ "ವಸಂತಸೇನಾ." ಈ ಚಿತ್ರದ ತಯಾರಿಕೆ ಆದದ್ದೂ ಬೆಂಗಳೂರಿನಲ್ಲೇ. ಆಗ ಕೈಲಾಸಂ ನನ್ನ ಮನೆಯ—ಎಂದರೆ ವ್ಯಾಯಾಮ ಶಾಲೆಯ—Nookನಲ್ಲಿ ಇರುತ್ತಿದ್ದರು.

ಈ Nook ಎಂಬುದು ಒಂದು ಸಣ್ಣ ಕೋಣೆ. ಕೈಲಾಸಂ, ತಾವೇ ಆ ಕೋಣೆಗೆ The Nook ಎಂದು ನಾಮಕರಣ ಮಾಡಿದ್ದರು. ಈ Nook ವಿಷಯ ವರ್ಣಿಸಿ ಹೇಳಬೇಕಾದದ್ದೇ.

ಇಲ್ಲಿ, Nookಇಗೆ ನುಗ್ಗುವ ಮೊದಲು, ಕೈಲಾಸಂ 'ವಸಂತಸೇನಾ ಚಲಚ್ಚಿತ್ರವಲ್ಲಿ ನಟಿಸಿದ ಕಾಲದಲ್ಲಿ ನಡೆದ ಒಂದು jokeಅನ್ನು ಹೇಳಿಬಿಡಬಹುದು.

ಕೈಲಾಸಂ ಅವರ ಬುದ್ಧಿ ಹೇಗೆ ಸೂಕ್ಷ್ಮವೋ ಅವರ ಮಾತೂ ಹಾಗೇ ಸೂಕ್ಷ್ಮ, ಅವರ ಹಾಸ್ಯವೂ ಅಷ್ಟೇ ಸೂಕ್ಷ್ಮ. ಕೈಲಾಸಂಅನ್ನು ಚೆನ್ನಾಗಿ

ತಿಳಿದಿದ್ದವರಿಗೆ, ಅವರ ಕೃತಿಗಳನ್ನು ಆಳವಾಗಿ ಓದಿದ್ದವರಿಗೆ ಮಾತ್ರ ಅವರ ಹಾಸ್ಯದ ಗೋಚರ ತಟಕ್ಕನೆ ಆಗುತ್ತಿತ್ತೆ ವಿನಾ ಹೊಸದಾಗಿ ಅವರ ನಾಟಕಗಳನ್ನು ನೋಡಿದವರಿಗೆ ಅದರ ಪರಿಣಾಮ ಆಗುತ್ತಿದ್ದುದು ಸ್ವಲ್ಪ ನಿಧಾನವೇ. ಇದಕ್ಕೆ ನಿದರ್ಶನ:

ಆಗ ಚಾಮರಾಜಪೇಟೆಯಲ್ಲಿದ್ದ ನನ್ನ ವ್ಯಾಯಾಮಶಾಲೆಯ ಮುಂಭಾಗವನ್ನೇ ಚಾರುದತ್ತನ ಶಯ್ಯಾಗೃಹವನ್ನಾಗಿ ಮಾಡಿಕೊಂಡು, ಬಣ್ಣ ಬಳಿಸಿ, ಚಿತ್ರ ಬರೆಯಿಸಿ, ಶ್ರೀ ಭವನಾನಿಯವರು 'ಮೃಚ್ಛಕಟಿಕ' ಚಲಚ್ಚಿತ್ರವನ್ನು shoot ಮಾಡುತ್ತಿದ್ದ ಕಾಲ. ಒಂದು ದಿನ ಬೆಳಗಿನಿಂದಲೂ ಮನೆಯ ಮುಂದೆ ಜನಸಂದಣಿ: ನಟರೂ ನಟಿಯರೂ ಚೇಟ ವಿಟ ಶಕಾರ ಚಾರುದತ್ತ ಮದನಿಕೆ ರದನಿಕೆ ವಸಂತಸೇನೆ ಎಲ್ಲರೂ ಹಾಜರ್. Cameraಗಳು, Photographerಗಳು,Director ಎಲ್ಲರೂ ಸಿದ್ಧರಾದರು. ರೋಹಸೇನ 'ನನಗೆ ಈ ಮಣ್ಣಿನ ಬಂಡಿಬೇಡ, ನನಗೆ ಚಿನ್ನದ ಬಂಡಿಯೇ ಬೇಕು' ಎಂದು ಹಠಹಿಡಿದು ಅಳಬೇಕಾಗಿತ್ತು; ಆದರೆ, ಅಳಲಿಲ್ಲ. ಆಗ ಹಸಿರು ಮೆಣಸಿನ ಕಾಯನ್ನು ಮುರಿದು, ಆ ಮಗುವಿನ ನಾಲಗೆಗೆ ತಿಕ್ಕಿದರು. ಅವನು 'ಅಯ್ಯೋ! ಬೇಡ, ಬೇಡಾ!' ಎಂದು ಅತ್ತ. ಆಗ ಭವನಾನಿಯವರು "Camera-Shoot!" ಎಂದರು. ರೋಹಸೇನ ಚಿನ್ನದ ಬಂಡಿ ಬೇಕೆಂದು ಅತ್ತದ್ದು record ಆಗಿ ಹೋಯಿತು!

ಹೊರಗೆ ಇಷ್ಟೆಲ್ಲಾ ನಡೆಯುತ್ತಿದ್ದಾಗ, ಅಲ್ಲಿ ಒಳಗಡೆ—ಒಂದು ಕೋಣೆಯಲ್ಲಿ ಹುಡುಗರು ವ್ಯಾಯಾಮ ಮಾಡಲು Roman Rings ಹಾಕಿತ್ತು—ಬಂದವರೆಲ್ಲ ಅದನ್ನು ಹಿಡಿದು ಉಯ್ಯಾಲೆ ಆಡುವುದಕ್ಕೆ ಷುರು. ಅದರಲ್ಲಿ ಏನು ಮಾಡಬೇಕು ಎಂಬುದನ್ನು ಅಲ್ಪಸ್ವಲ್ಪ ತಿಳಿದಿದ್ದವರೂ ಅಲ್ಲಿ ಯಾರೂ ಇರಲಿಲ್ಲ.

ಆ ವೇಳೆಗೆ ಒಬ್ಬಳು ನಟಿ, ಅಲ್ಲಿಗೆ ಬಂದವಳು, "ನಾನೂ Roman Ringsಅಲ್ಲಿ ಒಂದೆರಡು exercise ಮಾಡಬಲ್ಲೆ!" ಎಂದಳು. ನಾವು "ಎಲ್ಲಿ? ಒಂದು ಮಾಡಿ, ನೋಡೋಣ!" ಎಂದು ಕೇಳಿಕೊಂಡೆವು. ಆಕೆ, ನಮ್ಮ ಬಲಾತ್ಕಾರಕ್ಕೋಸ್ಕರ ಒಪ್ಪಿ, ಒಂದೇ ಒಂದು exercise ಮಾಡಿದಳು. ತಲೆ ಕೆಳಗಾಗಿ ಕಾಲು ಮೇಲಾಗಿ ನಿಲ್ಲುವುದು, ಇದು Roman Ringsನಲ್ಲಿ

ಸುಲಭ ಪಾಠ. ನಾವೆಲ್ಲ ನೋಡುತ್ತಿದ್ದೆವು. ಕೈಲಾಸಂ ನಮ್ಮ ಜೊತೆಯಲ್ಲೇ ನಿಂತು, ನೋಡುತ್ತಿದ್ದರು. ಹತ್ತೇ ಹತ್ತು secondಗಳಲ್ಲಿ ಆಕೆಯ ಮುಖ ತುಂಬ ಕೆಂಪೇರಿತು. ಕೂಡಲೆ ಆಕೆ ನೆಲದ ಮೇಲೆ ಕಾಲು ತಂದು ಇಳಿದು ಬಿಟ್ಟಳು.

ಆಕೆ ಹೇಳಿದಳು: "It has ever been so. Whenever I do that 'Head down-Leg up' position on the rings, blood rushes into my head.

ತತ್‌ಕ್ಷಣವೇ ಕೈಲಾಸಂ ಅಂದರು: "Yes, yes. Nature always abhors a Vacuum. That is a law of nature."

"ಅದೂ ನ್ಯಾಯವೇ" ಎಂದು ನಾವೆಲ್ಲ ಒಪ್ಪಿದೆವು.

ಆ ನಟಿ ಆಚೆ ಹೋದ ಮೇಲೆ, ಕೈಲಾಸಂ ನಮ್ಮ ಕಡೆ ತಿರುಗಿದರು. "ಒಳ್ಳೇ ಕುರಿಗಳ ಹಾಗೆ ನಿಂತಿದ್ದೀರೆ ಹೊರತು—ನಾನು ಹೇಳಿದ jokeಉ ನಿಮಗೆ ಏನಾದರೂ ಅರ್ಥವಾಯ್ತ? ಅಯ್ಯೋ! What intelligent people!" ಎಂದರು. "Nature abhors a vacuum . . . . your head is a vacuum . . . . There's nothing in your head . . . . That's why blood rushes in . . . . ತಿಳೀತೇನ್ರೋ?. . .ಬೆಪ್ಪುಗಳ್ರ!"

ಆಗ ಅಲ್ಲಿ ಇದ್ದವರೆಲ್ಲ 'ಹೋ' ಎಂದು ಬಿದ್ದುಬಿದ್ದು ನಕ್ಕೆವು.

ಕೈಲಾಸಂ ಹೇಳಿದ ಇಂತಹ ಚಿಟಿಕೆಹಾಸ್ಯಗಳು ಎಷ್ಟೋ. ಅವು ಅನೇಕ, ಬಹುಮಟ್ಟಿಗೆ Punch, Omnibus Bookಗಳಿಂದ ಆರಿಸಿಕೊಂಡ ವಾದರೂ ಕೈಲಾಸಂ ಅವರ ಅದ್ಭುತ ಮನಸ್ಸಿನ ಯಂತ್ರಕ್ಕೆ ಸಿಕ್ಕಿ ಕನ್ನಡ ದಲ್ಲಿ ಪರಿವರ್ತನೆ ಹೊಂದಿದ ಮೇಲೆ "ಇವು ನಮ್ಮವೇ. ನಮ್ಮಲ್ಲಿ ಹುಟ್ಟಿ ದುವೇ." ಎಂದೆನ್ನಿಸಿಕೊಂಡುಬಿಟ್ಟವೆ.

THE NOOK

ಆಗ ನನ್ನ ವ್ಯಾಯಾಮಶಾಲೆ ಇದ್ದದ್ದು ಚಾಮರಾಜಪೇಟೆ ಐದನೆಯ ಮುಖ್ಯರಸ್ತೆಯಲ್ಲಿ, ಡಾ|| ನಂಜಪ್ಪನವರಿದ್ದ ಮನೆಯ ಎದುರುಗಡೆ. ಮನೆಯ ಆವರಣದೊಳಗೆ, ಒಂದು ಕಡೆ ಒಂದು ಗಾಡಿಖಾನೆ, ಕುದುರೆ ಕಟ್ಟುವ ಲಾಯ. ಅದರ ಹಿಂದುಗಡೆಯೇ ಕುದುರೆಯ ಆಳಿಗಾಗಿ, ಯಾವ ಪುರಾತನ ಕಾಲದಲ್ಲಿ ಕಟ್ಟಿದ್ದೋ, ಒಂದು ಚಿಕ್ಕ ಕೋಣೆ. ಅದಕ್ಕೆ ಒಂದೇ ಒಂದು ಪುಟ್ಟ ಕಿಟಕಿ. ನೆಲಕ್ಕೆ ಕಡಪ ಕಲ್ಲು, ಅದೂ ಬಹಳ ಕಡೆ ಒಡೆದುಹೋಗಿತ್ತು. ಮೇಲಕ್ಕೆ Arbuthnot ಕಂಪೆನಿಯ ಕಾಲದ ಮಂಗಳೂರು ಹೆಂಚು, ಒಳಗೆಲ್ಲಾ ಹುರುಳಿ ಬೇಯಿಸುತ್ತಿದ್ದ ಹೊಗೆಯಿಂದ ಕಪ್ಪು ಹಿಡಿದು ಕರ್‍ರಗಾಗಿತ್ತು. ಹಾಸಿದ್ದ ಕಡಪಾ ಕಲ್ಲಿನ ಕೆಳಗಡೆ, ಮನೆಯ ಚರಂಡಿ, ಬೀದಿಯ ದೊಡ್ಡ ಚರಂಡಿಗೆ ಹೋಗಿ ಸೇರುವುದು. ಒಡೆದ ಕಲ್ಲುಗಳ ಸಂದಿಯಿಂದ ಮೇಲೇಳುವ ಚರಂಡಿಯ ವಾಸನೆ ಸಹಿಸಲಸಾಧ್ಯ. ಕೋಣೆಯಲ್ಲಿ ಎಲ್ಲೆಲ್ಲೂ ಜೇಡನ ಬಲೆಗಳೇ. ಕೋಣೆಯ ಉದ್ದ, ಅಗಲ ಎಂಟುXಆರು. ಈ ಕೋಣೆಯನ್ನು ಕೈಲಾಸಂ ಮೆಚ್ಚಿದರು, ಹುಡುಕಿ ಹುಡುಕಿ ಆಶೆಪಟ್ಟು ಆರಿಸಿಕೊಂಡರು.

ಆ ಮನೆಗೆ ನಾನು ಬಂದ ಹೊಸದರಲ್ಲಿ ಕೈಲಾಸಂ ನನ್ನ ಹತ್ತಿರ "ವೆಂಕಟೇಶ್, ನನಗೊಂದು ರೂಂ ಬೇಕು. White House ನಲ್ಲಿದ್ಕೊಂಡು ಏನೂ ಬರೆಯೋದಕ್ಕಾಗೋದಿಲ್ಲ. Aloof ಆಗಿರೋ ಒಂದು ರೂಂ ಬೇಕು" ಎಂದರು. ನಾನು ಅವರನ್ನು ಮಹಡಿಗೆ ಕರೆದುಕೊಂಡು ಹೋಗಿ, ಒಂದು 'ರೂಂ' ತೋರಿಸಿದೆ. ಚೆನ್ನಾಗಿ ಗಾಳಿ ಬೆಳಕು ಬರುತಾ ಇತ್ತು, ಗೋಡೆ ನೆಲ ಸೂರು ಎಲ್ಲಾ ಲಕ್ಷಣವಾಗಿತ್ತು. ಅದನ್ನ ತೋರಿಸಿ, "ಇಲ್ಲಿ ಮಂಚ ಹಾಕಿಸಿಕೊಡುತೇನೆ. Writing-table, table-lamp, chairs, ಒಂದು table-fan, ಎಲ್ಲಾ equip ಮಾಡಿಕೊಡುತೇನೆ. ಈ ಕೋಣೆ aloof ಆಗಿದೆ. ನೀವು ಬೇಕಾದಾಗ ಬರಬಹುದು, ಬೇಕಾದಾಗ ಹೋಗಬಹುದು. ಯಾರಿಗೂ ಏನೂ ತೊಂದರೆ ಆಗೋದಿಲ್ಲ." ಎಂದೆ. ಕೈಲಾಸಂ ಮನಸ್ಸಿಗೆ ಆ ಕೋಣೆ ಹಿಡಿಸಲಿಲ್ಲ. ಹುಡುಕಿ ಹುಡುಕಿ, ಆ ಹುರುಳಿ ಬೇಯಿಸುತ್ತಿದ್ದ ಸರ್ವಾಸಹ್ಯ ಕೋಣೆಯನ್ನೆ 'ಇದೇ ನನ್ನ Nook' ಒಪ್ಪಿದೆ ಎಂದರು.

ನಾನು ಕೇಳಿದೆ: "ಇದೇನ್ ಸರ್, ನಿಮ್ಮು ಚಚ್ಚು! ಈ ಕೋಣೆಯಲ್ಲಿ ಮನುಷ್ಯರು ಇರೋದಕ್ಕೆ ಆಗುತ್ತೆ? Lumber ಹಾಕೋಕ್ಕೂಡ ಲಾಯಕ್ಕಾ ಗಿಲ್ವಲ್ಲಾ, ಇದರಲ್ಲಿ ಹ್ಯಾಗಿರ್‍ತೀರಿ, ಮಾರಾಯರೆ? ಇಲ್ಲಿ ಕೂತ್ಕೊಂಡು ಏನ್ ಬರೀತೀರಿ, ಕತ್ತಲೇಲಿ? ಈ ವಾಸನೇಲಿ? ಈ ಇಕ್ಕಟ್ಟಿನಲ್ಲಿ? ಈ ಕ್ರಿಮಿವರ್ಗದ ನಡುವೆ?"

ಕೈಲಾಸಂ ಮೆಲ್ಲಗೆ ನಕ್ಕು, "ವೆಂಕಟೇಶ್, one must become a gutter-snipe. Then alone he can sit there and gaze at the sky, and the sun, and the world around him. This room has the right atmosphere and I can write things here." ಅಂದು ಬಿಟ್ರು.

"ಇನ್ನು ಮಾತನಾಡಿ ಪ್ರಯೋಜನವಿಲ್ಲ" ಎಂದು ಸುಮ್ಮನಾಗಿಬಿಟ್ಟೆ.

ಕೈಲಾಸಂ ಬಂದರು, Nook ನಲ್ಲಿ ನೆಲೆಸಿದರು.

ನಾನು ಆಗ ಹದಿನೈದು ದಿವಸ ಯಾವುದೋ ಕೆಲಸದ ಮೇಲೆ ಬೇರೆ ಊರಿಗೆ ಹೋಗಿದ್ದೆ. ಊರಿನಿಂದ ಬಂದ ಕ್ಷಣವೇ ಕೈಲಾಸಂ ಅವರನ್ನು ನೋಡುವ ಆತುರ. ಕೇಳಿದೆ. ಮನೆಯ ಹುಡುಗರು ಅಂದರು: "ಒಂಬತ್ತು ಗಂಟೆ ಸುಮಾರಿಗೆ ಏಳ್ತಾರೆ. ಎದ್ದು, ಕಾಫಿಗೆ ಹೇಳಿಕಳಿಸ್ತಾರೆ." ಸರಿ, ಒಂಬತ್ತಾಗಲಿ, ಎಂದು ನಾನು ಕಾದೆ. ಸುಮಾರು ಒಂಬತ್ತೂವರೆಯ ಹೊತ್ತಿಗೆ ಹೇಳಿಕಳುಹಿಸಿದರು. ನಾನೇ ಕಾಫಿ ತೆಗೆದುಕೊಂಡುಹೋದೆ.

ನನ್ನನ್ನು ನೋಡಿದೊಡನೆ ಕೈಲಾಸಂ "ನೀನೇ ತಂದೆಯಾ? Come in, dear boy. ಯಾವಾಗ್ ಬಂದೆ? How is Bombay?" ಎಂದರು.

ನಾನು "Raining awfully. ಕಾಫಿ ತಗೊಳ್ಳಿ. You don't like it cold, I know." ಎಂದೆ.

ಕೈಲಾಸಂ ಕಾಫಿಯನ್ನು ಕುಡಿಯತೊಡಗಿದರು. ನಾನು ಅಲ್ಲೇ ಒಂದು ಮಡಿಸಿದ್ದ ಜಮಖಾನೆಯ ಮೇಲೆ ಕುಳಿತು, ಆ ಕೋಣೆಯ ಸೌಭಾಗ್ಯವನ್ನು ವೀಕ್ಷಿಸತೊಡಗಿದೆ. ಸೂರಿನಲ್ಲಿ ಕಟ್ಟಿದ ಜೇಡನ ಬಲೆಗಳು ಹಾಗೇ ಇದ್ದುವು. ಗೋಡೆಯಲ್ಲಿ ಒಂದು ಕಡೆ ಒಂದು ಅಪೂರ್ವವಾದ ಈಶ್ವರನ ಪಟ ಚೌಕಟ್ಟಿನಲ್ಲಿ ಕುಳಿತಿತ್ತು. . . . ಶಿವನ ಮುಖ ಮಾತ್ರ ಹೆಚ್ಚಾದ ಪ್ರಭೆಯಿಂದ ಕಂಗೊಳಿಸು

ತ್ತಿದೆ. ಮುಕುಟದಲ್ಲಿ ಭುಜಂಗವೊಂದು ವರ್ತುಳಾಕಾರವಾಗಿ ಬಾಗಿ ಪ್ರಭಾವಳಿಯಂತೆ ಕಾಣುತ್ತಿದೆ. ಚೂಡಾಭೂಷಣನಾಗಿದ್ದ ಹಿಮಗರ್ಭ, ದೇವದೇವನ ತಪೋಜ್ವಾಲೆಯ ಉದ್ವೇಗವನ್ನು ಶಮನಮಾಡಲೋಸುಗವೇ ಭ್ರೂಮಧ್ಯಕ್ಕೇ ಇಳಿದುಬಂದಿದ್ದಾನೆ. ಧೂರ್ಜಟಿಯ ಜಟೆಗಳು ಎರಡು ಭುಜಗಳ ಮೇಲೆಯೂ ಜಾರಿ ಇಳಿದಿವೆ. ಬದ್ಧಪದ್ಮಾಸನಸ್ಥನಾಗಿ ಕುಳಿತು, ತಪೋನಿಧಿಯು ಸವಿಕಲ್ಪ ಸಮಾಧಿಯಲ್ಲಿರುವಂತೆ ಕಾಣಬರುತ್ತಿದ್ದಾನೆ. ಭೌತಶರೀರ ಕಂಡೂ ಕಾಣದಂತೆ ಛಾಯಾಮಾತ್ರವಾಗಿದೆ. ದೇಹದ ಎಲ್ಲ ಕ್ರಿಯೆಗಳೂ ಧ್ಯಾನಚಿತ್ತ ವೃತ್ತಿಯಿಂದ ನಿರೋಧಿಸಲ್ಪಟ್ಟಿವೆ. ಭಯದ ಚಿಹ್ನೆಯಾದ ಸರ್ಪ, ಮೃತ್ಯುವಿನ ಅಂಕಿತವಾದ ರುಂಡ, ಇವುಗಳನ್ನೇ ಆ ಮೃತ್ಯುಂಜಯನು ಆಭರಣವನ್ನಾಗಿ ಧರಿಸಿದ್ದಾನೆ. ಪಿನಾಕಿಯ ನಿಮೇಷಗಳು ಯೋಗನಿದ್ರೆಯಲ್ಲಿ ಮುಚ್ಚಿಯೂ ಮುಚ್ಚದ ಹಾಗೆ ಇವೆ. ಆ ಆನಂದಮೂರ್ತಿಯು ಸಮಾಧಿಯ ಬ್ರಹ್ಮಾನಂದವನ್ನು ಅನುಭವಿಸುತ್ತಿರುವ ಹಾಗೆ ತುಟಿಯ ಕೊನೆಗಳಲ್ಲಿ ಸಂತೃಪ್ತಿಯ ಸುಳಿವು ಇದೆ . . . ಒಟ್ಟಿನಲ್ಲಿ, ಪಠ ಅದ್ಭುತವಾಗಿತ್ತು! ಚಿತ್ರಿಸಿದ ಕಲೆಗಾರ ಮಹಾನುಭಾವನೇ ಇರಬೇಕು. ಈ ಅನರ್ಘವಾದ ಚಿತ್ರ ಈಗಲೂ ನನ್ನಲ್ಲಿದೆ. ಇದನ್ನು ಬಹುದಿನಗಳಾದ ಮೇಲೆ ಕೈಲಾಸಂ ನನ್ನ ಕೈಯಲ್ಲಿರಿಸಿ, "I dare not entrust this to anybody else. As long as I am alive, it is mine. I need not say the rest." ಎಂದರು. ಹೀಗೆಂದು ಕೈಲಾಸಂ ಆ ಕೈಲಾಸಪತಿಯ ಪಠವನ್ನು ನನ್ನ ಕೈಯಲ್ಲಿಟ್ಟರು . . . ಈ ಪಠದ ಒಂದು ಕೋನದಲ್ಲಿ ಉರಿದು ಆರಿಹೋಗಿದ್ದ ಕೆಲವು ಗಂಧದ ಕಡ್ಡಿಗಳೂ ಇದ್ದುವು.

ಕೈಲಾಸಂರವರಿಗೆ ಶಿವನಲ್ಲಿ ಸ್ವಲ್ಪ ಹೆಚ್ಚು ಪಕ್ಷಪಾತ. "ಸಾಯುವುದಕ್ಕೆ ಅಂಜುವವರೂ ಹೆಚ್ಚು ಭೋಗಾಪೇಕ್ಷೆಯ ಲಾಲಸೆಯವರೂ, ಲಕ್ಷ್ಮೀಕಟಾಕ್ಷಕಾಂಕ್ಷಿಗಳೂ ಆದವರ ದೈವ **ಅದು**. ಪ್ರಪಂಚದ ವ್ಯಾಮೋಹಗಳಿಂದ ದೂರನೂ ನಿರ್ಲಿಪ್ತನೂ ಮೋಕ್ಷಗಾಮಿಯೂ ಆದವನ ಪಾಡು **ಇದು**. ಆದರೂ ನೋಡು, ವೆಂಕಟೇಶ್, ಈ Peculiarityನ. ಇಂಥ ಶಿವನನ್ನು ಅರ್ಚಿಸುವವರೇ ಮಹಾ ಧನಿಕರಾಗಿ, ಪ್ರಪಂಚದ ಎಲ್ಲ ಭೋಗಗಳನ್ನೂ ಅನುಭವಿಸುತ್ತಾರೆ. ಸುಖ ಸಂತುಷ್ಟಿಗಾಗಿಯೇ ವಿಷ್ಣುವನ್ನು ಅರ್ಚಿಸುವವರು ಮೋಕ್ಷಪದವಿಯನ್ನು ಹೊಂದುತ್ತಾರೆ. ಇದೊಂದು ವಿಚಿತ್ರವೇ ಅಲ್ಲವೆ!" ಎನ್ನುತ್ತಿದ್ದರು ಕೈಲಾಸಂ. ಇದ್ದರೂ

ಇರಬಹುದೇನೊ! ಶಿವಭಕ್ತರೇ ಹೆಚ್ಚು ಕೋಟ್ಯಧೀಶ್ವರರಾಗಿರಬಹುದು; ನಾನು ಪರೀಕ್ಷೆ ಮಾಡಿಲ್ಲ.

ಪಕ್ಕದ ಗೋಡೆಯಲ್ಲಿ ಇನ್ನೊಂದು ತಸಬೀರು: ಚೌಕಟ್ಟು ಹಾಕಿದ ಒಂದು ಹೆಣ್ಣಿನ photo. ಅದರ ಮುಖಚರ್ಯೆಯಿಂದ, ತೊಟ್ಟಿದ್ದ ಬಟ್ಟೆಗಳ ವೈಖರಿಯಿಂದ, ಒರಗಿ ಕುಳಿತಿದ್ದ ಭಂಗಿಯಿಂದ, ಗರತಿಯಾದ ಗೃಹಿಣಿಯ ಶುಚಿತ್ವ ಅಲ್ಲಿ ಕಂಡುಬರಲಿಲ್ಲ. ಅಂತಹ ಚಿತ್ರವನ್ನು ಕೈಲಾಸಂ ಅದೇಕೆ ಆ ಮಹಾದೇವನ ಎದುರಿಗೆ ಇಟ್ಟಿದ್ದರೋ ನಾನು ತಿಳಿಯಲಾರದೆಹೋದೆ. ಅವರನ್ನೇ ಕೇಳಿದೆ. ಅವರೆಂದರು: "ನಾನು ಹದಿಮೂರೂಮುಕ್ಕಾಲು ದಿನ ಅವರಪ್ಪನ A.D.C. ಆಗಿದ್ದೆ." ಎಂದು ಯಾವುದೋ ಚಿಕ್ಕಪುಟ್ಟ ಸಂಸ್ಥಾನಿಕನ ಹೆಸರು ಹೇಳಿದರು; ಅದು ಈಗ ಮರೆತುಹೋಗಿದೆ. "ಆಗ ಆಕೆ autograph ಮಾಡಿಕೊಟ್ಟಳು. ದೊಡ್ಡದೊಡ್ಡ ದೇವಾಲಯಗಳಲ್ಲಿ ಇರೋದಿಲ್ವೆ? . . . . ನಂಜನಗೂಡಿನಲ್ಲಿ ನೀನು ನೋಡಿಲ್ವೆ? . . . . ರುಚೀನಾಂ ವೈಚಿತ್ರ್ಯಾತ್! . . ." ಎಂದರು. ನಾನು ಮುಂದಕ್ಕೆ ಕೆದಕಲಿಲ್ಲ, ಅಲ್ಲಿಗೇ ಬಿಟ್ಟೆ.

ಎದುರುಗೋಡೆಯಲ್ಲಿ ಒಂದು ಮುರುಕಲು coat-hanger. ನೋಡಿದರೆ, ಅವರ ಬಟ್ಟೆ ಅಗಸನ ಅಂಗಡಿ ಮುಖನೋಡಿ, ಬಹಳ ದಿನ ಆಗಿದ್ದಿರಬೇಕು. ಒಂದು ಮೂಲೆಯಲ್ಲಿ ಒಂದು sun-hat, ಒಂದು ಒಂಟಿ ಕೆರ, ಒಂದು ಜೊತೆ ಕರೀಬಣ್ಣದ shoes, ಜತೆಯಲ್ಲಿ ಒಂದು brush,—ಸಮಯ ಎಂದರೆ ತಲೆಗೂ ಆಗುವುದು, ಸಮಯವೆಂದರೆ ಷೂ polishಗೂ ಆಗುವುದು. . . . ಇನ್ನೊಂದು ಮೂಲೆಯಲ್ಲಿ ನಾಲ್ಕು ಕಾಲಿನ stool, ಮೇಲೊಂದು lantern, ಪಕ್ಕದಲ್ಲಿ ಒಂದು beer-bottle ತುಂಬ Kerosine ಎಣ್ಣೆ . . . ಗೋಡೆಗೆ ಸೇರಿದಂತೆ ಉದ್ದಕ್ಕೆ ಬಿಡಿಸಿದ ಹಾಸಿಗೆ, ಮಣುಕು ಕಟ್ಟಿದ್ದ ಒಂದೆರಡು ತಲೆದಿಂಬು, ಒಂದು ಟವಲು, ಒಂದು ಹಳೆಯ ವುಲ್ಲನ್ ರಗ್ಗು, ಕೊಳೆಹಿಡಿದುಹೋಗಿದ್ದ ಒಂದು bed-sheet, ಅದರ ಮೇಲೆ ಬೇಕಾದಷ್ಟು ಸಿಗರೆಟ್ ಬೂದಿ . . . ರೂಮಿನ ತುಂಬ, ಅಲ್ಲಲ್ಲೆ, ಚಿಕ್ಕ ದೊಡ್ಡ ಸಿಗರೆಟ್ ತುಂಡುಗಳು. ಗೂಡಿನಲ್ಲಿ, ಬಟ್ಟೆಯ ಮರೆಯಲ್ಲಿ, Beer, Gin ಬಾಟಲುಗಳು . . . ಹಾಸಿಗೆಯ ಕೆಳಗಡೆ, ಒಡೆದ ಕಡಪಾ ಚಪ್ಪಡಿಯ ಅಡಿಯಲ್ಲಿ ಚರಂಡಿ ಒಡೆದ ಬಿರುಕಿಗೆ ಗೋಣಿಯ ಚಿಂದಿಯನ್ನು ತುರುಕಿತ್ತು.

ಕೈಲಾಸಂ ಹೇಳಿದರು: "ಆ ಸಂದಿಯಿಂದ ಸಾವಿರಕಾಲು, ಜಲಮಂಡಲಿ, ಜಿರಳೆ ಎಲ್ಲಾ ಬರುತ್ವೆ, ಮಗು."

"ನಾಳೆಯೆ! ಸಿಮೆಂಟ್ ಪಾಯಿಂಟಿಂಗ್ ಮಾಡಿಸಿಬಿಡತೇನೆ, ಸರ್. ಹಾಗೆಯೇ white-washಊ ಮಾಡಿಸಿಬಿಡೋಣ." ಎಂದೆ, ನಾನು.

ಕೈಲಾಸಂ: "Venkatesh, for God's sake don't do anything of the kind. I have at least found the much-needed atmosphere here. Everything is perfect."

ನಾನು: "ನಿಮ್ಮಿಷ್ಟ, ಸರ್."

ಕೈಲಾಸಂ: "Good boy. I have been able to complete my EKALAVYA here. Now KARNA is born. ಅವತ್ತು B. R. V. ಇಂದ ಬರುವಾಗ ನಿನಗೆ ಹೇಳಿದೆ, ನೋಡು: ಕರ್ಣ. I am putting it on paper, now . . . ಮಗು, ಬಿಡುವಿದ್ರೆ, ರಾತ್ರಿ ಹೊತ್ತು ಸ್ವಲ್ಪ ಬರೀತೀಯಾ? These fellows promise, but never turn up. ಪಾಪ, ಅವರ ಕಷ್ಟಗಳೇನೇನಿವೆಯೋ! Will you write something tonight, . . . please ?"

ನಾನು: "Allright, Sir, I shall try."

ಕೈಲಾಸಂ: "Let us do some ori-ginnal work." ಎಂದು ನಗುತ್ತ, "ಹೂಂ . . . . ಜೋಕು : gin, ginnal, ori-ginnal. Gordon's—best. Nine ruppees, include a packet of cigarettes. Bring some hot coffee in a thermos for yourself. I have two sodas. That is enough."

ನಾನು: "ನಿಮ್ಮಿಷ್ಟೆ, ಸರ್. Here is rupees ten, but you will have to let me go to bed by about one o'clock. ಬೆಳಗ್ಗೆ ಕ್ಲಾಸ್ ತೆಗೋಬೇಕು, ನಾನು."

ಕೈಲಾಸಂ: "Yes, yes."

ಕೈಲಾಸಂರವರ ಅನೇಕ ಕೃತಿಗಳನ್ನು ಹೀಗೆ ಬರೆಯುವ ಭಾಗ್ಯ ನನ್ನ ಪಾಲಿಗೆ ಒದಗಿತು. ಅವರು ಹೇಳಿದ ಕನ್ನಡವನ್ನು ಅವರಿಗೆ ಒಪ್ಪಿಗೆಯಾಗುವಂತೆ

ಬರೆಯುವ ಜನರು ಕೆಲವರು ಮಾತ್ರವೇ ಇದ್ದರು. ಅವರಲ್ಲಿ ನಾನೂ ಒಬ್ಬ. ಎಂದು ನನಗೊಂದು ತೃಪ್ತಿ. ಕೈಲಾಸಂ ಸ್ವಂತ ಕೈಬರೆಹದಿಂದ ಬರೆದದ್ದು ಇಲ್ಲವೇ ಇಲ್ಲ ಎನ್ನಬಹುದು. ಅವರು ಹೇಳಿ ಬರೆಯಿಸಿದ ನಾಟಕಗಳೇ ಹೆಚ್ಚು.

ಕೈಲಾಸಂ ಹೊಸದಾಗಿ ಹೇಳಿ ಬರೆಯಿಸುವ ರಾತ್ರಿ ಊಟ ಮಾಡುತ್ತಿರಲಿಲ್ಲ. ಸಂಜೆಗೆ ಕಾಫಿ, ಏನಾದರೂ ಉಪಾಹಾರ, ಅಷ್ಟೆ. ರಾತ್ರಿ ಎಂಟು ಒಂಬತ್ತು ಗಂಟೆಗೆ ತಣ್ಣೀರು ಸ್ನಾನ. ಪುನಃ ಒಂದು ಕಾಫೀ. ಬಂದ ಸ್ನೇಹಿತರೊಡನೆ ಮಾತಾಡಿ, ಅವರನ್ನು ನಗಿಸಿ, ಅವರನ್ನು ಮನೆಗಳಿಗೆ ಕಳುಹಿಸುವುದು ರಾತ್ರೆ ಒಂಬತ್ತೋ, ಹತ್ತೋ, ಆಗ ನನಗೆ ಹೇಳಿ ಕಳುಹಿಸುವರು. ನನಗೋ, ಹಗಲೆಲ್ಲ ಎತ್ತಿನಂತೆ ದುಡಿದು, ಸಂಜೆ ಹುಡುಗರಿಗೆ ವ್ಯಾಯಾಮ ಮಾಡಿಸಿ, ನಾನೂ ಅವರೊಡನೆ ಮಾಡಿ, ಮನೆಗೆ ಬಂದು ಸ್ನಾನ ಮಾಡಿದರೆ, ಹೊಟ್ಟೆಯಲ್ಲಿ ಬೆಂಕಿ ಬಿದ್ದಂತೆ ಇರುತ್ತಿತ್ತು ಹಸಿವು. ಊಟ ಮಾಡಿದರೆ, ಒಡನೆಯೇ ನಿದ್ದೆ ಬಂದುಬಿಡುತ್ತಿತ್ತು. ಕೈಲಾಸಂ ಬಳಿ, ಅವರ Nook ನಲ್ಲಿ ಗಾಳಿಯೇ ಇಲ್ಲದ ಕಡೆ, ಸಿಗರೇಟಿನ ಹೊಗೆಯನ್ನು ಅಸ್ವಾದಿಸುತ್ತಾ,—ನಾನು ಸಿಗರೇಟು ಕುಡಿಯುವವನಲ್ಲವಾದರೂ—ನಿದ್ರೆಯನ್ನು ಅತಿಶ್ರಮದಿಂದ ನಿರೋಧಿಸಿ, ಕೈಲಾಸಂ ಹೇಳಿದ್ದನ್ನು ಬರೆದು ಒಪ್ಪಿಸುತ್ತಿದ್ದೆ. ಎಷ್ಟು ಕಾಫಿ ಕುಡಿದರೇನು, ಕಣ್ಣಿಗೆ ಎಷ್ಟು ತಣ್ಣೀರು ಎರಚಿಕೊಂಡರೇನು, ಎಷ್ಟು ಚಿವುಟಿಕೊಂಡರೇನು, ಹೊರಗೆ ಬಂದು ರಾತ್ರಿಯ ತಣ್ಣನೆಯ ಗಾಳಿಯಲ್ಲಿ ಕಾಂಪೌಂಡೆಲ್ಲವೂ ಜೂಜಿನ ಕುದುರೆಯಂತೆ ಓಡಿದರೇನು,—ಹನ್ನೆರಡು ಗಂಟೆಯಾಯಿತೆಂದರೆ, ನನಗೆ ನಿದ್ದೆಯನ್ನು ತಡೆಯಲಾಗುತ್ತಿರಲಿಲ್ಲ. ಏನು ಮಾಡುವುದು? ಹಗಲೆಲ್ಲ ದುಡಿದರೆ ಮಾತ್ರ, ನನ್ನ ಸಂಸಾರಕ್ಕೆ ಅನ್ನ. ಬೆಳಗ್ಗೆ, ಸಂಜೆ ವ್ಯಾಯಾಮ ಮಾಡಬೇಕೆಂಬ ಆಸೆ. ಅದರಿಂದಾದ ದೇಹಶ್ರಮಕ್ಕೆ ಸರಿಯಾಗಿ ಊಟ ನಿದ್ರೆಗಳು ಬೇಡವೇ? ಮೂರು ನಾಲ್ಕು ವರ್ಷ ಹೆಚ್ಚು ಕಡಿಮೆ ಹೀಗೇ ಅರ್ಧ ನಿದ್ರೆ, ಕಾಲು ನಿದ್ರೆ ನಿದ್ರೆಯೇ ಇಲ್ಲವೆಂಬಂತೆ ದಿನಗಳನ್ನು ನೂಕಿದೆ. ಬೆಳಗಿನ ಹೊತ್ತಾಗಲಿ ಮಧ್ಯಾಹ್ನ ಊಟವಾದ ಮೇಲೆಯಾಗಲಿ ನಿದ್ರೆಮಾಡುವ ಅಭ್ಯಾಸ ನನಗಿಲ್ಲ. ಮಾಡುವುದಕ್ಕೆ ವಿರಾಮವೂ ಇಲ್ಲ. ಒಂದು ಸಲ ಒಟ್ಟಿಗೆ ಐದು ರಾತ್ರೆ ನಿದ್ರೆ ಕೆಟ್ಟಿ. ಆಗ ದಿನವೂ ಬೆಳಗ್ಗೆ ಆರು ಗಂಟೆಯಿಂದ ಏಳು ಏಳೂವರೆಯವರೆಗೆ ಮಾತ್ರ ನಿದ್ರೆಮಾಡಿದ್ದು ಜ್ಞಾಪಕ. ಸೂರ್ಯನ ಬೆಳಕು ಎಲ್ಲಿ ಬರುವುದೋ ಎಂಬ

ಭೀತಿಯಿಂದ ಕಿಟಕಿ, ಬಾಗಿಲುಗಳನ್ನೆಲ್ಲ ಮುಚ್ಚಿ, ಕಂಬಳಿಯನ್ನೂ ಕರಿಯ ಬಟ್ಟೆಯ ಪರದೆಗಳನ್ನೂ ಕಿಟಕಿಗಳಿಗೆ ಅಡ್ಡಹಾಕಿ, ದೀಪ ಹಚ್ಚಿಕೊಂಡು, 'ಇದು ರಾತ್ರಿ . . . ಇದು ಹಗಲಲ್ಲ' ಎಂದು ಮನಸ್ಸಿಗೆ ಸುಳ್ಳು ಹೇಳಿಕೊಂಡು ಒಂದು ಒಂದೂವರೆ ಗಂಟೆ ನಿದ್ರೆ ಮಾಡುತ್ತಿದ್ದೆ. ಈ ಕೊರೆ ನಿದ್ರೆಯಿಂದ ಹೆಚ್ಚು ಸೊರಗಿದೆ.

ಒಂದು ಮಟ್ಟಿಗೆ ಒಪ್ಪಿಕೊಳ್ಳಲೇಬೇಕು. ಕೈಲಾಸಂ ಅವರ ಹೊತ್ತು ಗೊತ್ತು ಏನೇ ಇರಲಿ, ಹೇಗೇ ಇರಲಿ ; ಅವರ ಉಡಿಗೆ ತೊಡಿಗೆ, ಅವರ ವಾಸಸ್ಥಳ, ಅವರು ಮಲಗುವ ಹಾಸಿಗೆ ಏನೇ ಇರಲಿ, ಹೇಗೇ ಇರಲಿ; ಕೈಲಾಸಂ ಏನಾದರೂ ಮಾತನಾಡುವುದಕ್ಕೆ, ಕತೆ ಹೇಳುವುದಕ್ಕೆ, ನಾಟಕ ಓದುವುದಕ್ಕೆ, ಹೇಳಿ ಬರೆಯಿಸುವುದಕ್ಕೆ ತೊಡಗಿದರು ಎಂದರೆ—ಅಲ್ಲಿನ ವಾತಾವರಣವೇ ಬದಲಾಗಿ ಹೋಗುತ್ತಿತ್ತು. ಶ್ರೀ ಕುವೆಂಪು ಹಾಡಿಲ್ಲವೇ: 'ಕುಮಾರ ವ್ಯಾಸನು ಹಾಡಿದನೆಂದರೆ ಕಲಿಯುಗ ದ್ವಾಪರವಾಗುವುದು!'—ಅದರಂತೆ ಕೈಲಾಸಂ ಮುಖದಿಂದ ಮಾತು ಹೊರಟಾಗ Nook ಕೂಡ ನಾಕವೇ ಆಗಿಬಿಡುತ್ತಿತ್ತು. ಆ ಇರುಕಿನಲ್ಲಿಯೇ ನಾಲ್ಕಾರು ಜನ ತುರುಕಿ ಕುಳಿತುಕೊಂಡು ಕೈಲಾಸಂ ಅವರ ವಾಣಿಗೆ ವಶರಾಗುತ್ತಿದ್ದೆವು. ಆದ್ದರಿಂದಲೇ, ಅವರು ಹೇಳಿ ಕಳುಹಿದಾಗ, ಹೇಗೋ ಮಾಡಿಕೊಂಡು ನಾನು ಸಿದ್ಧನಾಗುತ್ತಿದ್ದೆ. ಕೈಲಾಸಂ ಅಂತಹವರ ಬಳಿ ಶಿಷ್ಯ ವೃತ್ತಿ ನನಗೆ ದೊರೆತದ್ದು ನನ್ನ ಪುರಾಕೃತ ಪುಣ್ಯವೆಂದು ಭಾವಿಸಿದ್ದೆ. ಇಂಥ ಸುಸಂಧಿಯನ್ನು ಕಳೆದುಕೊಳ್ಳಕೂಡದೆಂದು ನನಗೆ ಎನ್ನಿಸುತ್ತಿತ್ತು. ಇಂಥ ಅಪೂರ್ವ ಮೇಧಾವಿಗಳ ಸಹವಾಸ ಸ್ನೇಹಗಳು ನನ್ನಂಥ ನಿರಕ್ಷರಕುಕ್ಷಿಗೆ ದೊರೆತದ್ದು, ಬಹು ಬಡವನಿಗೆ ಕೊಪ್ಪರಿಗೆಯ ಚಿನ್ನ ಸಿಕ್ಕಿದ ಹಾಗಾಯಿತು. ನಿದ್ರೆ ಬರಲಿ, ಬರದೆ ಪ್ರಾಣವೇ ಹೋಗಲಿ, ಕೈಲಾಸಂ ಕರೆದಾಗ ಅದು ನನ್ನ ಭಾಗ್ಯೋದಯವೆಂದೇ ಅವರ ಪಾದಗಳ ಬಳಿ ಕುಳಿತು, ಅವರು ಹೇಳಿ ಬರೆಯಿಸಿದ್ದನ್ನು ಬರೆದಿದ್ದೇನೆ. ದೇಹವನ್ನು ಅಷ್ಟು ದಂಡಿಸಿ, ಆರೋಗ್ಯಧರ್ಮಗಳನ್ನೂ ಅತಿಕ್ರಮಿಸಿ, ಆಗ ನಾನು ಮಾಡಿದ ಸೇವೆಗೆ ಈಗಲೂ ಸಂತೋಷಪಡುತ್ತಿದ್ದೇನೆ.

ಹೇಳಿ ಬರೆಯಿಂಸಿ

ಒಂದು ದಿನ ಕೈಲಾಸಂ ಕರೆದರು: "Come on, Venkatesh. I was waiting for you. You have your coffee in the thermos. You have brought your pen too. Now, sit down. We will get into the atmosphere .... Read the first act in full. I liked the way you read it yesterday..."

ಅಷ್ಟು ಹೊತ್ತಿಗೆ ಯಾರೋ ಬಾಗಿಲು ತಟ್ಟಿದರು. ಬಾಗಿಲು ತೆಗೆದರೆ, ಕೃಷ್ಣ, ಮುಖದಗಲ ನಗುತ್ತ, ಒಳಗೆ ಬಂದ.

"ಹರಿಃ! ಊಂ, ನಡಕ್ಕಟ್ಟೊಂ! ನಡಕ್ಕಟ್ಟೊಂ! ಶೀಘ್ರಮಾ ಏಯ್ದುಂಗೋ. Stage ಪಣ್ಣೂಡಲಾಂ ?" ಅಂದ.

ಕೈಲಾಸಂ: "ಡೇ ಕೃಷ್ಣಾ ! ಎನ್ನಡಾ ಶಮ್ಮೈಲ್ ?"

ಕೃಷ್ಣ: "ಹರಿಃ! ಮೂಲಂಗಿ ಸಾಂಬಾರ್, ರಸಂ, ಪಪ್ಪಡಂ ತೇಂಗಾಯ್ ತೈರ್ ಪಚ್ಚಡಿ, ಪಟ್ಟಾಣಿ ಕ್ಕರಿ."

ಕೈಲಾಸಂ, ಟಿಫಿನ್ ಕ್ಯಾರಿಯರನ್ನ ಬಿಚ್ಚಿ, ಒಂದೊಂದನ್ನೇ ಪರೀಕ್ಷಿಸಿ ಮೂಸಿ ನೋಡುತ್ತ, "Excellent ! Excellent ! Peas ! Oh ! Simply glorious ! Delicious ! I shall celebrate myself !" ಎಂದರು.

ನನಗೋ, "ಈ ಹೊತ್ತು ಬರೆಯಬೇಕಲ್ಲಾ ! ಊಟ ಮಾಡಿದರೆ ನಿದ್ರೆ, ಎಂದು ಬಂದಿದ್ದ ನನಗೆ ಖಾಂಡವ ವನವನ್ನೇ ಆದರೂ ತಿಂದು ಜೀರ್ಣಿಸಿ ಕೊಳ್ಳುವಷ್ಟು ಹೊಟ್ಟೆಯ ಹಸಿವು ಇದ್ದರೂ ಉಪವಾಸವೇ. ಕೈಲಾಸಂ, ಕೃಷ್ಣ ತಂದ ಅಡಿಗೆಯನ್ನು ಮೂಸಿನೋಡುತ್ತಾ, 'ಮೂಲಂಗಿ ಸಾಂಬಾರ್ ! ತೇಂಗಾಯ್ ತೈರ್ ಪಚ್ಚಡಿ ! ಬಟಾಣಿ ಪಲ್ಯ !' ಎಂದು ವರ್ಣಿಸುವಾಗ— ಬಾಯಲ್ಲಿ ನೀರು ಸುರಿಯುವುದಿರಲಿ, ಹಸಿವಿನಿಂದ ಕಣ್ಣಿನಲ್ಲಿ ಕೋಡಿ ಹರಿಯು ವಂತಾಯಿತು. ಉತ್ತರಕ್ಷಣದಲ್ಲಿಯೇ ನನಗೆ ನಾನೇ ಎಂದುಕೊಂಡೆ "ಮೂಢಾ, ಅನ್ನವೆಲ್ಲಿ ಹೋಗುತ್ತದೆ? ಹಸಿವೆಲ್ಲಿಗೆ ಹೋಗುತ್ತದೆ? ಅದು ನಿತ್ಯವೂ ಇದ್ದೇ ಇರುತ್ತದೆ. ಆದರೆ ಮಿದುಳಿಗೆ ಔತಣ ಸಿಕ್ಕುವುದು ದುರ್ಲಭ. ಯಾವುದು

ಹೆಚ್ಚೋ ಯೋಚಿಸಿ ನೋಡು. ನಿನ್ನ ಮಿದುಳಿಗೆ ಅನ್ನವನ್ನು ಕೊಡು. ಅದರ ಹಸಿವು ಮುಖ್ಯ. ಅದರ ಬೆಳೆವಣಿಗೆ ಅಗತ್ಯ, ಹೊಟ್ಟೆ ಹಸಿವಿಗೆ ಧಿಕ್."

ಕೃಷ್ಣ : "ಹರಿಃ, ವರ್ರೇಂ !" ಎಂದು ಹೊರಡಲು ಎದ್ದ.

ಕೈಲಾಸಂ : "ಡೇ ಮಡೆಯಾ, ಇರಡಾ, ಅಯ್ಯರ್ ವಾಶಿಕ್ಕಿರದು ಕೇಟುಟ್ಟು ಪೋಡಾ."

ಕೃಷ್ಣ: (ನನ್ನನ್ನು ನೋಡಿ,) "ಶೀಘ್ರಮಾ ವಾಶಿಯಿಂಗೋ ಹರಿಃ, ಪಾಲಕ್ಕಾರಂ ವೀಟುಕು ಪೋಯಿ ಇನ್ನುಂ ಪಾಲು ಕೊಂಡುವರುಣುಂ, ಹುಂ, ನಡಕ್ಕಟ್ಟುಂ" ಎಂದು ಒಂದು ಮೂಲೆಯಲ್ಲಿ ಕುಳಿತುಕೊಂಡ.

ನಾನು : "Begin ಮಾಡಲೇ, ಸಾರ್ ?"

ಕೈಲಾಸಂ : "ತಾಳೂ, ಮಗು. One minute. ಕೃಷ್ಣ, ಅಂದ್ soda ಎಡ್ರಾ." ಎಂದು ಗ್ಲಾಸಿಗೆ ಒಂದು ಔನ್ಸಿನಷ್ಟು gin ಬಗ್ಗಿಸಿ ಅರ್ಧ ಗ್ಲಾಸಿನಷ್ಟು soda ಸೇರಿಸಿ, "ಹೋಗ್‌ಬರ್ತೀನೆ, ಮಗು" ಎಂದು ಹೇಳಿ ಕುಡಿದು, "Now, keep away the light from my eyes .. That's right. Screen it away entirely from me .... For God's sake, dim that light ! ಅಷ್ಟು bright ಆಗಿದ್ರೆ ಹೇಗೆ ? . . . It's allright now . . . ಡೇ ಕೃಷ್ಣ, ಅಂದ್ windowಲ್ಯೂಂ chill breeze ವರದ್ರ : ರೆಂಡ್ shuttersಊಂ ಪೋಟೂಡು . . . Bah ! It's better now . . . ಕೃಷ್ಣಾ ?"

ಕೃಷ್ಣ : "ಹರಿಃ, . . ."

ಕೈಲಾಸಂ : "ಕೃಷ್ಣಾ, ಇನ್ನಿಕಿ ಎನ್ನ ವಾರುಂಡಾ?"

ಕೃಷ್ಣ ; "Monday."

ಕೈಲಾಸಂ : "ಕೃತ್ತಿಕೈ. ಮಡೆಯಾ, Monday Monday ಒರ್ ಪೂಹಾರಂ ಕೊಂಡುವಾನ್ನು ಶೊಲ್ಲಿರಂದೇನೆ ! . . . ಪೋಗುಟ್ಟುಂ, ಆದೋ ಅಂದ್ niche cornerಲೆ ಊದುವತ್ತಿ ವೆಚ್ಚಿರ್ಕೆಂ; ರೆಂಡ್ ಪತ್ತಿವೆಯ್." ಎಂದು ಹೇಳಿ ಕೃಷ್ಣ ಅದರಂತೆ ಹತ್ತಿಸುವಾಗ "Don't put off the match. ಇಂಗೆ ಕುಡು." ಎಂದು ಉರಿಯುತ್ತಿದ್ದ ಅದೇ ಬೆಂಕಿಕಡ್ಡಿಯಿಂದ ಸಿಗರೆಟೊಂದನ್ನು ಹಚ್ಚಿ, ದೀರ್ಘವಾಗಿ ಎಳೆದು ಹೊಗೆಬಿಟ್ಟು,

ಸುನಿರ್ಮಲಂ ಜ್ಞಾನಸುಖೈಕರೂಪಂ
ಪ್ರಜ್ಞಾನಹೇತುಂ ಪರಮಾರ್ಥದಾಯಕಂ
ಚಿದಂಬರೇ ತಂ ವಿಹರಂತಮಾದ್ಯಂ
ಆನಂದಮೂರ್ತಿಂ ಗುರುರಾಜಮೀಡೇ

ಎಂದು ಹೇಳಿ, "Go on, Venkatesh . . . ಅಂ, ಸ್ವಲ್ಪ ತಾಳು. Let me bury my head in these pillows." ಎಂದು ಹಾಗೇ ಮಾಡಿ, "Now, come closer to me. Cuddle up. Let me get the warmth of your body" ಎಂದು ನನ್ನ ಮೈಗೆ ಒರಗಿಕೊಂಡು, "Venkatesh, I swear this stuff is not good. Mucous membrane ಎಲ್ಲಾ ಬೆಂದುಹೋಗಿದೆ, ಮಗು. Do you think I am drinking it? Nonsense; IT is drinking me . . . Let us try doing it with mere beer, next time . . . . Now, go on. ಡೇ ಕೃಷ್ಣಾ, ಕೇಳಡಾ. Don't interrupt in the middle." ಎಂದರು.

ನಾನು: "ಎಲ್ಲಿಂದ ಓದಲಿ, ಸರ್ ?"

ಕೈಲಾಸಂ: "Of course, from the first act. ಅಷ್ಟೂ ಓದೋಕೆ ಹೊತ್ ಆಗೋದಾದ್ರೆ, first ten or fifteen pages ಆದ್ರೂ ಓದು, ಮಗು. ಕೃಷ್ಣ ಕೇಳಲಿ. ಷುರುಮಾಡು."

ನಾನು: (ಬರೆದಿದ್ದನ್ನು ಓದಿ,) " . . . End of act one."

ಕೃಷ್ಣ: (ನನಗೆ,) "ನೀಂಗೋ ಎಲ್ಲಾಂ ಎಯ್ದುಡಂಗೋ. Next week practice ಪಣ್ಣಿ, first of next month stage ಪಣ್ಣೂಡಲಾಂ. ನಾನ್ ನಾಳಿಕ್ಕೇ stage ಎಲ್ಲಾಂ fix ಪಣ್ಣಿಕೊಂಡ್ ವಂದೂಡ್ರೇಂ. ಹರಿಃ, ನಾ ಇನ್ ವರ್ರೇಂ."

ಕೈಲಾಸಂ: "ಡೇ ಕೃಷ್ಣಾ, ಅಪ್ಪಾ ಕೇಟಾಂಗ್ಯಾಡಾ, ಎನ್ನೆ?"

ಕೃಷ್ಣ: "ನೇತ್ ಕಾಲಮೆ ಕೇಟಾರ್. ಪಾಪಣ್ಣ ಎಂಗೆ, ಕಾಣಮೇ? ಎನ್ನಾರ್. ನಾನ್ ಶೊನ್ನೇಂ: ಮೈಸೂರಕ್ಕ್ ಪೋಯಿರುಕ್ಕಾರ್ ಎನ್ನಿ."

ಕೈಲಾಸಂ: "ಮಡೆಯ, ಅಪ್ಪಾ ಎನ್ನತಕ್ಕ್ ಪೊಯಿಂರದೇನ್ನಿ ಕೇಕರಾರ್ರಾ ಎನ್ನೆ. ಪೋಗುಟ್ಟುಂ ಪೋ." ಎಂದು ಕೃಷ್ಣನನ್ನು ಕಳುಹಿಸಿಯಾದ ಮೇಲೆ

ಇನ್ನೊಂದಾವರ್ತಿ ಸೋಡಾವನ್ನೂ gin ಅನ್ನೂ ಅರ್ಪಿಸಿಕೊಂಡು, "Now, let us start. Put down—Act 2, Scene 1.

(Found entered: Subbamma and Bora.

ಸುಬ್ಬಮ್ಮ—ಇದೇನೋ ಬೋರ, ಈ ಅಧ್ವಾನಗೈಲ್ಲಾ! ಎಲ್ಲಿಂದ್ಲೋ ಇವೆಲ್ಲಾ?

ಬೋರ—ಎಲ್ಲಿಂದ ಯಾಕ್ರವ್ವಾ, ಎಲ್ಲಾ ಇಲ್ಲಿಯೋವೇ. ಪಿಂಗಾಣಿ ಸಾಮಾನು ಲಬ್ಬೆ ಇಮಾಂಸಾಬಿ ಅಂಗ್ಡೀದು. ಸಕ್ರೆಪೊಟ್ನ ಶೆಟ್ರಂಗ್ಡೀದು. ಟೀನೂ ಚಂಚಾಗೂ ಎಲ್ಲಾನೂವೆ ನಮ್ನೋವ. ಅವ್ವಾ! ಯಂಗವ್ವಾ, ಯಾಕ್ರವ್ವಾ, ಎಲ್ಲಾ ಇಂಗಾಗೋಗವೆ? ದುಡ್ಡು ದುಗ್ಗಾಣಿ ಇಲ್ದ ಇವೆಲ್ಲಾ ಎಂಗೆ ಆರಾಡ್ತವೆ, ಯೇಳ್ರವ್ವಾ?

ಸುಬ್ಬಮ್ಮ—ಹೇಗೋ ಬೋರಾ! ಇದೆಲ್ಲಾ ನೋಡ್ಬೇಕೂಂತ ನನ್ಹಣೇಲಿ ಬರೆದಿತ್ತು. ಇದೆಲ್ಲಾ ನೋಡಿ, ನಿನಗೆ ಹ್ಯಾಗೆ ಸಂಕಟವಾಗುತ್ತೋ, ನನಗೂ ಹಾಗ್ಯೇ. ಆ ಜಾತಿ ಮನ್ಸನಾನ ಮರ್‍ತ ಹೆಂಗಸೂ ಈ ಏನೂ ಅರೀದ ಚಿಕ್ಕೋನೂ ಈಗ ಹೀಗೆ! . . . ಹಯ್ಯೋ, ಇದನ್ನ ಈಗ್ಲೇ ಇತ್ಯರ್ಥ ಮಾಡಿಬಿಡ್ಬೇಕು. ಆ ಹೊಸಬ ಇದ್ದಾನಲ್ಲ, ಮಗು ಕರೆಸಿದೋನು, ಅವನು ಸಂಸ್ಕೃತ ತಿಳಿದೋನು. ಅವನು ಅರ್ಥ ಹೇಳಿಯಾನು, ಈ ಒಗಟೀಗೆ.

ಕೈಲಾಸಂ "ಅಂ, ಎಲ್ಲಿ, ಓದು ಮಗು, from the biginning."

ನಾನು: "Yes, sir. ಇಗೋ ಓದ್ತೇನೆ. Act 2, Scene 1 . . . Found entered; Subbanna and Bora . . ."

ಕೈಲಾಸಂ :"Venkatesh! Are You drinking gin? or am I drinking gin?"

ನಾನು: ಕ್ಷಮ್ಸಿ ಸಾರ್, ನಿದ್ದೆಗಣ್ಣು. It is one o' clock now . . . Found entered: Subbamma and Bora."

ಕೈಲಾಸಂ: "ಹಾಗ್ಹೇಳು. Subbaಮ್ಮನಿಗೆ ಬದ್ಲಾಗಿ Subbaಣ್ಣ ಮಾಡಿದ್ಯಲ್ಲಾ. For God's sake, chuck some cold water on your eyes."

ನಾನು: "ಆಯ್ತು, ಸಾರ್. ಮುಂದಕ್ ಹೇಳಿ."

ಕೈಲಾಸಂ ಮುಂದೆ ಹೇಳಿದರು. ನಾನು ಬರೆದೆ. ಎರಡನೆಯ ಅಂಕ ಮುಗಿಯಿತು. "ಓದು" ಅಂದರು. ಓದಿದೆ.

ಕೈಲಾಸಂ: "ಎಲ್ಲಿ? ಇಲ್ಲಿ ಕೊಡು. Let me go through it once. Milk and gin . . . . one table-spoonful gin and three dessert-spoonfuls of milk . . . works slow . . . does not shoot up like gin and soda . . . good for balanced thinking. ಆದ್ರೂ, ಹೇಳ್ತೀನಿ, ವೆಂಕಟೇಶ್—ಹೀಗೆ, in a flare, ಬರೆದದ್ದನ್ನೆಲ್ಲಾ, ಬೆಳಗ್ಗೆ in broad daylight, soberಆಗಿ ತಿದ್ದಿದರೇನೇ ಅದು presentable ಆಗುತ್ತೆ, balance ಸರ್ಯಾಗಿರುತ್ತೆ . . ." ಎಂದು ಕುಡಿದು ಮುಗಿಸಿ, "ಇಲ್ಕೊಡು" ಅಂತ ನಾನು ಬರೆಯುತ್ತಿದ್ದ Students' Note-bookನ ಇಸುಕೊಂಡು ನಿದಾನವಾಗಿ ಎಲ್ಲಾ ಓದಿನೋಡಿ, "ಮಗು, ಈ horrible spelling mistakes ಯಾಕೇ? You were writing well. ಸ್ವಲ್ಪ ಬಿಸಿ ಕಾಫೀ ಕುಡಿ. Time ಏನು, two o' clock ಇರ ಬಹುದೇ? ಈ scene ಮುಗಿಸಿಬಿಡೋಣ. An hour's work; ಅಷ್ಟೂ ಇಲ್ಲ. ಗಬಗಬಾಂತ ಹೇಳ್ಬಿಡ್ತೀನಿ. Don't mind the spelling mistakes. ಬೆಳಗ್ಗೆ correct ಮಾಡ್ಕೊಂಡ್ರಾಯ್ತು." ಎಂದು ಸಿಗರೆಟ್ ಹಚ್ಚುತ್ತ, "Something is disturbing my mind since I sat to dictate . . . repeatedly disturbing me . . . Ah! Damn it! That song! . . . ನೋಡು Venkatesh, ನೀನು ಬರೋದಕ್ಮುಂಚೆ, ಅಗೋ! ಆ ಬುಲ್‌ಬುಲ್ ತರಂಗ್ ಬಾರಿಸ್ತಿದ್ದೆ. ರಾಮು ಬಂದಿದ್ದ, ಶಿವರಾಂ, ಇನ್ಯಾರಾರೋ friends ಬಂದಿದ್ರು. I was entertaining them . . . ಹೊಸಾ ಹಾಡೊಂದು—ನೀನು ಕೇಳಿಲ್ಲ. That damned song is disturbing my mind. So, let me . . ." ಎಂದು ಕೈಲಾಸಂ ಆ ಬುಲ್‌ಬುಲ್ ತರಂಗನ್ನು ತೆಗೆದುಕೊಂಡು ಬಾರಿಸುತ್ತ ಹಾಡಿದರು.

ಕದಂಬ ಕಂದನ್, ಕಾಮಾಟಿ ವರದನ್
ಆರ್ಕಾಟ್ ಅಮಟಿ ಪಯ್ಯ
ಎನ್ ಕಾದೋರುಂ ಮೈರೆ ವಿಟ್ಟೀಡಾ
ಅಡ ಶ್ಯಂಡಾಳ ಪ್ಪಾವೀ
ಅರರೂಪಾಯಿ ದಂಡಂ ವೆಚ್ಚೀಡಾ

ಎಂದು ಎರಡು ಮೂರು ಸಾರಿ ನುಡಿಸಿ ಹಾಡಿ ಆದ ಮೇಲೆ ಆ ಬುಲ್ ಬುಲ್ ತರಂಗನ್ನು ದೂರ ಬಿಸುಟು, "Now, it is off my mind, the damned thing . . . Let us get to work. ದೀಪ ಸಣ್ಣದು ಮಾಡು, ಮಗು. ಓ, ಸೀಮೇಯೆಣ್ಣೆ ಆಗ್ಹೋಯ್ತೇ? ಆ ಬಾಟಲಲ್ಲಿರಬೇಕು." ಎಂದರು.

ನಾನು: (ಸೀಮೆಯೆಣ್ಣೆ ಹಾಕಿಯಾದ ಮೇಲೆ,) "Ready, Sir. ಒಂದ್ಸಾರ್ತಿ ಬರೆದಿದ್ದೆಲ್ಲಾ ಓದ್ಬಿಡ್ತೇನೆ, ಕೇಳಿ."

ಕೈಲಾಸಂ: "That's good. ಸ್ವಲ್ಪಿರು. Where did I keep my match box ? . . . Here is the damned thing," ಎಂದು ಒಂದು ಸಿಗರೆಟ್ ಹತ್ತಿಸಿ, "Yes, get on . . . Just a minute, just half an oz. of gin, plus pure aqua this time. Yes . . . ಹೋಗ್ಬ ರ್ತೇನೆ, ಮಗೂ" ಎಂದು ಕುಡಿದುಬಿಟ್ಟು, "Now, go on and don't stop." ಎಂದರು.

ಅವರು ಅದುವರೆಗೆ ಬರೆಸಿದ್ದನ್ನೆಲ್ಲಾ ನಾನು ಪುನಃ ಓದಿದೆ.

"ಬರಿ : Enter ಚೋರ." ಎಂದರು.

ನಾನು ಮುಂದಕ್ಕೆ ಬರೆದೆ.

ಹೀಗೆ, ಕೈಲಾಸಂ ಹೇಳುತ್ತಿದ್ದರು, ನಾನು ಬರೆಯುತ್ತಿದ್ದೆ. ಒಂದೊಂದು ವೇಳೆ ಹಿಂದಿನಿಂದ ಓದುತ್ತಿದ್ದೆ. ಆಗಾಗ, ಹೊಸತನ್ನು ಹೇಳುವಾಗ gin and soda ; ಹೇಳಿ ಬರೆದದ್ದನ್ನು ತಮ್ಮ ಕೈಗೆ ತೆಗೆದುಕೊಂಡು, ಅದನ್ನು ತಾವೇ ಓದಿನೋಡಿ, ಏನಾದರೂ ತಿದ್ದಿ ಬರೆಸುವುದಕ್ಕೆ gin and milk ಅಥವಾ gin and water ; ಹೀಗೆ ರಾತ್ರಿಯೆಲ್ಲ ಕಳೆದು ಬೆಳಗಿನ ಜಾವ ವಾಗುತ್ತಿತ್ತು. ಆ ಜಾವದ ಕೋಳಿಗಳು ಕೂಗಿದುವು. ಎತ್ತಿನ ಸಾಲುಬಂಡಿಗಳ ಸದ್ದೂ ಕೇಳಿಸಿತು. Gin bottleನಲ್ಲಿ ಕಾಲು ಭಾಗಕ್ಕೆ ಮೇಲೆಯೇ ಖರ್ಚಾ ಗಿತ್ತು. ನಾನೂ ನನ್ನ ಕಾಫಿಯನ್ನೆಲ್ಲ ಖಾಲಿಮಾಡಿದ್ದೆ. ಆದರಿಂದ ನಿದ್ರೆಯೇನೂ ನಿವಾರಣೆಯಾಗಲಿಲ್ಲ. ಹಸಿವಿನ ಹೊತ್ತು ಕಳೆದುಹೋದರೆ, ಅದರ ಉಲ್ಬಣ ತಗ್ಗುತ್ತದೆ. ಆದರೆ ನಿದ್ರೆ ಹಾಗಲ್ಲ, ಹೊತ್ತಾಗುತ್ತ ಆಗುತ್ತ ಹೆಣದಂತೆ ಮಲ ಗಿಸಿಬಿಡುತ್ತದೆ.

ನಾನು: "ಸರ್, ಬೆಳಗಾಗುತ್ತ ಬಂತು ಅಂತ ಕಾಣುತ್ತೆ."

ಕೈಲಾಸಂ: (ಎದ್ದು, ಬಾಗಿಲು ತೆಗೆದು, ಜಲಶಂಕೆ ತೀರಿಸಿ ಬಂದು,) "ಹೌದು, ಮಗು. Sun-rise within 10 or 20 minutes. ನಿಲ್ಲಿಸಿಬಿಡು. ಬರೆದಿರೋದನ್ನ ತಕೊಂಡ್ಹೋಗಿ, spelling ಎಲ್ಲಾ ತಿದ್ದಿ, ನನ್ನ ಕಾಫಿ timeಗೆ ತಗೊಂಬಾ . . . See me eat something . . ." ಎನ್ನುತ್ತ ಮೂಲಂಗಿ ಹುಳಿಯೊಳಗಿನಿಂದ ಮೂರು ಹೋಳುಗಳನ್ನು ತೆಗೆದು ಬಾಯಲ್ಲಿ ಹಾಕಿಕೊಂಡು, "Splendid! I wish I had eaten it before!" ಎಂದು ಬಟಾಣಿ ಉಸಲಿಯನ್ನು ಮೂರು tea-spoons ತಿಂದು, "ಊಂ! ಅಮೃತ ಇದ್ದ ಹಾಗೆ ಇದೆ, ಮಗು. I will become a pig if I eat it all. That's enough. Just a small cup of curds . . . that settles it. ಇಲ್ದೆ ಇದ್ರೆ, stomachನ mucous membrance ಹಾಳಾಗ್ಹೋಗುತ್ತೆ."

ನಾನು: "ಇನ್ ಬರ್‍ತೀನೆ, ಸಾರ್."

ಕೈಲಾಸಂ; "Get some sleep, Venkatesh. It is still 5 o' clock."

ನಾನು: "Sir, 6 o' clockಗೆ ಕ್ಲಾಸ್ ತಗೋಬೇಕು. ಹುಡುಗರೆಲ್ಲ ಬಂದಿರ್‍ತಾರೆ."

ಕೈಲಾಸಂ: "ಯಾರಾದರೂ senior studentನ ತಗೋನ್ನು."

ನಾನು: "ಬರ್‍ತೀನೆ, Sir." ಎಂದು ಹೊರಟೆ.

ಕೈಲಾಸಂ ಬಾಗಿಲ ಅಗಳಿಯನ್ನು ಹಾಕಿಕೊಂಡು, ದೀಪವನ್ನಾರಿಸಿ ಮಲಗಿಕೊಂಡರು. ನಾನು ಹೋಗಿ, ಬೆಳಗ್ಗೆ ಬಂದ ಹುಡುಗರಿಗೆ ವ್ಯಾಯಾಮ ಮಾಡಿಸುತ್ತ ನಿಂತೆ.

ಹೀಗೆ, ಕೆಲವು ಸಲ ವಾರಕ್ಕೆ ಎರಡು ಮೂರು ನಾಲ್ಕು ದಿನ ಒಟ್ಟೊಟ್ಟಿಗೆ, ಕೆಲವು ಸಲ ಬಿಟ್ಟುಬಿಟ್ಟು, ಒಂದೊಂದು ಸಲ ರಾತ್ರೆ ಏನೂ ಬರೆಯದೆಯೇ ಬರಿಯ ಮಾತುಗಳಲ್ಲೇ ಮುಗಿಸಿಬಿಟ್ಟು, . . . ಹೀಗೆ ತಿಂಗಳುಗಳು, ವರ್ಷಗಳು ಮುಗಿಯುತ್ತಿದ್ದುವು. ಕೈಲಾಸಂ ಅವರನ್ನು ಕಾಣಲು Nookಗೆ ಬರುವ

ಸ್ನೇಹಿತರು ಹೆಚ್ಚಾದರು. Engagements; invitations ಹೆಚ್ಚಾದುವು. ಊರೂರುಗಳ ಪ್ರವಾಸ ಹೆಚ್ಚಾಯಿತು. ಕಡೆಕಡೆಗೆ, ಈ ಊರು ಬಿಟ್ಟರೆ, ಇನ್ನೊಂದು ಊರಿನಲ್ಲಿ ಅನೇಕ ತಿಂಗಳುಗಳು. ಅಲ್ಲಿಂದ ಮುಂದಕ್ಕೆ ಕದಲಬೇಕಾದರೆ, ಇನ್ನುಯಾರಾದರೂ ಬಂದು ಅವರನ್ನು ಎಳೆದುಕೊಂಡುಹೋಗಬೇಕು.-ಆ ಕಡೆ ಹುಬ್ಬಳ್ಳಿ, ಬೆಳಗಾಂ, ಪೂನಾ, ಬೊಂಬಾಯಿ ; ಈ ಕಡೆ ಕರ್ನೂಲ್, ನಂದ್ಯಾಲ್, ಮದ್ರಾಸ್ ; ಆಗಾಗ್ಗೆ ಬಳ್ಳಾರಿ, ತುಂಗಭದ್ರೆ ಇತ್ಯಾದಿ.

ಕೈಲಾಸಂ ತುಂಗಭದ್ರೆಗೆ ಹೋಗಲು ಒಂದು ವಿಶೇಷ ಕಾರಣವೆಂದರೆ, ಅದು ಪಂಡಿತ ತಾರಾನಾಥರ ಆಶ್ರಮ 'ಪ್ರೇಮಾಯತನ'ವೆಂಬುದು. ಕೈಲಾಸಂ ಅವರಿಗೆ ಪಂಡಿತ ತಾರನಾಥರೆಂದರೆ ಗಾಢವಾದ ಭಕ್ತಿ, ಗೌರವ. ಅಂತೆಯೇ ತಾರಾನಾಥರಿಗೂ ಕೈಲಾಸಂ ಅವರಲ್ಲಿ ಬಹು ಪ್ರೇಮ, ವಿಶ್ವಾಸ. ಪಂಡಿತ ತಾರಾನಾಥರನ್ನೂ ನಾನು ಚೆನ್ನಾಗಿ ಬಲ್ಲೆ. ಅವರೂ ಆಗಾಗ್ಗೆ ಬೆಂಗಳೂರಿಗೆ ಬರುತ್ತಿದ್ದರು. ಕೈಲಾಸಂ ಅವರಲ್ಲಿಗೆ ಹೋಗುತ್ತಿದ್ದಾಗ ನನ್ನನ್ನೂ ತಮ್ಮ ಜೊತೆಯಲ್ಲಿ ಕರೆದೊಯ್ಯುತ್ತಿದ್ದರು. ಕೈಲಾಸಂ, ತಾರಾನಾಥರನ್ನು 'Master' ಎಂತಲೇ ಸಂಬೋಧಿಸುವರು. ಕೈಲಾಸಂ, ಎಷ್ಟೋದಿನ ತಮ್ಮ ಮನೆಯ ತೋಟದಿಂದ ಪರಿಮಳಯುಕ್ತವಾದ ಪುಷ್ಪಗಳನ್ನು ಕೈವಸ್ತ್ರದ ತುಂಬ ತಂದು, ಎಷ್ಟೇ ಜನಸಂದಣಿಯಿರಲಿ, ಸಭೆಯಲ್ಲಿ ಮುಂದೆ ಹೋಗಿ, ಅವನ್ನು ಪಂಡಿತ ತಾರಾನಾಥರ ಪಾದಗಳ ಮೇಲೆ ಸುರಿದು, ಅವರ ಪಾದಗಳನ್ನು ಮುಟ್ಟಿ ಸಾಷ್ಟಾಂಗಪ್ರಣಾಮ ಮಾಡಿದ್ದನ್ನು ನಾನು ನೋಡಿದ್ದೇನೆ. ಗಂಟೆಗಂಟೆಗಳ ಕಾಲ, ತಾರಾನಾಥರು ಮಾತನಾಡುತ್ತಿದ್ದರೆ, ಎಲ್ಲರಂತೆ ತಾನೂ ಕುಳಿತು ಕೇಳುತ್ತಿದ್ದರು. 'Master is going to talk to-day. We must not miss it, Venkatesh' ಎನ್ನುತ್ತಿದ್ದರು. ಕೈಲಾಸಂ ಪ್ರಶ್ನೆ ಕೇಳುವುದೆಂದರೆ, ತಾರಾನಾಥರಿಗೆ ಬಹು ಪ್ರೀತಿ. ಪಂಡಿತರ ಉತ್ತರವೆಂದರೆ, ಕೈಲಾಸಂಗೆ ಸರ್ವವಿಧದಲ್ಲೂ ಒಪ್ಪಿಗೆ, ತೃಪ್ತಿ. ತನಗೆ ತಿಳಿಯದ ತೊಡಕಾದ ಅನೇಕಾನೇಕ ವಿಚಾರಗಳನ್ನು ಕೈಲಾಸಂ ಪಂಡಿತ ತಾರಾನಾಥರಲ್ಲಿ ಕೇಳಿ, ಸಂಶಯನಿವೃತ್ತಿ ಮಾಡಿಕೊಂಡದ್ದುಂಟು. ಕೈಲಾಸಂ ಅವರ ಉತ್ತಮೋತ್ತಮ ಕೃತಿಯಾದ PURPOSE ನಾಟಕವನ್ನು ತಾರಾನಾಥರು ತುಂಬ ಮೆಚ್ಚಿಕೊಂಡರು. ಆ ನಾಟಕದ ಬಹುಭಾಗವನ್ನು ಕೈಲಾಸಂ ಪ್ರೇಮಾಯತನ ಆಶ್ರಮದಲ್ಲಿ ಬರೆದರು.

ಅದನ್ನು ಅವರು ಬರೆಯುವುದಕ್ಕೆ ಮೊದಲು ಮಾಡಿದ್ದು ಬೊಂಬಾಯಿನ
ಆ ನಾಟಕದಲ್ಲಿ ಭೀಷ್ಮನು ದ್ರೋಣನನ್ನು ಸಂಧಿಸುವ ಸಂದರ್ಭಕ್ಕೆ ಬಂದಾ
ಅವರು ಒಬ್ಬರನ್ನೊಬ್ಬರು ಸಂಬೋಧಿಸಿದುದು ಹೇಗೆ ಎಂಬುದು ತಿಳಿಯ
ಕೈಲಾಸಂ ದಿಕ್ಕುಕೆಟ್ಟಿದ್ದಾಗ, ತಾರಾನಾಥರು ಅವರಿಗೆ ದಾರಿ ತೋರಿಸಿದರಂ
ಭೀಷ್ಮನು 'Prostrations, Acharya' ಎಂದದ್ದು, ಅದಕ್ಕೆ ದ್ರೋಣ
"Greetings, Gangeya" ಎಂದದ್ದು, ಅದು ತಾರಾನಾಥರೇ ಬರೆಸಿದ್ದಂ

"Greetings Gangeya" ಎಂದರೆ, ಜ್ಞಾಪಕಕ್ಕೆ ಬರುತ್ತದೆ: ಕೈಲಾಸ
ರವರ ಕನ್ನಡ ಬರೆವಣಿಗೆಯಲ್ಲೂ, ಇಂಗ್ಲಿಷ್ ಬರೆವಣಿಗೆಯಲ್ಲೂ ಪ್ರಾಸ ಸ್ವ
ಅತಿಯೆಂದೇ ಹೇಳಬೇಕು. 'ಬಂಡ್ವಾಳ್ವಿಲ್ಲದ ಬಡಾಯಿ'ನ ಜೀವೂ "ಬೀದೀ
ನಾದ್ರೂ ಬಿಡಿಕಾಸ್ ಬಿದ್ದಿದೇಂತ ಬಗ್ನೋಡ್ತ ಬರ್ತಿದೀಯೇನೊ ಬಕ್ವೇ?
ಅಂತ ಬೋರನಿಗೆ ಅಂದರೂ, ಪರವಾ ಇಲ್ಲ, ತಡೆಯುತ್ತದೆ. ಆದ
PURPOSE ನಾಟಕದಲ್ಲಿ ಭೀಷ್ಮರು ಅರ್ಜುನನಿಗೆ ಆಶೀರ್ವಾದ ಮಾಡುತ್ತ
"Blessings, my budding bowman; but you will nev
bloom into a better one, unless you better your bearir
at bow-craft" ಎಂದು ಬಕಾರಪ್ರಾಸವಿಟ್ಟು ಮಾತನಾಡಿದರೆ, ಭೀಷ್ಮ
ಸಹಜ ಗಂಭೀರಸ್ಥಿತಿಗೆ ಇಂಥ ಪದಪ್ರಯೋಗ ಒಪ್ಪುವುದಿಲ್ಲ. ಆದರ
PURPOSE ನಾಟಕದ ಅಗಾಧಪ್ರವಾಹದಲ್ಲಿ ಈ ಮುದ್ದುಮಾತು ಎಲ್ಲಿಯೋ
ಕೊಚ್ಚಿಹೋಗುತ್ತದೆ. ಇದು ಕೈಲಾಸಂ ಬರಹಗಳ ದೊಡ್ಡಗುಣ.

ಕೈಲಾಸಂ ಹೀಗೆ ಹೇಳಿ ಬರೆಸಿದ ನಾಟಕಗಳೂ ಕವನಗಳೂ ಮೂರ
ಮುಕ್ಕಾಲು ಪಾಲೆಲ್ಲಾ ಅವರ ಮೂವತ್ತೈದನೆಯ ವರ್ಷದಿಂದ ಐವತ್ತನೆ
ವರ್ಷದೊಳಗೆ ರಚನೆಯಾದುವೇ. ತರುವಾಯ ಬರೆದದ್ದು ಬಹು ಸ್ವಲ್ಪ
ಐವತ್ತರ ಮೇಲೆ ಅವರು ಹೆಚ್ಚಾಗಿ ಬೆಂಗಳೂರಲ್ಲಿ ನಿಲ್ಲಲಿಲ್ಲ. ಬಹು ದಿ
ಮದರಾಸೇ ಅವರ ಮನೆಯಾಗಿತ್ತು.

ಸುಖದ ದಿನಗಳು

ಕೈಲಾಸಂ ಅವರ ಸುಖದ ದಿನಗಳೆಂದರೆ, ಅವರು "ಕುಟ್ಟಿ" ಅಥವಾ "ಕಂದನ್" ಎಂಬ ತಮಿಳು ಚಲನಚಿತ್ರದ Director ಆಗಿದ್ದಾಗ. ನನ್ನ ಶ್ರೀಮಂತ ಸ್ನೇಹಿತರೊಬ್ಬರಿಗೆ ಒಂದು ಚಲಚ್ಚಿತ್ರವನ್ನು ತಯಾರಿಸಬೇಕೆಂದು ಹುಚ್ಚಿದ್ದಿತ್ತು. ಇದನ್ನು ಒಮ್ಮೆ ನಾನು ಕೈಲಾಸಂ ಹತ್ತಿರ ಪ್ರಸ್ತಾಪಿಸಿದೆ. ಅಷ್ಟು ಹೊತ್ತಿಗೆ ಅವರಿಗೆ 'ವಸಂತಸೇನಾ' ಮೂಕಚಿತ್ರದಲ್ಲಿ ಶಕಾರನ ಪಾತ್ರವನ್ನು ವಹಿಸಿ ಅನುಭವವಾಗಿತ್ತು. ಅವರೆಂದರು: "KARNAನ ಕಥೆಯನ್ನು ಚಲಚ್ಚಿತ್ರಕ್ಕೆ ತಕ್ಕಂತೆ ಬರೆದು, ಅದನ್ನು ತಯಾರಿಸೋಣ. ನನಗೆ ಅವರ ಪರಿಚಯ ಮಾಡಿಸಿಕೊಡು. ನೋಡು, ನನಗೂ ವಯಸ್ಸಾಗುತ್ತಬಂತು. ನನ್ನ ಸ್ಥಿತಿಗತಿ ನಿನಗೆ ಗೊತ್ತು . . . . ಈ ಚಿತ್ರಕ್ಕೆ ಬೇಕಾದ ಕಥೆ ನಾನೇ ಬರೆಯುತ್ತೇನೆ, ನಾನೇ ಅದನ್ನು direct ಮಾಡತೇನೆ. ನನಗೆ ತಕ್ಕಮಟ್ಟಿಗೆ ಅನುಭವವಿದೆ. ಇದರ ವಿಷಯ ಈಚೆಗೆ ಹೆಚ್ಚು ಓದಿಕೊಂಡಿದ್ದೇನೆ. ಉತ್ತಮವಾದ ಚಿತ್ರ ತಯಾರುಮಾಡೋಣ. ನೀನು ಅವರಿಗೆ ಧೈರ್ಯ ಹೇಳು. ನಡಿ, ಹೋಗಿ ಅವರ ಹತ್ತಿರ ಮಾತನಾಡಿಯೇ ಬರೋಣ" ಅಂದರು.

ಕರ್ಣನ ಕಥೆಯನ್ನು ಕೈಲಾಸಂ ಕಂಡಹಾಗೆ ಕಥೆ ಮಾಡಿದರೆ ಚೆನ್ನಾಗಿರುತ್ತದೆಯೆಂಬ ಭರವಸೆಯೇನೋ ನನಗೆ ಇತ್ತು. ಆದರೆ ಕೈಲಾಸಂ ಅದನ್ನು direct ಮಾಡಬಲ್ಲರೆ? ಅನುಭವವಿಲ್ಲದ ನಟನಟಿಯರನ್ನು ಮೊತ್ತಮೊದಲನೆಯ ಸಲ ಇಂಥ ಉನ್ನತಧ್ಯೇಯದ ಚಿತ್ರಕ್ಕೆ ಉಪಯೋಗಿಸಿಕೊಳ್ಳಬಲ್ಲರೆ? ಕಥೆಯ ಆತ್ಮವಷ್ಟನ್ನೂ ಅಷ್ಟೇ ಹೃದಯಂಗಮವಾಗಿ ಚಿತ್ರಪರದೆಯ ಮೇಲೆ ತರಲು ಕೈಲಾಸಂ ಅವರಿಗೆ ಸಾಧ್ಯವೆ?—ಇವನ್ನೆಲ್ಲ ನಾನು ದೀರ್ಘವಾಗಿ ಆಲೋಚನೆ ಮಾಡಲಿಲ್ಲ.

ಕೈಲಾಸಂಅನ್ನು ನನ್ನ ಸ್ನೇಹಿತರಿಗೆ ಪರಿಚಯ ಮಾಡಿಸಿದೆ. ನಾಲ್ಕಾರು ದಿನ ಅವರವರಲ್ಲಿ ಮಾತುಕತೆ ನಡೆಯಿತು. ಕಡೆಗೆ, ಕೈಲಾಸಂ, ಅವರ ಹತ್ತಿರದಲ್ಲಿಯೇ ಇದ್ದುಕೊಂಡು ಕರ್ಣನ ಕಥೆಯನ್ನು ಚಿತ್ರಕ್ಕೆ ಅಳವಡಿಸಿಕೊಂಡು ಬರೆದ ಮೇಲೆ ಮದರಾಸಿನಲ್ಲಿ ನಟನಟಿಯರನ್ನು ಆರಿಸಿಕೊಂಡು, ಅಲ್ಲಿಯೇ ಚಿತ್ರದ ತಯಾರಿಕೆಗೆ ತೊಡಗುವುದು–ಎಂದೂ ನಿರ್ಧರವಾಯಿತು.

ಇದು ಆಗಿ, ಮೂರು ನಾಲ್ಕು ತಿಂಗಳುಗಳಾಗಿರಬಹುದು. ಮದರಾಸಿಗೆ ಬರಬೇಕೆಂದು ನನ್ನ ಸ್ನೇಹಿತರಿಂದ ಜರೂರು ಕರೆ ಬಂತು. ಕೂಡಲೆ ಅಲ್ಲಿಗೆ ಹೋದೆ. ಕೀಲ್ಪಾಕಂನಲ್ಲಿ ದೊಡ್ಡ ಬಂಗಲೆ, ಅಲ್ಲೇ practice, ಅಲ್ಲೇ rehearsals, ಎಲ್ಲಾ ನಡೆಯುತ್ತಿತ್ತು. ಆದರೆ . . . ಕಥಾವಸ್ತು 'ಕರ್ಣ' ಅಲ್ಲ ; 'ಕುಟ್ಟಿ' ಎಂಬ ಸಾಮಾಜಿಕ ಕಥೆ, ತಮಿಳಿನಲ್ಲಿ. ಆ ಕಥೆಯ ಹಿಂದಾಗಲಿ ಮುಂದಾಗಲಿ ನನಗೆ ಅರ್ಥವಾಗಲಿಲ್ಲ. ಕೈಲಾಸಂ ಅವರೇ Director, Author, Make-up Manager, Costume Manager, Technical Director, ಒಟ್ಟಿನಲ್ಲಿ ಎಲ್ಲವೂ ಅವರೇ. ನೋಡಿದೆ; practice ಮತ್ತು rehearsals ಚೆನ್ನಾಗಿ ನಡೆಯುತ್ತಿರಲಿಲ್ಲ. ನನ್ನ ಮನಸ್ಸಿಗೆ ಸರ್ವಥಾ ಸಮಾಧಾನವಾಗಲಿಲ್ಲ.

ಆಗಿನ ಕಾಲದಲ್ಲಿ — ಎಂದರೆ ೧೯೩೩-೩೫ ರಲ್ಲಿ — ಒಂದು ಲಕ್ಷ ರೂಪಾಯಿನ ಬಂಡವಾಳ ಹಾಕಿ, ಚಿತ್ರದ ತಯಾರಿಕೆಗೆ ತೊಡಗುವುದೆಂದರೆ ಸಾಮಾನ್ಯದ ಮಾತಲ್ಲ !

ಕೈಲಾಸಂಅವರನ್ನು ಉತ್ತಮವಾದ ಉಪಚಾರಗಳಿಂದಲೂ ಸೌಕರ್ಯ ಗಳಿಂದಲೂ ಆದರಿಸುತ್ತಿರಬೇಕೆಂದು ನಾನು ನನ್ನ ಸ್ನೇಹಿತರಿಗೆ ಆಗಾಗ ಕಾಗದದಲ್ಲಿ ಬರೆಯುತ್ತಿದ್ದೆ. ಅವರಾದರೂ ಅದನ್ನು ಸರ್ವ ಪ್ರಕಾರದಿಂದಲೂ ನೆರವೇರಿಸುತ್ತಿದ್ದರೆಂದು ನಾನು ಪ್ರತ್ಯೇಕವಾಗಿ ಹೇಳಬೇಕಾದ್ದಿಲ್ಲ. ಕೈಲಾಸಂ ಅವರು ಆಗ ಪಡುತ್ತಿದ್ದ ಸುಖವೈಭವಗಳು ಇಂದ್ರನಿಗಾದರೂ ಉಂಟೋ ಇಲ್ಲವೋ ಎನ್ನುವ ಮಟ್ಟಿಗೆ ಕೈಲಾಸಂಗೆ ಅಲ್ಲಿ ಉಪಚಾರ ಸತ್ಕಾರಗಳು ನಡೆ ಯುತ್ತಿದ್ದುವು.

ಕೈಲಾಸಂಅವರ ಉಪಯೋಗಕ್ಕಾಗಿಯೇ ಒಂದು ಒಳ್ಳೆಯ Carಉ ಯಾವಾಗಲೂ petrol ತುಂಬಿ ಸಿದ್ಧವಾಗಿರುತ್ತಿತ್ತು. ಬೆಳಗ್ಗೆ ಒಬ್ಬ driver, ರಾತ್ರೆ ಒಬ್ಬ driver. ಬಂಗಲೆಯ ಮೇಲು ಅಂತಸ್ತಿನಲ್ಲಿ ಒಂದು ದೊಡ್ಡ ಕೋಣೆ. ಭವ್ಯವಾದ ಕುರ್ಚಿಗಳು, ಸೋಫಾ, table, ಮಂಚ ಇತ್ಯಾದಿ; ಮೇಲೆ ಸದಾ ತಿರುಗುತ್ತಿದ್ದ ಎರಡು ceiling fanಗಳು. ರಾತ್ರಿಯೂ ಹಗಲೂ ಇಪ್ಪತ್ತುನಾಲ್ಕು ಗಂಟೆಯ ಹೊತ್ತೂ, ಒಂದು gallon ಹಿಡಿಸುವ thermos vesselನಲ್ಲಿ strong Coffee, ಒಂದು caseಉ Huntley and

Palmers ಬಿಸ್ಕತ್ತು, ಒಂದು gross packets ಇದ್ದ Scissors ಸಿಗರೇಟಿನ caseಉ. ಕೈಲಾಸಂ ಹೊರಗೆ ಹೋಗಿ ರೂಮಿಗೆ ಬಂದೊಡನೆಯೇ ಅವರ ಮೈ ಮೇಲಿನ ಕೋಟನ್ನು ಬಿಚ್ಚಿ brushಮಾಡಿ hangerನಲ್ಲಿ ಇಡುವುದಕ್ಕೆ ಒಬ್ಬ ಹುಡುಗ. ಕಾಲಿನಲ್ಲಿ ಹಾಕಿಕೊಂಡಿದ್ದ ಅವರ bootsಅನ್ನ ಬಿಚ್ಚಿ, brush ಮಾಡಿ, polish ಮಾಡಿ ಇಡುವುದಕ್ಕೆ ಇನ್ನೊಬ್ಬ ಹುಡುಗ. ಹೊರಗೆ ಹೋಗಬೇಕಾದಾಗ ಅವರ hat, coat ಮತ್ತು bootsಅನ್ನು ತೊಡಿಸು ವವನೊಬ್ಬ. ಬಾಗಿಲು ಬಳಿಯೇ ಸದಾ ಸಿದ್ಧವಾಗಿ ಬಿಸಿನೀರು. ಸ್ನಾನದ ಮನೆಯಲ್ಲೂ ಯಾವಾಗಲೂ ಬಿಸಿನೀರು ಸಿದ್ಧ. ಒಗೆದು, ಒಣಗಿಸಿ, ಚೆನ್ನಾಗಿ ironಮಾಡಿದ ಟವಲುಗಳು. ಯಾವ ಹೊತ್ತಿನಲ್ಲಿ ಎಂದರೆ ಆ ಹೊತ್ತಿನಲ್ಲೇ ಊಟ, ಬದುಕಿಗೇ ಅಸಹ್ಯ ಹಿಡಿಸುವಷ್ಟು ಊಟ, ಉಪಚಾರ, ಸುಖ.

ಬೆಂಗಳೂರಿನಲ್ಲಿ ನನಗೆ ಕೆಲಸವಿತ್ತಾದ್ದರಿಂದ, ಎರಡು ಮೂರು ದಿವಸ ಗಳಲ್ಲೇ ನಾನು ಮದ್ರಾಸಿನಿಂದ ಹೊರಟುಬಿಟ್ಟೆ. ಎರಡು ತಿಂಗಳು ಕಳೆಯುವ ವೇಳೆಗೆ 'ಕುಟ್ಟಿ' film ತಯಾರಿಕೆ ಆಯಿತು. ಮದರಾಸಿನಲ್ಲಿ ನಡೆದ trade showವನ್ನು ನೋಡಿ, ನನಗೆ ಎದೆಯಲ್ಲಿ 'ಢಗ್' ಎಂದಿತು. Trade-showಆಗಿ ಪ್ರದರ್ಶನಕ್ಕೂ ಬಂದಿತು. ಮೂರು ದಿವಸ ಕೂಡ ಸರಿಯಾಗಿ ನಡೆಯಲಿಲ್ಲ, ನಿಂತುಹೋಯಿತು. ಚಿತ್ರ ಯಾರಿಗೂ ಹಿಡಿಸಲಿಲ್ಲ. ಹಾಕಿದ ಒಂದು ಲಕ್ಷ ಅನ್ಯಾಯವಾಯಿತು. ಆ ಐದಾರು ತಿಂಗಳ ಅವಧಿಯಲ್ಲಿ ಕೈಲಾಸಂ ಅವರ ಸಂಬಳ, allowance ಎಲ್ಲಾ ಒಟ್ಟು ಸುಮಾರು ಹನ್ನೆರಡು ಸಾವಿರ ರೂಪಾಯಿ ಕೈಲಾಸಂ ಕೈ ಸೇರಿತು. ಅದನ್ನು ಏನು ಮಾಡಿದರೋ! ಅದು ಹೇಗೆ ಖರ್ಚಾಯಿತೋ, ಅವರು ಯಾರೂ ಅರಿಯರು. ಆದದ್ದು GIN ಪಾಲು.

ಪ್ರಸಿದ್ಧವಾದ ಕರ್ಣನ ಕಥೆಯನ್ನು ಬಿಟ್ಟು ಯಾವುದೋ 'ಕುಟ್ಟಿ' ಯನ್ನು ತಯಾರಿಸಿದುದು ಸರಿಹೋಗಲಿಲ್ಲ. ಛಾಯಾಗ್ರಹಣದಲ್ಲೂ ತುಂಬ ದೋಷ. ಲಕ್ಷ ರೂಪಾಯಿ ನಷ್ಟವಾದದ್ದೊಂದು, ಚಿತ್ರ ಚೆನ್ನಾಗಿ ಆಗದೆ ಹೋದದ್ದು ಒಂದು, ನನ್ನ ಸ್ನೇಹಿತರಿಗೂ ನನಗೂ ತುಂಬ ವಿಷಾದವಾಯಿತು.

ಕೊನೆಗೆ ಕೊಂಚ ಮುಂಚೆ

ಇದಾದ ಎರಡು ವರ್ಷದ ಮೇಲೆಯೇ ನಾನು ಕೈಲಾಸಂಅನ್ನು ಮತ್ತೆ ನೋಡಿದ್ದು. 'ಕುಟ್ಟಿ' film ವಿಷಯ ನಾನು ಪ್ರಸ್ತಾಪಿಸಲಿಲ್ಲ, ಅವರೂ ಅದರ ಸುದ್ದಿ ಎತ್ತಲಿಲ್ಲ. ಇತರ ಯಾವುದು ಯಾವುದೋ ವಿಷಯಗಳನ್ನು ಮಾತನಾಡಿದೆವು. ಈ ಎರಡು ವರ್ಷದ ಅಂತರದಲ್ಲಿ ಕೈಲಾಸಂ ಹತ್ತು ವರ್ಷ ಹೆಚ್ಚು ವಯಸ್ಸಾದವರಂತೆ ಕಂಡುಬಂದರು.

" ಆರೋಗ್ಯ ಕೆಟ್ಟಿರುವ ಹಾಗಿದೆ ?" ಎಂದು ಕೇಳಿದೆ.

ಅದಕ್ಕೆ ಅವರು ನಸುನಕ್ಕು, "Nearing the end ಮಗು. I feel it is not far off, now. It's a glorious feeling, Venkatesh, this thing: Death. Life, after all, is one long preparation for death. ಭರ್ತೃಹರಿ ಹೇಳಿದ ಹಾಗೆ—

ಮಾತರ್ಮೇದಿನಿ ತಾತ ಮಾರುತ
ಸಖೇ ತೇಜಸ್ ಸುಬಂಧೋ ಜಲ
ಭ್ರಾತರ್ವ್ಯೋಮ ನಿಬದ್ಧ ಏಷ ಭವತಾಂ
ಅಂತ್ಯಃ ಪ್ರಣಾಮಾಂಜಲಿಃ

ಹೀಗೇ ಅನ್ನೋದು ತಾನೆ! ನನಗೆ ಬೇರೆ ಯಾವ ಬಂಧನ ತಾನೆ ಇದೆ ? . . . ಯಾವುದು ಇತ್ತು ?" ಎಂದರು.

ಏಕಲವ್ಯ, ಭರತ, ಕರ್ಣ ಇವುಗಳನ್ನು ಬರೆದವರಿಗೆ ವೇದಾಂತ ರಹಸ್ಯ ಗಳೂ ಸಂಗತಿಗಳೂ ಎಷ್ಟು ಚೆನ್ನಾಗಿ ತಿಳಿದಿರಬೇಡ! ದೇಹಮುಕ್ತಿಗೆ, ಜೀವನ್ಮುಕ್ತಿಗೆ ಆಗುವ ವಿವಿಧ ಮಾರ್ಗಗಳನ್ನು ವಿವರಿಸಿ ಮಾತನಾಡಿದರು. 'ಸಾಮಾನ್ಯ ಮನುಷ್ಯನಿಗೆ ಇವೆಲ್ಲ ಸಾಧ್ಯವೆ? ಇವು ಸಿದ್ಧಿಸುವುವೇ ?' ಎನ್ನಿಸಿತು ನನಗೆ.

ನಾನು ಕೈಲಾಸಂ ಅವರನ್ನು ಕೇಳಿಕೊಂಡೆ: " ಸರ್, ಇವೆಲ್ಲ ನಮಗೆಲ್ಲಿ ಸಾಧ್ಯ! ಇವನ್ನು ಅನುಷ್ಠಾನಕ್ಕೆ ತರಬೇಕೆಂದರೂ, ಅಲ್ಲಿಗೂ ಅವನು ಕರ್ಮ

ವಿಮುಕ್ತನೇ ಆಗಿರಬೇಕು, ಅವನ ಜ್ಞಾನವೂ ಪರಿಪಕ್ವವಾಗಿರಬೇಕು. ತಪಸ್ಸಿನಿಂದಲೋ ಸದ್ಗುರುವಿನ ಉಪದೇಶದಿಂದಲೋ ಅವನಿಗೆ ಮಾರ್ಗವು ಕಾಣಬರಬೇಕು. ನಮ್ಮ ಶಾಸ್ತ್ರಗಳೂ ವೇದಾಂತಗಳೂ ಅತಿ ಗಹನವಾಗಿವೆ. ಅವನ್ನು ತಿಳಿದು, ಅದರಂತೆ ಆಚರಿಸುವುದು ಬಹು ಸ್ವಲ್ಪ ಮಂದಿಗೆ ಮಾತ್ರ ಸಾಧ್ಯ. ಲೌಕಿಕದಲ್ಲೇ ಮುಳುಗಿರುವ ನಮ್ಮಂತಹವರು ಸುಲಭವಾಗಿ ತಿಳಿದು ಆಚರಿಸಬಹುದಾದ್ದನ್ನು ಹೇಳಿರಿ. ಅನುಸರಣೆ ಸುಲಭವಾಗಿರಬೇಕು, ಉಪದೇಶ ಉತ್ತಮ ಮಾರ್ಗದರ್ಶಿಯಾಗಿರಬೇಕು."

ಆಗ, ಕೈಲಾಸಂ, ಸ್ವಲ್ಪ ಹೊತ್ತು ಯೋಚಿಸಿ, "ಇದು ಕೇಳಿದ್ದೀಯಾ, Rudyard Kiplingದು, 'IF' ಅನ್ನೋ poemಉ? ಕೇಳು, ಎಷ್ಟು sublime ಆಗಿದೆ." ಎಂದು ಅದನ್ನು ಹೇಳಿದರು.

ಈ ಪದ್ಯವನ್ನೂ ಇದರ ಪ್ರಭಾವವನ್ನೂ ಕುರಿತು ಇದೊಂದು ಹೇಳಿಕೆ ಇದೆ: ಬ್ರಿಟಿಷ್‌ಸೇನಾಧಿಪತಿ ಯಾವನೊ ಒಬ್ಬ, ೧೯೧೪ರಿಂದ ೧೯೧೮ರವರೆಗೆ ನಡೆದ ಆ ಮಹಾ ಯುದ್ಧದಲ್ಲಿ ಭಾಗವಹಿಸಿದವನು, ತನ್ನ ಮನಸ್ಸು ತುಂಬ ಕುಗ್ಗಿಹೋದ ಕಾಲದಲ್ಲಿ, ಇನ್ನು ಬದುಕಿ ಏನೂ ಪ್ರಯೋಜನವಿಲ್ಲ ಎನ್ನಿಸಿದ ಹೊತ್ತಿನಲ್ಲಿ, ಈ ಪದ್ಯದ ಒಂದು ಪ್ರತಿಯನ್ನು ಜೇಬಿನಿಂದ ತೆಗೆದನಂತೆ. ಜೇಬಿನಲ್ಲಿ ತುರುಕಿ ಮುದುರಿ ಸೊಪ್ಪಾಗಿದ್ದ ಅದನ್ನು ಬಿಡಿಸಿ ಓದಿದನಂತೆ. ಮತ್ತೆ ಮತ್ತೆ ಓದಿದ ಹಾಗೆಲ್ಲ, ಅವನಲ್ಲಿ ಹೊಸ ಜೀವ ಸಂಚಾರವಾಯಿತಂತೆ. ಆಮೇಲೆ ಅವನು ಊರಿಗೆ ಬರೆದು, ಆ ಪದ್ಯದ ನೂರಾರು ಪ್ರತಿಗಳನ್ನು ತರಿಸಿಕೊಂಡು, ಯಾವನಾದರೂ ಸೈನಿಕ ನಿರಾಶೆಪಡುತ್ತ ನರಳುತ್ತಿದ್ದ ಎಂದು ಕಂಡರೆ, ಅವನ ಕೈಯಲ್ಲೊಂದು ಪ್ರತಿ ಇಡುತ್ತಿದ್ದನಂತೆ.

ಆ ಪದ್ಯ ಹೀಗೆ ಆರಂಭವಾಗುತ್ತದೆ:

If you can keep your head when all about you
Are losing theirs and blaming it on you;
If you can trust yourself when all men doubt you,
But make allowance for their doubting too;

ಆಮೇಲೆ ಆ ಪದ್ಯ ಹೇಳುತ್ತದೆ: ಕಾಯಬೇಕು, ಕಾದರೂ ಸ್ಥೈರಣೆ ಕೆಡಬಾರದು; ಇತರರು ತನ್ನ ವಿಷಯವಾಗಿ ಸುಳ್ಳು ಹೇಳಿದರೂ ತಾನು ಮಾತ್ರ

ಸುಳ್ಳಾಡಬಾರದು ; ಇತರರು ದ್ವೇಷಿಸಿದರೂ ತಾನು ದ್ವೇಷಿಸಬಾರದು ; ತುಂ
ಸತ್ಪುರುಷನಂತೆ ತೋರಿಸಿಕೊಳ್ಳಬಾರದು, ತುಂಬ ಬುದ್ಧಿವಂತನಂತೆ ಮಾತಾ
ಬಾರದು ; ಕನಸು ಕಾಣುವ ಶಕ್ತಿಯಿರಬೇಕು, ಆದರೆ ಮಾತ್ರ ಕನಸಿನಲ್ಲಿ
ಮುಳುಗಿಹೋಗಬಾರದು; ಜಯ ಅಪಜಯ ಎರಡನ್ನೂ ಒಂದೇ ತೆರ ಕಾ
ಬೇಕು ; ಯಾವ ಕೆಲಸಕ್ಕೋಸ್ಕರ ನಮ್ಮ ಸರ್ವಸ್ವವನ್ನೂ ಒಪ್ಪಿಸಿದ್ದೆವೊ
ಅದೆಲ್ಲ ಮುರಿದುಬೀಳುತ್ತಾ ಇದ್ದರೂ, ಮತ್ತೊಮ್ಮೆ ಅದನ್ನ ಕಟ್ಟುವುದಕ
ಪ್ರಯತ್ನಿಸಬೇಕು ; ಕೈಕಾಲಿನಲ್ಲಿ ತ್ರಾಣ ಉಡುಗಿದರೂ, ಮನಸ್ಸಿನ ತ್ರಾ
ಮಾತ್ರ ಕುಗ್ಗದಿರಬೇಕು ; ಸಾಮಾನ್ಯರ ಜೊತೆಯಲ್ಲಿ ಸೇರಿದರೂ ಶೀಲ ಕೆಡದಿ
ಬೇಕು, ದೊರೆಗಳ ಜೊತೆಯಲ್ಲಿ ಹೋದರೂ ತಲೆ ತಿರುಗಬಾರದು ; ಯಾರನ್ನೂ
ಅಲಕ್ಷ್ಯಮಾಡಬಾರದು ;—ಹೀಗೆ ಬದುಕುವ ದಾರಿಗೆ ಬೇಕಾದ ಹಲ
ಹೆಜ್ಜೆಗಳನ್ನು ಹೇಳಿ, ನೀನು ಹೀಗೆ ಮಾಡಿದರೆ—

Your's is the earth and everything that's in it,
And-which is more-you'll be a Man, my son !

ಎಂದು ಮುಕ್ತಾಯವಾಗುತ್ತದೆ.

ಕೇಳಿದ ಮೇಲೆ, ಅದನ್ನು ಇನ್ನೊಮ್ಮೆ ಕೇಳಬೇಕೆಂದು ಆಸೆಯಾಯಿತು
ಅದನ್ನು ಬರೆದಿಟ್ಟುಕೊಳ್ಳಬೇಕೆಂದು ಬಯಕೆಯಾಯಿತು. ಕೈಲಾಸಂ ಮತ್ತೆ
ಹೇಳಿದರು, ನಾನು ಅದನ್ನು ಬರೆದುಕೊಂಡೆ. ಅಂದಿನಿಂದ ಆ ಪದ್ಯ ನನ
ಗೀತೆಯಾಯಿತು, ನಿತ್ಯದ ಪಾರಾಯಣಕ್ಕಾಯಿತು. ಮನಸ್ಸು ನೊಂದಾಗ
ಜುಗುಪ್ಸೆಯಾದಾಗ, ಈ ಪದ್ಯವನ್ನು ಮೇಲಿಂದ ಮೇಲೆ ಹೇಳಿಕೊಂಡು ಸಮಾ
ಧಾನವನ್ನೂ ಸಂತುಷ್ಟಿಯನ್ನೂ ಪಡೆಯುತ್ತಿದ್ದೇನೆ. ನನ್ನ ಜೀವನಪಥಕ್ಕೆ
ಈ ಪದ್ಯ ಬೆಳಕು ಕಾಣಿಸಿತು. ನನ್ನ ಜೀವನದ ಮುಕ್ತಿಗೂ ಇಷ್ಟೇ ಸಾಕು

ಕೈಲಾಸಂ ನನಗೆ ಅನೇಕ ವಿಧಗಳಲ್ಲಿ ಗುರುಗಳಾದರು. ಕಲಿಯುವ
ಆಸಕ್ತಿಯನ್ನು ಉಂಟುಮಾಡಿದರು. ನಡೆವಳಿಯಲ್ಲಿ, ನುಡಿವಳಿಯಲ್ಲಿ
ಮನೋಭಾವದಲ್ಲಿ ನಮ್ರತೆಯಿರಬೇಕೆಂದು ತಿದ್ದಿದರು. ಕರ್ತವ್ಯದಲ್ಲಿ ನಿಷ್ಠೆ
ಇರಬೇಕೆಂದು ಕಲಿಸಿದರು. ಸ್ಥಿತಪ್ರಜ್ಞನಾಗುವುದಕ್ಕೆ ಪ್ರಯತ್ನಿಸಬೇಕೆಂದು
ಬೋಧಿಸಿದರು. ಸುಲಭವಾಗಿ ಜ್ಞಾಪಕದಲ್ಲಿಟ್ಟುಕೊಂಡು, ಸದ್ಗತಿಯನ್ನು
ಸಾಧಿಸುವುದಕ್ಕೆ ಆಗುವ ಈ ಪದ್ಯವನ್ನು ನನಗೆ ಉಪದೇಶಿಸಿದರು.

ವರ್ಷಗಳು ಒಂದರ ಹಿಂದೆ ಒಂದು ಉರುಳಿದುವು. ಈ ಮಧ್ಯೆ ಕೈಲಾಸಂ ಅವರ ತಂದೆ ಶ್ರೀ ತ್ಯಾಗರಾಜ ಪರಮಶಿವ ಐಯ್ಯರ್‌ಅವರು ಸ್ವಗೃಹದಲ್ಲಿ ಕಾಲವಾದರು. ಆ ದಿನ ಅವರ ಮನೆಯಲ್ಲಿ ಕೈಲಾಸಂ ಅವರನ್ನು ಕಂಡಿದ್ದೆ. ಯಥಾಪ್ರಕಾರ ಇದ್ದರು ; ವಿಶೇಷವಾದ ದುಃಖವನ್ನೇನೂ ಅವರ ಮುಖದಲ್ಲಿ ಕಾಣಲಿಲ್ಲ. ನನ್ನನ್ನು ನೋಡಿದೊಡನೆ ಅವರೇ ಮೊದಲು ಮಾತನಾಡಿದರು.

ಕೈಲಾಸಂ : "Poor Great Soul, Venkatesh, at last, free again . . . terribly self-disciplined in life . . . self-imposed . . . like a Hatha-Yogi . . . Come in Venkatesh . . . "

ನಾನು : "ಎಲ್ಲಿ, ಸಾರ್, ಎಲ್ಲೆಲ್ಲಿದ್ರಿ ಇಷ್ಟು ದಿನ ? It is good yon are here in his last days."

ಕೈಲಾಸಂ ; "Sheer providence. ಬೊಂಬಾಯಲ್ಲಿದ್ದೆ. ಆಮೇಲೆ ಮಂಗಳೂರ್ಗೆ ಹೋಗಿದ್ದೆ, ಅಕಸ್ಮಾತ್ ನಾಲ್ಕುದಿನಕ್ಕೆ ಹಿಂದೆ ಇಲ್ಲಿಗೆ ಬಂದೆ. ನನಗೇನೇನೂ ತೊಂದ್ರೆ ಇಲ್ಲ ; ಎಲ್ಲೂ್ರ ಬಂದಿದ್ದಾರೆ. Everything is going on perfectly. Luckily for him, everybody . . . ಬರ್ಬೇಕಾದೋರೆಲ್ಲಾ ಬಂದಿದ್ದಾರೆ. ನಡೆದ್ಹೋಗುತ್ತೆ ಸಲೀಸಾಗಿ . . , How is the Vyayamashala getting on ?"

ನಾನು : "It's allright, Sir . . . Came to express my condolences."

ಕೈಲಾಸಂ : "Oh ! It is allright. Don't be silly, old boy. Usual inevitable end, you know. The sooner the better."

ಅಷ್ಟರಲ್ಲಿ ಕೈಲಾಸಂ ಅವರ ಬಂಧುಗಳೂ ಇತರ ಸ್ನೇಹಿತರೂ ಬಂದರು. ನಾನು ನಮಸ್ಕಾರ ಹೇಳಿ, ಹೊರಟುಬಂದೆ.

ಉತ್ತರಕ್ರಿಯೆಗಳು ಮುಗಿದನಂತರ ಕೈಲಾಸಂ ಬೆಂಗಳೂರಿನಲ್ಲಿ ಬಹಳ ದಿನ ನಿಲ್ಲಲಿಲ್ಲ. ಅವರು ಬದುಕಿ ಬಾಳಿದ White-House ಅನ್ನು ಯಾರೋ ಮಲೆಯಾಳದವರು ಕೊಂಡುಕೊಂಡರು. ಈಗಲೂ ಆ ಮನೆಯ ಮಾರ್ಗವಾಗಿ

ಹೋದಾಗಲೆಲ್ಲ ಕಣ್ಣೂ, ಮನಸ್ಸೂ, ತಾವಾಗಿ ಆ ಕಡೆ ತಿರುಗುತ್ತವೆ. ಏನೇನೋ ನೆನಪು ಆಗುತ್ತದೆ. ಒಳಗೆ ಹೋಗಿ, "ಕೃಷ್ಣಾ, ಕೈಲಾಸಂ ಇರ್ಕರ್ರಾ ?" ಎಂದು ಕೇಳೋಣವೇ ಎನಿಸುತ್ತದೆ. ಕೈಲಾಸಂ ಅವರು ಇದ್ದ ಕೋಣೆಯನ್ನು ಒಮ್ಮೆ ಇಣಕಿ ನೋಡೋಣವೇ ಎಂದು ಜೀವ ಹಂಬಲಿಸುತ್ತದೆ.

ಸ್ವಲ್ಪ ಕಾಲದ ಮೇಲೆ, ಒಂದು ಸಲ ಮದ್ರಾಸಿಗೆ ಹೋಗಿದ್ದಾಗ, ಕೈಲಾಸಂಅವರು ಅಲ್ಲಿರುವರೆಂದು ತಿಳಿದು, ಅವರನ್ನು ನೋಡುವುದಕ್ಕಾಗಿ ಒಂದು ದಿನವೆಲ್ಲ ಅಲೆದೆ. ಆದರೆ ನನ್ನ ದುರದೃಷ್ಟ, ಅವರು ಆ ಹಿಂದಿನ ರಾತ್ರಿಯೇ ಯಾರೋ ಸ್ನೇಹಿತರೊಂದಿಗೆ ತಮ್ಮ ತಾತಂದಿರ ಊರಾದ ಮೊಂಗುಡಿಯ ಕಡೆಗೆ ಹೊರಟುಬಿಟ್ಟಿದ್ದರು.

ತಂದೆಯ ಮರಣಾನಂತರ ಕೈಲಾಸಂಅವರಿಗೆ ಬೆಂಗಳೂರು ದೂರವೇ ಆಯಿತು. ಮದ್ರಾಸೇ ಮನೆಯಾಯಿತು. ಆಗಾಗ ಬೊಂಬಾಯಿಗೂ ಹೋಗಿ ಇರುತ್ತಿದ್ದರು. ಈ ಸಮಯದಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ಮದ್ರಾಸಿನಲ್ಲಿ ಆ ವರ್ಷದ ಸಮ್ಮೇಳನ ನಡೆಸಿ, ಕೈಲಾಸಂ ಅವರನ್ನು ಅಧ್ಯಕ್ಷರನ್ನಾಗಿ ಆದರಿಸಿ ಗೌರವಿಸಿತು. ಅವರನ್ನು ಅಧ್ಯಕ್ಷಸ್ಥಾನಕ್ಕೆ ಹಿಡಿದು ತಂದು ಕೂಡಿಸಿ ಗೌರವಿಸುವುದು ಪರಿಷತ್ತಿಗೆ ಪ್ರಯಾಸವೇ ಆಯಿತು. ಸ್ನೇಹಿತರ ಬಲವಂತ, ಸಾಹಿತಿಗಳ ಒತ್ತಾಯಗಳ ಮೇಲೆ ಕೈಲಾಸಂ ಒಪ್ಪಿಕೊಂಡರು. ಕನ್ನಡನಾಡು ಕೈಲಾಸಂ ಅವರಿಗೆ ಸಲ್ಲಿಸಬೇಕಾದ ಗೌರವವನ್ನು ಸಲ್ಲಿಸಿತು. ಹೀಗೆ ಬಹು ಜನ ಸ್ನೇಹಿತರ ಆಸೆ ಈಡೇರಿತು.

ಕೊನೆಕೊನೆಗೆ

ಕೊನೆಕೊನೆಗೆ ಕೈಲಾಸಂ ಅವರ ದರ್ಶನವೇ ನನಗೆ ದುರ್ಲಭವಾಯಿತು. ಒಂದೆರಡು ಬಾರಿ, ಅವರು ಬೆಂಗಳೂರಿಗೆ ಬಂದು, ಬಸವನಗುಡಿಯಲ್ಲಿ ತಮ್ಮ ಬಂಧುಗಳ ಮನೆಯಾದ 'ಅವಂತಿ'ಯಲ್ಲಿ ಇದ್ದರು. ನೋಡಿದವರು ಹೇಳಿದರು: 'ಕೈಲಾಸಂ ಅವರ ಆರೋಗ್ಯ ಇಳಿಮುಖವಾಗುತ್ತಿದೆ, ಶರೀರವೂ ಗಳಿತವಾಗಿ ಕಾಣುತ್ತಿದೆ,' ಎಂದು. ಕೈಲಾಸಂ ಯಾವ ರೀತಿಯ ದೀರ್ಘಕಾಲದ ವ್ಯಾಧಿಗೂ ತುತ್ತಾದವರಲ್ಲ. ಅವರಿಗಿದ್ದ ಒಂದೇ ತೊಂದರೆ : ಮೂಲವ್ಯಾಧಿ. ಆಹಾರ ನಿದ್ರಾದಿಗಳ ಕ್ರಮತೆಯಿಂದ ಇದನ್ನು ನಿವಾರಿಸಿಕೊಳ್ಳಬಹುದಾಗಿದ್ದರೂ, ಅವರು ಅದರ ಕಡೆ ಗಮನ ಕೊಡಲಿಲ್ಲ. ಎಂದಿನಿಂದಲೂ ಅವುಗಳ ವಿಷಯವಾಗಿ ಅವರಿಗಿದ್ದ ಉಪೇಕ್ಷೆ ಬರುಬರುತ್ತ ಇನ್ನೂ ತೀವ್ರವಾಯಿತು.

ಕೈಲಾಸಂ ಅವರನ್ನು ಒಂದು ಕಡೆ ಹಿಡಿದು ನಿಲ್ಲಿಸುವಂಥ ಬಂಧ ಯಾವುದೂ ಇರಲಿಲ್ಲ. ಚಿಕ್ಕಂದಿನಲ್ಲಿಯೇ ತಾಯಿಯನ್ನು ಕಳೆದುಕೊಂಡರು. ಕಾರಣಾಂತರಗಳಿಂದ ಮನಸ್ಸು ಮನೆಯಿಂದ ದೂರವಾಯಿತು. ಇದ್ದ ಇಬ್ಬರು ಹೆಣ್ಣುಮಕ್ಕಳ ಮೇಲೆ ಅವರಿಗೆ ಅಪಾರವಾದ ಮಮತೆಯಿತ್ತಾದರೂ, ಅದನ್ನು ಹೆಚ್ಚು ತೋರ್ಪಡಿಸುತ್ತಿರಲಿಲ್ಲ. ಸೋದರರಿಬ್ಬರು ತೀರಿಕೊಂಡಿದ್ದರು. ಈಗ, ತಂದೆ ಕಾಲವಾದರು. ಇನ್ನು ಉಳಿದವರು ಅವರ ಆಪ್ತರು, ಸ್ನೇಹಿತರು; ಅಂಥವರೂ ಬೊಂಬಾಯಿನಲ್ಲಿ, ಮದರಾಸಿನಲ್ಲಿ ಹೆಚ್ಚು. ಹಾಗಾಗಿ, ಅವರ ಕಡೆಯ ದಿನಗಳು ಮದರಾಸು, ಬೊಂಬಾಯಿಗಳ ಕಡೆಯೇ ಕಳೆದುಹೋದರೂ ಅವರ ಮೃತ್ಯುಭೂಮಿ ಮಾತ್ರ ಬೆಂಗಳೂರೇ ಆಯಿತು. ಈ 'Homing bird' ಎನ್ನುತ್ತಾರಲ್ಲಾ, ಹಾಗೆ, ಶ್ರೀಮಾನ್ ವಿ. ಟಿ. ಶ್ರೀನಿವಾಸನ್ ಅವರ ಗೃಹ "ಅವಂತಿ" ಗೇ ಬಂದರು. ಹಿಂದಿನ ರಾತ್ರೆ ಎಲ್ಲರೊಡನೆ ಮಾತನಾಡಿದರಂತೆ, ಮಲಗಿಕೊಂಡರಂತೆ; ಬೆಳಗಾಗುವುದರೊಳಗೆ, ಯಾರಿಗೂ ಏನೊಂದು ಕಷ್ಟವನ್ನೂ ಕೊಡದೆ, ಅವರ ಪ್ರಾಣಪಕ್ಷಿ ಅವರ ದೇಹಪಂಜರದಿಂದ ಹಾರಿ ಹೋಗಿತ್ತು.

ಕೈಲಾಸಂ ಹೋದರೆಂಬ ಸುದ್ದಿಯನ್ನು ಕೇಳಿದಾಗ, ಅವರು ಹಿಂದೆ ಹೇಳುತಿದ್ದ ಭರ್ತೃಹರಿಯ ಸಂಸ್ಕೃತ ಶ್ಲೋಕ ಜ್ಞಾಪಕಕ್ಕೆ ಬಂತು.

ಮಾತರ್ಮೇದಿನಿ ತಾತ ಮಾರುತ
ಸಖೇ ತೇಜಸ್ ಸುಬಂಧೋ ಜಲ
ಭ್ರಾತರ್ವ್ಯೋಮ ನಿಬದ್ಧ ಏಷ ಭವತಾಂ
ಅಂತ್ಯಃ ಪ್ರಣಾಮಾಂಜಲಿಃ

ಇದೇ ಕೈಲಾಸಂರಿಗೆ ಚರಮಶ್ಲೋಕವಾಯಿತು. ಕೈಲಾಸಂ ಅನ್ನು ಬಲ್ಲವರೆಲ್ಲರೂ 'ಅವಂತಿ' ಯಲ್ಲಿ ಸೇರಿದೆವು. ಕಳೇಬರವನ್ನು ಕಂಡು ಹೃದಯದಲ್ಲಿ ದುಃಖ ಉಕ್ಕಿತು. ಕಣ್ಣಲ್ಲಿ ನೀರು ತುಂಬಿತು. ಬಾಷ್ಪಾಂಜಲಿಯೊಡನೆ ಪುಷ್ಪಾಂಜಲಿಯನ್ನು ಅರ್ಪಿಸಿದೆವು.

ಕೈಲಾಸಂ ಕಣ್ಣು ಮುಚ್ಚಿದಾಗ ಅವರ ಹತ್ತಿರದವರೆಲ್ಲ ಬಹಳ ಅತ್ತರು. ಅದರಲ್ಲೂ ಕೈಲಾಸಂ ಅವರ ಕಿರಿಯ ಮಗಳು "ಪಾಪಣ್ಣಾ ! ಪಾಪಣ್ಣಾ !" ಎಂದು ದುಃಖ ಉಕ್ಕಿ ಉಕ್ಕಿ, ಮರಳಿ ಮರಳಿ ಕೂಗಿಡುತ್ತಿದ್ದುದನ್ನು ಕಂಡು ನನಗೆ Mrs. Hemans ಎಂಬಾಕೆ ಬರೆದಿರುವ ಪದ್ಯ ಜ್ಞಾಪಕಕ್ಕೆ ಬಂತು.

Oh ! Call my brother back to me !
I cannot play alone

ಒಂದು ಸಣ್ಣ ಹುಡುಗಿ, ತನ್ನ ಒಡನಾಡಿಯಾಗಿದ್ದು ಗತಿಸಿದ ತಮ್ಮನೊಬ್ಬನನ್ನು ನೆನಸಿಕೊಂಡು, ಅವನಿಲ್ಲದೆ ಬದುಕಲಾರೆನೆಂದು ಗೋಳಾಡುತ್ತದೆ.

ನಮ್ಮ ಇಹಜೀವನವೂ ಹೀಗೆಯೇ. ಒಡನೆ ಹುಟ್ಟಿ, ಬೆಳೆದು, ಬೆಳೆಸಿ, ಆಡಿ, ಆಡಿಸಿ, ನುಡಿದು, ನುಡಿಸಿ, ನಕ್ಕು, ನಗಿಸಿ, ಜೀವನದಲ್ಲಿ ಸಕ್ಕರೆ ಬೆರೆಸಿದವರು ಇಹಲೋಕದಿಂದ ಕಣ್ಮರೆಯಾದಾಗ ಎಲ್ಲಿಯೂ ಇಲ್ಲದ ದುಃಖ ಏರಿ ಬರುತ್ತದೆ. ಅವರನ್ನು ಮತ್ತೆ ಮತ್ತೆ ಜ್ಞಾಪಿಸಿಕೊಳ್ಳುತ್ತೇವೆ. ಅವರಲ್ಲಿ ಹಲವರ ವಿಷಯಗಳಲ್ಲಂತೂ ಪತ್ರಿಕೆಗಳಲ್ಲಿ ಬರೆದದ್ದೂ ಬರೆದದ್ದೇ, ಭಾಷಣಗಳಲ್ಲಿ ಹೇಳಿದ್ದೂ ಹೇಳಿದ್ದೇ. ಈ ಪ್ರೀತಿ ವಿಶ್ವಾಸಗಳು ನಿಜವಾಗಿಯೂ ನಮ್ಮಲ್ಲಿ ಇದ್ದುವಾದರೆ, ಪ್ರಪಂಚದ ದುಃಖಗಳೆಲ್ಲ ತೊಡೆದು ಹೋಗುವುವು ; ಆಗ ಬಾಳುವೆ ಚೆನ್ನವಾದೀತು, ಸಂತೋಷವಾದೀತು.

ಕೈಲಾಸಂ ಅವರ ಕೃತಿಗಳಿಂದ ಅನುಕರಾದರು

ಟಿಪ್ಪಣಿಗಳು

(ಇಲ್ಲಿನ ಸಂಖ್ಯೆಗಳು ಪುಟಗಳನ್ನು ಸೂಚಿಸುತ್ತವೆ. ಇಲ್ಲಿ ಕೆಲವು ಕ್ಲಿಷ್ಟಪದಗಳಿಗೆ ಅರ್ಥವನ್ನು ಕೊಟ್ಟಿರುವುದಲ್ಲದೆ, ಕ್ಲಿಷ್ಟವಾಗಬಹುದಾದ ಪದಪುಂಜಗಳಿಗೂ ವಾಕ್ಯಗಳಿಗೂ ಅರ್ಥವನ್ನು ಕೊಟ್ಟಿದೆ. ಅಂಥ ಕಡೆ, ಆ ಪದಪುಂಜದ ಅಥವಾ ವಾಕ್ಯದ ಮೊದಲನೆಯ ಪದವನ್ನು—(ಏಮಿರಾ)—ಎಂಬಂತೆ ಆವರಣಗಳಲ್ಲಿ ಸೂಚಿಸದೆ.)

೧. ಕಳಿದು—ಕಾಲವಾಗಿ. ನ ಪಶ್ಯತಿ—ಕಾಣುವುದಿಲ್ಲ.

೪. (ಏಮಿರಾ)—ಏನೋ ನಿನ್ನ ಹೆಸರು ? ಪಿಕಾಸಿ ಹಿಡಿಯೋಕೆ ಬರೋದಿಲ್ಲ, ಅದ್ಯಾಕೆ ಬಂದೆ ಕೆಲಸಕ್ಕೆ? (ಇಕ್ಕಡ)—ಇಲ್ಲಿ ನೋಡು, ಮುಂಡೇದೆ! ಪಿಕಾಸೀನ ಹೀಗೆ ಹಿಡ್ಕೊ, ಹೀಗೆ ಮೇಲೆತ್ತಿ ಬಿಡು, ಸರಿಯಾಗಿ ನೋಡಿ. (ಮಾ ಅಯ್ಯಾ)—ನಮ್ಮ ಅಯ್ಯಾ ಬಂಗಾರದಂಥ ಮನುಷ್ಯ, ತುಂಬ ಒಳ್ಳೇವರು, ದೊಡ್ಡ ಕುಲದಲ್ಲಿ ಹುಟ್ಟಿದವರು, ಗರ್ವವೇ ಇಲ್ಲ ನಮ್ಮ ಅಯ್ಯನಿಗೆ.

೫. (ಪೋ)—ಹೋಗು, ನಿಮ್ಮ ಮಾವನವರಿಗೆ ದಿನಗಳು ಚೆನ್ನಾಗಿ ಮಾಡು. ಹೋಗು, ಪಿಲ್ಲನ ಕೈಯಲ್ಲಿ ಕೊಟ್ಟೀಯೆ! ಭದ್ರ!

೬. (ಕರೂಸೋ)—ಇಟಲಿ ದೇಶದ ಪ್ರಸಿದ್ಧ ಹಾಡುಗಾರ.

೭. (ಕನ್ನು)—ಕಣ್ಣು ಇಲ್ಲವೇ ನಿನಗೆ? ರೋಡ್ನಲ್ಲಿ ಏನು ಬರ್ತದೆ ಅಂತ ನೋಡೋದಿಲ್ವೆ? ನಿನ್ನ ಹಂದಿಯಿಂದ ನನ್ನ ಪ್ರಾಣವೇ ಹೋಗುತಾ ಇತ್ತೇ ಈಗ! (ಪಾಡಯ್ಯ)—ಹಾಳಾಗ್ಹೋಯ್ತೇ ನನ್ನ ಸೈಕಲ್ಲು! (Thanks)—ಉಪಕಾರವಾಯ್ತು. ಒಂದು ಅನಾಹುತ ತಪ್ಪಿತು. ಆದ್ರೆ . . . ಪಾಪ, ಕೋಳಿಮರಿಗಳು !

೮. (ಅಯ್ಯೋ)—ಅಯ್ಯೋ! ನನ್ನ್ ಕೋಳಿ ಹೋಯ್ತೇ! ನಾನೇನ್ ಮಾಡ್ಲೀ !! (ಅಯ್ಯೋ ದೆಯ್ಯಮಾ)—ಅಯ್ಯೋ ದೆಯ್ಯವೇ ! ಕೋಳಿ ಹೊಯ್ತಂತೆ, ಕೋಳಿ! ನೋಡು—ಮೋಟರ್ ಸೈಕಲ್ಲ್ ಆಗಿರೋ ಗತಿ! ಕೊಂಚದಲ್ಲಿ ಅವರ ಪ್ರಾಣವೇ ಹೋಗ್ತಾ ಇತ್ತೇ! ನಿನ್ನ ತೆಗೆದ್ಕೊಂಡು ಹೋಗಿ ಜೈಲ್ನಲ್ಲಿ ಇಡ್ಬೇಕು! (ಎಂತನೇ)—ಎಷ್ಟೇ ನಿನ್ ಕೋಳಿ? ಕೋಳಿ ಮರಿ? . . . ತೆಕೊ ಈ ರೂಪಾಯಿ. ಒಳ್ಳೇ ಕೋಳೀನ ಕೊಂಡ್ಕೊ, ಹೋಗು. (ತಂಡ್ರೀ)—ತಂದೇ, ಕೊಂಡ್ಕೋತೇನೆ.

೯. (Yes)—ಹೌದು, ಅದೂ ಒಂದು ಯೋಚನೇನೆ.

೧೦. (ನೀಕೇಮಿ)—ನಿಂಗೇನು? ನನ್ ಕೋಳಿ ದುಡ್ಡು ನಾನೇನಾದ್ರೂ ಮಾಡ್ಕೊಳ್ತೇನೆ ಏಳು! (I think) ಅವಳು ಹೇಳಿದ್ದು ಸರೀ ಅಂತ ಕಾಣುತ್ತೆ. (ಆಕಲಮ್ಮ . . .)—

ವೀಳೇದೆಲೆ ಮಾರೋ ಲಚ್ಚಿಮಿ, ಹೊಗೆಸೊಪ್ಪು ಮಾರೋ ಲಚ್ಚಿಮಿ|
ಎಲೆಯ ಮಾರಿದ ರೂಪಾಯೆಲ್ಲ ಏನು ಮಾಡ್ದ್ಯೇ ಲಚ್ಚಿಮಿ|
ಭಾಗ್ಯ ಲಚ್ಚಿಮಿ—ಪ್ರಾಣ ಲಚ್ಚಿಮಿ ||ಪ||
ಕೋಳಿ ತರುತೇನೆಂದೆಯೆ—ಕೋಳಿಮರಿಯ ತರುತೇನೆಂದೆಯೆ|
ಕೋಳಿಗ್ ಕೊಟ್ಟ ಒಂದು ರೂಪಾಯ್ ಕಳ್ಳು ಕುಡಿದು ಬಂದೆಯೇ||

೧೧. (Oh)—ಓ, ಸೊಗಸಾಯ್ತು. ಒಂದು ಕೋಟಿ ವಂದನೆ. ಈ ಅದ್ಭುತವಾದ ಆತಿಥ್ಯಕ್ಕೆ ತುಂಬ ವಂದನೆ—ಪಾಪ, ಕೋಳಿಮರಿಗಳೇ!

೧೨. (ನಾ ಸಾಮಿ . . .)—

ನನ್ನ ಸ್ವಾಮಿ ನನ ಮೇಲೆ ನಿನಗೆ ದಯೆಯಿಲ್ಲವೆ?
ನನ್ನ ಸ್ವಾಮಿ ನನ ಮೇಲೆ ನಿನಗೆ ದಯೆಯಿಲ್ಲವು ||ಪ||
ಭದ್ರಾಚಲಂ ಊರಿನಲ್ಲಿ ಐಶ್ವರ್ಯ ಇದ್ದಾವೆ|
ಒಳ್ಳೇ ಕಿವಿಯೋಲೆಯಿದ್ದಾವೆ||
ಆ ಕಿವಿಯೋಲೆ ತಂದು ನನ್ನ ಕೈಗೆ ಕೊಟ್ಟು||
ನೀನು ಜೈಲಿಗೆ ಹೋಗಬಾರ್ದೇ||
ನನ್ನ ಸ್ವಾಮಿ ನನ ಮೇಲೆ ನಿನಗೆ ದಯೆಯಿಲ್ಲವೇ |
ನನ್ನ ಸ್ವಾಮಿ ನನ ಮೇಲೆ ನಿನಗೆ ದಯೆಯಿಲ್ಲವೂ||

೧೩. (Please)—ದಯಮಾಡಿ, ತೊಂದರೆ ಬೇಡಿ. ನಿಮ್ಮದು ನಡೀಲಿ. (I suppose)—ಈಗ ಸೇದಬಹುದೂಂತ ಕಾಣುತ್ತೆ. ಆಕ್ಷೇಪಣೆ ಏನೂ ಇಲ್ಲವಲ್ಲ? ಫನಾ—ನಾಶ, ಧ್ವಂಸ.

೧೪. System—ವ್ಯಾಯಾಮ ಪದ್ಧತಿ. Strong Man—ಬಲ ಭೀಮ. Parallel-barrist—'ಪ್ಯಾರಲಲ್ ಬಾರ್ಸ್' ಎಂಬ ಉಪಕರಣದ ಸಹಾಯದಿಂದ ವ್ಯಾಯಾಮ ಮಾಡುವವನು. Unique—ಅಸಮಾನ. Personal Consultation—ಎದುರಾಗಿ ಹೋಗಿ ಸಲಹೆ ಕೇಳುವುದು.

Continent—ಫ್ರಾನ್ಸ್, ಜರ್ಮನಿ ಮುಂತಾದ ಕಡೆ. (ವಾತ್)—ನಿಮ್ಮ ತೊಂದರೆ ಏನು? (Nothing)—ವಾಸ್ತವವಾಗಿ ಏನೂ ಇಲ್ಲ. ಕೆಲವು ಕಸರತ್ತು ಕಲೀಬೇಕೂಂತ ಇಚ್ಛೆ. ವಿಶೇಷವಾಗಿ, ಕಾಲು ಬಲಪಡಿಸಿಕೊಳ್ಳ ಬೇಕೆಂದು ಇಷ್ಟ. (ಲೆತ್)—ಎಲ್ಲಿ ನೋಡೋಣ, ಮೈ ಬಿಚ್ಚು. (ಊಂ.)—ತುಂಬ ಚೆನ್ನಾಗಿದೆ, ತುಂಬ ಚೆನ್ನಾಗಿದೆ. ಇದು ಹೇಗೆ ಸಾಧಿಸುತ್ತೀ?

೧೫. (ವಾತ್)—ಏನು! ಮಸ್‌ಲ್ ಕಂಟ್ರೋಲ್! ಇದು ಹೇಗೆ ಬಂತು ನಿನಗೆ? (By)—ನೀವು ಮಾಡುವುದನ್ನು ನೋಡಿ. (ವೆಲ್)—ಒಳ್ಳೇದು. ಅದು ಹಾಗಲ್ಲ. ಇದೋ! ನೋಡು. tense—ಬಿಗಿಮಾಡು. ಫೀಲ್ ಇತ್—ಮುಟ್ಟಿನೋಡು (Believe)—ಹೇಳಿದರೆ ನಂಬಬೇಕು: ಆ ಬೈಸೆಪ್ಸ್ ಗಿಂತ ಇನ್ನೂ ಸುಂದರವಾದದ್ದು, ಇನ್ನೂ ಚೆಲುವಾದದ್ದು, ಇನ್ನೂ ಭೀಕರ ವಾದದ್ದು ಬೇರೊಂದಿಲ್ಲ. ಅದು ದಂತದಿಂದ ಕಡೆದಹಾಗೆ, ಬಿಲಿಯರ್ಡ್ಸ್ ಆಟದ ಚೆಂಡಿನ ಹಾಗೆ, ಇತ್ತು. ಖಂಡಿತ ಅದಕ್ಕಿಂತಲೂ ದೊಡ್ಡದು...ಸುಮಾರು ಹದಿನೇಳು ಅಂಗುಲವೋ, ಅದಕ್ಕಿಂತ ಹೆಚ್ಚೋ...ಮತ್ತೆ, ಏನು ಅಮೋಘ ವಾದ ಸಂವೃದ್ಧಿ! ನಿರ್ದುಷ್ಟವಾದ ಬೆಳವಣಿಗೆ! ಆ ಮೇಲೆ ಆ ಬೈಸೆಪ್ಸನ್ನ ಕುಣಿಸಿದ ನೋಡು! ಆಶ್ಚರ್ಯ! ಅದ್ಭುತ! (ನಗರ)—ಪಟ್ಟಣದ ದಿಡ್ಡಿಬಾಗಿಲಿಗೆ ಹಾಕುವ ಅಡ್ಡಗಡಾರಿಯಂತೆ ಉದ್ದವಾದ ತೋಳು ಉಳ್ಳವನು. (Po ı)—ಪಾಪ, ಕಾಳಿದಾಸ, ಸ್ಯಾಂಡೋ ತೋಳನ್ನು ಅವನು ನೋಡಬೇಕಾಗಿತ್ತು! (This)—ಈ ಸಿಗರೆಟ್ ಎರಡು ನಿಮಿಷ ಕೂಡ ಬರೊಲ್ಲ. (Make)—ಎರಡು ತೆಗೊಂಡ್ಬಾ, (Bad)—ನನ್ನ ಗಂಟಲಿಗಾಗೊಲ್ಲ.

೧೬. (We)—ನಾವೆಲ್ಲ ಒಂದು ಮೋಹದ ಮಂತ್ರಕ್ಕೆ ವಶರಾಗಿದ್ದೆವು. (What)—ಸ್ಯಾಂಡೋ ಯಾವ ದೇಶದವನು ಅನಿಸುತ್ತೆ, ನಿಮಗೆ? (Go)—ಹೇಳಿ, ಹೇಳಿ. ಎಲ್ಲಾ ದೇಶಾನೂ ಮುಗಿಸಿಬಿಡಿ. Conscription—ಬಲಾತ್ಕಾರದಿಂದ ಸೈನ್ಯಕ್ಕೆ ಸೇರಿಸಿಕೊಳ್ಳುವುದು. training—ತಯಾರಿ. famous—ಪ್ರಸಿದ್ಧ. settleಆಗು—ನೆಲಸು; surpass—ಮೀರಿಸು. superior—ಉತ್ತಮ. physique—ಮೈಕಟ್ಟು.

೧೭. Showmanship—ಪ್ರದರ್ಶನ ಮಾಡಿ ಮೆಚ್ಚಿಸುವ ಜಾಣ್ಮೆ. Alhambra—ಲಂಡನ್ನಿನ ದೊಡ್ಡ ಅಖಾಡ; ಇಲ್ಲೇ ಮುಷ್ಟಿಯುದ್ಧ, ಮಲ್ಲ

ಯುದ್ಧ ನಡೆಯುವುದು. pose—ಪ್ರತಿಮೆಯಂತೆ ನಿಲ್ಲು. (Every)—ನಿಂತ ಪ್ರತಿಯೊಂದು ನಿಲುವೂ, ಒಂದೊಂದು ನಿರ್ದುಷ್ಟವಾದ ಅಮೃತಶಿಲೆಯ ಪ್ರತಿಮೆ! (Muscle)—ಸಂಗೀತಕ್ಕೆ ಹೊಂದಿಸಿಕೊಂಡು ಮೈಯ ಮಾಂಸ ಖಂಡಗಳನ್ನು ಇಚ್ಛೆಬಂದಂತೆ ಆಡಿಸುವುದು. ಅದ್ಭುತ! ಅದ್ಭುತ ಪ್ರದರ್ಶನ! (Certainly)—ಖಂಡಿತ ಇಲ್ಲ, ಮಗು. ಸ್ವಾರಸ್ಯವಾದ ಸಂಗತಿ. Box—ಒಂದು ಸಂಸಾರದವರು ಒಂದೇ ಕಡೆ ಕುಳಿತುಕೊಳ್ಳುವ ಹಾಗೆ ಪ್ರತ್ಯೇಕವಾದ ಪೀಠಗಳನ್ನೊಳಗೊಂಡ ಪೆಟ್ಟಿಗೆಯಂಥ ಸ್ಥಳ. Dude—ಸೊಗಸುಗಾರ, ಶಿಸ್ತುಗಾರ ಪುಟ್ಟಸಾಮಿ. suit—ಪೋಷಾಕು. Physique—ಮೈಕಟ್ಟು.

೧೮. (Black)—ಕಪ್ಪು ಬಟ್ಟೆಯಲ್ಲಿ, ಮನುಷ್ಯ ಅಗಲವಾಗಿದ್ದರೂ, ಒಳ್ಳೇ ಅಡಕವಾಗಿ ಕಾಣುತಾನೆ. Grey—ಬೂದು ಬಣ್ಣದ ಬಟ್ಟೆ. Sandow—ಸ್ಯಾಂಡೋ . . . ಎಷ್ಟೋ ಸಲ ನೋಡಿದ್ದೇನೆ . . . ಸಿಗಾರ್ ಸೇದುತಾ . . . ಬಹು ಮಿತವಾಗಿ ಸೇದೋವ್ನು. one—ಒಂದು ಚಿಕ್ಕ ಹುಡುಗಿ . . . ತುಂಬ ಮುದ್ದಾಗಿ . . . ಅವಳ ತಾಯಿಯ ಹಾಗೆ, (Body)—ಮೈ ಸುಮಾರಾಗಿತ್ತು . . . ಯಥಾಪ್ರಕಾರ ಇಂಡಿಯಾದ ಪೈಲ್ವಾನರ ಹಾಗೆ. . .ಸುಣ್ಣಗೆ—ಮಾಂಸಖಂಡ ಬಿಡಿಸಿಬಿಡಿಸಿ ಕಾಣುತಿರಲಿಲ್ಲ. clever scoundrel—ಜಾಣ ಕೊರಮ. (County)—ಆ ಪ್ರಾಂತದ 'ಛಾಂಪಿಯನ್' ಯಾರೆಂದು ನಿರ್ಣಯಿಸುವ ಸ್ಪರ್ಧೆಗಳು. asset—ಆಸ್ತಿ. (Feats)—ಸಾಹಸ ಕೃತ್ಯಗಳ ಜೊತೆಗೆ ಬಲ ಸೇರಿದ್ದರೂ, ತುಂಬ ಚಮತ್ಕಾರದಿಂದ, ಚೆನ್ನಾಗಿ ಪ್ರದರ್ಶಿಸುತ್ತಿದ್ದ.

೧೯. Vs—Versus, ಅವನಿಗೆ ಎದುರಾಗಿ, ಎಂದು ಅರ್ಥ. Swiss mountaineer—ಸ್ವಿಟ್ಸರ್ಲೆಂಡಿನ ಪರ್ವತಗಳನ್ನು ಹತ್ತುವವನು. thighs—ತೊಡೆಗಳು Stocky build—ಗುಜ್ಜಾದ ಮೈಕಟ್ಟು. (Short)—ಕುಳ್ಳಾದರೂ ತುಂಬ ಶಕ್ತಿವಂತ. mat—ಗಟ್ಟಿಯಾದ ಸುಪ್ಪತ್ತಿಕೆ. Wrestling—ಕುಸ್ತಿ. handicap—ಅನನುಕೂಲ. Auditorium—ಪ್ರೇಕ್ಷಕರು ಕುಳಿತುಕೊಳ್ಳುವ ಸ್ಥಳ. Man-Mountain—ಪರ್ವತಾಕಾರದವನು.

೨೦. Goliath—ಬೃಹದಾಕಾರಿ. (Let)—ಬಿಡಿ, ಅವರು ಕುಸ್ತಿ ಮಾಡಲಿ. (Concussion)-ಮೆದುಳಿಗೆ ಏಟು ತಗುಲಿ 'ಜಖಂ' ಆಗುವುದು.

(Gentlemen) ಸಭ್ಯರೆ, ಬಕ್ಷನ್ನ ತಾನು ಸೋಲಿಸುತ್ತೇನೆಂತ ಗಾಚ್ ಹೇಳಿ, ಒಂದು ನೂರು ಪೌಂಡು ಪಂದ್ಯ ಕಟ್ಟಿದ್ದಾನೆ. ಅಷ್ಟೇ ಮೊತ್ತವನ್ನ ಬಕ್ಷ್ ಕೂಡ ಕಟ್ಟಬೇಕಾದ್ದು ನ್ಯಾಯ. tourists—ಪ್ರವಾಸಿಗರು. spot—ಇದ್ದ ಕಡೆ. (It)—ಅನ್ಯಾಯ! ಅದು ಅಸಂಗತ! (Come)—ಬಾ ಬಕ್ಷ್, ಬಾ. ಈಗ ನಿನ್ನ ತಾಕತ್ ತೋರಿಸು! five and six—ಐದು ಷಿಲ್ಲಿಂಗ್, ಆರು ಪೆನ್ನಿ. (Can)—ನಿಂತಲ್ಲೇ ಒಂದು ನೂರು ಪೌಂಡು ಶೇಖರಿಸುವುದಕ್ಕೆ ನನಗೆ ಸಾಧ್ಯವಿಲ್ಲವೆ? Crown—ಐದು ಷಿಲ್ಲಿಂಗ್.

೨೧. (Hello)—ಎಲ್ಲರನ್ನೂ ಕೂಗುತ್ತಿದ್ದೇನೆ. (My)—ನನ್ನ ಭಾರತದ ಸೋದರರೆ, ಈ ಪಂದ್ಯವನ್ನು ಕಟ್ಟುವುದಕ್ಕಾಗಿ ಈ ತೆರೆದ ಹ್ಯಾಟ್ ಹಿಡಿದು ನಿಮ್ಮೆಲ್ಲರ ಹತ್ತಿರಲೂ ಬರುತ್ತಿದ್ದೇನೆ. (Come)—ಇಲ್ಲಿ ಬಾ, ಮಗು. ಇದನ್ನು ಅವಮಾನ ಅಂದುಕೋಬೇಡ. (It is)—ಇದು, ಗಾಚ್ ಮತ್ತು ಅವನ ಪಕ್ಷದವರದು, ಅನ್ಯಾಯ. ಭಕ್ಷ್‌ಗೆ ಒಳ್ಳೇದಾಗಲಿ. bow—ನಡುಬಗ್ಗಿ ನಮಿಸು. (front)—ಮುಂದುಗಡೆ ಸಾಲಿನಲ್ಲಿ ಕುಳಿತುಕೊಳ್ಳುವ ಶ್ರೀಮಂತರ ವರ್ಗ. (How)—ಒಟ್ಟು ಎಷ್ಟಾಯಿತು? tenner—ಹತ್ತು ಪೌಂಡು. (Let)—ಪಂದ್ಯ ನೋಡೋಣ. jujutsu—ಜಪಾನ್ ದೇಶದ ಒಂದು ವಿಧವಾದ ಕಸರತ್ತು; ಉಳಿದೆರಡೂ ಕುಸ್ತಿಯ ವಿಧಗಳು. brace-up—ಮೈಯಲ್ಲಿ ಲವಲವಿಕೆ ತುಂಬಿಕೊಳ್ಳುವುದು. Catch-as-catch-can—ಹೇಗೆ ಪಟ್ಟು ಸಿಕ್ಕಿದರೆ ಹಾಗೇ ಪಟ್ಟು ಹಿಡಿಯುವುದು.

೨೨. slip—ಜಾರು, ನುಣಚಿಕೊ. (around)—ಸೊಂಟದ ಸುತ್ತ. toe-hold, ಕಾಲಿನ ಉಂಗುಷ್ಟವನ್ನು ಬಿಗಿಹಿಡಿಯುವುದು. patent-ಅವನು ಅದರಲ್ಲಿ ವಿಶೇಷ ಪ್ರವೀಣ. (Very)—ತುಂಬ ಅಪಾಯ, ನೋವೋ ಅಪರಿಮಿತ. ಆ ಪಟ್ಟಿಗೆ ಸಿಕ್ಕಿ, ಬಕ್ಷ್ ನೋವಿನಿಂದ ಒದ್ದಾಡಿಹೋದ. ಆ 'ಟೋಹೋಲ್ಡ್' ಪಟ್ಟು ಎದುರಾಳಿಗೆ ಒಂದು ಇಷ್ಟು ಚಲನೆಗೂ ಅವಕಾಶ ಕೊಡೊಲ್ಲ. holdಗೆ counter—ಪಟ್ಟಿಗೆ ಪ್ರತಿಪಟ್ಟು, suffering—ವೇದನೆ. succumb—ಸೋಲು. lock ಮಾಡು—ಪಟ್ಟುಬಿಗಿ. Control—ಸ್ವಾಧೀನ. Concentrate—ಒಂದು ಕಡೆ ಶೇಖರಿಸು. (even)—ಕಾಡುಕತ್ತೆ ಒದ್ದಿದ್ದರೂ ಅದಕ್ಕಿಂತ ಕೇಡಾಗಿ ಒದೆಯೋದು ಸಾಧ್ಯವಿರಲಿಲ್ಲ. Counter—ಪ್ರತಿ

ಯಾದದ್ದು. Knee-kick—ಮೊಣಕಾಲಿನ ಒದೆತ. Chin—ಗಲ್ಲ. Vigorous—ಜೋರಾದ. hook—ಮುಷ್ಟಿಯುದ್ಧದಲ್ಲಿ ಒಂದು ತೋಳಿನಿಂದ ಗಲ್ಲಕ್ಕೆ ಗುದ್ದು. Dizzy—ತಲೆತಿರುಗು.

೨೩. (ಶಹಬಾಸ್)—ಭಲಾರೆ ಮಗನೆ. (interesting)—ಸ್ವಾರಸ್ಯವಾದ ವಿಷಯ. (Let us)—ಇನ್ನೊಂದು ದಿನಕ್ಕೆ ಇಟ್ಟುಕೊಳ್ಳೋಣ. strain—ಮುಕ್ಕು, ತಿಣಿಕು. train—ಶಿಕ್ಷಣ ಕೊಡು, ತಿದ್ದು.

೨೪. (try)—'ಟೋಹೋಲ್ಡ್'ನ ನಂಗ್ ಹಾಕಿನೋಡು! ಗಾಚ್, ನಂಗ್ ಹಾಕಿನೋಡು! (That)—ಅಲ್ಲಿಗೆ ಅವನಿಗೆ ಸಮಾಪ್ತಿಯಾಯಿತು.

೨೫. (What)—ಏನು ಸ್ಫೂರ್ತಿದಾಯಕವಾದ ಮಾತುಕಥೆ. ಇದರಿಂದ ನಮಗೆ ಉಪಕಾರವಾಯಿತು: (See)—ಈ ಸಿಗರೆಟ್ ಮುಗಿಸೋವರೆಗೂ ಇರು. (you)—ನಿನಗೆ ಗೊತ್ತಿರಬೇಕು . . . ಬಹುಶಃ ಗೊತ್ತಿಲ್ಲವೋ ಏನೋ . . . (Always)—ಯಾವಾಗ್ಲೂ ಬಿಳೀ ಬಟ್ಟೆ ಹಾಕ್ಕೋತಾರೆ. (Rain)—ಮಳೆ ಬೀಳಲಿ, ಬಿಸಿಲು ಹೊಡೀಲಿ . . . . (Just)—ಅದೇನೆ! 'ಇವರು ಪರಮ ಶಿವಯ್ಯರು, ಕೈಲಾಸಂ, ಅವರ ಮಗ' ಅಂತ ಯಾಕೆ ಹೇಳೊಲ್ಲ? (but)—ಸಾಮಾನ್ಯವಾಗಿ ಅವರು, ವಾಕಿಂಗಿಗೆ ಹೊರತು, ಕೆಳಗೆ ಇಳಿದುಬರೊಲ್ಲ. (He)—ಮಲಗಿರಬೇಕು. ಎಂಟೂವರೆ ಠಾಂ ಅಂತೋ, ಮಲಗಿಬಿಡತಾರೆ, ಬೆಳಗ್ಗೆ ಐದಕ್ಕೆ ಏಳತಾರೆ. ತುಂಬ ಕ್ರಮಬದ್ಧ. ನಾನೋ ಅದಕ್ಕೆ ವ್ಯತಿರಿಕ್ತ. ನನ್ನ ಮನಸ್ಸಿನ ಪ್ರವೃತ್ತಿಯೂ ಹಾಗೇ, ಬೇರೇನೇ.

೨೬. (Smell)—ಇದರ ವಾಸನೆ ನೋಡು. ಆಶ್ಚರ್ಯ, ಅಲ್ಲ! ಇದರ ಪಕ್ಕದಲ್ಲಿ ಲಿಲ್ಲಿಹೂ ಪೆಚ್ಚುಪೆಚ್ಚು! (Heart)—ಹೃದಯದ ಆಕಾರದ ಎಲೆ.

೨೭. noiselessly— ಸದ್ದಿಲ್ಲದೆ. plenty— ಸಮೃದ್ಧಿಯಾಗಿ. usually—ಸಾಮಾನ್ಯವಾಗಿ. rare—'ಅಪರೂಪ', ವಿರಳ. Radio-active—ಅದೃಶ್ಯವಾದ ವಿದ್ಯುತ್‌ಕಿರಣಗಳನ್ನು ಕೆದರುವ ಸಾಮರ್ಥ್ಯವುಳ್ಳದ್ದು. (These)—ಈ ಮರಗಳು ಹಿಮಾಲಯದಲ್ಲಿ ಭಾರಿ ಎತ್ತರಕ್ಕೆ ಬೆಳೀತವೆ. ಸಿಡಿಲು ಇದಕ್ಕೆ ಎಂದೂ ಹೊಡೆಯೋಲ್ಲ. ಇದರ ಪಕ್ದಲ್ಲಿರೋ ಮೋಟುಮರಕ್ಕೆ ಹೊಡೆದಿರುತ್ತೆ, ಆದ್ರೆ ಈ ಮರಾನ ಮುಟ್ಟೋದಿಲ್ಲ. ಸರಿಯಾಗಿ ರಚನೆ ಆಗಿರೋ ಏಕಮುಖಿ ರುದ್ರಾಕ್ಷೀನ ಎರಡು ಬೆಳ್ಳೀ ನಾಣ್ಯದ ನಡುವೆ ಸಮ

ತೂಕದಲ್ಲಿ ನಿಲ್ಲಿಸಿ ಹಿಡಿದರೆ, ಅದು 'ಘಿರ್‍ರ್ರಂ'ತ ವೇಗವಾಗಿ ತಿರುಗುತ್ತೆ. ಅದು, ಈ 'ಬ್ಯಾಕ್ಟೀರಿಯಾ' ಅಂತ ವಿಷಾಣುಕ್ರಿಮಿ ಇದೆಯಲ್ಲ—ಅದು ಬರದ ಹಾಗೆ ತಡೆಯುತ್ತೆ, ಅಥವಾ ಬಂದಿದ್ರೆ ಅದನ್ನ ನಿರ್ಮೂಲ ಮಾಡುತ್ತೆ.

೨೮. (How)—ಎಷ್ಟು ಸೀಯಾಗಿದೆ! (He)—ಈ ಮರದಲ್ಲಿ ಎಷ್ಟು ಹಣ್ಣು, ಎಷ್ಟು ಮೊಗ್ಗು ಇದೆ ಅನ್ನೋದು ಅವರಿಗೆ ನಿಖರವಾಗಿ ಗೊತ್ತು. ಇವತ್ತು ಮಧ್ಯಾಹ್ನ ಎಷ್ಟು ನಾಗಲಿಂಗ ಹೂ ಅರಳಿತು, ಅದೂ ಗೊತ್ತು. ಒಂದು ಮಾತಿನಲ್ಲಿ ಹೇಳೋದಾದರೆ, ಅವರ ತೋಟದಲ್ಲಿರೋ ಗಿಡ, ಬಳ್ಳಿ, ಹೂ, ಹಣ್ಣು, ಅಂದ್ರೆ ಅವರಿಗೆ ಪ್ರಾಣ. (Eat)– ನನ್ನ ಜೊತೇಲಿ ಊಟ ಮಾಡು, ನನ್ನ ಸಂಗಡ ಇರು. (Walk)—ಮೆಲ್ಲಗೆ ನಡೆ.

೨೯. (artificial)—ಕೃತಕವಾದ ಗೆರೆಗಳು ತಯಾರಾಗಿರ್ತವೆ . . . ಅದರಲ್ಲಿ ನಿಜವಾದ್ದು ಯಾವುದು? ಸುಳ್ಳಾದ್ದು ಯಾವುದು ? ವಂದೇಂ-ಬಂದೇ !

೩೦. (ತೆರಿಯವೋ)--ಗೊತ್ತಿಲ್ಲಾ! ಕೆ. ವಿ. ಐಯರ್. ಪ್ರಸಿದ್ಧ ವ್ಯಾಯಾಮಪಟು. ಎರಡುಸಲ ಅವರ 'ಷೋ'ನೂ ನೋಡಿದ್ದೇನೆ. (ಮೆದುವ್ವ) —ಮೆಲ್ಲಗೆ ಮಾತಾಡೊ. ಅಪ್ಪಾ, ಇದೇನು ಜಗಳಾಂತ ಕೆಳಗೆ ಇಳಿದ್ರು ಬಂದಾರೋ! (ಅಪ್ಪಾಕ್ಕ್)—ಅಪ್ಪಾಗೆ ಎಲ್ಲಿ ಕೇಳ್ಸುತ್ತೆ? ಹತ್ತಿರ ಇದ್ದು ಕಿರಿಚಿದರೂ ಕೇಳಿಬರೋದಿಲ್ಲ. (ಅಪ್ಪಡಿ)—ಹಾಗೆ ಅಲ್ಲ, ಕೃಷ್ಣ ! ಅಪ್ಪಾ ಅವರ ಪಕ್ಕದ ರೂಂ ಇಲ್ಲವೇ, ಆ ಸ್ನಾನದ ಮನೆಗೆ ಸೇರಿದ ಹಾಗೆ, ಆ ರೂಮಿನಲ್ಲಿ ಒಂದು ಸಣ್ಣ ಧ್ವನಿ ಕೂಡ ಧ್ವನಿವರ್ಧಕದಂತೆ ಅನೇಕ ಪಟ್ಟು ಹೆಚ್ಚುತ್ತನೆ! ಅದಕ್ಕೆ ತಾನೆ, ನಿದಾನವಾಗಿ ಹೇಳೋ. ಎಲ್ಲಿ ಎರಡು ಎಲೆ ಹಾಕು. ಅಯ್ಯರೂ ಇಲ್ಲಿಯೇ ಊಟಮಾಡ್ತಾರೋ ! (ಹರಿಃ)—ಹರಿಃ, ಕೂತುಕೊಳ್ಳಿ. (They)—ಅವೆಲ್ಲಾ ಹಣವಂತರ ದರ್ಪಕ್ಕೆ ಸರಿಹೋಗುತ್ತೆ. prejudice— ಪಕ್ಷಪಾತ.

೩೧. (ಇವರ್)—ಇವರ ವ್ಯಾಯಾಮಶಾಲೆ ನೀನು ನೋಡಿದ್ದೀಯಾ, ಟಿಪ್ಪೂಸುಲ್ತಾನ್ ಅರಮನೇಲಿ?(ಪಾರ್ತಿರ್ಕೇಂ)—ಓ, ನೋಡಿದ್ದೇನೆ. ತಾಳಿ. ಇವರ, ಸಿಕಿ, ಕಣ್ಣನ್ ಎಲ್ಲರನ್ನೂ ಒಂದು ಚಾಲೆಂಜ್. ಭಾರ ಎತ್ತೋದು, ಮುಷ್ಟಿಯುದ್ಧ, ಓಟ, ಈಜಾಟ, ಎಲ್ಲದ್ರಲ್ಲೂ. . .ಸೈಕಲ್ ರೇಸ್ ಕೂಡ...

ಬರಲಿ, ಕೆಂಪಾಂಬುಧಿ ಮೂರು ಸುತ್ತು. . .ತಾಕಥ್ ಇದ್ರೆ! (ಡೇ)—ಕೃಷ್ಣಾ! ನನ್ನ ಹಾಸಿಗೆ ಹತ್ರ ಇಟ್ಟಿದ್ನೇ — Shaw ನಾಟಕಗಳು . . . ಎಲ್ಲೋ ಆ ಪುಸ್ತಕ ಕಾಣೆನೇ? (ಅದ್)—ಅದು ನನ್ನ ಹತ್ರ ಇದೆ. Man and Super-man ಓದ್ತಿದೇನೆ. athletics—ವ್ಯಾಯಾಮ ಕ್ರೀಡೆ. 'Lady Windermere's Fan' ಎಂಬುದು Oscar Wilde ಎಂಬುವನು ಇಂಗ್ಲಿಷ್‌ನಲ್ಲಿ ಬರೆದ ಒಂದು ನಾಟಕ. Goodness—ದೇವರೇ ಗತಿ! (Venkatesh)—ವೆಂಕಟೇಶ್, ನಾನು ಹೇಳೋದು ಕೇಳು. ಯಾವುದಾದರೂ ಒಳ್ಳೇ ಸಾಹಿತ್ಯಾನ ಒಂದು ಎರಡು ಗಂಟೇನಾದರೂ ಓದದೆ, ಅವತ್ತು ನಿದ್ದೆ ಮಾಡೊಲ್ಲ ಅಂತ ಒಂದು ಪ್ರತಿಜ್ಞೆ ಮಾಡಿಕೊ . . .

೩೨. Ibsen . . .)—ಇವರೆಲ್ಲ ಲೋಕಪ್ರಸಿದ್ಧರಾದ ಸಾಹಿತಿಗಳು. (You)—ನಿನ್ನ ಹಣೆ ಹಾಲ್ ಕೆಯ್ನ್* ಹಣೆ ಇದ್ದಹಾಗೆ ಇದೆ. ಓದು, ಮಗು. ಓದಲಿಲ್ಲವೋ, ವಯಸ್ಸಾದ ಮೇಲೆ ಕೈಕೈ ಹಿಸುಕಿಕೊಳ್ತಿ. ಜೀವನ ವಿಷಾದವಾಗುತ್ತೆ, ಅಸಹ್ಯವಾಗುತ್ತೆ. ವ್ಯಾಯಾಮ ಮಾಡೋರು ಅಂದ್ರೆ ಮೊದ್ಲೇ ಎಲ್ಲರೂ 'ಮೈ ನೋಡೋಕ್ ಜೆಟ್ಟಿ, ತಲೆ ಖಾಲಿ ಬುಟ್ಟಿ' ಅಂತಿದಾರೆ. ಇದ್ನ ನಿಮ್ಮಂಥವ್ರು 'ಅಲ್ಲ' ಅಂತ ತೋರಿಸ್ಬೇಕು. ಮಾಂಸ ಮೆದುಳು ಎರಡೂ ಒಟ್ಟಿಗಿರೋದೂ ಸಾಧ್ಯ ಅನ್ನೋದನ್ನ ನಿನ್ನಂಥವ್ರು ಸಾಧಿಸಿ ತೋರಿಸಬೇಕು. (Last year)—ಹೋದ ವರ್ಷ, ಈ ಕೃಷ್ಣನಿಗೆ ಒಂದು ಇಂಗ್ಲಿಷ್ ಪತ್ರಿಕೆ ಓದೋಕ್‌ಬರ್ತಿರ್ಲಿಲ್ಲ. ಕಲ್ತ್ಕೊಂಡ್ ಬಿಟ್ಟ. ಈಗ ಓದ್ತಾನೆ, ದೊಡ್ಡ ವಿಷಯಗಳ ಸ್ವಾರಸ್ಯ ಗ್ರಹಿಸ್ತಾನೆ.

೩೩. pick-up—ಕಲಿತುಕೊ. broil—ಮಾಂಸ ಬೇಯಿಸುವಂತೆ ಬೇಯಿಸು. (But)—ಅಂದರೆ, ಆಸಕ್ತಿ, ಮುತುವರ್ಜಿ, ಏಕಾಗ್ರಚಿತ್ತತೆ ಇದ್ದರೆ. (this)—ಇವನಿಗೆ ಈಗಾಗಲೇ ಇಪ್ಪತ್ತೆರಡು. ಗಮನಿಸೋ ಶಕ್ತಿ, ಅರ್ಥಮಾಡಿಕೊಳ್ಳೋ ಸಾಮರ್ಥ್ಯ ಇದೆ. (ಶ್ರೀ)—ಶ್ರೀ ಗುರುವಿಗೆ ನಮಸ್ಕಾರ.

೩೪. (This)—ಇದು ನನ್ನ ಕೂತುಕೊಳ್ಳೋ ಕೋಣೆ, ಹಾಗೂ ಮಲಗೋ ಕೋಣೆ. ಒಳಗೆ ಬಾ, ಮಗು. ನಾನೊಂದು ಸಿಗರೆಟ್ ಮುಗಿಸುವವರೆಗೂ ಇರು. (Ventilator)—ಸೂರಿನ ಹತ್ತಿರದ ಗವಾಕ್ಷ, ಕೆಟ್ಟ ಗಾಳಿ

*Hall Caine ಎಂಬವನು ಇಂಗ್ಲಿಷಿನಲ್ಲಿ ಕತೆ ಕಾದಂಬರಿ ಬರೆದಿದ್ದಾನೆ.

ಹೊರಗೆ ಹೋಗುವುದಕ್ಕೆ. pucca—ಪಕ್ಕಾ. water-proof—ನೀರಿಗೆ ನೆನೆಯದ್ದು. (Now)—ಈಗ ಎರಡು ದಿವಸದಿಂದ ಅದನ್ನ ಅಲ್ಲಿ ತುರುಕಿದ್ದೇನೆ, ಆದ್ದರಿಂದ ನನ್ನ ಬಟ್ಟೆಗಳು ಭದ್ರ. rascal rat—ಕೊರವು ಇಲಿ.

೩೫. Hockey stick—'ಹಾಕಿ' ಎಂಬ ಆಟವನ್ನಾಡುವ ದಾಂಡು. Sextion Blake Series ಎಂಬುವು ಕೆಲವು ಪತ್ತೇದಾರಿ ಕತೆ ಪುಸ್ತಕಗಳು. briar pipe—ಹೊಗೆಸೊಪ್ಪು ತುಂಬಿ ಸೇದುವ ಮರದ ಕೊಳವೆ. (Sit)—ಚೌಕವಾಗಿ ಕೂತುಕೊಳ್ಳುವುದು ಅನನುಕೂಲವಾದರೆ, ಇದರ ಮೇಲೆ ಕೂತುಕೊ. (what)—ಏನು ಅನ್ಯಾಯದ ವ್ಯರ್ಥ! Curse me—ಹಾಳಾಗ್ಹೋಯ್ತು! Gymnasium—ವ್ಯಾಯಾಮಶಾಲೆ.

೩೭. (ಹರಿಃ)—ಇರ್ರಿ. ಇನ್ನೊಂದು ಹತ್ತು ದಿವಸ, ಭಾರದ ತೂಕ ಎತ್ತುವುದರಲ್ಲೂ ಎಲ್ರನ್ನೂ ಛಾಲೆಂಜ್. ಈಗ ಬನ್ರಿ . . . ಕೆಂಪಾಂಬುಧಿ—ಸಿದ್ಧ! 'ಜಾಪಿ ವುಲ್ಫ್' ಸಂಗಡ ಕಡಲ್ದಾಲುವೆ ಈಜೋದೂ, ಛಾಲೆಂಜ್. ಕಾರ್ಪೆಂಟಿಯರ್, ಸಿಕಿ, ಇವರೊಡನೆ ಮುಷ್ಟಿಯುದ್ಧಕ್ಕೂ ಸಿದ್ಧ. 'ಮಹಾನ್'ಅನ್ನು ಕೇಳ್ರಿ. ಅಹ್ಮದ್ ಬಕ್ಷ್ ಹೊಡೆದ ಏಟು, ಲಿಮ್ಗೂ, ಗಾಮ್ಗೂ . . . ಇಂಡಿಯಾದವರೆಂದರೆ ಏನಂತ ತಿಳ್ಕೊಂಡಿದ್ದಾರೊ! ಮಂಕು ಮಕ್ಕಳು! ಬರ್ಲಿ, ಹಾಕೀಲಿ, ಪೋಲೋಲಿ, ಒಂದೊಂದ್ರಲ್ಲೂ. (An)—ಉತ್ಸಾಹ ಸ್ವಲ್ಪ ಅತಿ ಆದರೂ ಉದಾರವಾದ ಬುದ್ಧಿ, ವಿಶಾಲವಾದ ಹೃದಯ. Open sports—ಯಾರು ಬೇಕಾದರೂ ಭಾಗವಹಿಸಬಹುದಾದ ಆಟಗಳು. athletic events—ವ್ಯಾಯಾಮದ ಪ್ರಸಂಗಗಳು. also ran—ಹತ್ತರ ಜೊತೆಗೆ ಹನ್ನೊಂದಾದವನು, ಸಾಮಾನ್ಯ. (you)—ಅದನ್ನು ಮಾಡಲು ನೀನೇ ಅರ್ಹ.

೩೭. ಮಹಾನ್—ದೊಡ್ಡವರು. ಭಾಸ, ಭವಭೂತಿ, ಕಾಳಿದಾಸ—ಸಂಸ್ಕೃತದ ನಾಟಕಕಾರರು. Shelly, Keats—ಇಂಗ್ಲಿಷ್ ಕವಿಗಳು. Galsworthy, Shaw—ಇಂಗ್ಲಿಷ್ ನಾಟಕಕಾರರು.

೪೮. ವಿಟ್ಟೆಶ್ವದೆ—ದೇಹಬಲವನ್ನು ಮಾತ್ರ ಬೆಳೆಸಿದ ನಿರಕ್ಷರಕುಕ್ಷಿ. ಧಿಕ್ ಪಶುಬಲಂ—ದೇಹದ ಬಲಕ್ಕೆ ಧಿಕ್ಕಾರ.

೩೯. (It)—ಸುಮ್ಮನೆ ವೇಳೆ ವ್ಯರ್ಥ. (ಕೆಲವು)—ಕೆಲವು ಪ್ರಕೃತಿಗಳು ಬೇಗ ಫಲ ಕೊಡತವೆ, ಕೆಲವು ನಿದಾನ. ಕಾರಣ, ಬೇಕಾದ ಹಾಗಿರಬಹುದು.

ಆದ್ದರಿಂದ ವ್ಯಾಯಾಮಪದ್ಧತಿಯನ್ನೇ ದೂಷಿಸೋದೆ? (Diet)—ಆಹಾರ, ಒಳ್ಳೆಯ ಆಹಾರ ಅಗತ್ಯವಾದ ಅಂಶ; ಇದರ ಜೊತೆಗೆ, ನೀನು ವ್ಯಾಯಾಮ ಮಾಡೋ ವಿಧಾನಾನೂ ಶುದ್ಧಾಂಗ ತಪ್ಪು. ನಿನಗೆ ಚಿತ್ತೈಕಾಗ್ರತೆ ಸಾಲದು ಅಂತ ನನಗೆ ಖಂಡಿತ ಗೊತ್ತು. ಅಲ್ಲಿದೆ ತಪ್ಪು. ಬೇಕಾದರೆ, ತೋರಿಸ್ತೇನೆ.

೪೦. practice—ಅಭ್ಯಾಸ. diet—ಆಹಾರ, 'ತಯಾರಿ'.

೪೧ (but)—ಆದ್ರೆ, ಮಿತೀಲಿದ್ದರೆ, ಪರವಾಗಿಲ್ಲ. ಈ 'ನಿಕೊಟೀನ್' ಎಂದರೆ ಹೊಗೆಸೊಪ್ಪಿನಲ್ಲಿರೋ ಸಾರ ಹೃದಯಕ್ಕೆ ಕೆಟ್ಟದ್ದು, ಶ್ವಾಸಕೋಶಕ್ಕೆ ಕೆಟ್ಟದ್ದು, ಪಿತ್ತಜನಕಾಂಗಕ್ಕೆ ಕೆಟ್ಟದ್ದು. (Comedian)—ಹಾಸ್ಯಗಾರ, ಐದಡಿ ಎಂಟಂಗುಲ ಎತ್ತರ, ತೆಳ್ಳಗೆ ಮೈಕಟ್ಟು. lightwood—ಬೆಂಡಾದ ಮರ. dumb-bell ಎಂಬ ಸಾಧನದ ಉಪಕರಣವನ್ನು ಸಾಮಾನ್ಯ ಎಲ್ಲರೂ ನೋಡಿದ್ದಾರೆ. bar-bell ಎಂಬ ಉಪಕರಣ—ಉದ್ದವಾದ ಒಂದು ಕಬ್ಬಿಣದ ಕೋಲಿನ ಎರಡು ತುದಿಗಳಲ್ಲಿಯೂ ಕಬ್ಬಿಣದ ಚಕ್ರಗಳನ್ನು ಸಿಕ್ಕಿಸಿರುತ್ತಾರೆ, ಇದನ್ನು ಎತ್ತಿ ಇಳಿಸಿ ವ್ಯಾಯಾಮಮಾಡುತ್ತಾರೆ. ಇಂತಹದು ಇನ್ನೊಂದು: Kettle-bell—ಕೊಡದ ಆಕಾರದಲ್ಲಿರುವ ಕಬ್ಬಿಣದ ಭಾರ. incredible feats—ನಂಬಲಸಾಧ್ಯವಾದ ಸಾಹಸ. (genuine)—ಸಾಚಾ ಗಟ್ಟಿ ಭಾರ. Comic songs—ಹಾಸ್ಯದ ಹಾಡು. (you) ನಿನಗೆ ಒಳ್ಳೇ ಭವಿಷ್ಯ ಇದೆ, ಮಗು. ನೀನು ಇಲ್ಲಿಗೆ ಒಂದು ಆಸ್ತಿಯಾಗಬಹುದು.

೪೨. (suitable)—ತಕ್ಕ, ಒಪ್ಪುವ, ನಾಟಕ. (That)—ಹೇಳಿ ಮಾಡಿಸಿದ ಹಾಗಿದೆ ಇದು.(All)—ಎಲ್ಲಾ ಇಂಡಿಯಾ ಮಾದರಿ, ಇಂಡಿಯಾದ ಸಲಕರಣೆ, ಉಪಕರಣ. ತಾಬೀಜು—ಪೈಲ್ವಾನರು ಕುತ್ತಿಗೆಗೆ ಕಟ್ಟಿಕೊಳ್ಳುವ ಚೌಕನಾದ ದೈವರಕ್ಷೆ. (chorus)—ಮೇಳ.

೪೩. Asthma–ಗೂರಲು. 'ದಂ'–ಉಸಿರು. ರಬ್ಡಿ–ಫೇಡ, ಬಾಸುಂದಿ, ಇದರ ಹಾಗೆ ಹಾಲಿನಿಂದ ಮಾಡಿದ ಸಿಹಿತಿನಿಸು. ಪೌಲಾಹೆಜ್ಜೆ–ಪೈಲ್ವಾನರು ತೊಡೆಗೆ ತೊಡೆ ಮಸೆಯದಹಾಗೆ, ಕಾಲು ದೂರದೂರವಾಗಿ ಇಟ್ಟು, ಹಾಕುವ ಜಂಬದ ಹೆಜ್ಜೆ. ಛೋಟಾ—ಚಿಕ್ಕವನು. ಬರಖಾಸ್ತಾಯಿತು—ಮುಗಿಯಿತು.

೪೪. Cold plunge—ತಣ್ಣೀರು ಸ್ನಾನ. (A cold)—ತಣ್ಣೀರು ಸ್ನಾನ ಮನುಷ್ಯ ದೇಹವನ್ನು ಬಲಪಡಿಸಿದರೂ ಪಡಿಸುತ್ತೆ, ಮುರಿದು ಹಾಕಿ

ದರೂ ಹಾಕುತ್ತೆ. ವಿವೇಕದಿಂದ ಉಪಯೋಗಿಸಿದರೆ, ಅದು ದೇಹಾನ ಕಟ್ಟುತ್ತೆ. (ಹರಿಃ)-ತಯಾರಿ ತರ್ಕೋತಿದೇನೆ. ಛಾಲೆಂಜಿಗೆ ಸಿದ್ಧ, ಎಲ್ಲದರಲ್ಲೂ. (Take) –ತೆಕೊ, ವೆಂಕಟೇಶ್, ಆರಿಹೋಗೋಕೆಮುಂಚೆ. ನೀನು ಎಷ್ಟು ವ್ಯಾಯಾಮ ಮಾಡ್ತೀಯೋ ಅದಕ್ಕೆ ಸಾಕಷ್ಟು ಆಹಾರ ತಿನ್ನೊಲ್ಲ ಅನ್ನಿಸುತ್ತೆ. ಇಲ್ಲದಿದ್ದರೆ, ತಿನ್ನೋ ಆಹಾರದಲ್ಲಿ ಸತ್ತ್ವಸಾಲದು, ಅನ್ನಿಸುತ್ತೆ. (Precisely)— ಹಾಗೇ ಹೌದು. ಮೊದಲನೇ ಕಾರಣ—ಗತಿಯಿಲ್ಲ. (I know)— ಹೀಗೆ ನಾನೇ ಮೇಲುಪಂಕ್ತಿ ಹಾಕಿ, ತಪ್ಪು ಮಾಡ್ತಿದೇನೇಂತ ಗೊತ್ತು. ಆದರೆ, ಈ ಸಾಮಾನ್ಯ ಆಹಾರದಲ್ಲೇ ಒಂದು ಭರ್ಜರಿ ಪ್ನೇಕಟ್ಟು ಸಾಧಿಸಿದ್ರೆ, ಅದೂ ಸಾಧನೆ ಅಲ್ಲವೆ! (Dangerous)–ಅಪಾಯಕರ, ಸರಿಯಾದ ಸತ್ತ್ವದ ಆಹಾರ ಸರಿಯಾದ ಪ್ರಮಾಣದಲ್ಲಿ ಬೀಳದೆ ಹೋದರೆ! ಸಹಜವಾಗಿ ಹುಟ್ಟಿಬಂದ ಸತ್ತ್ವ ಇಲ್ದಿದ್ರೆ ದೇವ್ರೇ ಗತಿ!

೪೫. (It is)—ಅದು ಹೆಚ್ಚೂಕಡಮೆ ಒಂದು ತ್ರಿಕೋಣ ಇದ್ದ ಹಾಗೆ; 'ಸ್ಟರ್ನಂ' ಅನ್ನೋ ಎದೇ ಮುಂದಿನ ಮೂಳೆ ಆ ತ್ರಿಕೋಣದ ಮೇಲುತುದಿ. ರಡು ಪಕ್ಕದಲ್ಲೂ ಎದೆಮೂಳೆಯ ಪೆಟ್ಟಿಗೆ ಇದೆಯಲ್ಲ, ಅದನ್ನು ಒಳಕ್ಕೆ ಅಮುಕಿದ ಹಾಗಿರುತ್ತೆ. anatomy—ದೇಹದ ಅಂಗಗಳ ರಚನೆ. physio-logy—ದೇಹದ ಅಂಗಾಂಗಗಳ ವ್ಯಾಪಾರದ ಜ್ಞಾನ. (How)—ಅದು ಪಾರಿವಾಳಗಳಿಗೆ ಹೇಗೆ ಮನೆಯಾದೀತು? ಅದು 'ಪಿಡ್ಜನ್ ಛೆಸ್ಟ್' ಎಂದಿರ ಬೇಕು, ಅದೊಂದು ಅಸಹಜವಾದ ಅಂಗರಚನೆ.

೪೬. (I thought)—ನೀವು ಚೆನ್ನಾಗಿ ಓದಿದವರು ಎಂದುಕೊಂಡಿದ್ದೆ. ಹೌದು, ಅವನ ಎದೆಯಲ್ಲಿ ಪಾರಿವಾಳಗಳು ಮನೆಮಾಡಲಾಗದಿದ್ದರೂ, ನಿಮ್ಮ ತಲೆ ಖಾಲಿ ಆದದ್ದರಿಂದ, ಆದರಲ್ಲಿ ಮಾಡಬಹುದು. (cold)—ತಣ್ಣೀರು ಮನುಷ್ಯ ದೇಹಾನ ಕಟ್ಟಿದರೂಕಟ್ಟುತ್ತೆ, ಕುಟ್ಟಿದರೂ ಕುಟ್ಟುತ್ತೆ. well-up—ಚೆನ್ನಾಗಿ ತಿಳಿದಿರು. (what)—ಈ ವ್ಯಾಯಾಮ ಮಾಡಿಸೋದನ್ನೇ ನೀನು ವೃತ್ತಿ ಮಾಡಿಕೊಳ್ಳೋದಾದ್ರೆ, ಈ ಹುಡುಗರಿಗೆ ಏನು ಹೇಳಿಕೊಡ್ತೀಯಾ ?

೪೮. (For)—ದಮ್ಮಯ್ಯ, ಚೆನ್ನಾಗಿ ಓದು. ಅಥವಾ, ಬರೀ ಡ್ರಿಲ್ ಮೇಷ್ಟರು ಆಗೋದ್ರಲ್ಲೇ ತೃಪ್ತಿಯಾದರೆ, ಹಾಗೇ ಆಗಲಿ. (ಈ cold)–ತಣ್ಣೀರಿನ ಪರಿಣಾಮ ದೇಹದ ನರಗಳ ಮೇಲೂ ಹೃದಯ ಮತ್ತು ರಕ್ತಚಲನೆಯ

ಮೇಲೂ ಬಹಳ ಇದೆ. ಮೊದಲು ಹೃದಯದ ಸ್ವರೂಪ, ಅದರ ಕಾರ್ಯ, ಇದನ್ನ ನೀ ತಿಳೀಬೇಕು. ಎಲ್ಲಿ, ಹೃದಯ ಎಂದರೆ ಏನು? ಹೇಳು, ನೋಡೋಣ. (If)—ಹೃದಯದ ವಿಷಯದಲ್ಲಿ ನಿನ್ನ ತಿಳಿವಳಿಕೆ ಇಷ್ಟೇ ಆದರೆ, ಅಯ್ಯೋ ಅನಿಸುತ್ತೆ ನಿನ್ನ ನೋಡಿದ್ರೆ. ಇದಕ್ಕಿಂತ, ನೀನೀಗ ನಡಸ್ತಾ ಇರೋ ದೋಸೆ ಅಂಗಡಿಗೇ* ಅಂಟಿಕೊಳ್ಳೋದು ವಾಸಿ. ನಿನಗೆ 'ಬೈಕಸ್ಪಿಡ್'ಅನ್ನೋ ಕವಾಟ ಯಾವ ಕಡೆ, 'ಟ್ರೈಕಸ್ಪಿಡ್' ಅನ್ನೋದು ಯಾವ ಕಡೆ, ಮಲಿನರಕ್ತ್ಯಾನ ಹೊತ್ತು ಹೋಗೋ ನಾಳ ಯಾವ ಕಡೆ, ಒಂದೂ ಗೊತ್ತಿಲ್ವಲ್ಲಾ. ನಿನ್ನೊ, ಮುಂದೆ ಆಗೋ ನಿನ್ನ ವ್ಯಾಯಾಮಶಾಲೇನೂ ದೇವರೇ ಕಾಪಾಡಬೇಕು. ನೋಡು, ಕೇಳಿಲ್ಲಿ. (You can)—'The bishop . . . ಇತ್ಯಾದಿ' ಇದನ್ನು ನೀನು ಜ್ಞಾಪಕ ಇಟ್ಟುಕೊಂಡರೆ, ಹೃದಯದ ದ್ವಾರಕವಾಟಗಳ ಹೆಸರುಗಳೂ ಸ್ಥಾನವೂ ನಿನಗೆ ಮರೆಯುವುದು ಸಾಧ್ಯವೇ ಇಲ್ಲ. ಹಾಗೆಂದರೆ, 'ಬೈಕಸ್ಪಿಡ್' ಕವಾಟ ಬಲಗಡೆಗಿಲ್ಲ; ಆದ್ದರಿಂದ, ಎಡಗಡೆ ಇರಬೇಕು. ಹಾಗೆಂದ ಮೇಲೆ, 'ಟ್ರೈಕಸ್ಪಿಡ್' ಕವಾಟ, ಹೃದಯದ ಬಲಗಡೆಗಿದೆ, ಎಂದು ಅರ್ಥ.

೪೮. (Oh)—ಓ, ಬಿಡು, ವೆಂಕಟೇಶ್. ನೀನು ಕಲಿಯುತೀ, ಚೆನ್ನಾಗೇ ಕಲಿಯುತೀ. ಕಲಿಯುತೀ ಅಂತ ನನಗೆ ತುಂಬ ನಂಬಿಕೆ ಉಂಟು.

೪೯. (ಹೇಗಿದೆ)—ಹ್ಯಾಗಿದೆ, ಸರ್, ಕೆಲಸ! ಯಾವ ಕಸುಬುದಾರನೂ ಇದಕ್ಕಿಂತ ಚೆನ್ನಾಗಿ ಚಿತ್ರ ತೆಗೆಯೋದು ಸಾಧ್ಯವಿಲ್ಲ. (You)—ನೀನು ಸ್ವಲ್ಪ ಸಭ್ಯತೆ, ನಡತೆ, ಕಲಿತರೆ ವಾಸಿ. (ನಾಹಂ)—ಮಾಡುವವನು ನಾನಲ್ಲ, ಮಾಡಿಸುವವನು ನಾನಲ್ಲ. ಮೌಂಜೀಬಂಧನ—ಉಪನಯನವಾಗುವಾಗ, ಮುಂಜ ಎಂಬ ನೊದೆಹುಲ್ಲಿನಿಂದ ಹಗ್ಗ ಮಾಡಿ ನಡುವಿಗೆ ಬಿಗಿಯುವುದು.

೫೧. ಉತ್ಥಾನ—ಮೈಮರೆವಿನ ನಿದ್ರೆಯಿಂದ ಎಚ್ಚರಗೊಂಡೇಳುವುದು. Concentration—ಏಕಾಗ್ರಚಿತ್ತತೆ. ಮುರ್ಗ್ಯೆ—ಕೋಳಿ.

೫೦. 'ಪ್ರಪಂಚವು ಯಾವುದರ ವಿಷಯದಲ್ಲಿ ನಿದ್ರೆಮಾಡುತ್ತದೋ ಅದರ ವಿಷಯದಲ್ಲಿ ಸಂಯಮಿ ಎಚ್ಚರವಾಗಿರುತ್ತಾನೆ; ಯಾವುದರ ವಿಷಯದಲ್ಲಿ ಪ್ರಪಂಚವು ಎಚ್ಚರವಾಗಿರುತ್ತದೋ ಅದರ ವಿಷಯದಲ್ಲಿ ಸಂಯಮಿ ನಿದ್ರೆ ಮಾಡುತ್ತಾನೆ' ಎಂಬ ಅರ್ಥವಿರುವ ಶ್ಲೋಕವನ್ನು 'ಯಾವ ಹೊತ್ತಿನಲ್ಲಿ'

* ಆ ಕಾಲದಲ್ಲಿ ಶ್ರೀ ಐಯರ್ ಹೋಟಲು ನಡಸುತ್ತಿದ್ದರಂತೆ.

ಎಂದು ಬದಲಿಸಿ ಕೈಲಾಸಂಗೆ ಅನ್ವಯಿಸಿರುವುದು ಚೆನ್ನಾಗಿದೆ. (Don't)— ಈ ಸೊಗಸಾದ ರಾತ್ರಿಯನ್ನು ವ್ಯರ್ಥಮಾಡಬೇಡ, ಹೊರಗೆ ಬಾ. tank bund —ಕೆರೆ ಏರಿ. B. R. V.—ಕಂಟೋನ್ಮೆಂಟಿನ ಒಂದು ಸಿನಿಮಾಮಂದಿರ. interval — ಮಧ್ಯದ ವಿರಾಮ. ಅಗ್ನಿದ್ರಾವಕ — ಮಾದಕದ್ರವ್ಯ.

೫೨. (Now)—ಈಗ ನನ್ನ 'ಕರ್ಣ' ಹೇಳಿ, ನಿನ್ನ ಮನಸ್ಸಿಗೆ ರಂಜನೆ ಮಾಡ್ತೇನೆ (No)—ಛೀ, ಪೆದ್ದೆ, ಇದೊಂದು ದೊಡ್ಡ ಕಲ್ಪನೆ. ಈ 'ಕರ್ಣ', ಕೈಲಾಸಂದು ಒಂದು ಮಹಾನಾಟಕ ಆಗುತ್ತೆ.

೫೫. Spencer's- ಆಗ ಮಾದಕ ದ್ರವ್ಯಗಳನ್ನೂ ಮಾರುವ ಮಳಿಗೆ. (We)—ಈಗಲೂ ನಾವು ಅದನ್ನು ಅನುಭವಿಸಲಾಗುತ್ತೆ. (simple)—ಸರಳ ವಾದ ಬಂಧ, ಎಷ್ಟು ಚೆಲುವಾಗಿದೆ ! ಮತ್ತೆ, ಆ ಬಳುಕೋ !

೫೬. Notice ಮಾಡು —ಗಮನಿಸು. (We)—ನಾವು ಖಂಡಿತ ನಾಟಕ ನೋಡಿ ಸಂತೋಷಪಡತೇವೆ.

೫೭. ಕಲ್ಲು ಕೂಚ—ಕಂಬದಂತೆ ನಿಲ್ಲಿಸಿದ ಕಲ್ಲುಚಪ್ಪಡಿ. ಇದರ ಮೇಲೆ, ಗೋಡೆಯ ಮೇಲೆ, ಸೂರಿನ ಭಾರ.

೫೮. ಗೂಂಡರ ಗೂಂಡ—ಘಟಿಂಗರಲ್ಲಿ ಘಟಿಂಗ (ಚಂಬಾರ್‍ಕ)— ಚಮ್ಮಾರರ ದೇವರಿಗೆ ಚಪ್ಪಲಿಯ ಪೂಜೆ. ಏಕ್‌ದಂ—ಒಂದೇ ಏಟಿಗೆ. ಚಂಬಾರ—ಚರ್ಮಕಾರ.

೫೯. smoke-rings—ಸಿಗರೆಟ್ ಹೊಗೆಯನ್ನು ಬಾಯಿಂದ ಬಿಡು ವಾಗ, ಕೆಲವರು ಅದು ಉಂಗುರ ಉಂಗುರವಾಗಿ ಗಾಳಿಯಲ್ಲಿ ಹೋಗುವಂತೆ ಬಿಡುತ್ತಾರೆ. 'ಕಾಲಾಬಿಲ್ಲಿ'—ಕರೀ ಬೆಕ್ಕು, ಆ ನಟನಿಗೆ ಇದ್ದ ಅಡ್ಡ ಹೆಸರು.

೬೦. ಖಾಮೂಷ್-ಸದ್ದೂ ! ನಿಶ್ಶಬ್ದರಾಗಿ, ಎಂದು ಅರ್ಥ.

೬೧. (Would—ಒಂದೂವರೆ ರೂಪಾಯಿ ತರಗತೀಗೆ ಹೋಗಿ ದ್ರೆ ಇಷ್ಟು ಸಂತೋಷಪಡುತಿದ್ದೆಯ ! ತಪ್ಪೆವರಿದಿ-ತಪ್ಪು ಯಾರದು ? (ಕಡುಪು ನೊಪ್ಪಿಕಿ)—ಹೊಟ್ಟೆನೋವಿಗೆ ಕಾಲು ದರಾಂ

ಮೂಗು ನೋವಿಗೆ ಮುಕ್ಕಾಲು ದರಾಂ

ಮೈಯಿನೋವಿಗೆ ಒಂದು ದರಾಂ, ಕುಡಿಯುವವರಿಗೆ ಒಳ್ಳೇದು ರಾಂ. ದರ್‍ರಾಂ-dram, ಒಂದು ಅಳತೆ.

೬೨. Soliloquy-ಸ್ವಗತವಾದ ದೀರ್ಘಭಾಷಣ. (ಮೊದಿರಾ)-ನಮ್ಮದೋ, ರಾಘವಾ! ತಪ್ಪು ನಮ್ಮದೋ, ದುಡ್ಡು ಕೊಟ್ಟ ನಮ್ಮದೋ!

೬೩. Recitation-ಕಾವ್ಯಗಾಯನ.

೬೪. nervous—ಮನಸ್ಸಿಗೆ ನೆಮ್ಮದಿಯಿಲ್ಲದೆ ಕಳವಳದಿಂದ ಪರದಾಡುವುದು. prompt-ನಟರು ಮರೆತುಹೋದರೆ, ಅವರಿಗೆ ಜ್ಞಾಪಿಸುವುದು. Amateur—ಅನುಭವ ಸಾಲದವರು, ಖುಷಿಗಾಗಿ ಆಡುವವರು.

೬೫. Chambers-ಲಾಯರಿಯ ಕಚೇರಿ. rehearsals—ನಾಟಕದ ಅಭ್ಯಾಸ. make-up-ಬಣ್ಣ ಬಳಿದುಕೊಳ್ಳೋದು ಇತ್ಯಾದಿ. personality-ಕಳೆ.

೬೬. The Barque-ಕಿರಿಯಾಳದ ನಗೆನೀರಿನ ಮೇಲೆ
ತಿರುಗುತ ಬಹು ವೇಳೆ
ಕಣ್ಣೀರಿನ ಕಡಲಿನ ಪಾಲು
ಹಾಸ್ಯದ ಹರಿಗೋಲು

೬೮. (Villian)-ಖಳನಾಯಕ. Title-ನಾಮಕರಣ. (Thus)—ಖಳನಾಯಕನು ಹೀಗೆ ಕಣ್ಮರೆಯಾದನು. Nook*-ಮೂಲೆ, ಮೊಡಕು, joke—ಹಾಸ್ಯ.

೬೯. Roman Rings—ಹಗ್ಗದಿಂದ ಇಳಿಬಿಟ್ಟ ಎರಡು ಕಬ್ಬಿಣದ ದೊಡ್ಡ ಉಂಗುರಗಳು; ಅಂಗಸಾಧನೆಯ ಒಂದು ಉಪಕರಣ

೭೦ (It)-ಯಾವಾಗಲೂ ಹೀಗೇ ಆಗಿದೆ. ನಾನು ಈ 'ತಲೆಕೆಳಗೆ, ಕಾಲು ಮೇಲೆ' ಮಾಡಿದಾಗಲೆಲ್ಲಾ, ಹೀಗೇ ರಕ್ತ ತಲೆಗೆ ನುಗ್ಗುತ್ತೆ, (yes)-ಹೌದು, ಹೌದು. ಪ್ರಕೃತಿಗೆ ಯಾವಾಗಲೂ ಶೂನ್ಯ ಎಂದರೆ ಏಕೋ

---

* ಈ NOOKನಲ್ಲೇ ಕೈಲಾಸಂ ಅವರ ತಾವರೆಕೆರೆ, ವೈದ್ಯನ ಜಾಡ್ಯ, ಹುತ್ತದಲ್ಲಿ ಹುತ್ತ, KARNA ಇವು ರೂಪುಗೊಂಡದ್ದು. ಇಂಥ ಆವರಣದಲ್ಲಿ ಅದರ ಕೆಲಸ ಊರ್ಜಿತವಾದುದನ್ನೂ, ಮುಂದೆ 'ಸುಖದ ದಿನಗಳು' (ಪುಟ ೮೭ ರಿಂದ ೮೯) ಬಂದಾಗ ಅವರ ಕೆಲಸ ಅಸ್ತವ್ಯಸ್ತವಾದದ್ದನ್ನೂ ಹೋಲಿಸಿರಿ. ಜೊತೆಗೆ (ಪುಟ ೭೭) 'one must become a gutter-snipe' ಎಂಬ ಅವರ ಮಾತನ್ನೂ ಜ್ಞಾಪಿಸಿಕೊಂಡು, ಎದುರುಪುಟದ ಅಡಿಟಿಪ್ಪಣಿ ನೋಡಿ,

ಆಗೊಲ್ಲ. ಅದು ಪ್ರಕೃತಿಯ ಒಂದು ನಿಯಮ. (What)—ಏನು ಬೃಹಸ್ಪತಿಗಳಯ್ಯಾ . . . ಪ್ರಕೃತಿಗೆ ಶೂನ್ಯವನ್ನು ಕಂಡರಾಗೊಲ್ಲ . . . ನಿನ್ನ ತಲೆಯೊಳಗೆ ಶುದ್ಧ ಶೂನ್ಯ . . . ಅಂದರೆ, ಖಾಲಿ . . . ಅದರಿಂದಲೇ ರಕ್ತ ನುಗ್ಗುತ್ತೆ. Punch—ಇಂಗ್ಲೆಂಡಿನ ಪ್ರಸಿದ್ಧವಾದ, ಹಾಸ್ಯದ ವಾರಪತ್ರಿಕೆ.

೭೧. aloof ಆಗಿ—ಸುತ್ತಮುತ್ತಿನಿಂದ ದೂರವಾಗಿ, ತನಿಯಾಗಿ. equip—ಸಜ್ಜುಗೊಳಿಸು.

೭೨. lumber—ತಕ್ಷಣ ಕೆಲಸಕ್ಕೆ ಬಾರದ ಸಾಮಾನು (One)—ಬಚ್ಚಲಲ್ಲಿ ಬದುಕೋ ಹಕ್ಕಿಯಾಗಬೇಕು* ಅಲ್ಲಿ ಕೂತುಕೊಂಡು ಆಕಾಶ ನೋಡಬೇಕು,ಸೂರ್ಯನ್ನ ನೋಡಬೇಕು, ಸುತ್ತಿನ ಜಗತ್ತನ್ನ ನೋಡಬೇಕು. ಈ ಕೋಣೆಗೆಸರಿಯಾದ ವಾತಾವರಣ ಇದೆ, ನಾನು ಇಲ್ಲಿ ಏನಾದರೂ ಬರೆಯೋದು ಸಾಧ್ಯ. (Raining)—ಅಗಾಧವಾಗಿ ಮಳೆ ಬರ್ತಿದೆ...ಆರ್ದ್ರೋದ್ರೆ ನಿಮಗೆ ರುಚಿಸೊಲ್ಲ, ನಂಗ್ಗೊತ್ತು.

೭೩. (I dare not)—ಇದನ್ನ ಇನ್ನು ಯಾರ ಕೈಗೆ ಒಪ್ಪಿಸೋಕೊ ಧೈರ್ಯವಿಲ್ಲ, ನನಗೆ. ನಾನು ಬದುಕಿರೋವರೆಗೂ ಇದು ನನ್ನದು. ಮಿಕ್ಕದ್ದು ನಾನು ಹೇಳೋ ಅಗತ್ಯ ಇಲ್ಲ. ಅದು—ವಿಷ್ಣು. ಇದು—ಶಿವ. peculiarity ವಿಚಿತ್ರ.

೭೪. A.D.C.—aide-de-camp, ಎಂದರೆ, ಹತ್ತಿರ ಇದ್ದು ಕೆಲಸ ಮಾಡಿಕೊಡುವ ಕಾರ್ಯಕರ್ತ. autograph— ಸ್ವಹಸ್ತಾಕ್ಷರದಲ್ಲಿ ತನ್ನ ಹೆಸರು. (ರುಚೀಣಾಂ)—ರುಚಿಗಳು ವಿಚಿತ್ರವಾಗಿರುವುದರಿಂದ . . .

೭೫. pointing—ನಯಗಾರೆ. (Venkatesh)— ವೆಂಕಟೇಶ್, ದಮ್ಮಯ್ಯಾ, ಅಂಥದೇನೂ ಮಾಡಬೇಡ. ನನಗೆ ಅತ್ಯಂತ ಅಗತ್ಯವಾಗಿದ್ದ ಆವರಣ ಇಲ್ಲಿ ಸಿಕ್ಕಿದೆ. ಸಮಸ್ತವೂ ಸರ್ವಸಮರ್ಪಕವಾಗಿದೆ. (Good)—

* ಕೈಲಾಸಂ ಹೇಳುತಾ ಇದ್ದರು : "Get into a ಚಿರಂಡಿ, and say to Lakshmi : ಛಿ, ರಂಡೀ ; then Saraswati will welcome you ; ತ್ಚು, ರಾಂಡೀ !" ಚಿರಂಡೀಲಿ ಕೂತ.ಕೊಂಡು, ಲಕ್ಷ್ಮೀನ ಬೈದು ಓಡಿಸಿದರೆ, ಸರಸ್ವತಿ "ಅಷ್ಟು ದೂರ ಯಾಕ್ರಿ ನಿಂತ್ರೀ ? ಹತ್ತಿರ ಬನ್ನೀ" ಅಂತ ಕರಕೋತಾಳಂತೆ !

ಅದು, ಜಾಣಮರಿ. ನನ್ನ 'ಏಕಲವ್ಯ' ಇಲ್ಲಿ ಮುಗಿಸುವುದು ಸಾಧ್ಯವಾಗಿದೆ. ಈಗ 'ಕರ್ಣ' ಹುಟ್ಟಿಕೊಂಡಿದಾನೆ ... ಅದನ್ನ ಬರಹಕ್ಕೆ ಇಳಿಸ್ತಾ ಇದೇನೆ.. ಈ ಹುಡುಗರು ಬರ್ತೇನೆ ಅಂತಾರೆ, ಆಮೇಲೆ ಅವರ ತಲೇನೇ ಕಾಣೆ . . . ಇವತ್ತು ರಾತ್ರೆ ಏನಾದರೂ ಬರೀತೀಯೇನು, ದಮ್ಮಯ್ಯಾ ? (All)—ಆಗಲಿ ಸರ್, ಪ್ರಯತ್ನ ಮಾಡ್ತೇನೆ. (Let)—ಒಂದಿಷ್ಟು 'ಒರ್‌ಜಿನ್ನಲ್'* ಕೆಲಸ ಮಾಡೋಣ . . .ಜಿನ್, ಎಂದರೆ ಮಾದಕದ್ರವ್ಯ ; ಜಿನ್ನಲ್, ಎಂದರೆ ಜಿನ್ನಿಗೆ ಸಂಬಂಧಪಟ್ಟದ್ದು, ಒರ್‌ಜಿನ್ನಲ್, ಎಂದರೆ ಒಂದು ಜಿನ್ನ್ ಕುಡಿದು ಬರೆದು ಆದದ್ದು. 'ಗಾರ್ಡನ್ಸ್' ಜಿನ್ನ್–ಅದೇ ಅತ್ಯುತ್ತಮ. ಜೊತೆಗೆ ಒಂದು ಪ್ಯಾಕೆಟ್ ಸಿಗರೆಟ್ ಸೇರಿ,ಒಂಬತ್ ರೂಪಾಯಿ. ನೀನು ನಿನಗೆ ಥರ್ಮಾಸ್ ನಲ್ಲಿ ಸ್ವಲ್ಪ ಬಿಸಿ ಕಾಫಿ ತಂದುಕೋ. ನನ್ನ ಹತ್ರ 'ಎರಡು ಸೋಡ' ಇದೆ. ಅಷ್ಟು ಸಾಕು. (Here)—ಇದೋ, ಹತ್ತು ರೂಪಾಯಿ. ಅದರೆ, ಒಂದು ಗಂಟೆ ಸುಮಾರಿಗೆ ನಾನು ಮಲಕ್ಕೊಳ್ಳೋಕೆ ನನ್ನ ಬಿಟ್ಟು ಕೊಡಬೇಕು. (yes)—ಆಗ್ಬಹುದು ಆಗ್ಬಹುದು.

೭೮. (Come on)—ಬಾ, ವೆಂಕಟೇಶ್. ನಿನಗೆ ಕಾಯ್ತಾ ಇದ್ದೆ. ನಿನಗೆ ಥರ್ಮಾಸಿನಲ್ಲಿ ಕಾಫಿ ಇದೆ. ನಿನ್ನ ಪೆನ್ನೂ ತಂದುಕೊಂಡಿದ್ದೀ. ಈಗ, ಕೂತುಕೊ. ವಾತಾವರಣದೊಳಕ್ಕೆ ಪ್ರವೇಶಿಸೋಣ . . . ಮೊದಲನೇ ಅಂಕ ಪೂರ್ತಿ ಓದು. ನೀನು ನಿನ್ನೆ ಓದಿದ ರೀತಿ ನಂಗಿಷ್ಟವಾಯ್ತು. (ಹರಿಃ)—ಉಂ, ನಡೆಯಲಿ! ನಡೆಯಲಿ ! ಶೀಘ್ರವಾಗಿ ಬರೆದುಬಿಡಿ. ಸ್ಟೇಜ್ ಮಾಡಿಬಿಡೋಣ! (ಡೇ)—ಏ ಕೃಷ್ಣ, ಏನೋ ಅಡಿಗೆ ? (ಹರಿಃ)—ಮೂಲಂಗಿ ಸಾಂಬಾರ್, ರಸ, ಹಪ್ಪಳ, ತೆಂಗಿನಕಾಯಿ ಮೊಸರುಪಚ್ಚಡಿ, ಬಟಾಣಿ ಪಲ್ಯ. (Excellent ಸೊಗಸೋ ಸೊಗಸು !...ಬಟಾಣಿ ! ಓ ! ಭಲೇ ಭೇಷಾಯ್ತು ! ರುಚಿಯೋ ರುಚಿ ! ಇವತ್ತು ಹಬ್ಬ ಮಾಡಿಕೊಂಡುಬಿಡತೇನೆ !

೭೯. (ವರ್ರೇಂ)—ಬರ್ತೇನೆ. (ಡೇ)—ಏ ಪೆದ್ದೇ,ಇರೋ. ಅಯ್ಯರ್ ಓದುವುದನ್ನು ಕೇಳಿಬಿಟ್ಟು ಹೋಗೊ. (ಶೀಘ್ರಮಾ)—ಬೇಗ ಓದ್ರಿ, ಹರಿಃ

---

* Original ಎಂಬ ಇಂಗ್ಲಿಷ್ ಶಬ್ದದಲ್ಲಿ 'ಒರಿ' ಎಂಬುದನ್ನು ತಮಿಳಿನ 'ಒರು' ಎಂದರೆ 'ಒಂದು' ಎಂಬಂತೆ ಉಚ್ಚರಿಸಿದರೆ, ಅದು ಇಲ್ಲಿನ 'ಜೋಕು' ; 'ಜಿನ್ನಲ್' ಎಂಬುದರ ಜೊತೆಗೆ,

ಹಾಲಿನವನ ಮನೆಗೆ ಹೋಗಿ, ಇನ್ನೂ ಹಾಲು ತಗೊಂಬರಬೇಕು. ಹುಂ, ನಡೆಯಲಿ (one)—ಒಂದು ನಿಮಿಷ. ಕೃಷ್ಣ, ಆ ಸೋಡಾ ತಕೋ. (Now) ಈಗ, ನನ್ನ ಕಣ್ಣಿಗೆ ಬೀಳದ ಹಾಗೆ ಆ ದೀಪಾನ ಆಚೆ ಮಾಡು. ಅದು ಸರಿ. ಸಂಪೂರ್ಣವಾಗಿ ಅದನ್ನು ಮರೆಮಾಡಿಬಿಡು. ನಿನ್ನ ದಮ್ಮಯ್ಯಾ, ದೀಪ ಸಣ್ಣ ಮಾಡಯ್ಯ . . . ಅಷ್ಟು ಪ್ರಕಾಶಮಾನವಾಗಿದ್ರೆ, ಹ್ಯಾಗೆ ? . . . ಈಗ ಸರಿಯಾಯ್ತು . . . ಏ ಕೃಷ್ಣ, ಆ ಕಿಟಿಕೀಲೂ ಥಂಡಿ ಗಾಳಿ ಬರುತ್ತೋ. ಎರಡು ಕಿಟಕಿ ಬಾಗಿಲೂ ಹಾಕಿಬಿಡು . . . ಬ್ಬಾ ! ಈಗ ವಾಸಿ. (ಇನ್ನಿಕಿ)—ಇವತ್ತು ಏನು ವಾರವೋ? (ಕೃತ್ತಿಕೈ)—ಕೃತ್ತಿಕೆ ! ಪೆದ್ದೀ, ಸೋಮ್ವಾರಸೋಮ್ವಾರ ಒಂದು ಹೂಹಾರ ಕೊಂಡು ಬಾ ಅಂತ ಹೇಳಿದ್ದೆನಲ್ಲಾ ! . . . ಹೋಗಲಿ, ಅದೋ ಆ ಗೂಡಿನ ಮೂಲೇಲಿ ಊದುಬತ್ತಿ ಇಟ್ಟಿದ್ದೀನೆ; ಎರಡು ಹತ್ತಿಸಿಡು (Don't)—ಆ ಬೆಂಕಿಕಡ್ಡಿ ಆರಿಸಬೇಡ. ಇಲ್ಲಿ ಕೊಡು.

೮೦. (ಸುನಿರ್ಮಲಂ....) ಸುನಿರ್ಮಲನೂ ಜ್ಞಾನಸುಖಗಳ ಏಕರೂಪನೂ ಪ್ರಜ್ಞಾನಕ್ಕೆ ಕಾರಣನೂ ಪರಮಾರ್ಥವನ್ನು ದಾನಮಾಡುವವನೂ ಚಿತ್ ಎಂಬ ಅಂಬರದಲ್ಲಿ ವಿಹಾರ ಮಾಡುವ ಆದ್ಯನೂ ಆನಂದಮೂರ್ತಿಯೂ ಆದ ಗುರುರಾಜನನ್ನು ಬೇಡುತ್ತೀನೆ. (Go on)—ಮುಂದೆ ಸಾಗಲಿ . . . ಈ ತಲೆದಿಂಬುಗಳಲ್ಲಿ ತಲೆ ಬಚ್ಚಿಟ್ಟುಕೊಳ್ತೀನೆ, ತಾಳು . . . ಎಲ್ಲಿ ಹತ್ತಿರ ಬಾ. ಹತ್ತಿರ ಒತ್ತಿಕೂತ್ಕೊ. ನಿನ್ನ ಮೈ ಶಾಖ ನನ್ನ ಮೈಗೆ ಬರಲಿ . . . ನನ್ನಾಣೆ, ಈ ಪದಾರ್ಥ ಒಳ್ಳೇದಲ್ಲ . . .ಕರುಳೊಳಗಿನ ಪರೆಯೆಲ್ಲ ಬೆಂದುಹೋಗಿದೆ . .. ಇದನ್ನು ನಾನು ಕುಡೀತಿದೇನೆ ಅಂದ್ಕೊಂಡಿದೀಯಾ ? ತಪ್ಪು ತಪ್ಪು ; ಇದು ನನ್ನ ಕುಡಿದುಹಾಕ್ತಿದೆ. . , ಇನ್ನೊಂದು ಸಲ, ಬರೀ 'ಬೀರ್' ಕುಡಿದು ನೋಡೋಣ . . . ಎಲ್ಲಿ, ನಡೀಲಿ, ಏ ಕೃಷ್ಣ, ಕೇಳೊ. ಮಧ್ಯೆ ಅಡ್ಡ ಮಾತು ಆಡಬೇಡ. (Of)— ಇನ್ನೆಲ್ಲಿಂದ? ಮೊದಲನೇ ಅಂಕದಿಂದಲೆ) (End)—ಮೊದಲನೆ ಅಂಕ ಮುಗೀತು. (ನೀಂಗೊ)—ನೀವು ಎಲ್ಲಾ ಬರೆದುಬಿಡಿ. ಮುಂದಿನ ವಾರ ಅಭ್ಯಾಸಮಾಡಿ, ಮುಂದಿನ ತಿಂಗಳು ಒಂದನೇ ತಾರೀಕು ಸ್ಟೇಜ್‌ಮಾಡಿಬಿಡೋಣ. ನಾನು ನಾಳೇನೇ ಸ್ಟೇಜಿಗೆಲ್ಲಾ ಗೊತ್ಮಾಡಿಕೊಂಡು ಬಂದುಬಿಡ್ತೀನೆ. ಹರಿಃ, ನಾನು ಇನ್ನು ಬರ್ತೀನೆ. (ಡೇ)—ಏ ಕೃಷ್ಣಾ ತಂದೆಯವರು ಕೇಳಿದ್ರೇನೋ, ನನ್ನ ? (ನೇತ್ತು)—ನೆನ್ನೆ ಬೆಳಗ್ಗೆ ಕೇಳಿದ್ರು.

ಪಾಪಣ್ಣ* ಎಲ್ಲಿ ಕಾಣಲಿಲ್ವೇ ? ಎಂದ್ರು. ನಾನು ಹೇಳ್ದೆ : ಮೈಸೂರಿಗೆ ಹೋಗಿದ್ದಾರೆ, ಅಂತ. (ಮಡೆಯ)—ಪೆದ್ದ, ತಂದೇವ್ರು, ಯಾಕೆ ಹೋಗಿದ್ದೆ ಅಂತ ನನ್ನ ಕೇಳತಾರೋ, ಹೋಗಲಿ, ಹೋಗು.

೪೧. (Now)— ಎಲ್ಲಿ, ತೊಡಗೋಣ. ಬರಿ—ಅಂಕ ೨, ದೃಶ್ಯ ೧. (ಪ್ರವೇಶ : ಸುಬ್ಬಮ್ಮ ಮತ್ತು ಬೋರ (from)—ಮೊದಲಿಂದ. (Are)—ಜಿನ್ ನೀನು ಕುಡೀತಿದೀಯಾ ? ಇಲ್ಲ, ಜಿನ್ ನಾನು ಕುಡೀತಿದೇನಾ (It)—ಈಗ ಒಂದು ಗಂಟೆ ಆಗಿದೆ . . . ಪ್ರವೇಶ : ಸುಬ್ಬಮ್ಮ ಮತ್ತು ಬೋರ. (For) ದಮ್ಮಯ್ಯಾ, ಕಣ್ಣಿಗಿಷ್ಟು ತಣ್ಣೀರು ಎರಚಿಕೊ.

೪೨. (Let)—ಎಲ್ಲಿ, ಒಂದು ಸಲ ನೋಡೋಣ. ಹಾಲು ಮತ್ತು ಜಿನ್...ಒಂದು 'ಟೇಬಲ್‌ಚಮಚ'†ಜಿನ್ ಮತ್ತು ಮೂರು 'ಡೆಸರ್ಟ್‌ಚಮಚ†' ಹಾಲು . . . ನಿಧಾನವಾಗಿಕೆ ಲಸಮಾಡುತ್ತೆ . . . ಜಿನ್ನೂ-ಸೋಡಾ ಮಾಡೊ ಹಾಗೆ ನೆಗೆಯೋಲ್ಲ . . . ಸಮತೂಕ ತಪ್ಪದ ಹಾಗೆ ಯೋಚಿಸೋಕೆ ಒಳ್ಳೇದು. in a flare—ಹತ್ತಿಕೊಂಡು ಹೊಳೆದಾಗ. (in broad)—ತುಂಬುಹಗಲಿನಲ್ಲಿ ಸ್ತಿಮಿತ ಬುದ್ಧಿಯಿಂದ ತಿದ್ದಿದ್ರೇನೇ ಅದು ಯಾರ ಮುಂದಾದರೂ ಇಡೋ ಹಾಗಿರುತ್ತೆ, ಸಮತೂಕ ಸರಿಯಾಗಿರುತ್ತೆ. (horrible)—ಅಧ್ವಾನದ ಕಾ ಗುಣಿತದ ತಪ್ಪುಗಳು. (You)—ನೀನು ಚೆನ್ನಾಗೇ ಬರೀತಿದ್ದೆ. (An)—ಒಂದು ಗಂಟೆ ಕೆಲಸ. (Don't)—ತಪ್ಪಿದ್ದರೆ ಇರಲಿ. correct—ತಿದ್ದು. (Something)—ಬರೆಸೋದಕ್ಕೆ ಕೂತಾಗಿನಿಂದ ಏನೋ ಮನಸ್ಸಿಗೆ ತೊಂದರೆ ಕೊಡ್ತಿದೆ . . . ಮೇಲಿಂದ ಮೇಲೆ . . . ಆ! ಹಾಳಾಯ್ತು ! ನೋಡ್ದ್ಯ ಆ ಹಾಡು! (I)—ಅವರಿಗೆ ಮನಸ್ಸಂತೋಷಪಡಿಸ್ತಿದ್ದೆ. (That)—ಆ ಸುಡು ಗಾಡು ನನ್ನ ಮನಸ್ಸಿನ ಸಮಾಧಾನ ಈಗ ಕೆಡಿಸ್ತಾ ಇದೆ. ಎಲ್ಲಿ ನೋಡೋಣ. (ಕದಂಬ ಕಂದನ್...)—ಬೆರೆಕೆ ನನ್ ಮಗನೆ, ಕಾಮಾಟಿ ವರದಾ,

ಆರ್ಕಾಟ್ ಹಜಾಮರ ಮಗನೇ,
ನನ್ನ ಕಿವಿ ಪಕ್ದಲ್ಲಿ ಕೂದಲು ಬಿಟ್ಟಿಲ್ಲೋ !

---

* 'ಪಾಪಣ್ಣ' ಎಂಬುದು ಕೈಲಾಸಂ ಅವರನ್ನು ಮನೆಯವರು ಕರೆಯುತ್ತಿದ್ದ ಮುದ್ದು ಹೆಸರು.

† ಮೊದಲನೆಯದು ಚಿಕ್ಕದು, ಎರಡನೆಯದು ಮೂರರಷ್ಟು ದೊಡ್ಡದು.

ಎಲ ಚಂಡಾಳ ಪ್ಪಾಪೀ,
ಅರೆ ರೂಪಾಯಿ ದಂಡ ಆಯ್ತುಲ್ಲೋ!

೮೩. (Now)—ಈಗ, ಮನಸ್ಸಿನಿಂದ ಬಿಟ್ಟ್ಬುಹೋಯ್ತು, ಸುಡುಗಾಡು ಹಾಡು . . . ಇನ್ನು ಕೆಲಸ ಮಾಡೋಣ. (where)—ಕಡ್ಡೀಪೆಟ್ಟಿಗೆ ಎಲ್ಲಿಟ್ಟೆ? . . . ಆನಿಷ್ಟ, ಇಲ್ಲೇ ಇದೆ. (Yes)—ಆಂ, ನಡೀಲಿ . . .ಒಂದ್ನಿಮಿಷ, ಅರ್ಧ ಔನ್ಸು ಜಿನ್, ಜೊತೆಗೆ ಈಗ ಬರೀ ನೀರು. (Now)—ಇನ್ನು ಷುರುಮಾಡು, ನಿಲ್ಲಿಸಲೇಬೇಡ. Enter—ಪ್ರವೇಶ.

೮೪. (Sun)—ಹತ್ತು ಇಪ್ಪತ್ತು ನಿಮಿಷದಲ್ಲಿ ಸೂರ್ಯೋದಯ (See me)—ಸ್ವಲ್ಪ ತಿನ್ನೋವರೆಗೂ ಇಲ್ಲಿರು. (Splendid)—ಸ್ಸೊಗಸಾಗಿದೆ! ಮೊದಲೇ ತಿನ್ನಬೇಕಾಗಿತ್ತು! (I) ಇಷ್ಟೂ ತಿಂದರೆ, ಹಂದಿ ಆಗಿಬಿಡ್ತೇನೆ. ಇಷ್ಟು ಸಾಕು. ಸಣ್ಣದೊಂದು ಬಟ್ಟಲು ಮೊಸರು, ಅಲ್ಲಿಗೆ ತೀರಿತು. ಇಲ್ದಿದ್ರೆ, ಹೊಟ್ಟೆ ಒಳಗಿನ ಪರೆ ಹಾಳಾಗ್ಹೋಗುತ್ತೆ. (Get)—ಕೊಂಚ ನಿದ್ರೆಮಾಡು. ಇನ್ನೂ ಐದು ಗಂಟೆ.

೮೫. Engagement—ನೋಡೋಕೆ ಬರೋದು, ಕರೆಯೋಕೆ ಬರೋದು. (Master)—ಗುರುಗಳು ಇವತ್ತು ಮಾತನಾಡತಾರೆ. ನಾವು ಅದಕ್ಕೆ ತಪ್ಪಿಸಿಕೋಬಾರದು. Purpose—ಕರ್ಮಾರ್ಥ, ಕಾರ್ಯದ ಗುರಿ.

೮೬. Prostrations—ಪ್ರಣಾಮಗಳು. Greetings—ಕುಶಲವನ್ನು ಹಾರೈಸಿ ಸಂಬೋಧಿಸುವುದು.

೮೮. (Director)—ನಿರ್ದೇಶಮಾಡುವವರು, ಕಥೆ ಬರೆಯುವವರು, ರೂಪ ಹೇಗೆತಿದ್ದಿಕೊಳ್ಳಬೇಕೆಂದುನಿರ್ಣಯಿಸುವವರು,ವೇಷ ಹೇಗಿರಬೇಕೆಂದು ಗೊತ್ತು ಮಾಡುವವರು, ಚಿತ್ರ ಹೇಗಿರಬೇಕೆಂದು ಇತ್ಯರ್ಥಮಾಡುವವರು.

೮೯. trade-show—ಚಿತ್ರವನ್ನು ಕೊಂಡುಕೊಳ್ಳುವವರು ನೋಡಿ ಬೆಲೆ ನಿರ್ಧರಕ್ಕಾಗಿ ನಡೆಸುವ ಪ್ರದರ್ಶನ. allowance—ಸಂಬಳದ ಮೇಲೆ ಕೊಡುವ ಕೊಸರು ಹಣ.

೯೦. (Nearing)—ಕೊನೆಗೆ ಹತ್ತಿರ ಬಂದ ಹಾಗೆ...ಇನ್ನೇನು ಬಹುದಿವಸ ಇಲ್ಲ ಅನ್ನಿಸುತ್ತೆ. ಇದೊಂದು ಭರ್ಜರಿಯಾದ ಭಾವನೆ: ಈ ಸಾವು ಅನ್ನೋದು. ಏನುಹೇಳಿದರೂ, 'ಬದುಕು' ಅಂತನ್ನೋದು ಸಾವಿಗೋಸ್ಕರ

ಮಾಡಿಕೊಳ್ಳೋ ಒಂದು ಸುದೀರ್ಘವಾದ ಸಿದ್ಧತೇನೇ ಅಲ್ವೇ. (ಮಾತರ್ಮೇದಿನಿ)—ತಾಯಿಯಾದ ಭೂಮಿಯೆ, ತಂದೆಯಾದ ವಾಯುವೆ, ಗೆಳೆಯನಾದ ಬೆಳಕೆ, ಒಳ್ಳೆಯ ಬಂಧುವಾದ ಜಲವೆ, ಸೋದರನಾದ ಆಕಾಶವೇ ಇದೋ —ನಿಮಗೆಲ್ಲರಿಗೂ ಕೊನೆಯ ಸಲ ಕೈಜೋಡಿಸಿ ಮುಗಿಯುತ್ತಿದ್ದೇನೆ.

೯೧. Rudyard Kipling*—ಇವನು ಇಂಗ್ಲಿಷಿನಲ್ಲಿ ಅನೇಕ ಕತೆಗಳನ್ನೂ ಪದ್ಯಗಳನ್ನೂ, ಬರೆದಿದ್ದಾನೆ. If—'ರೆ.' poem—ಪದ್ಯ.(If you can . . .)—ನಿನ್ನ ಸುತ್ತಮುತ್ತಿನವರೆಲ್ಲ ತಮ್ಮ ಮನಸ್ಸಿನ ಸ್ತಿಮಿತತೆಯನ್ನು ಕಳೆದುಕೊಂಡು ನಿನ್ನನ್ನು ಅದಕ್ಕಾಗಿ ಆಕ್ಷೇಪಿಸುತ್ತಿರುವಾಗ ನೀನು ಸ್ತಿಮಿತದಿಂದ ಇರಲು ಬಲ್ಲೆಯಾದರೆ ; ಎಲ್ಲ ಜನರೂ ನಿನ್ನಲ್ಲಿ ಸಂದೇಹಪಟ್ಟರೂ, ಅವರು ಸಂದೇಹಪಡುವುದಕ್ಕೂ ಅವಕಾಶವಿರಬಹುದು ಎಂದುಕೊಂಡು, ನಿನ್ನ ಆತ್ಮ ವಿಶ್ವಾಸವನ್ನು ಉಳಿಸಿಕೊಳ್ಳಬಲ್ಲೆಯಾದರೆ . . .

೯೨. (Your's . . .)—ಈ ಪೃಥ್ವಿಯೂ ಇದರೊಳಗಿನ ಸಮಸ್ತವೂ ನಿನ್ನದೇ ; ಅಷ್ಟೇ ಅಲ್ಲ—ಅದಕ್ಕಿಂತ ಅಧಿಕವಾಗಿ—ನೀನು ಒಬ್ಬ ಪುರುಷನಾಗುವೆ, ಮಗು.

೯೩. (Poor)—ಪಾಪ, ದೊಡ್ಡ ಆತ್ಮ, ವೆಂಕಟೇಶ್, ಕಟ್ಟಕಡೆಗೆ, ಬಹುಶಃ ಮುಕ್ತಾಯವಾಯಿತು. . .ಬದುಕಿದ್ದಷ್ಟು ದಿನವೂ ಭಯಂಕರವಾದ ನಿಯಮಗಳು. . .ತನಗೆ ತಾನೇ ವಿಧಿಸಿಕೊಂಡದ್ದು . . .ಹಠಯೋಗಿಯ ಹಾಗೆ! ಒಳಗೆ ಬಾ, ವೆಂಕಟೇಶ್ ! (It was)—ಅವರ ಕಡೆಗಾಲದಲ್ಲಿ ನೀವು ಇಲ್ಲಿ ಇದ್ದದ್ದು ಒಳ್ಳೇದಾಯಿತು. Sheer providence—ಕೇವಲ ಅದೃಷ್ಟ. ಎಲ್ರೂ . . . ವ್ಯಾಯಾಮಶಾಲೆ ಹೇಗೆ ನಡೀತಿದೆ ? (It's)—ಎಲ್ಲಾ ಚೆನ್ನಾಗಿದೆ, ಸಾರ್. ನನ್ನ ಸಂತಾಪ ಸೂಚಿಸೋಣ ಅಂತ ಬಂದೆ. (Oh)—ಓ ! ಸರಿ, ಸರಿ, ಏನಿದು ಹುಚ್ಚು, ಮಗು. ಸಾಮಾನ್ಯವಾದ ಅನಿವಾರ್ಯ ಅಲ್ಲವೇ, ಈ ಕೊನೆ ? ಎಷ್ಟು ಬೇಗ ಆದರೆ ಅಷ್ಟು ಒಳ್ಳೇದೆ.

೯೪. (ಕೃಷ್ಣ)—ಕೃಷ್ಣ, ಕೈಲಾಸಂ ಇದಾರೆಯೆ ?

---

* ಕೈಲಾಸಂ ಅವರು ಇದೇ ರಡ್ಯಾರ್ಡ್ ಕಿಪ್ಲಿಂಗಿನ 'Gunga Din' ಎಂಬ ಪದ್ಯವನ್ನು ಹೇಳಿ ಶ್ರೋತೃಗಳನ್ನು ಹೇಗೆ ಮೈಮರೆಯಿಸುತ್ತಿದ್ದರೋ !

೯೫. Homing bird—ಹೊತ್ತಿಗೆ ಸರಿಯಾಗಿ, ತಪ್ಪದೆ, ಗೂಡಿಗೆ ಹಿಂದಿರುಗಿ ಬರುವ ಹಕ್ಕಿ.

೯೬. (ಮಾತರ್ಮೇದಿನಿ) ಇದು ಭರ್ತೃಹರಿಯ ವೈರಾಗ್ಯ ಶತಕದ ಕಡೆಯ ಶ್ಲೋಕದ ಪೂರ್ವಾರ್ಧ. ಪೂರ್ತಿ ಶ್ಲೋಕ ಹೀಗಿದೆ:

ಮಾತರ್ಮೇದಿನಿ ತಾತ ಮಾರುತ ಸಖೇ ತೇಜಃ ಸುಬನ್ಧೋ ಜಲ
ಭ್ರಾತರ್ವ್ಯೋಮ ನಿಬದ್ಧ ಏಷ ಭವತಾಮನ್ತ್ಯಃಪ್ರಣಾಮಾಂಜಲಿಃ
ಯುಷ್ಮತ್ ಸಂಗವಶೋಪಜಾತಸುಕೃತೋದ್ರೇಕಸ್ಫುರನ್ನಿರ್ಮಲ—
ಜ್ಞಾನಾಪಾಸ್ತಸಮಸ್ತ ಮೋಹಮಹಿಮಾ ಲೀಯೇ ಪರೇ ಬ್ರಹ್ಮಣಿ

[ತಾಯಿಯಾದ ಭೂಮಿಯೆ, ತಂದೆಯಾದ ವಾಯುವೆ, ಗೆಳೆಯನಾದ ಬೆಳಕೆ, ಒಳ್ಳೆಯ ಬಂಧುವಾದ ಜಲವೆ, ಸೋದರನಾದ ಆಕಾಶವೆ, ಇದೋ—ನಿಮಗೆಲ್ಲ ಕೊನೆಯ ಸಲ ಕೈ ಜೋಡಿಸಿ ಮುಗಿಯುತ್ತೇನೆ. ನಿಮ್ಮೊಡನೆ ಸೇರಿಕೊಂಡದ್ದರಿಂದ ಉಂಟಾದ ಸುಕೃತದ ಆಧಿಕ್ಯದಿಂದ ಹೊಮ್ಮಿದ ನಿರ್ಮಲವಾದ ಜ್ಞಾನದಿಂದ ಸಮಸ್ತವಾದ ಮೋಹದ ಮಹಿಮೆಯೂ ಕಳೆದುಹೋಗಿ, ಈಗ ನಾನು ಪರಬ್ರಹ್ಮನಲ್ಲಿ ಲೀನವಾಗುತ್ತೇನೆ.]

ಚರಮಶ್ಲೋಕ—ಸತ್ತವರಿಗೆ ಸ್ಮಾರಕವಾಗಿ ರಚಿಸುವ ಶ್ಲೋಕ. ಪಾಪಣ್ಣ—ಕೈಲಾಸಂಅನ್ನು ಮನೆಯವರು ಕರೆಯುತ್ತಿದ್ದ ಮುದ್ದು ಹೆಸರು. Mrs. Hemans—ಇಂಗ್ಲಿಷಿನ ಒಬ್ಬಳು ಪದ್ಯಕರ್ತೆ. (Oh)—ಓ, ನನ್ನ ತಮ್ಮ ನನ್ನು ಹಿಂದಕ್ಕೆ ಕರೆ! ನಾನು ಒಂಟಿಯಾಗಿ ಆಡಲಾರೆ!

[ಮುಂದಿನ ಪುಟಗಳಲ್ಲಿ ಕೈಲಾಸಂ ಅವರು ತಮ್ಮ ಕೊನೆಯ ದಿನಗಳಲ್ಲಿ ಮಾಡಿದ ಎರಡು ಭಾಷಣಗಳನ್ನು ಅನುಬಂಧವಾಗಿ ಕೊಟ್ಟಿದೆ. ಇವುಗಳಲ್ಲಿ ಮೊದಲನೆಯದು: ಅವರು ಮದರಾಸಿನಲ್ಲಿ (೧೯೪೫) ನಡೆದ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿ ಮಾಡಿದ ಭಾಷಣ; ಎರಡನೆಯದು : ಅದೇ ಸಂದರ್ಭದಲ್ಲಿ, 'ಜನಜೀವನವನ್ನು ಪ್ರತಿಬಿಂಬಿಸುವ ಸಾಹಿತ್ಯವೇ ಉತ್ತಮ ಸಾಹಿತ್ಯ' ಎಂಬ ವ್ಯಾಖ್ಯಾನಮಾಲೆಯಲ್ಲಿ ಮದರಾಸಿನ ಎ ಐ ಆರ್. ನಿಲಯದಿಂದ ಅವರು ಪ್ರಸಾರ ಮಾಡಿದ ಭಾಷಣ.

ಮೊದಲನೆಯದನ್ನು ಕೈಲಾಸಂ ಅವರೇ ಮತ್ತೊಮ್ಮೆ ಪರಿಷ್ಕರಿಸಿದ ಅವರ ಹಸ್ತಪ್ರತಿಯಿಂದಲೂ, ಎರಡನೆಯದನ್ನು ಮದರಾಸ್ ನಿಲಯದವರ ಅನುಮತಿಯಿಂದಲೂ, ಎತ್ತಿಕೊಂಡು ಇಲ್ಲಿ ಪ್ರಕಟಿಸಿದ್ದೇವೆ]

ಅನುಬಂಧ

೧. ಸಾಹಿತ್ಯ ಸಮ್ಮೇಳನದ ಅಧ್ಯಕ್ಷಭಾಷಣ

ಕನ್ನಡನಾಡಿನ ಪ್ರತಿನಿಧಿಗಳೆ,

ಈ ಸಲದ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ನನ್ನನ್ನು ಅಧ್ಯಕ್ಷನನ್ನಾಗಿ ಆರಿಸಿ ತಾವು ಹೊಸಗನ್ನಡ ನಾಟಕದ ಮೇಲೆ ತಮಗಿರುವ ಆದರವನ್ನು ವ್ಯಕ್ತಪಡಿಸಿದ್ದೀರಿ. ಅಲ್ಲವಾದರೆ ನಾನು ಈ ಗೌರವಕ್ಕೆ ತಕ್ಕವನೆ? ತಾವು ತೋರಿಸಿದ ಈ ಗೌರವ ನಮ್ಮ ನಾಡಿನ ಸಾತು, ಪಾತು, ನಾಗತ್ತೆ, ಪ್ಯೋಲಿ ಕಿಟ್ಟಿ ಇತ್ಯಾದಿ ನನ್ನ ಬಸುರಿನ ಕೂಸುಗಳಿಗೆ ಸಂದ ಗೌರವ. ನಾನೋ? ಬರಿ ನಿಮಿತ್ತ! ನೆಪ! ಸಾತು ಪಾತುಗಳನ್ನು ನಿಮ್ಮ ಮುಂದೆ ಒಪ್ಪಿಸುವ ಸೂತ್ರಧಾರ. ಆ ಪಾತ್ರಗಳ ಪರವಾಗಿ, ಸಮಾಜ ಬಳಸುತ್ತಿರುವ ಕನ್ನಡ-ನಾಟಕದ-ಪ್ರಪಂಚದ ಪರವಾಗಿ ತಮ್ಮನ್ನು ನಾನು ವಂದಿಸುತ್ತೇನೆ.

ಈ ಬಗೆಯ ಸಭೆ ಸಮ್ಮೇಳನಗಳಲ್ಲಿ ಭಾಗವಹಿಸುವುದು ನನಗೆ ಹೊಸ ಅನುಭವ. ನನ್ನ ಜೀವಕ್ಕೆ ಇದು ಒಗ್ಗುವುದಿಲ್ಲ! ನನ್ನ ಮನಸ್ಸು ಇದಕ್ಕೆ ಬಗ್ಗುವುದಿಲ್ಲ! ನಿಮ್ಮಗಳ ಮುಂದೆ ಬಂದು ನಿಂತು, ಕರ್ಮವೀರನೋಪಾದಿಯಲ್ಲಿ ಆಡಿ, ಮಾತಾಡಿ, ಸಮಾಜದ ರಥಕ್ಕೆ ರಥ್ಯನಾಗಿ ನಿಲ್ಲುವ ಸ್ವಭಾವ ನನ್ನದಲ್ಲ. ನನ್ನ ಸಮಾಜಸೇವೆಯೋ—ಎಲ್ಲೋ! ಯಾವ ಮೂಲೆಯಲ್ಲೋ! ಮುದುರಿಕೊಂಡು . . . ದಾರಿಹೋಕರಿಗೆ ದಾರಿತಪ್ಪಿಸಿ ಎರಡಾರು ಮಾತುಗಳಾಡಿ, ಸುತ್ತಲೂ ನಡೆವುದನ್ನು ಕಣ್ಣಿಂದ ನೋಡಿ ಕಿವಿಯಿಂದ ಕೇಳಿ ಯಾವಾಗಲೋ ಒಂದು ಸಲ ಮನಸ್ಸಿನ ಯಾವುದೋ ಒಂದು ಮೋಡಿಯಲ್ಲಿ, ಕಂಡು-ಕೇಳಿದ ಕೆಲವು ಅಂಶಗಳಿಗೆ ಕಳೆ ತುಂಬಿಸಿ, ನಾಟಕ ಕಟ್ಟಿ, ನಾನೇ ಆನಂದಪಟ್ಟು, ಅದನ್ನು ನಾಲ್ಕಾರು ಜನ ರಸಿಕಮಿತ್ರರಿಗೆ ಹೇಳಿ, ಅವರನ್ನೂ ಆನಂದಪಡಿಸುವ ಸಾಮಾನ್ಯಜೀವಿ ನಾನು! ನನ್ನ ಲೋಕ ಧೀರಕರ್ಮದ ಕರ್ಕಶಲೋಕವಲ್ಲ! ನನ್ನದು—ಮೃದುಲೋಕ! ಹಾಸ್ಯದ ಮೃದುಲೋಕ! ಆದುದರಿಂದ ಕನ್ನಡನಾಡಿನ ಸಾಹಿತ್ಯಪ್ರಪಂಚದಲ್ಲಿ ದೊಡ್ಡ

ದೊಡ್ಡ ಮೋಡಗಳಾಗಿ ಹರಡಿಕೊಂಡಿರುವ ಒಗಟೆಗಳನ್ನು ಬಿಡಿಸಲು ನನ್ನಿಂದ ಸಹಾಯವಾಗದಿದ್ದರೆ ಕ್ಷಮಿಸಬೇಕೆಂದು ಪ್ರಾರ್ಥಿಸುತ್ತೇನೆ.

ಕಲೆಯ ವಿಷಯವಾಗಿ ಈಗ ಹಲವಾರು ಚರ್ಚೆ ನಡೆಯುತ್ತಿವೆ. ಆದರೂ ನನ್ನ ಮನಸ್ಸಿನಲ್ಲೇನೋ ಕಲೆಯ–ಧ್ಯೇಯ–ಗಮ್ಯ–ಗುರಿ–ಸ್ಪಷ್ಟವಾಗಿದೆ. ಕಲೆ ವ್ಯಾವಹಾರಿಕವಾದುದನ್ನು ವಾದಿಸಿ ಸಾಧಿಸಲು ಕಂಕಣ ಕಟ್ಟುವುದಿಲ್ಲ. ಉಪದೇಶ, ಸಮಾಜ ಸುಧಾರಣೆ, ರಾಜಕೀಯ ಪ್ರಚಾರ—ಯಾವುದೂ ಅದರ ನಿಮಿತ್ತವಲ್ಲ. ಯಾವುದೋ ಅವ್ಯಕ್ತ ರೀತಿಯಲ್ಲಿ ಅದೆಲ್ಲವೂ ಸಾಹಿತ್ಯದಿಂದ ಆಗಬಹುದು; ಆಗಿದೆ! ಆಗುತ್ತಲೇ ಇದೆ! ರಾಮಾಯಣದಿಂದ ಏಕದಾರಾವ್ರತ, ಏಕಪತ್ನೀವರ್ತನೆ, ಸತ್ಯಸಂಧತೆ, ಪಿತೃವಾಕ್ಯ ಪರಿಪಾಲನೆ, ಭ್ರಾತೃಪ್ರೇಮ, ಪರಸ್ತ್ರೀವಿಮುಖತೆಗಳ ಪಾಠ, ಓದುವವರ ಮನಸ್ಸಿನಲ್ಲಿ ಮಿಂಚಿನ ಹಾಗೆ ಹೊಳೆದು ಬರಬಹುದು—ಶ್ರೀಮದ್ರಾಮಾಯಣದಿಂದ. ಆದರೆ ವಾಲ್ಮೀಕಿಯ ಪ್ರತಿಭಾಮೂರ್ತಿಯ ಉದ್ದೇಶ ಆ ಪಾಠ ಕಲಿಸುವುದಲ್ಲ. ಅದಕ್ಕಾಗಿಯೇ ಇಷ್ಟು ದೊಡ್ಡ ಕಾವ್ಯ ಬರೆಯಬೇಕಾಗಿರಲಿಲ್ಲ. ತನ್ನ ಆತ್ಮದ ಅಭಿರುಚಿಗೆ ಕಂಡುಬಂದ ಕೆಲಹಲವು ಪಾತ್ರಗಳನ್ನು ಸೃಷ್ಟಿಸಿಕೊಂಡು ಆದಿಕವಿ ಅವಕ್ಕೆ ಜೀವ ಉಸುರಿದ! ಆದ್ದರಿಂದ 'ಸತ್ಯಂ ವದ! ಧರ್ಮಂ ಚರ!' ನೀತಿಯನ್ನು ಮರೆತು 'ಮಿಥ್ಯಂ ವದ! ಮರ್ಮಂ ಚರ!' ಎಂದವನಿಗೂ ಶ್ರೀರಾಮ ಬೇಕು! ಅತಿಕಾಮಿಗೂ ರಾಮಾಯಣ ಇಷ್ಟ. ಬಹು ಪತ್ನೀಕನಿಗೂ ಅಷ್ಟೇ ಇಷ್ಟ.

ನಮ್ಮ ಈ ವಿಶಾಲ ಮೇದಿನಿಯನ್ನೇ ತೆಗೆದುಕೊಳ್ಳೋಣ. ಇದನ್ನು ಸೃಷ್ಟಿ ಮಾಡಿದ ಬ್ರಹ್ಮನಿಗೇನು ಉದ್ದೇಶ? ಅವನೇ ಸೃಷ್ಟಿಸಿದ ಮಲ್ಲಿಗೆ ಘಮಘಮಿಸುವುದರಲ್ಲಿ ಏನು ಉದ್ದೇಶ? ಏನು ನೀತಿ? ಅಂತಃಕರಣವನ್ನು ಅಲುಗಾಡಿಸುವುದು! ಇದೇ ಕಲೆಯ ಕೆಲಸ. ವ್ಯವಹಾರದ ಜಡತೆಯಿಂದ ಜೀವವನ್ನು ಎಬ್ಬಿಸಿ, ಅರಸಿಕತೆಯ ಸೆರೆಯಿಂದ ನರರನ್ನು ಬಿಡಿಸುವುದು ಅದರ ಗಮ್ಯ. ಉತ್ತಮ ಅಪ್ರತಿಮ ವ್ಯಕ್ತಿಗಳನ್ನು ಅರಸುವುದು ಜೀವನದ ಗುರಿ ಎಂದು ಸಮಾಜಶಾಸ್ತ್ರ ಹೇಳುತ್ತದೆ. ಇದರ ಗುರಿ, ವಿಕಾಸ—ಕಲೆಯಲ್ಲೂ ಇಷ್ಟೆ. ಕಲಾಧರ್ಮವು ಆಯಾ ಕಾಲದ ವ್ಯಕ್ತಿಗಳನ್ನು ಆರಿಸಿ ರೂಪಿಸುತ್ತದೆ! ಕಲಾಕೋವಿದನ ಕೈವಾಡದಿಂದ ಸಾಧಾರಣ ವ್ಯಕ್ತಿಗಳೂ ಅಪ್ರತಿಮರಾಗುತ್ತಾರೆ. ಪಾತ್ರಗಳು ನೀತಿವಂತರಾಗಿರಬಹುದು, ದುರ್ನೀತಿವಂತರಾಗಿರ

ಬಹುದು ; ಕಲಾವಿದನ ಸಂಸ್ಕಾರವನ್ನು ಅನುಸರಿಸಿಯೇ ಈ ಆಯ್ಕೆ. ಇದಕ್ಕೆ ಯಾರ ಸಮರ್ಥನೆಯೂ ಬೇಡ! ಕಾಲಕ್ರಮೇಣ ಆಯಾ ಗ್ರಂಥಗಳಿಗೆ ಸಿಗುವ ಮನ್ನಣೆಯೇ ಸಮರ್ಥನೆ. ಆನಂದದಾಯಕವಾದ ಭಾಸನ ಕಲೆ ಎಂದಾದರೂ ಕಂದೀತೇ ? ಇದಕ್ಕೆ ಕಾರಣ—ಸ್ರಷ್ಟುವಿನ ಬಿತ್ತನೆಯಿದ್ದಂತೆ. ವಿಚಾರ ಪ್ರಚಾರವಲ್ಲ! ಕುಯಿಲು —ಬಿತ್ತಿ ಬೆಳಸಿದಂತೆ, ಬಯಸಿದಂತಲ್ಲ!

ನಾನು ನಾಟಕ ಬರೆಯಲು ಮೊದಲು ಮಾಡಿದ್ದು—ನಾಟಕ ಬರೆಯುವ ಬಯಕೆಯಿಂದಲ್ಲ! ಸಮಾಜವನ್ನು ಪ್ರತಿಬಿಂಬಿಸಲೋಸುಗ! ಇದನ್ನು ಮೊದಲು ಮಾಡಿದಾಗ—ಈಗ ನನ್ನದೆಂಬ ನಾಟಕಗಳಲ್ಲಿ, ನಮ್ಮೀ ಸಮಾಜದಲ್ಲಿ . . . ಬಳಕೆಗೆ ಬಂದಿರುವ ಭಾಷೆಯನ್ನು—ಕನ್ನಡ, ಆಂಗ್ಲೋ, ತೆಲುಗು, ತಮಿಳು, ಉರ್ದು, ಕೇರಳಗಳನ್ನು—ಉಪಯೋಗಿಸಬೇಕೆ ? ಬೇಡವೆ ? ಉಪಯೋಗಿಸಿದರೆ ಸರಿಯೆ ? ತಪ್ಪೆ ? ಎಂಬ ತೊಡರುಗಳು ನನಗಿರಲಿಲ್ಲ ! ಏಕೆಂದರೆ ಜನಜೀವನ ಪ್ರತಿಬಿಂಬನ ನನ್ನ ಗುರಿ. ಸಾಹಿತ್ಯೋಪಾಸಕನಲ್ಲ ನಾನು ! ಭಾಷೆಯು ಗ್ರಂಥಕ್ಕೆ ಯೋಗ್ಯವೆ? ಅಯೋಗ್ಯವೆ ? ಎಂಬ ವಾದ—ವಿಮರ್ಶಕರ ಕಸುಬು ! ನನ್ನ ನಾಟಕದ ಭಾಷೆ ತಪ್ಪಾದರೆ, ನಮ್ಮ ಶಿಷ್ಟಜನ ನುಡಿಯುವ ನುಡಿಯೇ ತಪ್ಪು ! ತಪ್ಪು—ನನ್ನದಲ್ಲ ! ಟೊಳ್ಳುಗಟ್ಟಿಯ ಸಾತು, ಪಾತು, ನನ್ನ ಮನಸ್ಸಿನ ಅಂಗಳದಲ್ಲಿ ಹುಟ್ಟಿ ಬೆಳೆದವರೇ ಅಲ್ಲದೆ ಅವರು ಆಡಿದ ಮಾತಿನ ವೈಖರಿ, ಅವರ ಭಾಷೆ ನನ್ನ ಮನಸ್ಸಿನಲ್ಲಿ ಹಾಗೆಯೇ ಮೂಡಿ ಗಟ್ಟಿಸಿತು. ನಮ್ಮ ಮನೆಗಳಲ್ಲಿ ನಮ್ಮವರು ಮಾತನಾಡುವಾಗ ಅವರ ಮಾತುಕತೆಗಳು ನಮ್ಮ ಮನ ತಟ್ಟುತ್ತವೆ. ಏನೆಂದರೂ 'ನೆರೆಹೊರ್ಕೆ ನೆರೆಹೊರ್ಕೆನೇವೇಯೇ.' ಕಲಾಕೋವಿದ ಅವನ್ನು ಗಮನಿಸುತ್ತಾನೆ. ಅದೇ ಜನ ನಾಟಕದಲ್ಲಿ ಬಂದು ಮಾತನಾಡಿದರೆ ಅವರ ಭಾಷೆ ಹೇಗೆ ಬದಲಾದೀತು? ಸಾಹಿತ್ಯದೃಷ್ಟಿಯಲ್ಲಿ ಬದಲಾಯಿಸಲಾದೀತೆ ? ಕತೆ ಕಾದಂಬರಿಯ ಮಾತು ಹೇಗಾದರೂ ಆಗಲಿ, ಪರದೆ ಸಂಗೀತ ಇತ್ಯಾದಿ ಉಪಕರಣಗಳ ಹಿನ್ನೆಲೆಗಳಲ್ಲಾಗಲಿ ಪಾತ್ರಗಳ ನೈಸರ್ಗಿಕತೆ ಹ್ಯಾಗ್ಯಾಗೋ ಹಾಗ್ಹಾಗೆ—ಉಡುಪು ನುಡಿ ಇತ್ಯಾದಿಗಳು ನಾಟಕ ಕರ್ತೃವಿನ ಸಂದೇಶವನ್ನು ಸಲ್ಲಿಸುವ ನಿಮಿತ್ತಕ್ಕೆ . . . ನಾಟ್ಯಕಲಾ ಸಾರ್ವಭೌಮ ಕಾಳಿದಾಸನು ಸೂತನ ಬಾಯಲ್ಲಿ 'ವಸಂತ ತಿಲಕ' ಶ್ಲೋಕವನ್ನು ನುಡಿಸಿದರೂ ಕಥಾನಾಯಕಿಯಾದ ಶಕುಂತಲೆಯ

ಬಾಯಲ್ಲಿ . . . ಇಡೀ ಕರ್ಣಾಟಕದಲ್ಲಿ ಒಂದೊಂದು ನಾಟಕದ ಒಂದೊಂ
ನಾಯಕಿಯೂ ನುಡಿಯುವ . . . 'ಆರ್ಯಪುತ್ರ' ಎಂಬುದನ್ನು ಬಿಟ
'ಅಜ್ಜವುತ್ತ' ಎಂದು ನುಡಿಸಿದ್ದೇ ಕೈಲಾಸಂ ನಾಟಕಗಳ ಭಾಷಾ ವೈಖರಿ
ಮೇಲ್ಪಂಕ್ತಿ. "ನಾಟಕೋ ರಮ್ಯಂ ! ಭಾಷೋ ಆಭಾಸಂ !" ಇತಿ ಕೈಲಾಸ
ಸೃಷ್ಟಿ ಯಥಾಪೂರ್ವವಲ್ಲ. 'ಇತಿಹಾಸವು' ಪುನಃಪುನಶ್ಚ 'ಸಂಭವಾ
again and again'ಮಾಡ್ಕೊಳ್ಳಿ ! ಆದ್ರೆ . . . ಅನುಭವದಲ್ಲಿ ತಂದೆ
ಹಾಗೆಯೇ ತದ್ವತ್ ಮಗ ಹುಟ್ಟದ್ದಿಲ್ಲ ! ಹುಟ್ಟಲ್ಲ ! ಹುಟ್ಟೋಲ್ಲ ! 'ಮಗನ
ಏನೋ ಹೊಸ ವಿಲಕ್ಷಣತೆ ಇದೆ', ಅನ್ನುತ್ತಾನೆ ಅಪ್ಪ. 'ಅಪ್ಪನಲ್ಲಿ ಏನೋ
ವಿಲಕ್ಷಣತೆ ಇದೆ' ಅನ್ನುತ್ತಾನೆ ಮಗ ! ಹುಟ್ಟಿದ ವ್ಯಕ್ತಿಯು ಸಮಾಜದ
ಒಂದು ಅಂಶ. ಸಮಾಜದಲ್ಲಿ ತಂದೆ ತಾಯಿ ಬಂಧು ಬಳಗ ಈ ಮಮತ
ಜಾಲವನ್ನು ತಪ್ಪಿಸಿಕೊಂಡು—ವ್ಯಕ್ತಿತ್ವವನ್ನು ಅಳಿಸಿಕೊಂಡು ಸಮಾಜವನ
ಸೃಷ್ಟಿಸಿದಾಗ 'ಅಹಂ' ಕಾರ ದಮನವಾಗಿ, ಪ್ರಕೃತಿಯ ಸಹಜ ಸಮರಸ
ಅಂಕುರಿತವಾಗಿ, ಆ ಕ್ಷಣದಿಂದ ಹೊಸ ಬದುಕು,ಹೊಸ ಸೃಷ್ಟಿಹುಟ್ಟುವುದು
ಬದುಕಿನಲ್ಲಿ ಮೊಬ್ಬಾಗಿ ಮುಸುಕಾಗಿ ಮಸುಕುಮಸುಕಾಗಿ ಸಾಧಾರಣ ಜನರ
ಜೀವನದಲ್ಲಿ ಕಂಡುಬರುವ ಸಮಾಜವು ಕಲಾಕೋವಿದನ ಕಣ್ಣಿಗೆ ಸ್ಪಷ
ವಾಗಿ ಕಂಡುಬರುವುದು. ಜನರ ಮಾತಿನಲ್ಲಿ, ಅಲ್ಲಿ, ಇಲ್ಲಿ, ಆಗ, ಈಗ, ಬಿಡಿಬಿ
ಯಾಗಿ ಕೇಳಿಬರುವ ಒಂದು ಬಗೆಯ ಮಾತಿನ ಧಾಟಿ, ಇತ್ಯಾದಿ, ಇವುಗಳನ
ಇಂಗಿತಮಾಡಿಕೊಂಡು ಕವಿ ಕಾವ್ಯದ ಮೂಲಕ ನೂಲಿನಂತೆ ನೀಳನೀಳಕೂ
ನೂತುಕೊಂಡು ಆತ್ಮೋಲ್ಲಾಸದ ಫಲವನ್ನು ಸಮಾಜಕ್ಕೆ ಒಪ್ಪಿಸುತ್ತಾನೆ
ಅವರಿವರಲ್ಲಿ ಸೂಕ್ಷ್ಮವಾಗಿ ಕಾಣುವ ಗುಣಹೀನತೆ ಒಟ್ಟಿಗೆ ಹೊಸೆದುಕೊಂಡ
ಹುರಿಯಾಗಿ ಹಾವಿನಂತೆ ಹೆಡೆಯೆತ್ತುತ್ತದೆ. ಗುಣಸಂಪನ್ನತೆ ಒಟ್ಟಿಗೆ ಸೇರಿ
ವ್ಯಕ್ತವಾಗುತ್ತದೆ. ರಕ್ತದೊಳಗಿನ ರೋಗಾಣು ಬರೀ ಕಣ್ಣಿಗೆ ಕಾಣುವುದಿಲ್ಲ
ವೈದ್ಯರು ಅದನ್ನೇ ಭೂತಗನ್ನಡಿಯ ಅಡಿಯಲ್ಲಿಟ್ಟರೆ ಆಗ ಅದು ಬೃಹತ್ತಾ
ಕಾಣಿಸುತ್ತದೆ. ನಮ್ಮ ಗುಣಾವಗುಣ, ಸತ್ಯಾಸತ್ಯ—ವ್ಯವಹಾರದಲ್ಲಿ ಆ ಅಣ
ವಿನಂತೆ—ಕಾವ್ಯದ ಭೂತಗನ್ನಡಿಯಲ್ಲಿ ಬೃಹದ್ರೂಪಿ. ಹಾಗಲ್ಲದಿದ್ದರೆ ಕಾವ್
ಸೃಷ್ಟಿ ಗಿರಣಿಯ ಮಾಲಿನ ಹಾಗೆ. ಬರೀ ತತ್ತದ್ರೂಪೇ ಆದರೆ ವಿಕಾಸವ
ತೊಲಗಿಹೋಗುತ್ತದೆ ! ಜಡಸೃಷ್ಟಿಯಲ್ಲೂ ಇದೇ ರೀತಿ.

"ಸಾಹಿತ್ಯದಲ್ಲಿ ಯಾವ ರಸ ಶ್ರೇಷ್ಠ ?" ಎಂದು ಕೆಲವರು ಕೇಳುತ್ತಾರೆ. "ಲೋಕೋ ಭಿನ್ನರುಚಿಃ." ರುಚಿಯಂತೆ, ಅವರ ಇದರ ಉಪಯುಕ್ತತೆಯಂತೆ, ತೀರ್ಮಾನ. ಸಂಸ್ಕಾರ ಜೀವನ ಪರಿಸ್ಥಿತಿಗಳಂತೆ ಉಪಯುಕ್ತತೆ, ರುಚಿ. 'ರುಚೀಣಾಂ ವೈಚಿತ್ರ್ಯಾತ್ ಋಜುಕುಟಿಲ ನಾನಾ ಪಥಯುಷಾನ್' ಎಂದಂತೆ. 'ನಮ್ಮ ದೇಶವನ್ನು ಪುನಃ ನಿರ್ಮಿಸುವ ಈ ಕಾಲಕ್ಕೆ ವೀರರಸವೊಂದೇ ಬೇಕು' ಎನ್ನುವವರಿದ್ದಾರೆ. 'ಈಗ ಬೀಭತ್ಸ ಕರುಣೆಗಳು ಆಗತ್ಯ' ಎಂಬವರೂ ಇದ್ದಾರೆ. ಶೃಂಗಾರಕ್ಕಂತೂ ಯಾವಾಗಲೂ ಭಕ್ತರು ಇದ್ದೇ ಇದ್ದಾರೆ. ನನ್ನ ಮಟ್ಟಿಗೆ ನನಗೆ ಹಾಸ್ಯದ ಮುಖವಾಡವೇ ಬೇಕು ಎನಿಸಿತು. ನನಗೆ ಅದು ಸಹಜ. ನನಗೊಂದು ವಕ್ರದೃಷ್ಟಿ ಇದೆ. ಐರಾವತಕ್ಕೂ ಅಡಿ ಜಾರುತ್ತೆ. ಸಮಾಜದಲ್ಲಿ ದೊಡ್ಡವರ ಕೊಂಕುಗಳೂ ಬಡಬಗ್ಗರ ನಮ್ರತೆಯಿಂದ ಹುಟ್ಟಿದ ಔನ್ನತ್ಯವೂ ಕಾಣುತ್ತದೆ. ಸಮಾಜ ಸರಿ ಎಂದು ಮೆಚ್ಚುವ ಕಡೆ ಎಲ್ಲೋ ಐಬು ಕಾಣುತ್ತದೆ, ನನ್ನ ಕಣ್ಣಿಗೆ. ಸಮಾಜದಲ್ಲಿ ಈ ನನ್ನ ವಕ್ರದೃಷ್ಟಿ ಇರುವುದಿಲ್ಲ. ಸಾಧಾರಣವಾಗಿ ನಿರ್ದೋಷವೆಂದು ಕಂಡದ್ದರಲ್ಲಿನ ಲೋಪ ಈ ನನ್ನ ವಕ್ರದೃಷ್ಟಿಗೆ ಎದ್ದು ಕಾಣುತ್ತದೆ. ದೋಷವೆನಿಸಿಕೊಂಡದ್ದರಲ್ಲಿ ಗುಣವಿದ್ದರೆ ಅದೂ ಕಾಣುತ್ತದೆ. ಬಿಳಿಯ ಬಣ್ಣದಲ್ಲಿ ಅಡಗಿದ ಏಳು ಬಣ್ಣಗಳಂತೆಯೇ ಅನೇಕಾನೇಕ ಪರೆ ಇವೆ, ಜೀವನದಲ್ಲಿ. ಸಾಧಾರಣ ದೃಷ್ಟಿಗೆ ಈ ಒಂದೇ ಬಿಳಿಯ ಬಣ್ಣವು ಕಂಡು ಬಂದರೂ ನನ್ನವಕ್ರದೃಷ್ಟಿಗೆ ಸಹಸ್ರಾರು ಬಣ್ಣಗಳು ಕಂಡುಬರುತ್ತವೆ. ಹಾಸ್ಯದೃಷ್ಟಿಯ ಭೂತಗನ್ನಡಿಯಲ್ಲಿ ಜನರು ನಿಸ್ಸಂಕೋಚವಾಗಿ ತಮ್ಮನ್ನು ತಾವೇ ನೋಡಿಕೊಳ್ಳುವುದು ಬಹಳ ಸುಲಭ. ತಮ್ಮನ್ನು ನೋಡಿ ತಾವೇ ನಗುತ್ತಾರೆ. ಹಾಸ್ಯದ ಗಮ್ಯ-ಉಲ್ಲಾಸ, ರೋಗಿಗೆ ಪಥ್ಯವಿದ್ದಂತೆ. ಜನಕ್ಕೆ ಮನಸ್ಸು ಕುಗ್ಗಿದಾಗ, ಹಾಸ್ಯ ಅದನ್ನು ಅರಳಿಸುತ್ತದೆ. ಲೋಕ ಜಡವಾದಾಗ, ಹಾಸ್ಯ ಅದನ್ನು ಚೇತರಿಸುತ್ತದೆ.

ಹಾಸ್ಯದ ಶಕ್ತಿ – ಕ್ಲಾಂತಿಯಿಂದ ಮುಕ್ತಿ. ವ್ಯಷ್ಟಿತ್ವವನ್ನು ಮರೆಸಿ ಸಮಷ್ಟಿತ್ವವನ್ನು ಗೋಚರಮಾಡಿಸುವ ಶಕ್ತಿ – ಹಾಸ್ಯ. ಅದನ್ನು ಕಾವ್ಯದಲ್ಲಿ ಬಳಸಿದರೆ ಪ್ರಯೋಜನವುಂಟು. ಆಂಗ್ಲರಲ್ಲಿ ಹಾಸ್ಯ ಬೆಳೆದ ಹಾಗೆ ನಮ್ಮ ಕಾವ್ಯಗಳಲ್ಲಿ ಬೆಳೆದಿಲ್ಲ. ನಮ್ಮ ಜನರಲ್ಲಿ ಹಾಸ್ಯಪ್ರಿಯತೆಯೇನೂ ಕಡಮೆಯಿಲ್ಲ. ಆದರೆ ಅದನ್ನೇ ಕ್ರಮವಾಗಿ ಬಳಸಿ, ಅದರಿಂದ ಫಲವನ್ನು ನಾವು ಪಡೆದಿಲ್ಲ.

ಕೇವಲ ಹಾಸ್ಯವನ್ನೇ ಆಧಾರ ಮಾಡಿಕೊಂಡು ಕತೆಗಳನ್ನು ಬರೆದವರ ನಮ್ಮಲ್ಲಿ ಕಡಮೆ. ಆಂಗ್ಲೇಯರ ಅಣಕವಾಡು, ಲಿಮರಿಕ್ (ಪಂಚಪಂಕ್ತಿ) ಇತ್ಯಾದಿ ಆಯುಧಗಳು ನಮ್ಮಲ್ಲಿ ವಿರಳ. ಬರಿ ಹಾಸ್ಯದ ನಾಟಕ ಹೆಚ್ಚಾಗಿ ಬೆಳೆದಿಲ್ಲ. ಮೊದಲಿಂದ ಕೊನೆಯವರೆಗೂ ಪುರಾಣ, ಇತಿಹಾಸ, ಕಾದಂಬರಿ ಗಳೇ ಇವೆ. ನಿರ್ಮಲ ಹಾಸ್ಯ ಸೃಷ್ಟಿ ಹೆಚ್ಚಾಗಿ ಆಗಬೇಕು.

ಇದು ವ್ಯಂಗ್ಯಚಿತ್ರಗಳ ಕಾಲ. ವ್ಯಂಗ್ಯ ಚಿತ್ರ ಮಾತನ್ನು ಮನಮುಟ್ಟು ವಂತೆ ತಿಳಿಸುತ್ತದೆ. ಇದು ವಿದೂಷಕ ಸಮ್ಮಿತಿಯ ಕಾಲ. ಜನಪದ ಸಾಹಿತ್ಯ ದಲ್ಲಿ ಈ ಸಮ್ಮಿತಿಯೇ ಮುಖ್ಯ. ರಾಜಸಮ್ಮಿತ ಕಾಂತಾಸಮ್ಮಿತಗಳಿಗಿಂತ ಪ್ರಕೃತದಲ್ಲಿ ಈ ಸಮ್ಮಿತವನ್ನು ಬಳಸಿ ಸಾಧಿಸಬೇಕು.

ಹಾಸ್ಯವು ಮಿಂಚಿನಂತೆ. ಅದನ್ನು ಬೆಳಕಾಗಿ ಉರಿಸಲಾಗದು. ಆದರೆ ಅಂಧಕಾರಮಗ್ನರಿಗೆ ಕ್ಷಣಮಾತ್ರ ಪರಿಸ್ಥಿತಿಯನ್ನು ತೋರುವುದು – ಇದೇ ಹಾಸ್ಯ. ಹಾಸ್ಯ ನಿರ್ಮಲವಾಗದಿದ್ದರೆ, ಹಾಸ್ಯ ಅಪಹಾಸ್ಯವಾಗಿ ವಿಘಾತ ವಾಗಿ ಪರಿಣಮಿಸುತ್ತದೆ. ಶಸ್ತ್ರವೈದ್ಯನ ಶಸ್ತ್ರದಂತೆ ಹಾಸ್ಯ ಅನನ್ಯಚಿತ್ತವಾಗಿರ ಬೇಕು. "ಕಂಡದ್ದು ಕಾಣಿಸದ ಹಾಗೆ ಕಾಣಿಸಿದರೆ, ಕಬ್ಬಿಣದಂತಹ ಸ್ನೇಹ".

ಹಾಸ್ಯವು ವಿಕಟತನವಲ್ಲ. ಕೇವಲ ಕುಚೋದ್ಯಕ್ಕಾಗಿ, ಪರಿಣಾಮದ ಕಡೆಗೆ ಲಕ್ಷ್ಯಕೊಡದೆ ಮಾಡಿದ ಹಾಸ್ಯ ಬಹುವೇಳೆ ಅನರ್ಥಕಾರಿ! ಆದ್ದರಿಂದಲೇ

The barque of humour often veers
From shoals of smiles to seas of tears

ನನ್ನ ನಾಟಕದಲ್ಲಿ ವಿಲಕ್ಷಣವಾದ ಮಾರ್ಪಾಟಾಗಿ ನೂತನ ಮಾರ್ಗವೇ ಒಂದು ರೂಢವಾದಂತೆ ಸಾಹಿತ್ಯದ ಇತರ ಭಾಗಗಳಲ್ಲಿ ಇನ್ನೂ ಹೆಚ್ಚಿನ ಕೆಲಸ ನಡೆಯು ಲವಕಾಶವಿದೆ, ಎಂದು ನನ್ನ ಮಿತ್ರರೂ ಅಲ್ಲದೆ ಕನ್ನಡನುಡಿಯು ಹಿತೈಷಿಗಳೂ ಸಾಧಿಸಿ, ವಾದಿಸಿ ನನ್ನನ್ನು ಒಡಂಬಡಿಸಿದಾರೆ. "ಹಿರಿಯರು ಹೊಸಕಾಲದ ಭಾವನೆಗೆ, ಹೊಸ ಜನಾಂಗದ ರಸಭಾವಕ್ಕೆ ರೂಪುಕೊಡದೆ ತಮ್ಮ ನೇತೃತ್ವ ವನ್ನು ಅಳಿಸುತ್ತಿದ್ದಾರೆ" ಎಂದು ಕಿರಿಯರು ದೂರುತ್ತಿದ್ದಾರೆ. ಲೋಕವೆಲ್ಲ ಪರಿ ವರ್ತನವಾಗುತ್ತಿದೆ. ಇಷ್ಟು ದಿನ ಕೇಳಿಬಾರದೆ ಇದ್ದ ಲೋಕದ ದುಃಖಸಂಕಟ ಗಳು ಈಗ ಕಿವಿ ಸೀಳುವ ಹಾಗೆ ಕೇಳುತ್ತಿವೆ. ಭಕ್ತಿಗಾಗಿ ಕಣ್ಣಪ್ಪ ಕಣ್ಣು ಕೊಟ್ಟಂತೆ ಈಗ ತಮ್ಮ ಧ್ಯೇಯಕ್ಕೆ ತರುಣರು ಪ್ರಾಣ ಒಪ್ಪಿಸುತ್ತಿದ್ದಾರೆ. ಅನೇಕ

ಪುರಾತನ ಸಂಪ್ರದಾಯ ಈಗ ಸೋತುಬಿದ್ದಿವೆ! ನಮ್ಮ ನಾಗರಿಕತೆ ನಮ್ಮ ಮುಂದೆಯೇ ಹಾಳು ಬೀಳುತ್ತಿದೆ. ಆದರೂ ಮತ್ತೊಂದು ಬೆಳೆಯುತ್ತಿದೆ. ಅದರಲ್ಲಿ ಸರ್ವಸಮಾನತೆಯೇ ಮುಖ್ಯ ಸೂತ್ರ. ಇದಕ್ಕೆಲ್ಲ ಹಿರಿಯರು ವಿಮುಖರಾಗಿ ಇದ್ದುಕೊಂಡು ಪ್ರಾಚೀನ ಗಾದೆಗಳಲ್ಲೇ ಮುಳುಗಿದಾರೆಂದು ಗತವೈಭವ ಸ್ಮರಣ–ಆ ವೇಷ– ಗಳಲ್ಲೇ ಇದ್ದಾರೆಂದು ಕಿರಿಯರು ಆಕ್ಷೇಪಿಸುತ್ತಿದ್ದಾರೆ. ಇವು ದಿಟವಾದರೂ, ಅಪಕ್ವಾನುಭವದ ಅಸಂಪೂರ್ಣಚೇತನದ ಎಳಕರು ಸಾಹಿತ್ಯ ಕ್ರಾಂತಿಗೆ ಕೈಹಾಕಿ ಹೀಚುಮಿಡಿಗಳನ್ನು ತಂದು ಬಾಯಿರುಚಿಯನ್ನೇ ಕೆಡಿಸುತ್ತಿದ್ದಾರೆಂದು ಕೇಳಿದೇನೆ. ಇದು ನಿಜವೋ ಅಲ್ಲವೋ ಎಂಬುದನ್ನು ನಾನರಿಯೆ.

ಹೊಸದು ಎಂಬುದು ನಮ್ಮನ್ನು ಹೆದರಿಸಬೇಕಾಗಿಲ್ಲ. ಹಳದೆಲ್ಲವೂ ಕಹಿಯೇ ಅಲ್ಲ. ಅದನ್ನೂ ಇದನ್ನೂ ಧಾರಾಳವಾಗಿ ಬಳಸಿಕೊಂಡೇ ನಾನು ನನ್ನ ಕೆಲಸವನ್ನು ಮಾಡಿದೇನೆ. ಲೋಕದಲ್ಲಿ ನಿಜವಾಗಿಯೂ ಹೊಸದು ಯಾವುದು ? ಹಳದು ಯಾವುದು ? ಸರ್ವಜ್ಞನ ಪದ್ಯ ಎಂದಿಗೆ ಹಳೆಯದಾಗಬೇಕು ? ಹಳೆಯದನ್ನೂ ಹೊಸದನ್ನೂ ಸರಿಯಾಗಿ ಹೊಸೆಯುತ್ತ ಹೋಗುವುದೇ ಜಾಣತನ ; ಸಮಾಜಕ್ಕೆ ಲಕ್ಷಣ, ಉಪಕಾರ. "ಅತಿ ಸರ್ವತ್ರ ವರ್ಜಯೇತ್."

ನಾಟಕದ ತುಂಬ ಶ್ರಮಜೀವಿಗಳನ್ನು ತುಂಬಿ ಅವರಿಂದ ನಿಟ್ಟುಸಿರು ಬಿಡಿಸಿದ ಕ್ಷಣವೇ ನಾಟಕ ಆನಂದದಾಯಕವಾಗುವುದಿಲ್ಲ. ಅಥವಾ ಚಮಕಿ ಅಂಗರೇಖೆ, ಸುರವಾಲು, ನೀರಾಜಿರುಮಾಲುಗಳ ರಾಜರನ್ನು ತಂದು ಕುಣಿಸಿದರೂ ಫಲವಿಲ್ಲ !

ಹಾಗಲ್ಲದೆ ಬರಿ ವಾದವಿವಾದದಲ್ಲಿ ತೊಡಗಿದರೆ ಆಗುವುದು ಸಮಾಜನಿಂದೆ – ಸಾಹಿತ್ಯವಲ್ಲ.

ಗುಣಕ್ಕೆ ಮತ್ಸರವಿಲ್ಲವೆಂಬುದು ಎಷ್ಟು ನಿಜವೋ, ಮತ್ಸರಕ್ಕೆ ಗುಣವಿಲ್ಲವೆಂಬುದು ಅದಕ್ಕಿಂತಲೂ ನಿಜ. ವಿಮರ್ಶೆ ವಿಮರ್ಶಕರಿಗಿರಲಿ, ಅದು ಅವರ ಕಸುಬು. ಕಲೋಪಾಸಕರಿಗೆ ಕಲಾದೃಷ್ಟಿಯೊಂದೇ ಲೋಕ, ಆತ್ಮೋಲ್ಲಾಸ.

ರಸಗಳೆಲ್ಲ ಒಂದಕ್ಕೊಂದು ಜೊತೆಯಾಗಿ ಆನಂದವರ್ಧಕವಾಗುವಂತೆ, ನಮ್ಮ ಬಾಳು. ನಮ್ಮ ಕನ್ನಡನಾಡಿನಲ್ಲಿ ನಾನಾ ಭಾಷೆಯ ಜನರಿದ್ದೇವೆ. ಅದರಲ್ಲೂ ತಮಿಳು, ತೆಲುಗು, ತುಳು, ಕೊಂಕಣಿ, ಮರಾಠಿ, ಉರ್ದು, ಇಂಗ್ಲೀಷು

ಇತಿ ನಾನಾ ವಿಧದ ಜನ ಕನ್ನಡನಾಡಿನ ಜನರನ್ನು ಸೇರಿ ಕರ್ಣಾಟಕಸ್ಥರಾಗಿದ್ದಾರೆ. ಇವರಲ್ಲಿ ಯಾರನ್ನೂ ಕರ್ಣಾಟಕರಲ್ಲವೆನ್ನುವಂತಿಲ್ಲ. ಎಲ್ಲರಿಗೂ ಕನ್ನಡವೇ ಪ್ರಧಾನ. ತಮ್ಮ ತಾಯಿನುಡಿ ಯಾವುದೇ ಇರಲಿ, ಎಲ್ಲರೂ ಸಾಧ್ಯವಿದ್ದ ಮಟ್ಟಿಗೆ ತಮ್ಮ ತಮ್ಮ ಕ್ಷೇತ್ರದಲ್ಲಿ ಕರ್ನಾಟಕದ ಕೆಲಸ ಮಾಡಿದ್ದಾರೆ. ನಾನೇ ತಮಿಳ. ಪರಿಷತ್ತಿನ ಉಪಾಧ್ಯಕ್ಷರಾದ ನನ್ನ ಹಿರಿಯ ತಮ್ಮ ಮಾಸ್ತಿಯವರೇ ತಮಿಳರು. ಈ ಸಮ್ಮೇಳನವನ್ನು ಉದ್ಘಾಟಿಸಿದ ನನ್ನ ಹಿರಿಯ ಅಣ್ಣ ರಾಜಾಜಿ ಅವರೂ ತಮಿಳರು.

ಕರ್ಣಾಟಕವನ್ನು ಒಂದೇ ಪ್ರಾಂತವನ್ನಾಗಿ ಕಟ್ಟಬೇಕೆಂದು ನಾವು ಕಾತರರಾಗಿದ್ದೇವೆ. ಅದಕ್ಕೆ ಅಡ್ಡ ಬರುತ್ತಿರುವುದು ನಮ್ಮ ನಾಡಿನ ಚರಿತ್ರೆ. ಮುಸಲ್ಮಾನರ ಕೈಕೆಳಗೆ ೬೦-೭೦ ವರ್ಷ, ಪೇಷವೆಯವರ ಅಧೀನದಲ್ಲಿ ಕೆಲವು ಕಾಲ, ಬ್ರಿಟಿಷರ ಕೈಯೊಳಗೆ ೧೫೦ ವರ್ಷ – ಹೀಗೆ ಪರಕೀಯ ಆಡಳಿತಕ್ಕೆ ಒಳಗಾದ ನಮ್ಮ ಚರಿತ್ರೆಯೇ ನಮಗೆ ಆತಂಕ. ಇದನ್ನು ಜಯಿಸಲು ಹೊಸಾ ಹೊಸ ಇತಿಹಾಸವನ್ನೇ ಹೂಡಬೇಕು.

ಇಡೀ ಕನ್ನಡ ಪ್ರಾಂತವನ್ನು ಕಟ್ಟಬೇಕೆನ್ನುವುದೇತಕ್ಕೆ? ಇದರಂತೆಯೇ ತಮಿಳು, ತೆಲುಗು, ಮಹಾರಾಷ್ಟ್ರ, ಕೇರಳ ಪ್ರಾಂತಗಳೂ ಆಗಲಿ, ಎಂದಲ್ಲವೆ? ದಕ್ಷಿಣ ದೇಶದ ನಾಲ್ಕು ಪ್ರಾಂತಗಳೂ ನಾಲ್ಕು ಭುಜದಂತೆ, ಚತುರಂಗ ಬಲದಂತೆ, ಏಕವಾಗಿ ಐಕಮತ್ಯದಿಂದ ವರ್ತಿಸಬೇಕೆಂದಲ್ಲವೇ? ಇಲ್ಲವೆ, ಪರಸ್ಪರ ವೈಷಮ್ಯಕ್ಕಾಗಿಯೆ? ತಮಿಳೇನು, ತೆಲುಗೇನು, ಮಲೆಯಾಳವೇನು? ಕನ್ನಡಕ್ಕೆ ಅಣ್ಣ ತಮ್ಮ, ಎಲ್ಲವೂ ದ್ರಾವಿಡ ಭಾಷೆಯೇ. ಒಂದು ಅಕ್ಷರ ಬದಲಾದರೆ ತೆಲುಗು ಶಬ್ದವಾಯಿತು. ಇನ್ನೊಂದು ಅಕ್ಷರ ಬದಲಾದರೆ ತಮಿಳಾಯಿತು. ಕನ್ನಡ-ತೆಲುಗುಗಳಿಗೆ ಬೇರೆಬೇರೆ ಲಿಪಿಯಿಲ್ಲ : ಎರಡೂ ಒಂದೇ. ಕೇರಳ ವರ್ಣಮಾಲೆ ಕನ್ನಡಕ್ಕೆ ಸಮೀಪವಾಗಿದೆ. ಇನ್ನು ಆಚಾರ, ವ್ಯವಹಾರ ಧರ್ಮ, ದೈವ, ಋಣಾನುಬಂಧ – ಎಲ್ಲದರಲ್ಲೂ ಈ ದಾಕ್ಷಿಣಾತ್ಯರಲ್ಲಿ ಅಷ್ಟೇನೂ ಭೇದವಿಲ್ಲ. ನಾವು ಕರ್ಣಾಟಕರು ಎಲ್ಲಾ ದ್ರಾವಿಡ ಸಂಪ್ರದಾಯಕ್ಕೂ ಒಕ್ಕಲು ; ಎಲ್ಲಾ ದ್ರಾವಿಡ ಭಾಷೆಗೂ ಆಶ್ರಯ ಕೊಡುವವರು. ತೆಲುಗು, ತಮಿಳು, ಕೇರಳ ಪ್ರಾಂತಗಳಲ್ಲಿ ಕಾಣದ ಭಾಷಾತೀತ ಕರ್ಣಾಟಕತ್ವ ನಮ್ಮಲ್ಲಿ ಹಿಂದಿನಿಂದಲೂ ಬೆಳೆದುಬಂದಿದೆ. ಇದು ನಮ್ಮ ವೈಶಿಷ್ಟ್ಯ. ಈಗಿನ ಪ್ರಾಂತೀ

ಕರಣದ ರಭಸದಲ್ಲಿ ಈ ವೈಶಿಷ್ಟ್ಯವನ್ನು ತೊಲಗಿಸಬಾರದು. ಈ ಭೇದಭಾವನೆ ನಮ್ಮ ರಾಜಕೀಯ ದುಷ್ಫಲ ; ಅಖಂಡಭಾರತದ ನಿರ್ಮಾಣಕ್ಕೆ ಮುಂಚೆ ನಮ್ಮ ನಮ್ಮಪ್ರಾಂತಗಳಲ್ಲಿ ನಮ್ಮನಮ್ಮ ಪರಸ್ಪರ ದ್ವೇಷ ದಮನವಾಗಬೇಕು. ಒಳಗೂ ಹೊರಗೂ ಎಲ್ಲರೊಡನೆ ಸಮರಸವಾಗಿ ನಡೆದು, ಕನ್ನಡಿಗರು ಭಾರತಕ್ಕೇ ಮೇಲ್ಪಂಕ್ತಿಯಾಗೋಣ ! ನಮ್ಮ ನೆರೆಯವರನ್ನು ಬಿಟ್ಟು ನಮಗೆ ಪ್ರಾಂತ ಬಂದರೂ ಕಣ್ಣೀರಿ. ನಮಗೆ ಇಲ್ಲದೆ ಅವರಿಗೆ ಬಂದರೂ ಕಣ್ಣೀರಿ. ಎಲ್ಲರಿಗೂ ಒಂದೆ ಮೋಕ್ಷ ! ಇದು ಸಮಷ್ಟಿ ರಾಜಕೀಯ.

ರಾಜಕೀಯವಾದ ಏಕೀಕರಣಕ್ಕಿಂತ ಮುಖ್ಯವಾದದ್ದು ನಮ್ಮ ಜನತೆಯ ಏಕೀಭಾವ. ಆ ಏಕೀಭಾವವೇ ನಮ್ಮ ನಾಡಿನ ನಿಜವಾದ ಅಸ್ತಿಭಾರ. ಆ ಮನೋಭಾವವಿಲ್ಲದಿದ್ದರೆ ರಾಜಕೀಯ ಏಕೀಕರಣ ಫಲಕಾರಿಯಲ್ಲ. ಆ ಏಕೀಭಾವಕ್ಕೆ ಕನ್ನಡ ಸಾಹಿತ್ಯ ಸಮ್ಮೇಳನವು ಸಹಕಾರಿಯೆಂದು ಎಣಿಸಿದ್ದೇನೆ. ಕಲಾವಿದರ ಮನಸ್ಸು ಮತ್ಸರವಿಲ್ಲದೆ ಪಕ್ಷಪಾತವಿಲ್ಲದೆ ಅಭೇದವಾಗಿ ಐಕಮತ್ಯದ ಹೊಮ್ಮನ್ನು ಸೂಚಿಸಿದರೆ ಕನ್ನಡ ನಾಡುನಾಡೇ ಕಬ್ಬಿಗರ ಕೂಟ !

ಕನ್ನಡ ಸಾಹಿತ್ಯ ಪರಿಷತ್ತು ಹುಟ್ಟಿದಾಗಲೇ ಇಡಿಯ ಕನ್ನಡನಾಡನ್ನು ತನ್ನ ಕಣ್ಣಿನ ಮುಂದೆ ಇರಿಸಿಕೊಂಡಿತ್ತು. ಪರಿಷತ್ತು ಆಗಿನಿಂದ ಸದ್ದಿಲ್ಲದೆ ಕರ್ನಾಟಕವನ್ನು ಒಂದುಮಾಡುತ್ತಿದೆ. ಪರಿಷತ್ತನ್ನು ಮೊದಲು ಮಾಡಿದ ದಿವಂಗತ ಶ್ರೀ ಎಚ್. ವಿ. ನಂಜುಂಡಯ್ಯನವರಿಂದ ಪ್ರಾರಂಭವಾಗಿ ಈಗ ಅದರ ಭಾರವನ್ನು ಹೊತ್ತು ನಡೆಸುತ್ತಿರುವ ಮಾಸ್ತಿ ವೆಂಕಟೇಶ ಐಯಂಗಾರ್ಯರ ವರೆಗೂ ಈ ಪರಿಷತ್ತನ್ನು ನಡೆಸಿದ ಎಲ್ಲರೂ ಕರ್ಣಾಟಕದ ನಿರ್ಮಾಣದಲ್ಲೇ ತಮ್ಮ ಆಯುಷ್ಯ ಕಳೆದಿದಾರೆ.

ಕನ್ನಡನುಡಿಯೇ ಮೊದಲಿನ ಹಾಗೆ ಪ್ರಾಂತೀಯ ವಿಲಕ್ಷಣಗಳಿಂದ ತುಂಬಿಲ್ಲ ; ಒಂದಾಗುತ್ತಿದೆ. ಮೈಸೂರು ನಾಟಕದ ಮಾತು ಉಳಿದ ಕಡೆ, ಉಳಿದ ಕಡೆಯ ಮಾತು ಮೈಸೂರಿನಲ್ಲಿ ಅರ್ಥವಾಗುತ್ತಿದೆ. ಕಾವ್ಯದೃಷ್ಟಿಯಲ್ಲಿ ಆಗಬೇಕಾಗಿರುವ ಹೊಸ ಪೋಷಣೆಗೆ ಈ ಸಮ್ಮೇಳನ ಸಹಾಯಕಾರಿ. ಎಲ್ಲಕ್ಕಿಂತ ಮಿಗಿಲಾಗಿ ಕಲಾವಿದರ ಏಕೀಭಾವಕ್ಕೆ ಸಾಧಕವಾಗುತ್ತದೆ.

ಕನ್ನಡ ಬೆಳೆಯುತ್ತಿದೆ. ಈಗ ಆಗುತ್ತಿರುವ ಅಸಂಖ್ಯ ಗ್ರಂಥರಾಶಿಗಳ ನಿರ್ಮಾಣದಿಂದ ನನಗೆ ಸಂತೋಷವಾಗಿದೆ. ಅನೇಕ ಪತ್ರಿಕೆಗಳು ಹುಟ್ಟಿವೆ.

ಲೇಖಕರು ಇದಾರೆ. ಎಲ್ಲರೂ ಒಂದೊಂದು ಕೆಲಸ ಮಾಡಿ ನಾಡನ್ನು ಮುನ್ನಡೆಸಬೇಕು.

ತಾವು ಈ ಚೆನ್ನಪಟ್ಟಣದಲ್ಲಿ ನಡೆದ ಈ ಸಮ್ಮೇಳನಕ್ಕೆ ನನ್ನನ್ನು ಆಹ್ವಾನಿಸಿ ಅಧ್ಯಕ್ಷನನ್ನಾಗಿ ಮಾಡಿ, ತಮ್ಮ ಆನಂದವನ್ನು ವ್ಯಕ್ತಪಡಿಸಿದೀರಿ. ಆದರೆ ನಿಜವಾಗಿ, ಸಾತು ಪಾತು ಮಾಘು ಅಶ್ವತ್ಥರು—ಅವರ ಪರವಾಗಿ ನಾನು ಬೇಡುವುದು :*

A Poet's guerdon is not gold,
Not Parian bust, not trappings brave !
A tear, a titter from young and old
Is all the meed I meekly crave !

---

೨. ಎ. ಐ. ಆರ್. ಇಂದ ಪ್ರಸಾರ ಮಾಡಿದ್ದು

ಸಾಹಿತ್ಯ ಅಂಬೋದು ಕಲೆಯ ಒಂದು ಶಾಖೆ. ಚಿತ್ರಗಳು ಬರೆಯೋದು, ಕಲ್ಲುಗಳ್ನ ಕೊರೆಯೋದು, ಹಾಡುಗಳ್ನ ಕಟ್ಟೋದು ಇವೆಲ್ಲಾ ಕಲೆಯ ಶಾಖೆಗಳು. ಈ ಬೇರೆ ಬೇರೆ ರೂಪಗಳ್ನ ಕಲೆ ತಾಳೋದಕ್ಕೆ ಕಾರಣ : ಕಲಾವಿದನ ಕೈಕೆಲಸವೊ, ಬಾಯ್ಕೆಲಸವೊ. ಇವುಗಳಲ್ಲಿ ಅವನಿಗೆ ಸಾಧಾರಣವಾಗಿ ಸುಲಭವಾಗಿ ಹುಟ್ಟುಗುಣವಾದ ಘಟ್ಟಿಗ್ತನ. ಆದರೆ, ಒಂದೇ ರೂಪಾನ ಎಂಟು ಕಲಾವಿದ್ರು ಈ ಮೇಲ್ಕಂಡ ಎಂಟು ಶಾಖೆಗ್ನಾಗಿ ನಿರೂಪಿಸಬಹುದು. ಏನಾದರೂ, ಕಲೆ ಒಂದು ಕಲಾವಸ್ತುವಾಗಿ ಕೊನೆಗಾಣುವ ಬಗೆ ನನಗೆ ತಿಳಿದಮಟ್ಟಿಗೂ ಹೀಗೆ : ತಲೇಲಿ ಪ್ರತಿಭೆ ಇರೋ ಮನುಷ್ಯ ತನ್ನ ಮಾಂಸಖಂಡ, ರಕ್ತ, ವ್ಯಕ್ತಿತ್ವವನ್ನ ಅಳಿಸಿಕೊಂಡು, ಅಂತಃಕರಣಚತುಷ್ಟಯಗಳಾದ ಬುದ್ಧಿ, ಮನ, ಚಿತ್ತ, ಅಹಂಕಾರ—ಇವುಗಳಲ್ಲಿ ತಲ್ಲೀನನಾಗುತ್ತಲೇ ಪರಿಸ್ಥಿತಿಯು ಪ್ರಕೃತಿಯಲ್ಲಿ ಯಾವುದೋ ಒಂದು ಭಾವವನ್ನು ಉದ್ರೇಕಿಸುತ್ತದೆ. ಅನಂತರ ಕ್ರಮೇಣ ಇದೇ

---

* ಹೊನ್ನೆ ? ಬಲ್ಬಿರುದುಗಳೆ ? ಹಾಲುಗಲ್ ವಿಗ್ರಹವೆ ?
ಕವಿ ಬಯಸನಿಂಥದೇ ಪ್ರತಿಫಲವೆ ಬೇಕು !
ಹಿರಿಯರುಂ ಕಿರಿಯರುಂ ಕಿಲಕಿಲನೆ ನಕ್ಕಿರಡು
ಕಣ್ಣ ಹನಿಯಿತ್ತರೆನಗದು ಅನಿತೆ ಸಾಕು !

ಭಾವಭರಿತವಾದ ಒಂದು ಸಾಕಾರ ಪ್ರತೀಕೆಯೇ ಕಂಡುಬರುವುದು. ಮೊಟ್ಟ ಮೊದಲು, ಕನಸಿನಲ್ಲಿ ಕಂಡ ಚಿತ್ರದಂತೆ ಇದು ಇವನ ಅಂತರಿಂದ್ರಿಯಗಳಿಗೇಯೇ ಗೋಚರವಾಗುವುದು. ಆಗ, ಜನನಿಯು ಹತ್ತು ತಿಂಗಳು ಜಠರದಲ್ಲಿ ಇದ್ದು ತನಗೆ ಪ್ರತೀಕೆಯಂತೆ ಇದ್ದ ಕೂಸನ್ನು ಹೆತ್ತು ತನ್ನ ಬಹಿರಿಂದ್ರಿಯಗಳ ಗೋಚರಸ್ಪರ್ಶನಕ್ಕೆ ಬಂದಂತೆ, ಕಲಾವಿದನು, ತಾನು ಕಂಡ ಪ್ರತೀಕೆಯನ್ನು ಕೊರೆದ ಕಲ್ಲಾಗಿಯೊ, ಬಣ್ಣಿಸಿದ ಚಿತ್ರವಾಗಿಯೊ, ಕಟ್ಟಿದ ಕಾವ್ಯವಾಗಿಯೊ ಬಹಿರಂಗದ ಇಂದ್ರಿಯಗಳ ಗೋಚರಕ್ಕೆ ತಂದುಕೊಂಡು, ಆತ್ಮೋಲ್ಲಾಸ ಪಡುವನು. ಕಲೆಯ ಶಾಖೆಯಾದ ಸಾಹಿತ್ಯವು ಹೀಗೆ ಹುಟ್ಟುತ್ತೆ.

ಆದರೆ, "ಯಾವುದು ಉತ್ತಮ ಸಾಹಿತ್ಯ"ಅನ್ನೋ ಪ್ರಶ್ನೆ ಯಾವಾಗ್ಲೂ ಇದ್ದೇ ಇದ್ದಿದೆ. ಕವಿ ತನಗೆ ತೋಚಿದ್ದನ್ನ ಬರೀತಾನೆ ಚಿತ್ರಿಸ್ತಾನೆ. ಆದ್ರೆ ಯಾವುದು ಸಾಹಿತ್ಯರೀತ್ಯಾ ಉತ್ತಮ ಅನ್ನೋದನ್ನ ತಿರ್ಮಾನಿಸೋದು— ಕವಿ ಅಲ್ಲ—ಜನಸಮಾಜ. ಮುಂದೆ ನಡೆಯೋಕೆ ಯಾವುದು ಅವರಿಗೆ ಸಹಾಯ ಆಗ್ತದೋ, ಅದು ಅವರ ದೃಷ್ಟೀಲಿ ಉತ್ತಮಸಾಹಿತ್ಯ. ಅಂದ್ರೆ, ಸಮಾಜಕ್ಕೆ ಯಾವುದು ಉಪಯೋಗ್ವೋ ಅದೇ ಉತ್ತಮಸಾಹಿತ್ಯ. ಸಾಹಿತ್ಯ ಆಗಲಿ, ವಿಜ್ಞಾನ ಆಗಲಿ, ಯಾರು ಯಾವ ದಾರೀನೇ ಹಿಡೀಲಿ,ನಾವು ಹುಟ್ಟಿದ ಸಮಾಜಕ್ಕೆ ಸಲ್ಲಿಸ್ಬೇಕಾದ ಋಣ—ಸಮಾಜಸೇವೆ—ಅಂತ ಶಾಸ್ತ್ರ ಹೇಳುತ್ತೆ. ಆದ್ರಿಂದ ಸಮಾಜಕ್ಕೆ ಉಪಯೋಗವಾಗಿರೋದೇ ಉತ್ತಮ ಸಾಹಿತ್ಯದಲಕ್ಷಣ

ಸರಿ. ಸಾಹಿತ್ಯ ಸಮಾಜಕ್ಕೆ ಉಪಯೋಗವಾಗಬೇಕಾದರೆ—"ಜನರಿಗೆ ಏನು ಬೇಕು ?"ಅನ್ನೋದನ್ನ ಸಾಹಿತಿ ತಿಳಕೊಳ್ತಾನೆ. ಇದೇ ಪ್ರತಿಬಿಂಬನ ಸಾಹಿತ್ಯದ ಧರ್ಮ. ಈ ಬಿಂಬನದಲ್ಲಿ ಪುರಾಣಗಳ, ನಾವು ಕಾಣದ, ಹರಿಶ್ಚಂದ್ರ ರಾಮಕೃಷ್ಣಾದಿ ಅವಧೂತರನ್ನ ಪ್ರತಿಬಿಂಬಿಸಬೇಕೆ ? ಅಥ್ವಾ ಇತಿಹಾಸದ, ಅಗ್ನಿಕುಲದ ಶಿವಾಜಿ ಮೊದಲಾದ ಕರ್ಮವೀರರನ್ನು ಬಿಂಬಿಸಬೇಕೆ? ಇಲ್ಲ—ನಮ್ಮೆದುರ್ಗೆ ನಾವು ಕಾಣೋ ಸಮಾಜಾನ ಪ್ರತಿಬಿಂಬಿಸ್ಬೇಕೆ ? ಇವು ಮೂರರಲ್ಲಿ ಯಾವುದು ಉತ್ತಮ ಸಾಹಿತ್ಯ ?

ವಾಲ್ಮೀಕಿ ರಾಮಾಯಣ ಬರೆದು ಪಾತ್ರಗಳ್ನ ಸೃಷ್ಟಿಸಿ, ಸಮಾಜದ ಜೀವನಧರ್ಮಾನ ತೋರಿಸ್ದ. ಶ್ರೀ ರಾಮಚಂದ್ರನಿಂದ ಜನ ತಮ್ಮ ಪಿತೃಭಕ್ತಿಗೆ ಒಂದು ಮೇಲ್‌ಪಂಗ್ತೀನ ಕಂಡುಕೊಂಡ್ರು. ಸೀತೇನ ನೋಡಿ

ನಾರೀರು ತಂ ನಡತೇನ ತಿದ್ದಿಕೊಂಡ್ರು. ಅದೇ ರಾಮಾಯಣದ ತಿರುಳು. ಆ ಉಪಯೋಗ ಅದಕ್ಕೆ ಉತ್ತಮಕಾವ್ಯದ ಪದವೀನ ಕೊಡ್ತು.

ಹಿಂದೆ "ರಾಜಾ ರಾಷ್ಟ್ರಸ್ಯ ಕಾರಣಂ" ಆಗಿದ್ರು. ರಾಷ್ಟ್ರದ ಪಾಪ ತಮ್ದೇ ಅಂತ ಭಾವ್ಸಿ ಪ್ರಜೆಗಳನ್ನ ತಮ್ ಮಕ್ಕಳಿಗಿಂತ ಮುದ್ದಾಗಿ ಸಾಕ್ತಿದ್ರು. ಈಗ ಹಾಗಿಲ್ಲ. ಆರ್ಯಾವರ್ತದಲ್ಲಿ, "ಆಡಳಿತಾನ ಪ್ರಜೆಗಳಿಗೋಸ್ಕರ ಪ್ರಜೆಗ್ಳೇ ನಡಸ್ಬೇಕು" ಅಂತ ಜನ ಭಾವ್ಸಿ ಸಾಧಿಸ್ತಿದಾರೆ. ಇಡೀ ಭಾರತಾನೇ ಅದ ಕ್ಕೋಸ್ಕರ ಹೋರಾಡ್ತಿದೆ. ಈಗ್ಲೋ—"ರಾಷ್ಟ್ರೋ ರಾಷ್ಟ್ರಸ್ಯ ಕಾರಣಂ" ಹೀಗಿರೋವಾಗ, ಹಳೇ ಪುರಾಣ ಇತಿಹಾಸಗಳ ರಾಜಾ ರಾಣೀರ ಕಥೆಗಳ್ನ ಹೇಳಿದ್ರೆ ಅವಧೂತ ಪ್ರತಿಮೆಗಳ್ನ ಪ್ರತಿಬಿಂಬಿಸಿದ್ರೆ, ಅದು ಉಪಯೋಗ ವಾದೀತೇ???

ವ್ಯಕ್ತಿಗೆ ದೈವ ಕೊಟ್ಟ ಯಾವ ಅಂಶಾನೇ ಆಗ್ಲಿ, ಕ್ಷಿಪ್ರದಲ್ಲಿ ನಮ ದೇಶಕ್ಕೆ "ಸರ್ವೇ ಜನಾಸ್ಸುಖಿನೋ ಭವನ್ತು" ಅನ್ನೋ ಗಮ್ಯಕ್ಕೆ ದಾರಿ ಮಾಡೋ ಅನೇಕಾನೇಕ ಕಲಾಮಾರ್ಗಗಳ ಶಾಖೆ ಆದ ಸಾಹಿತ್ಯದಲ್ಲಿ ಜನ ಜೀವನದ ಕುಂದು ಕೊರತೆಗಳನ್ನ, ತಪ್ಪು ನೆಪ್ಪುಗಳನ್ನ ಪ್ರತಿಬಿಂಬಿಸಿ, ತಾವ್ತಾವೇ ತಿದ್ಕೊಳ್ಳೋಕೆ ಸಹಕಾರಿಯಾಗಿ ಸತ್ಯ—ಅಹಿಂಸೆಗಳನ್ನ ಪ್ರತಿ ಬಿಂಬಿಸೋ ಕಾವ್ಯಾನೇ ಉತ್ತಮಕಾವ್ಯ ; ಅತ್ಯುತ್ತಮ ಧರ್ಮ.

ಯುಗಾಂತರ ಮುದ್ರಣಾಲಯ ಚಾಮರಾಜಪೇಟೆ, ಬೆಂಗಳೂರು–18

ನಮ್ಮ ಪ್ರಕಟಣೆಗಳು

ರಾಗಸುಧಾ	ಎ. ಪಂಕಜ
ಇಂದ್ರಿ–ಸುಂದ್ರಿ	ದಾಶರಥಿ ದೀಕ್ಷಿತ್
ಮಧುರಜಾಲ	ಉಷಾದೇವಿ
ಜೀವರಥ	ವಸಂತಾದೇವಿ ಅನಕೃ
ಅನುರಾಗ ಬಂಧನ	ಎ. ಪಂಕಜ
ಎಲ್ಲಾ ಅವನ ಹೆಸರಿನಲ್ಲೆ	ತ. ರಾ. ಸು.
ಬಯಲು ದಾರಿ	ಭಾರತೀಸುತ
ಹೆಣ್ಣಿನ ಹಂಬಲ	ನಾಡಿಗೇರ ಕೃಷ್ಣರಾಯ
ಮನತುಂಬಿದ ಮಡದಿ	ಎಂ. ಕೆ. ಇಂದಿರಾ
ಎಲ್ಲಾ ಅವನ ಹೆಸರಿನಲ್ಲೆ–೨	ತ. ರಾ. ಸು.
ಎಡಕಲ್ಲು ಗುಡ್ಡದ ಮೇಲೆ	ಭಾರತೀಸುತ
ವಸುಮತಿ	ವಿಶಾಲಾಕ್ಷಿ ದಕ್ಷಿಣಾಮೂ
ಚಿನ್ನದ ಹೂವು	ಪ್ರೇಮಲತಾ ಸುಂದರೇ
ಪ್ರೇಮದ ಕಣ್ಣು	ಮ. ನ. ಮೂರ್ತಿ
ಅನುರಾಗ-ಸುಧಾ	ದಾಶರಥಿ ದೀಕ್ಷಿತ್
ಕಾರ್ತೀಕ ಸೋಮವಾರ	ರಾ. ಶಿ.
ಶೋಭನ	ಗೀತಾ ಕುಲಕರ್ಣಿ
ಕೈಲಾಸಂರವರ ಸ್ಮರಣೆ	ಕೆ. ವಿ. ಅಯ್ಯರ್

ಬರಲಿರುವ ಕಾದಂಬರಿಗಳು

ಸಾಕಿದ ಅಳಿಯ	ಅ.ನ.ಕೃ. ಅವರ ಕೋ
ನರ್ತಕಿ	ಉಷಾದೇವಿ
ಮನೆತನದ ಗೌರವ	ಬೀಚಿ
ಹೂವು ಕಾವು	ಬಿ. ಪುಟ್ಟಸ್ವಾಮಯ
ಮಣ್ಣಿನ ತಿಲಕ	ಗೀತಪ್ರಿಯ
ಮಂಜು ಕರಗಿತು	ಎಂ. ಸಿ. ಪದ್ಮಾ
ಬ್ರಹ್ಮಚಾರಿ	ಎಂ. ಕೆ. ಇಂದಿರಾ
ಅದೃಶ್ಯನಡೆ	ವಸಂತಾದೇವಿ ಅ
ಗಾಂಪಾಯಣ	ದಾಶರಥಿ ದೀಕ್ಷಿತ್
ಬೆಂಕಿಯ ಮಳೆ	ಭಾರತಿಸುತ

ರಾಜಲಕ್ಷ್ಮಿ ಪ್ರಕಾಶ

ಬಳೇಪೇಟೆ ಚೌಕ ಬೆಂಗಳ